ಹಂಗಾಮ

ಮೇ ೨೦೦೬ ರೂ.೨೦

ನೆನಪು:
ಡಾ. ರಾಜಕುಮಾರ್
ಚಂದ್ರಪ್ರಸಾದ್ ತ್ಯಾಗಿ



ದಳ - ಬಿಜೆಪಿ
ಶಿಲಾಯುಗದ ಸರ್ಕಾರ

ಸಂದರ್ಶನ:
ಕಾಂಚ ಇಳಯ್ಯ

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೭

ಮೇ ೨೦೦೬

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು.ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

© ೨೩೨೮೭೯೪೩/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

© 080-23287943, 94480 48306

e- mail : samvaada@hotmail.com

EDITOR :

INDUDHARA HONNAPURA

ಒಳಪುಟಗಳಲ್ಲಿ



- ಪತ್ರಗಳು ೩
- ಪ್ರತಿಕ್ರಿಯೆ ೪
- ಅಂತರಂಗ ೫
- ಶಿಲಾಯುಗದ ಸರ್ಕಾರ. ೬
  - ವೈ. ಮರಿಸ್ವಾಮಿ
- ಕಾಂಚಾ ಇಳಯ್ಯ ಸಂದರ್ಶನ ೮
  - ಅಮಿತ್ ಸೇನ್ ಗುಪ್ತ
- ಮುಸ್ಲಿಂ-ವಿರೋಧಿಯೇ? ೧೧
  - ಆನಂದ್ ತೇಲ್ ತುಂಬ್ಡೆ

- ತಾಯಿ ಹೃದಯದ 'ತ್ಯಾಗಿ' ೧೨
  - ಎಚ್.ಎಂ. ರುದ್ರಸ್ವಾಮಿ
- ಕಣ್ಣೆದುರಿನ ದಂತೆ ಕತೆ ಸಾಮಾನ್ಯರ ನಾಯಕ ೧೪
  - ಡಾ॥ ಕೆ. ಪುಟ್ಟಸ್ವಾಮಿ
- ಅಸ್ಪೃಶ್ಯತೆಯ ಸೂಕ್ಷ್ಮ ನೆಲೆಗಳು ೧೬
  - ಡಾ॥ ಟಿ.ಆರ್. ಚಂದ್ರ ಶೇಖರ್
- ಮರೆಯಾದ ಕ್ರಾಂತಿಕಾರಿ ೧೮
  - ನಾ ದಿವಾಕರ
- ಮಾರ್ಕ್ಸ್ ಲೋಹಿಯಾರ ನಂತರ... ೨೨
  - ಸುನಿಲ್



- ಅನಿಮಲ್ ಫಾರ್ಮ್ ಭಾಗ-೨ ೨೮
  - ಅರುಂಧತಿ ರಾಯ್,
- ದೇವರಾಯ ೩೧
  - ಸರಜೂ ಕಾಟ್ಕರ್
- ಕಾರ್ಟೂನ್-ವ್ಯಾಲೆಂಟೈನ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ ೩೬
  - ನಾಡಿ ಬಂಗಾರಪೇಟೆ
- ದಲಿತ್ ಡೈರಿ ೩೮
  - ಚಂದ್ರಭಾನ್ ಪ್ರಸಾದ್
- ಬುದ್ಧ ೪೨
  - ಸಿ. ಎಚ್. ರಾಜಶೇಖರ್

ಕವನಗಳು : ನಿನ್ನ ಕಣ್ಣಿರಿಗೆ ನನ್ನ ನಮಸ್ಕಾರಗಳು ೧೦ — ಎಲ್ಲಮ್ಮ ೧೩ — ಮುಕ್ಕಾಲು ಪಾಲಿನವರು ೨೧ — ಮಣ್ಣ ತಾಯಿಯ ನೆನಕೆ ೪೧

ಮುಖಪುಟ ಕಲೆ: ವೆಂಕಟಾಚಲಪತಿ, ವಿನ್ಯಾಸ: ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಚಂದ್ರಭಾನ್ ಅವರಿಗೊಂದು ಪತ್ರ



ಪತ್ರಗಳು

ಒಳಮೀಸಲಾತಿ

ಸಂಪಾದಕರಿಗೆ ನಮಸ್ಕಾರಗಳು,

ತಾವು ಪ್ರಕಟಿಸಿದ ಒಳಮೀಸಲಾತಿ ಬೇಕೆ? ಎನ್ನುವ ಲೇಖನವು ನೊಂದವರ ಮನಸ್ಸುಗಳನ್ನು ಒಂದು ಮಾಡುವುದರತ್ತ ಇಟ್ಟ ದಿಟ್ಟ ಹೆಜ್ಜೆಯಾಗಿದೆ. ಡಾ॥ ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ರೂಪಿಸಿ ಅಶಕ್ತರಿಗೆ ಮೀಸಲಾತಿಯನ್ನು ಒದಗಿಸಿಕೊಟ್ಟರು. ಆದರೆ ಮೀಸಲಾತಿಯನ್ನು ವಿಭಜಿಸುವ ಮೂಲಕ ಅಸ್ಪೃಶ್ಯರನ್ನೇ ಒಡೆದು ಆಳಲು ಈಗ ಎಲ್ಲರೂ ತುದಿಗಾಲ ಮೇಲೆ ನಿಂತಿದ್ದಾರೆ. ನಮ್ಮಲ್ಲಿರುವ ಒಳಜಗಳದಿಂದಾಗಿ ಮೀಸಲಾತಿಗೆ ಕೊಡಲಿ ಪೆಟ್ಟನ್ನು ನೀಡುತ್ತಿದ್ದೇವೆಂಬ ಎಚ್ಚರಿಕೆಯನ್ನು ಲೇಖಕರು ನೀಡಿದ್ದಾರೆ. ಇಂತಹ ಲೇಖನಗಳಿಂದಾಗಿ ರಾಜಕೀಯ ಚಿಂತಕರು ಎಚ್ಚೆತ್ತುಕೊಳ್ಳಲೆಂದು ಆಶಿಸಿತ್ತೇನೆ.

ಮಲ್ಲೇಶ್.ಆರ್, ಸಿದ್ರಾಂಪುರ್

ಚಂದಾ ವಿವರ
ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಕಳೆದ ಬಾರಿಯ ಸಂಚಿಕೆಯ ಅಂಕಣದಲ್ಲೊಂದೆಡೆ ತಾವು ಈ ರೀತಿ ಬರೆದಿದ್ದೀರಿ. "ಬಂಡವಾಳಶಾಹಿಯು ಒಂದು ವಿಮೋಚಕ ದೊರೆಯಂತೆ ಚಕ್ರವ್ಯೂಹದ ರೀತಿಯಲ್ಲಿ ಭಾರತಕ್ಕೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಆದರೆ ಏನೂ ಕಾರಣವಿಲ್ಲದೆ ಭಾರತೀಯ ಬಂಡವಾಳಶಾಹಿಯನ್ನು ದ್ವೇಷಿಸುತ್ತಿದ್ದೇವೆ." ಮತ್ತೂ ಮುಂದುವರಿದು "ಬಂಡವಾಳಶಾಹಿಯು ಜನತೆಯನ್ನು ಬಿಡುಗಡೆಯತ್ತ ಒಯ್ಯುತ್ತದೆ" ಎಂಬ ರೀತಿಯಲ್ಲಿ ಬರೆದಿದ್ದೀರಿ. ಹಾಗೂ "ದಲಿತ ಬಂಡವಾಳಶಾಹಿಗಳು ತಮ್ಮ ಸಮುದಾಯಕ್ಕೆ ಮಾದರಿಗಳಾಗುತ್ತಾರೆ" ಇದನ್ನೆಲ್ಲ ಉತ್ತೇಜಿಸಬೇಕೆಂಬ ಅರ್ಥದಲ್ಲಿ ಇನ್ನಷ್ಟು ನಮೂದಿಸಿದ್ದೀರಿ.

ಇದಕ್ಕೆ ನನ್ನ ಕೆಲವು ಸಂಶಯಗಳನ್ನು ಈ ರೀತಿ ತಮ್ಮ ಮುಂದಿಡಬಯಸುತ್ತೇನೆ: ಬಂಡವಾಳಶಾಹಿಯು ಪಾಳೇಗಾರಿ ವ್ಯವಸ್ಥೆಯನ್ನು ಮಟ್ಟಹಾಕಿ ನಾಶಪಡಿಸುವಾಗ ಅದನ್ನು ಪ್ರೋತ್ಸಾಹಿಸಿ ಬೆಂಬಲಸುತ್ತೇವೆ. ಆದರೆ ಬಂಡವಾಳಶಾಹಿಯೇ ಗದ್ದುಗೆಗೇರಿ ಶೋಷಿತರನ್ನು ಇನ್ನಷ್ಟು ಅಮೂರ್ತ ಶೋಷಣೆಗೊಳಪಡಿಸಿದಾಗ ಅದನ್ನು ದ್ವೇಷಿಸುವುದು ನಮ್ಮ ಕರ್ತವ್ಯವಲ್ಲವೆ? ಬಂಡವಾಳಕ್ಕೆ ಜಾತಿಯಿಲ್ಲ, ಮತವಿಲ್ಲ, ದಯೆ ಧರ್ಮಗಳಿಲ್ಲ. ಆದರೆ ತನ್ನ ರಕ್ಷಣೆಗಾಗಿ ಎಂಥಹ ಮತೀಯ ಘಟ ಸರ್ಪಗಳನ್ನಾದರೂ ಹಾಲೆರೆದು ಪೋಷಿಸುವ ಮನಸ್ಸು ಆಧುನಿಕ ಬ್ರಾಹ್ಮಣನದು. ಯಾವುದೇ ವ್ಯಕ್ತಿ ಬಂಡವಾಳಶಾಹಿಯಾದಾಗ ಅವನಲ್ಲಿ ಲಾಭದಾಸೆಯೊಂದನ್ನು ಬಿಟ್ಟು ದಲಿತತ್ವವಾಗಲಿ ಮನುಷ್ಯತ್ವವಾಗಲಿ ಉಳಿಯುವುದಿಲ್ಲ. ಕಾರ್ಲ್ ಮಾರ್ಕ್ಸ್ ಎಂಬುವ ತತ್ವ ಜ್ಞಾನಿಯೊಬ್ಬರು ಹೇಳಿದ್ದರಂತೆ: ಶೇ. ೧೦ ರಷ್ಟು ಲಾಭ ತಂದುಕೊಟ್ಟರೆ ಬಂಡವಾಳವು ಉತ್ಸಾಹದಿಂದ ಮುನ್ನುಗ್ಗುತ್ತದೆ; ಶೇ. ೨೦ ರಷ್ಟು ಲಾಭವಿದ್ದರೆ ಅದು ಧೈರ್ಯದಿಂದ ದಾಪುಗಾಲಿಡುತ್ತದೆ; ಶೇ. ೫೦ ರಷ್ಟು ಲಾಭ ಸಿಕ್ಕರೆ ಕೆಚ್ಚೆದೆಯಿಂದ ಹೋರಾಡುತ್ತದೆ; ಶೇ. ೧೦೦ ರಷ್ಟು ಲಾಭ ಸಿಕ್ಕರಂತೂ ಬಂಡವಾಳವು ತನ್ನ ಮಾಲೀಕನನ್ನೇ ಬಲಿಕೊಟ್ಟಾದರೂ ಲಾಭಗಳಿಸಲೆತ್ನಿಸುವುದಂತೆ.

'ದಲಿತ್ ಡೈರಿ'

ಸಮಕಾಲೀನ ದಲಿತರ ಸಮಸ್ಯೆಗಳಿಗೆ, ಬಿಡಿ ಬಿಡಿಯಾಗಿ ಬೆರಳೆಣಿಕೆಯಷ್ಟು ಮಾತ್ರವೇ ದಲಿತರು ಶ್ರೀಮಂತರಾಗುವುದು ಉತ್ತರವಲ್ಲ. ಒಟ್ಟಾರೆ ಇಡಿಯಾಗಿ ದಲಿತ ಸಮೂಹವು ಪ್ರಮುಖವಾಹಿನಿಯಲ್ಲಿರುವಂತಾಗಬೇಕು. ದಲಿತ ಬಂಡವಾಳಿಗರು ನೀಡುವ ದಾನಕ್ಕಾಗಿ ತೃಪ್ತಿಪಡುವುದು ಗಾಂಧೀಜಿಯವರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ನೆನಪಿಗೆ ತರುತ್ತದೆ. 'ಸಮತಾವಾದದ ಸ್ವಾತಂತ್ರ್ಯಕ್ಕೆ ಪರ್ಯಾಯವಾಗಿ 'ದೇಶೀಯ ಬಂಡವಾಳಿಗರ ದತ್ತಿ ನಿಧಿಯ ಸ್ವಾತಂತ್ರ'ವನ್ನು ಪ್ರತಿಪಾದಿಸಿದ ಗಾಂಧೀಜಿಯವರು, ಬಿರ್ಲಾರಂಥಹ ಬಂಡವಾಳಿಗರ ಪ್ರತಿನಿಧಿಯಾಗುವ ಹಂತ ತಲುಪಿದ್ದನ್ನು ಯಾರೂ ಮರೆಯಲು ಸಾಧ್ಯವಿಲ್ಲ. ದಲಿತ ಬಂಡವಾಳಿಗರು ದಲಿತರು ಸೇವಕರಂತೆ ಮುಂದಡಿಯಿಟ್ಟಲ್ಲಿ ಅಭ್ಯಂತರವಿಲ್ಲ. ಇಲ್ಲವಾದಲ್ಲಿ, ಇಂದು ಕೆಲವೇ ಕೆಲವು ಅಧಿಕಾರಿಗಳ ರಕ್ಷಣೆಗಾಗಿ ಹೋರಾಡುವಂಥಹ ಸ್ಥಿತಿಯಿಂದ ದಲಿತ ಸಂಘಟನೆಯು ಹೆಚ್ಚೆಂದರೆ ದಲಿತ ಬಂಡವಾಳಿಗರನ್ನು ರಕ್ಷಿಸುವ ನೆಲೆ ತಲುಪಬಹುದೇನೋ ಅಷ್ಟೇ.

ಅತ್ಯಂತ ಶೋಷಣೆಗಳಿಗೊಳಗಾಗಿರುವ ವರ್ಗ ಮಾತ್ರವೇ ಹೆಚ್ಚು ಕ್ರಾಂತಿಕಾರಿ ಶಕ್ತಿಯನ್ನು ಹೊಂದಿದೆ. ಈ ನಾಡಿನಲ್ಲಿ ಅಂಥಹ ಕ್ರಾಂತಿಕಾರಿ ಗುಣವನ್ನು ಹೊಂದಿರಲು ಸಾಧ್ಯವಿರುವುದು ದಲಿತ ವರ್ಗಕ್ಕೆ ಮಾತ್ರ. ಬಂಡವಾಳಶಾಹಿಯನ್ನು ಮುಖಾಮುಖಿಯಾಗಿ ಎದುರಿಸುತ್ತಿರುವ ದುಡಿಯುವ ಜನತೆ ಮತ್ತು ಶೋಷಣೆಯ ಅತೀವ ದಮನಕ್ಕೊಳಗಾಗಿರುವ ದಲಿತರು ಒಗ್ಗೂಡಿ ಭಾರತೀಯ ಬಡಜನತೆಯ ಮುಂದಾಳುಗಳಂತೆ ಇತರ ಶೋಷಿತ ಜನತೆಯನ್ನು ಮುನ್ನಡೆಸಬೇಕಿದೆ.

ಇಂದಿನ ಬಲಾಢ್ಯ ಶೋಷಿತರ ವಿರುದ್ಧ ಸಮರ ಸಾರಲು ಕೇವಲ ಒಬ್ಬರು ಅಂಬೇಡ್ಕರ್ ಮಾತ್ರ ಸಾಲುವುದಿಲ್ಲ. ಬುದ್ಧ, ಬಸವ, ಅಂಬೇಡ್ಕರ್, ಮಾರ್ಕ್ಸ್‌ರಂಥಹ ನೂರಾರು ಸಾವಿರಾರು ಕ್ರಾಂತಿಕಾರಿಗಳು ಅವಶ್ಯವಿದ್ದಾರೆ.

ಜೈಕುಮಾರ್ ಹೆಚ್.ಎಸ್
ರಾಯಚೂರು

ನಾಯಕರಿಗೆ ಹಿಡಿದ ಕನ್ನಡಿ

ಆತ್ಮೀಯ ಸಂಪಾದಕರೆ,

ಏಪ್ರಿಲ್ ತಿಂಗಳ 'ಅಂಬೇಡ್ಕರ್ ವಿಶೇಷಾಂಕ' 'ಸಂವಾದ'ವನ್ನು ಓದಿದಾಗ ಈ ಹಿಂದೆ ಓದಿದ 'ಸಂವಾದ'ದ ಪ್ರತಿಗಳಿಗಿಂತ ಈ ಸಂವಾದ ವಿಭಿನ್ನವಾಗಿದೆ ಅನಿಸಿತು.

ಇದರಲ್ಲಿ ಮೂಡಿ ಬಂದ ಡಾ॥ ಬಿ.ಎಂ. ಪುಟ್ಟಯ್ಯನವರ 'ಅಂಬೇಡ್ಕರ್: ಸ್ಫೂರ್ತಿಯಿಂದ–ಪೂಜೆಯ ಕಡೆಗೆ' ಎಂಬ ಲೇಖನ ಅತ್ಯಂತ ಅರ್ಥಪೂರ್ಣ ಹಾಗೂ ವಾಸ್ತವದಲ್ಲಿ ಜರುಗುತ್ತಿರುವ ಡೊಂಗಿ ಹಾಗೂ ಸ್ವಾರ್ಥ ದಲಿತ ನಾಯಕರ ಕಾರ್ಯ ಚಟುವಟಿಕೆಗಳಿಗೆ ಹಿಡಿದ ಕನ್ನಡಿಯಂತಿತ್ತು. ಈ ಲೇಖನದ ಒಂದೊಂದು ಸಾಲುಗಳು ನಮ್ಮಲ್ಲಿನ ಕೆಲ ಢಾಂಬಿಕ ದಲಿತ ನಾಯಕರ ಭಾವಚಿತ್ರಗಳನ್ನು ಕಣ್ಮುಂದೆ ತಂದು ನಿಲ್ಲಿಸುತ್ತಿದ್ದವು.

ಭಾರತದ ಶೋಷಕರು, ಬಂಡವಾಳಶಾಹಿಗಳು, ಹಾಗೂ ಭಾರೀ ಭೂಮಾಲೀಕರು ಸಂವಿಧಾನವನ್ನು ಅಂಬೇಡ್ಕರರ ಮೂಲಕ ತಮಗೆ ಬೇಕಾದಂತೆ ಬರೆಸಿಕೊಂಡರು. ಶ್ರೀಮಂತರ ಪರವಾಗಿರುವ ಈ ಸಂವಿಧಾನವನ್ನು ಸ್ವತಃ ಅಂಬೇಡ್ಕರರೇ ಬರೆದುದು ಎಂಬುದನ್ನು ನಾವುಗಳು ಎಲ್ಲಿಯವರೆಗೆ ಭ್ರಮಿಸುತ್ತ ಕೂರಲು ಸಾಧ್ಯ? ಎಂದು ಪ್ರಶ್ನಿಸುವ ಮೂಲಕ ಲೇಖಕರು ನನ್ನ ಮನದಾಳದ ಮಾತನ್ನೂ ಬಿಚ್ಚಿಟ್ಟಿದ್ದಾರೆ.

ಈ ಲೇಖನವನ್ನು ಪ್ರತಿಯೊಬ್ಬರು ತಪ್ಪದೆ ಓದಬೇಕೆಂದು ನನ್ನ ಅಭಿಪ್ರಾಯವಾಗಿದೆ. ಲೇಖನ ಪ್ರಕಟಿಸಿದ 'ಸಂವಾದ'ಕ್ಕೆ ಕೋಟಿ ಕೋಟಿ ಧನ್ಯವಾದಗಳು.

ಮಡಿವಾಳಪ್ಪ .ಎಸ್.ಕೆ.
ವಾಡಿ(ಜಂ), ಗುಲಬರ್ಗಾ

ಆಕರ ಗ್ರಂಥ

ಮಾನ್ಯ ಸಂಪಾದಕರೆ, ವಂದನೆಗಳು

ಅಂಬೇಡ್ಕರ್ ವಿಶೇಷಾಂಕವು ಬಾಬಾಸಾಹೇಬರ ಆಧ್ಯಾತ್ಮಿಕತೆಯನ್ನೊಳಗೊಂಡ ಆಕರ ಗ್ರಂಥವಾಗಿ ಕೈ ಸೇರಿದೆ. ತಮಗೆ ಅಭಿನಂದನೆಗಳು.

ಈ ಸಂಚಿಕೆ ಜನಪರ ಚಿಂತನೆಗಳ ಸಮ್ಮಿಲನವಾಗಿದೆ. ಸಂವಾದದ ಈ ಗುಣವು ಪ್ರತಿ ಸಂಚಿಕೆ ಯಲ್ಲಿಯೂ ಧ್ವನಿಸಲಿ ಎಂದು ಆಶಿಸುವೆನು

ಪಿ. ಗೋಕುಲ್‌ದಾಸ್, ಮಂಗಳೂರು

ಚಡಪಡಿಕೆ

ಮಾನ್ಯ ಸಂಪಾದಕರಿಗೆ
ತುಂಬು ಹೃದಯದ ನಮಸ್ಕಾರಗಳು.

ಪತ್ರಿಕೆ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ದೂರದಲ್ಲಿರುವ ನನ್ನಂತವರ ಸಾಹಿತ್ಯ ಸಂಗಾತಿ 'ಸಂವಾದ'. ಓದದೇ ಇದ್ದರೆ ಏನೋ ಚಡಪಡಿಕೆ.

ಡಾ॥ ಅನಸೂಯ ಕಾಂಬಳೆ, ತೇರದಾಳ

‘ಇಡಿ’ ‘ಬಿಡಿ’ ವಿವಾದ ಕುರಿತು...

ಪ್ರತಿಕ್ರಿಯೆ

ನನಗೆ ದಲಿತ ಸಂಘರ್ಷ ಸಮಿತಿಯ ಜೊತೆಗೆ ಸುಮಾರು ೨೫ ವರ್ಷಗಳ ಒಡನಾಟವಿದೆ. ಆ ಒಡನಾಟದ ಅನುಭವದ ಆಧಾರದ ಮೇಲೆ ಹೇಳುವುದಾದರೆ, ನನ್ನ ಈ ಕೆಲವು ಗೆಳೆಯರಿಗೆ ಅಸ್ಪೃಶ್ಯತೆಯ ನೋವು-ಅವಮಾನವೆಂಬುದು ತಲೆಯಿಂದ ಇಳಿಸಿಕೊಳ್ಳ ಕೂಡದ ಒಂದು ಹೊರೆ ಯಾಗಿಯೇ ಮುಂದು ವರೆದಿದೆ.. ಇದರ ಮರ್ಮ ನನಗೆ ಇನ್ನೂ ಅರ್ಥವಾಗಿಲ್ಲ. ಹಾಗೇ ದಲಿತರು ಸಮಾಜದ ಮುಖ್ಯವಾಹಿನಿಗೆ ಸೇರು ವುದನ್ನು ಸಹಿಸದ ಅಥವಾ ತಡೆಯುವ ಸವರ್ಣೀಯರ ಒಂದು ವರ್ಗವಿರುವಂತೆಯೇ ದಲಿತರಲ್ಲೂ ಅಂತಹ ಒಂದು ವರ್ಗವಿದ್ದಂತೆ ತೋರುತ್ತದೆ. ಇಂತಹ ರಾಜಕಾರಣ ಯಾರಿಗೂ ಒಳ್ಳೆಯದನ್ನು ಮಾಡುವಂತಹುದಲ್ಲ.

ಡಿ. ಎಸ್. ನಾಗಭೂಷಣ

‘ಸಂವಾದ’ದ ಮಾರ್ಚ್ ೨೦೦೬ ಸಂಚಿಕೆಯಲ್ಲಿನ ‘ಚಳುವಳಿಗಳ ಬಲಿ ಕೇಳುವ ಜಾತಿ ರಾಜಕಾರಣ’ ಎಂಬ ಶೀರ್ಷಿಕೆ (ಈ ಶೀರ್ಷಿಕೆ ನಾನು ಕೊಟ್ಟಿದ್ದಲ್ಲ) ನನ್ನ ಲೇಖನಕ್ಕೆ ಏಪ್ರಿಲ್ ಸಂಚಿಕೆಯಲ್ಲಿ ‘ಇಡಿ’ ‘ಬಿಡಿ’ ನಾಯಕರನ್ನು ಕುರಿತು ಗಡಿಬಿಡಿಯಾಗಿ...’ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿರುವ ಡಾ॥ ಮೂಡ್ನಾಕೂಡು ಚಿನ್ನಸ್ವಾಮಿಯರ ಪ್ರತಿಕ್ರಿಯೆಯನ್ನು ಗಮನಿಸಿದೆ. ನನ್ನ ಲೇಖನದಲ್ಲಿ ‘....ಅಂಬೇಡ್ಕರ್‌ರನ್ನು ‘ಬಿಡಿ’ ನಾಯಕರು ಎಂದು ಹೇಳಿದಂತಿದೆ’ ಎಂಬ ಅರ್ಥ ಅನ್ನಿಸಿಕೆಯ ಆಧಾರದ ಮೇಲೇ ಅವರು ತಮ್ಮ ಪ್ರತಿಕ್ರಿಯೆಯನ್ನು ಬೆಳೆಸಿದ್ದಾರೆ. ಆದರೆ ಲೇಖನದಲ್ಲೆಲ್ಲೂ ನಾನು ಅಂಬೇಡ್ಕರ್‌ರನ್ನು ಹಾಗೆ ಗುರುತಿಸುವ ಪ್ರಯತ್ನವನ್ನು ಮಾಡಿಲ್ಲ ಎಂಬುದು ಲೇಖನವನ್ನು ಓದಿದ ಯಾರಿಗಾದರು ಗೊತ್ತಾಗುತ್ತದೆ. ಚಿನ್ನಸ್ವಾಮಿಯವರ ರೀತಿಯಲ್ಲಿ ಲೇಖನವನ್ನು ಅರ್ಥೈಸ ಹೊರಟರೆ, ಅಂಬೇಡ್ಕರ್‌ರ ಜೊತೆಗೇ ಪ್ರಸ್ತಾಪಿಸಲ್ಪಟ್ಟಿರುವ ಗಾಂಧಿ, ಲೋಹಿಯಾ ಕೂಡ ನನ್ನ ಪ್ರಕಾರ ‘ಬಿಡಿ’ ನಾಯಕರೇ ಆಗುತ್ತಾರೆ. ಇದು ಚಿನ್ನಸ್ವಾಮಿಯವರಿಗೆ ಸ್ವಲ್ಪವಾದರೂ ತೃಪ್ತಿ ತಂದೀತೇನೋ, ತಿಳಿಯದು...

ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಎಂಬುವವರು ಬುದ್ಧ ಬಸವ ಅಂಬೇಡ್ಕರರನ್ನು ಆಧುನಿಕ ತ್ರಿಮೂರ್ತಿಗಳೆಂದು ವಿಶ್ಲೇಷಿಸಿರುವುದು ನನಗೆ ತಿಳಿಯದು. ಹಾಗೂ ಅದು ನನಗೆ ಮುಖ್ಯ ಸಂಗತಿಯೂ ಅಲ್ಲ. ಹಾಗಾಗಿ ಈ ತ್ರಿಮೂರ್ತಿಗಳ ಸಾಲಿನಲ್ಲಿ ಗಾಂಧಿ ಇಲ್ಲವೆಂದು, ಚಿನ್ನಸ್ವಾಮಿಯವರಿಗೆ ಪರಿಚಯವಿರುವ ಮಧ್ಯಮ ಜಾತಿಯ ಬುದ್ಧಿಜೀವಿಗಳ್ಯಾರಾದರು ಚಿಂತೆಗೀಡಾಗಿದ್ದರೆ ಅದಕ್ಕೆ ನಾನು ಹೊಣೆಯಲ್ಲ. ಹಾಗೇ ಗಾಂಧೀಜಿ ಕುರಿತ ಚಿನ್ನಸ್ವಾಮಿಯವರ ಅಭಿಪ್ರಾಯಕ್ಕೆ ಸಂಪೂರ್ಣ ಅವರೇ ಹೊಣೆ.

ಇನ್ನು ವಿವೇಕಾನಂದ, ವಿಶ್ವೇಶ್ವರಯ್ಯನವರನ್ನು ಪ್ರಸ್ತಾಪಿಸಿರುವ ಕುರಿತು ಚಿನ್ನಸ್ವಾಮಿಯವರು ಎತ್ತಿರುವ ಆಕ್ಷೇಪಗಳ ಬಗ್ಗೆ ವಿವೇಕಾನಂದರ ಸಮಗ್ರ ಕೃತಿಗಳ ಪ್ರಾಥಮಿಕ ಪರಿಚಯವಿರುವ ಯಾರಿಗಾದರೂ ಅವರು ಜಾತಿಪದ್ಧತಿ ಸತಿಪದ್ಧತಿಗಳನ್ನು ಸಮರ್ಥಿಸಿದ್ದಾರೆ ಎಂದು ಭಾವಿಸಲೂ ಸಾಧ್ಯವಿಲ್ಲ. ಸತಿಪದ್ಧತಿ ಕುರಿತ ವಿವೇಕಾನಂದರ ಸಮರ್ಥನೆ ಎಂದು ಚಿನ್ನಸ್ವಾಮಿಯವರು ಉಲ್ಲೇಖಿಸಿರುವ ಮಾತುಗಳನ್ನು ಸಂದರ್ಭ ಸಹಿತ ಮಾಹಿತಿಯೊಂದಿಗೆ ನಿರೂಪಿಸಿದ್ದರೆ ಅನುಮಾನ ಪರಿಹಾರವಾಗುತ್ತಿತ್ತು. ಹಾಗೇ ವಿಶ್ವೇಶ್ವರಯ್ಯನವರ ಜೀವನ ಹಾಗೂ ಮೌಲ್ಯಗಳ ಬಗ್ಗೆ ಓದಿ ತಿಳಿದುಕೊಂಡ ಯಾರಾದರೂ ಅವರನ್ನು ಜಾತಿವಾದಿ ಎಂದು ಕರೆಯಲು ಸಾಧ್ಯವಿಲ್ಲ. ಹೆಚ್ಚೆಂದರೆ ಅವರು ಚರಿತ್ರೆಯ ಒತ್ತಡಗಳನ್ನು ಸಹಾನುಭೂತಿಯಿಂದ ಅರಿಯುವಷ್ಟು ಸ್ಪಂದನಶೀಲರಾಗಿರಲಿಲ್ಲ ಎಂದಷ್ಟೇ ಹೇಳಬಹುದು. ನಾನು ನನ್ನ ಲೇಖನದಲ್ಲಿ ವಿಶ್ವೇಶ್ವರಯ್ಯನವರ ಪ್ರಸ್ತಾಪ ಮಾಡಿದ್ದು, ಅಂತಹವರನ್ನು ಬಲಿತೆಗೆದುಕೊಂಡ ಹಿಂದುಳಿದ ವರ್ಗಗಳ ಚಳುವಳಿಗೆ ಎಷ್ಟು ಜವಾಬ್ದಾರಿ ಇರಬೇಕು ಎಂಬುದನ್ನು ಸೂಚಿಸಲೇ ಹೊರತು ಅವರನ್ನು ಜಾತ್ಯತೀತರೆಂದು ಸಾರಲು ಅಲ್ಲ.

ಹಿಂದೂ ಧರ್ಮದ ಬಗ್ಗೆ ಕಿಡಿಕಾರಿರುವ ಚಿನ್ನಸ್ವಾಮಿಯವರು ‘ಬುದ್ಧನ ನಂತರ ಹಿಂದೂ ಧರ್ಮವೆನ್ನುವುದು ಬೌದ್ಧೀಯ ಮೌಲ್ಯಗಳ ತಿರುಳನ್ನು ಪಡೆದು ಬುದ್ಧನೆಂಬ ಸಿಪ್ಪೆಯನ್ನು ಹೊರಹಾಕಿತು’ ಎಂಬ ಅಂಬೇಡ್ಕರ್ ಮಾತನ್ನು ಉಲ್ಲೇಖಿಸಿದ್ದಾರೆ. ಇಂದಿನ ಹಿಂದೂ ಧರ್ಮವನ್ನು ಕುರಿತು ನಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಳ್ಳಲು ಇದಕ್ಕಿಂತ ಹೆಚ್ಚಿನ ಆಧಾರ ಬೇಕಿಲ್ಲ: ಬೌದ್ಧನಾಗಲು ಬೌದ್ಧಧರ್ಮ ಸೇರುವ ಅಗತ್ಯವೇನು ಇಲ್ಲ; ಹಾಗೆ ಮಾಡಿದರೆ ಒಂದು ಬಂಧನ ಕಳಚಿಕೊಂಡು ಇನ್ನೊಂದು ಬಂಧನಕ್ಕೆ ಸಿಕ್ಕಿ ಹಾಕಿಕೊಂಡಂತಾಗುತ್ತದಷ್ಟೇ. ಹಿಂದೂ ಧರ್ಮದ ವೈದಿಕ ಚೌಕಟ್ಟನ್ನು ಚಿನ್ನಸ್ವಾಮಿ ಪ್ರಸ್ತಾಪಿಸಿದ್ದಾರೆ. ಆದರೆ ಹಿಂದೂಗಳೆಂದು ಹೇಳಿಕೊಳ್ಳುವ ಬಹುಸಂಖ್ಯಾತ ಜನ ಈ ಚೌಕಟ್ಟಿನ ಹೊರಗೇ ಬದುಕು ನಡೆಸುತ್ತಿದ್ದಾರೆಂಬುದನ್ನು ನಾವು ಗಮನಿಸಬೇಕು. ಹಾಗೇ ಚಿನ್ನಸ್ವಾಮಿಯವರು ಪ್ರತಿನಿಧಿಸುವ ದಲಿತ ಚಿಂತನಾಲಹರಿಯ ಒತ್ತಡ ಹೆಚ್ಚಿದಷ್ಟೂ, ಅಂಬೇಡ್ಕರ್ ಫೋಟೋ ಇಟ್ಟುಕೊಂಡ ದಲಿತರ ಮನೆಗಳಲ್ಲಿ ಗಣಪತಿ ಹೋಮ-ಸತ್ಯನಾರಾ ಯಣ ಪೂಜೆಗಳ ಭರಾಟೆ ಹೆಚ್ಚುತ್ತಾ, ಅವರೂ ಸವರ್ಣೀಯರಂತೇ ವೈದಿಕ ಚೌಕಟ್ಟಿಗೆ ಸೇರಿಕೊಳ್ಳುವ ಆತುರದಲ್ಲಿರುವುದನ್ನು ನಾವು ಗಮನಿಸಬೇಕು.

ಚಿನ್ನಸ್ವಾಮಿಯವರು ಇತ್ತೀಚಿನ ಬನ್ನಿಕೊಪ್ಪ ಕೆರೆ ನೀರಿನ ಪ್ರಕರಣವನ್ನು ಜಾತಿ ಪದ್ಧತಿ-ಅಸ್ಪೃಶ್ಯತೆಗಳ ಕ್ರೌರ್ಯದ ಉದಾಹರಣೆಯಾಗಿ ನೀಡಿ ಅಲ್ಲಿಗೇ ನಿಂತುಬಿಟ್ಟಿದ್ದಾರೆ. ಆದರೆ ಈ ಪ್ರಕರಣ ಅಸ್ಪೃಶ್ಯತೆಯ

ಜಾತಿ-ಅಸ್ಪೃಶ್ಯತೆಯ ಅವಮಾನದ ಬಗ್ಗೆ ‘ನೋವುಂಡವರೇ ನೋವ ಬಲ್ಲರು’ ಎಂಬ ಹಳೆಯ ಕ್ಲೀಷೆಯ ಮಾತುಗಳನ್ನಾಡಿದ್ದಾರೆ. ಒಬ್ಬರ ನೋವು ಇನ್ನೊಬ್ಬರಿಗೆ ಅರ್ಥವೇ ಆಗುವುದಿಲ್ಲ ಎಂದು ತೀರ್ಮಾನಿಸುವುದಾಗಿದ್ದರೆ ಸಂವಾದ-ಚರ್ಚೆಯಾದರೂ ಏಕೆ ಬೇಕು? ಇದು ಇನ್ನೊಂದು ರೀತಿಯಲ್ಲಿ, ಆಯಾ ಜಾತಿ-ಜನಾಂಗಗಳು ಆಯಾ ಜಾತಿ-ಜನಾಂಗಗಳಿಗೆ ಸಂಬಂಧಪಟ್ಟ ಕಷ್ಟಗಳನ್ನೋ ಸುಖಗಳನ್ನೋ ಉಂಡುಕೊಂಡಿರುವುದು ಅನಿವಾರ್ಯ ಎಂದು ಹೇಳಿದಂತೆ.

ಆಚರಣೆಯ ಉದಾಹರಣೆ ಹೇಗೋ ಹಾಗೇ ಅದರ ವಿರುದ್ಧ ಒಟ್ಟಾರೆ ಸಮಾಜ ವ್ಯಕ್ತಪಡಿಸಿದ ಪ್ರತಿಕ್ರಿಯೆಯ ಉದಾಹರಣೆಯೂ ಆಗಿದೆ ಎಂಬುದನ್ನು ಗಮನಿಸದೇ ಹೋದಲ್ಲಿ ನಾವು ವ್ಯಸನ ಸಂತೋಷದ ಕಾಯಿಲೆಗೆ ಬಲಿಯಾಗುತ್ತೇವಷ್ಟೆ. ಜಾತಿ ಪದ್ಧತಿ ಕುರಿತಂತೆ ಚಿನ್ನಸ್ವಾಮಿಯವರು ಹೇಳಿರುವ ಮಾತುಗಳನ್ನೇ ನಾನು ಚರಿತ್ರೆಯ ಉದಾಹರಣೆಗಳ ಸಮೇತ ಇನ್ನಷ್ಟು ಪರಿಣಾಮಕಾರಿಯಾಗಿ ಹೇಳಿರುವೆನಾದರೂ (ನನ್ನ ಲೇಖನದ ೯-೧೦ನೇ ಪ್ಯಾರಾಗಳನ್ನು ಗಮನಿಸಿ), ಅವರು ಜಾತಿ-ಅಸ್ಪೃಶ್ಯತೆಯ ಅವಮಾನದ ಬಗ್ಗೆ ‘ನೋವುಂಡವರೇ ನೋವ ಬಲ್ಲರು’ ಎಂಬ ಹಳೆಯ ಕ್ಲೀಷೆಯ ಮಾತುಗಳನ್ನಾಡಿದ್ದಾರೆ. ಒಬ್ಬರ ನೋವು ಇನ್ನೊಬ್ಬರಿಗೆ ಅರ್ಥವೇ ಆಗುವುದಿಲ್ಲ ಎಂದು ತೀರ್ಮಾನಿಸುವುದಾಗಿದ್ದರೆ ಸಂವಾದ-ಚರ್ಚೆಯಾದರೂ ಏಕೆ ಬೇಕು? ಇದು ಇನ್ನೊಂದು ರೀತಿಯಲ್ಲಿ, ಆಯಾ ಜಾತಿ-ಜನಾಂಗಗಳು ಆಯಾ ಜಾತಿ-ಜನಾಂಗಗಳಿಗೆ ಸಂಬಂಧಪಟ್ಟ ಕಷ್ಟಗಳನ್ನೋ ಸುಖಗಳನ್ನೋ ಉಂಡುಕೊಂಡಿರುವುದು ಅನಿವಾರ್ಯ ಎಂದು ಹೇಳಿದಂತೆ.

ನನಗೆ ದಲಿತ ಸಂಘರ್ಷ ಸಮಿತಿಯ ಜೊತೆಗೆ ಸುಮಾರು ೨೫ ವರ್ಷಗಳ ಒಡನಾಟವಿದೆ. ಆ ಒಡನಾಟದ ಅನುಭವದ ಆಧಾರದ ಮೇಲೆ ಹೇಳುವುದಾದರೆ, ನನ್ನ ಈ ಕೆಲವು ಗೆಳೆಯರಿಗೆ ಅಸ್ಪೃಶ್ಯತೆಯ ನೋವು-ಅವಮಾನವೆಂಬುದು ತಲೆಯಿಂದ ಇಳಿಸಿಕೊಳ್ಳ ಕೂಡದ ಒಂದು ಹೊರೆಯಾಗಿಯೇ ಮುಂದುವರೆದಿದೆ.. ಇದರ ಮರ್ಮ ನನಗೆ ಇನ್ನೂ ಅರ್ಥವಾಗಿಲ್ಲ. ಹಾಗೇ ದಲಿತರು ಸಮಾಜದ ಮುಖ್ಯವಾಹಿನಿಗೆ ಸೇರುವುದನ್ನು ಸಹಿಸದ ಅಥವಾ ತಡೆಯುವ ಸವರ್ಣೀಯರ ಒಂದು ವರ್ಗವಿರುವಂತೆಯೇ ದಲಿತರಲ್ಲೂ ಅಂತಹ ಒಂದು ವರ್ಗವಿದ್ದಂತೆ ತೋರುತ್ತದೆ. ಇಂತಹ ರಾಜಕಾರಣ ಯಾರಿಗೂ ಒಳ್ಳೆಯದನ್ನು ಮಾಡುವಂತಹುದಲ್ಲ. □

ಸಂಪಾದಕೀಯ



'ಅರ್ಹತೆ'ಯ ಬೆನ್ನು ಹತ್ತಿ...

ಮತ್ತೆ ದೇಶದಲ್ಲಿ 'ಅರ್ಹತೆ'ಯ ಚರ್ಚೆ ಆರಂಭವಾಗಿದೆ. ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣದಲ್ಲಿ ಶೇ.೨೭ರಷ್ಟು ಪ್ರವೇಶಗಳನ್ನು ನಿಗದಿಗೊಳಿಸಬೇಕೆಂಬ ಪ್ರಸ್ತಾಪ ಮಾನವಸಂಪನ್ಮೂಲ ಸಚಿವ ಅರ್ಜುನ್‌ಸಿಂಗ್‌ರಿಂದ ಬಂದ ಕೂಡಲೇ ದೇಶಾದ್ಯಂತ 'ಅರ್ಹರು' ಗದ್ದಲ ಎಬ್ಬಿಸಿದ್ದಾರೆ. ಇದೇ ಜನ ೧೯೮೧ ರಲ್ಲಿ ಗುಜರಾತಿನಲ್ಲಿ ದಲಿತರಿಗೆ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣದಲ್ಲಿ ಮೀಸಲಾತಿ ನೀಡಬಾರದೆಂದು ದಾಂದಲೆ ಎಬ್ಬಿಸಿದ್ದರು. ವಿ.ಪಿ. ಸಿಂಗ್ ಪ್ರಧಾನ ಮಂತ್ರಿಯಾಗಿದ್ದಾಗ ಮಂಡಲ್ ವರದಿ ಜಾರಿಗೆ ತರಬಾರದೆಂದು ರಾದ್ಧಾಂತ ಮಾಡಿದ್ದರು. ಈಗಿನದು ಇವುಗಳೆಲ್ಲದರ ಮುಂದುವರೆದ ಭಾಗ.

'ಅರ್ಹತೆ'ಯ ಬೆನ್ನು ಹತ್ತಿರುವ ಈ ಜನರ ಅರ್ಹತೆಗಳ ಬಗ್ಗೆ ನಾವು ಚಿಂತಿಸಬೇಕಾಗಿದೆ. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅವಕಾಶಗಳ ಸಿಂಹಪಾಲು ಪಡೆದವರು ಇವರು. ಸಿಂಹಪಾಲು ಅನ್ನುವುದಕ್ಕಿಂತ ನೂರಕ್ಕೆ ನೂರು ಅನುಭವಿಸಿದವರು ಇವರು ಎಂದರೂ ತಪ್ಪಾಗಲಿಕ್ಕಿಲ್ಲ. ಐದು ಸಾವಿರ ವರ್ಷಗಳ ಚರಿತ್ರೆಯಲ್ಲಿ ಮೊಗಲರು ಮತ್ತು ಬ್ರಿಟೀಷರು ಆಳಿದ ನಾನೂರು-ಐನೂರು ವರ್ಷಗಳನ್ನು ಬಿಟ್ಟರೆ ಉಳಿದಂತೆ ಇಡೀ ದೇಶವನ್ನೇ ಆಪೋಷನ ತೆಗೆದುಕೊಂಡವರು ಈ ಜನ. ಸ್ವಾತಂತ್ರ್ಯಾನಂತರದ ಕೇವಲ ೫೦-೬೦ ವರ್ಷಗಳ ಕಾಲ ತಮ್ಮ ಪಾಲಿಗಾಗಿ ಕೆಳವರ್ಗದ ಜನರು ನಡೆಸುತ್ತಿರುವ ಸಣ್ಣ ಪ್ರಯತ್ನದ ಬಗ್ಗೆ ಕನಿಷ್ಟ ಸೌಜನ್ಯ, ಮಾನವೀಯ ನಡವಳಿಕೆಗಳು ಕೂಡ ಇಲ್ಲದಿರುವುದು ಅತ್ಯಂತ ನೋವಿನ ಸಂಗತಿ.

ಮೀಸಲಾತಿ ಅಶಕ್ತರಿಗೆ ನೀಡುವ ಆಸರೆಯೇ ಹೊರತು ಯೋಗ್ಯತೆಯಲ್ಲಿ ನೀಡುವ ವಿನಾಯಿತಿ ಅಲ್ಲ. ನಾಗರಿಕ ಸಮಾಜವೊಂದರಲ್ಲಿ ಬದುಕುವ ಅವಕಾಶಗಳಲ್ಲಿ ಸಮಪಾಲು ಸಿಗದಿರುವಾಗ ಇಂಥ ವ್ಯವಸ್ಥೆಯೊಂದನ್ನ ಸಮಾಜ ತನ್ನ ಮೇಲೆ ತಾನೇ ಹೇರಿಕೊಳ್ಳಬೇಕು. ಹಾಗೂ ಅದಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕು. ಆಗ ಮಾತ್ರ ಅದು ನಾಗರಿಕ ಸಮಾಜ ಅನ್ನಿಸಿಕೊಳ್ಳುತ್ತದೆ. ಆದರೆ ಭಾರತೀಯ ಸಮಾಜದಲ್ಲಿ ನಡೆದಿರುವುದೇನು? ಸ್ವಾತಂತ್ರ್ಯಾನಂತರದ ೫೮ ವರ್ಷಗಳಲ್ಲಿ ದೇಶದಲ್ಲಿ ಮೀಸಲಾತಿ ಎಷ್ಟರ ಮಟ್ಟಿಗೆ ಜಾರಿಗೆ ಬಂದಿದೆ ಎಂಬುದನ್ನು ಈ 'ಅರ್ಹತೆ'ಯ ಜನರು ಎದೆ ಮುಟ್ಟಿ ಹೇಳಬೇಕು. ಕಸ ಗುಡಿಸುವ, ಕಕ್ಕಸ್ಸು ತೊಳೆಯುವ ಕೆಳಸ್ತರದ ನೌಕರಿಗಳ ಹೊರತಾಗಿ ಬೇರೆ ಯಾವುದರಲ್ಲೂ ಮೀಸಲಾತಿಯನ್ನು ಪ್ರಾಮಾಣಿಕವಾಗಿ ಒಪ್ಪಿತ ಪ್ರಮಾಣದಲ್ಲಿ ಈ ಕ್ಷಣದವರೆಗೂ ತುಂಬಲಾಗಿಲ್ಲ. ಅಷ್ಟರ ಮಟ್ಟಿಗಿನ 'ಪ್ರಾಮಾಣಿಕತೆ'ಯನ್ನು ಅಧಿಕಾರದಲ್ಲಿ-ಆಡಳಿತದಲ್ಲಿ ಸಿಂಹಪಾಲು ಪಡೆದ ಈ 'ಅರ್ಹ' ಜನ ತೋರಿಸಿಲ್ಲ. ನೈತಿಕತೆ ಮತ್ತು ಪ್ರಾಮಾಣಿಕತೆ 'ಅರ್ಹತೆ' ನಿಗದಿಯಲ್ಲಿನ ಆದ್ಯತೆಯ ವಿಷಯಗಳೆಂಬುದು ಈ 'ಧರ್ಮಬೀರು'ಗಳಿಗೆ ಅರ್ಥವಾಗುತ್ತಿಲ್ಲ.

'ಅರ್ಹತೆ'ಯ ಮಾತನಾಡುವ ಜನರಿಗೆ ಇನ್ನೊಂದು ವಿಷಯವನ್ನು ಹೇಳಲೇಬೇಕಾಗಿದೆ. ಇದುವರೆಗೆ ಮೀಸಲಾತಿ ಇದ್ದದ್ದು ಕೇವಲ ಶಿಕ್ಷಣ, ನೇಮಕಾತಿ ಮತ್ತು ರಾಜಕೀಯ ರಂಗದಲ್ಲಿ ಮಾತ್ರ. ಈ ಮೂರು ಕ್ಷೇತ್ರಗಳು ಒಟ್ಟು ಭಾರತೀಯ ಬದುಕಿನ ಬೆರಳೆಣಿಕೆಯಷ್ಟು ಪ್ರಮಾಣ ಮಾತ್ರ. ಇದರ ಹೊರತಾಗಿರುವ 'ಬ್ರಹ್ಮಾಂಡ' ಕ್ಷೇತ್ರದಲ್ಲಿ ಅವಕಾಶ ವಂಚಿತರು ಪಾಲು ಕೇಳಲು ಸಿದ್ಧರಾಗುತ್ತಿದ್ದಾರೆ. ವ್ಯಾಪಾರ ವಹಿವಾಟಿನಲ್ಲಿ, ನಿರ್ಮಾಣ ಕಾಮಗಾರಿಗಳಲ್ಲಿ, ಸರಬರಾಜು ವ್ಯವಹಾರದಲ್ಲಿ, ಉದ್ದಿಮೆಗಳಲ್ಲಿ-ಹೀಗೆ ಎಲ್ಲಕ್ಷೇತ್ರಗಳಲ್ಲೂ ತಮ್ಮ ಪಾಲನ್ನು ಕೇಳಲು ಈ ಜನ ಈಗ ಸಿದ್ಧರಾಗುತ್ತಿದ್ದಾರೆ.

ಸರ್ಕಾರಿ ನೌಕರಿಗಳಲ್ಲಿನ ಮೀಸಲಾತಿ ಸ್ಥಿತಿ ನಿಮಗೆಲ್ಲ ಗೊತ್ತೇ ಇದೆ. ಸ್ವಾತಂತ್ರ್ಯಾನಂತರದ ಆರಂಭದ ದಿನಗಳಲ್ಲಿ ಇದ್ದ ಪ್ರಮಾಣದಲ್ಲಿ ಈಗ ನೌಕರಿಗಳಿಲ್ಲ. ಕನಿಷ್ಟ ಕಾಲುಭಾಗವಾದರೂ ನೌಕರಿಗಳು ಜಾಗತೀಕರಣಕ್ಕೆ ಬಲಿಯಾಗಿವೆ. ಆದರೆ ಅದಕ್ಕೆ ಪರ್ಯಾಯವಾಗಿ ಉದ್ಯೋಗಾಕಾಂಕ್ಷಿಗಳ ದಂಡು ಬೆಳೆಯುತ್ತಿದೆ. ದಲಿತ ವರ್ಗದಲ್ಲೇ ಹಿಂದೆ ನಾಲ್ಕು ನೌಕರಿಗಳಿದ್ದರೆ ಅರ್ಜಿ ಹಾಕುವವರು ಕೇವಲ ನಾಲ್ಕೇ ಜನ ಇರುತ್ತಿದ್ದರು. ಈಗ ನಾಲ್ಕು ನೌಕರಿಗಳು ಮೂರಾಗಿವೆ. ಆದರೆ ಅರ್ಜಿ ಹಾಕುವವರು ನಾಲ್ಕು ಸಾವಿರ ಜನರಾಗಿದ್ದಾರೆ! ಅಂದರೆ ಬೆಳೆಯುತ್ತಿರುವ ಉದ್ಯೋಗಾಕಾಂಕ್ಷಿಗಳ ಪ್ರಮಾಣಕ್ಕೆ ಹೊಂದುವ ಉದ್ಯೋಗಾವಕಾಶಗಳು ಇಲ್ಲವಾಗಿವೆ.

ಜಾಗತೀಕರಣದ ಈ ಕೊಡುಗೆಗೆ ಪರ್ಯಾಯವೇನಾದರೂ ಇರಬೇಕಲ್ಲ. ಈ ಪರ್ಯಾಯಗಳನ್ನು ಈಗಿನ ಮೀಸಲಾತಿಯ ಹೊರಗೇ ಹುಡುಕಿಕೊಳ್ಳಬೇಕಾಗಿದೆ. ಅಂದರೆ ಉಳಿದ ಆರ್ಥಿಕ ಚಟುವಟಿಕೆಗಳಲ್ಲಿ ಈ ಉದ್ಯೋಗಾಕಾಂಕ್ಷಿಗಳು ತೊಡಗಿಸಿಕೊಳ್ಳಬೇಕು. ಅದಕ್ಕೆ ಬೇಕಾದ ಅನುಕೂಲಗಳನ್ನು ಸರ್ಕಾರ ಮಾಡಬೇಕು. ಹಾಗೆ ಮಾಡುವುದರ ಒಂದು ಭಾಗವೇ ಉದ್ಯೋಗ ದೊರಕಿಸಿಕೊಡುವ ಎಲ್ಲಾ ಕ್ಷೇತ್ರಗಳಲ್ಲೂ ಮೀಸಲಾತಿಯನ್ನು ನಿಗದಿಪಡಿಸುವುದು. ಅಂದರೆ ಭಾರತದ, ಪ್ರತಿಯೊಂದು ಜನ ವರ್ಗಗಳಿಗೂ, ಅವರವರ ಜನಸಂಖ್ಯೆಗೆ ಅನುಗುಣವಾಗಿ ಪ್ರವೇಶಾವಕಾಶಗಳನ್ನು ದೊರಕಿಸಿಕೊಡುವುದು. ಹಾಗೆ ಮಾಡುವುದರಿಂದ ಆಯಾ ಜನವರ್ಗಗಳಲ್ಲಿ 'ಪ್ರತಿಭಾವಂತ'ರಿಗೆ ಈ ಅವಕಾಶಗಳು ದೊರೆಯುತ್ತವೆಯೇ ಹೊರತು ಅನರ್ಹರಿಗಲ್ಲ.

ಪ್ರತಿಭೆ ಅರ್ಹತೆ ಯಾವುದೇ ನಿರ್ದಿಷ್ಟ ಜಾತಿ ಅಥವಾ ಕೆಲವು ಜಾತಿಗಳಿಗೆ ಮೀಸಲಾದುದಲ್ಲ. ಎಲ್ಲ ಜಾತಿ ಹಾಗೂ ಜನವರ್ಗಗಳಲ್ಲಿ ಅದು ಸಮನಾಗಿಯೇ ಇರುತ್ತದೆ. ಆದರೆ ಪ್ರತಿಭೆ ಅರ್ಹತೆಗಳನ್ನು ಗುರುತಿಸುವ ಮಾನದಂಡ ಮೇಲ್ವರ್ಗದ್ದಾದ್ದರಿಂದ ಹಾಗೂ ಅದರ ಮೂಲಕವೇ ಕೆಳವರ್ಗದ ಪ್ರತಿಭಾವಂತರ ಪ್ರತಿಭೆಯನ್ನು ಅಳೆಯುವುದರಿಂದ ಸಹಜವಾಗಿಯೇ ಅನ್ಯಾಯ ನಡೆಯುತ್ತದೆ. ತೂಗುವ ತಕ್ಕಡಿಯಲ್ಲೇ ಮೋಸವಿದ್ದರೆ ತೂಕದಲ್ಲಿ ಮಾತ್ರ ನ್ಯಾಯ ಹೇಗೆ ಸಿಗುತ್ತದೆ!

ಮೀಸಲಾತಿಗೆ ಹತ್ತು ಹಲವು ಆಯಾಮಗಳಿವೆ. ಸಾಮಾಜಿಕ ಅಸಮಾನತೆಯೇ ಅದರ ಮೂಲ ಬೇರು. ಆದರೆ ಸಾಮಾಜಿಕ ಅಸಮಾನತೆ ಎಂಬುದು ಒಂದೇ ರೀತಿಯಲ್ಲಿಲ್ಲ. ಅಸಮಾನತೆಯಲ್ಲೂ ಸಾವಿರಾರು ಮೆಟ್ಟಿಲುಗಳಿವೆ. ಭಾರತೀಯ ಜಾತಿ ವ್ಯವಸ್ಥೆಯಂತೂ ಒಬ್ಬರ ತಲೆ ಮೇಲೆ ಮತ್ತೊಬ್ಬರ ಪಾದ ಇರಿಸಿಯೇ ಬೆಳೆದು ನಿಂತಿದೆ. ಇಂಥ ಸ್ಥಿತಿಯಲ್ಲಿ ಮೀಸಲಾತಿಯನ್ನು ಸಾರಾಸಗಟಾಗಿ ವಿಂಗಡಿಸುವುದು ಅಷ್ಟು ಸುಲಭವಲ್ಲ. ಹಿಂದುಳಿದ ವರ್ಗದ ಮೀಸಲಾತಿ ವಿಚಾರದಲ್ಲಂತೂ ತುಂಬಾ ಗಂಭೀರವಾಗಿ ಚಿಂತಿಸಬೇಕು. ಬಲಾಢ್ಯ ಭೂಮಾಲೀಕ ಜಾತಿಗಳು ಹಿಂದುಳಿದ ವರ್ಗದ ಪಟ್ಟಿಯಲ್ಲಿರುವುದರಿಂದ, ಯಾವುದೇ ಮೀಸಲಾತಿಯ ಅನುಕೂಲವನ್ನು ಇಂಥ ಬಲಾಢ್ಯರೇ ಕಬಳಿಸುವ ಸಾಧ್ಯತೆಗಳಿವೆ. ಹಾಗಾಗಿ ಅತಿ ಹಿಂದುಳಿದ ಜಾತಿಗಳನ್ನು ಗುರುತಿಸಿ ಅವರಿಗೆ ಇದರ ಅನುಕೂಲಗಳು ದೊರೆಯುವಂತೆ ಮಾಡಬೇಕಾದ ಅಗತ್ಯ ತುಂಬಾ ಇದೆ. ಈ ದಿಕ್ಕಿನಲ್ಲಿ ಎಲ್ಲರೂ ಯೋಚಿಸಬೇಕಾಗಿದೆ. ಆದುದರಿಂದ ಅರ್ಜುನ್ ಸಿಂಗ್‌ರ ಪ್ರಸ್ತಾಪ ಕೇವಲ ಪ್ರಸ್ತಾಪ ಮಾತ್ರವಾಗದೆ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮವಾಗಬೇಕಾಗಿದೆ.

○ ಇಂದೂಧರ ಹೊನ್ನಾಪುರ

ಸಮಕಾಲೀನ

ಜೆ.ಡಿ.(ಎಸ್)-ಬಿ.ಜೆ.ಪಿ.ಮೈತ್ರಿ:

ಶಿಲಾಯುಗದ ಸರ್ಕಾರ

ವೈ. ಮರಿಸ್ವಾಮಿ

ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ, ಪ್ರತಿಯೊಬ್ಬ ಮತದಾರನಿಗೂ ರಾಜಕೀಯ ಘನತೆಯಿರುತ್ತದೆ. ಒಬ್ಬ ಸಾಮಾನ್ಯ ಪ್ರಜೆಗಿರುವ, ಒಬ್ಬ ಸಾಮಾನ್ಯ ಮತದಾರನಿಗಿರುವ ಘನತೆ ಮತ್ತು ವ್ಯಕ್ತಿತ್ವವನ್ನು ಕಳೆದುಕೊಂಡಿರುವ ಮಾಜಿ ಪ್ರಧಾನಿಗಳು ತಮ್ಮ ಧೃತರಾಷ್ಟ್ರ ಪ್ರೇಮವನ್ನು ಇಡೀ ವಿಶ್ವದ ಮುಂದೆ ಅನಾವರಣಗೊಳಿಸಿದ್ದಾರೆ. ಸರ್ವಸ್ವವನ್ನು ತ್ಯಜಿಸಿ ಬೆತ್ತಲೆಯಾಗಿ ನಿಂತಿರುವ ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕ ನಡೆಯುತ್ತಿದ್ದ ಸಂದರ್ಭದಲ್ಲಿಯೇ, ತಮ್ಮ ಕುಟುಂಬ ರಾಜಕಾರಣದ ಅಧಿಕಾರದ ದಾಹಕ್ಕಾಗಿ ಬೀದಿಯಲ್ಲಿ ಬೆತ್ತಲೆಯಾಗಿರುವ ದೇವೇಗೌಡರು ಹೈಜೆಕ್ ಯುಗದ ಗೊಮ್ಮಟೇಶ್ವರನಾಗಿ ಕಂಗೊಳಸುತ್ತಿದ್ದಾರೆ! ಈ ಅವತಾರವನ್ನು ಕಂಡ ರಾಜ್ಯದ ಜನತೆ ನಕ್ಕು ನಕ್ಕು ಸಂಭ್ರಮಿಸುತ್ತಿದ್ದಾರೆ!



ಕರ್ನಾಟಕದ ಪ್ರಸ್ತುತ ರಾಜಕೀಯ ತಿರುವು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ. ಸಮಾಜವಾದಿ, ದಲಿತ, ರೈತ ಮತ್ತಿತರ ಪ್ರಗತಿಪರ ಚಳುವಳಿಗಳ ತವರೂರಿನಲ್ಲಿ, ವಚನ ಚಳುವಳಿಯ ಮೂಲಕ ವರ್ಣಾಶ್ರಮ ಪದ್ಧತಿಯ ಅಸಮಾನತೆಯನ್ನು ಪ್ರತಿಭಟಿಸುವುದರ ಮುಖಾಂತರ ಕಾಯಕದ ಮಹತ್ವವನ್ನು ಪ್ರತಿಪಾದಿಸಿದ ನೆಲದಲ್ಲಿ, ಕೋಮು ವಾದಿ-ಜಾತಿವಾದಿ ಪಾಳೇಗಾರಿಕೆ ಸಂಸ್ಕೃತಿಯ ಅಪವಿತ್ರ ಮೈತ್ರಿಯ ಸರ್ಕಾರ ತಗುಲಿಕೊಂಡಿದೆ. ಸಮಸ್ತ ಭಾರತದಲ್ಲೇ ಪ್ರಬುದ್ಧ ರಾಜಕೀಯ ಮತ್ತು ಪ್ರಜ್ಞಾವಂತ ಮತದಾರರನ್ನು ಹೊಂದಿರುವ ರಾಜ್ಯ ನಮ್ಮ ಕರ್ನಾಟಕ. ಕಳೆದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಯಲ್ಲೂ ಇಲ್ಲಿಯ ಜನ ಇದನ್ನು ವ್ಯಕ್ತ ಪಡಿಸಿದ್ದರು. ಮೇಲ್ಜಾತಿಗಳ ಯಜಮಾನಿಕೆ ಹಾಗೂ ಪಾಳೇಗಾರಿಕೆಯ ರಾಜಕಾರಣದ ವಿರುದ್ಧ ತಳಸಮುದಾಯಗಳ 'ಅಹಿಂದ'ದ ಸಂಘಟಿತ ಶಕ್ತಿ ಮಾಂತ್ರಿಕ ಕೆಲಸ ಮಾಡಿತ್ತು.

ಈ ಮಾಂತ್ರಿಕ ಶಕ್ತಿಗೆ ಬೆಚ್ಚಿಬಿದ್ದ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ಆಸ್ತಿಯಾಗಿರುವ ಜನತಾದಳ (ಜಾತ್ಯತೀತ) ಮತ್ತು ಮನುವಾದಿಗಳ ಹಿಡಿತದಲ್ಲಿರುವ ಬ್ರಾಹ್ಮಣ ಜಾತಿ ಪಾರ್ಟಿ (ಬಿಜೆಪಿ) ಎನ್ನುವ ಫ್ಯೂಡಲ್-ಫ್ಯಾಸಿಸ್ಟ್ ಶಕ್ತಿಗಳು ಪ್ರಜಾಪ್ರಭುತ್ವವನ್ನೇ ಹೈಜಾಕ್ ಮಾಡುವುದರ ಮೂಲಕ ಅಧಿಕಾರವನ್ನು ಕಬಳಿಸಿವೆ. ಈ ಹೈಜಾಕ್ ತಂತ್ರದ ಮಾಸ್ಟರ್ ಮೈಂಡ್ ಸ್ವತಃ ಮಾನ್ಯ ದೇವೇಗೌಡರೇ ಆಗಿದ್ದಾರೆ. ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ, ಪ್ರತಿಯೊಬ್ಬ ಮತದಾರನಿಗೂ ರಾಜಕೀಯ ಘನತೆಯಿರುತ್ತದೆ. ಅದು ಮಾನವನ ಘನತೆ ಮತ್ತು ವ್ಯಕ್ತಿತ್ವದ ಸಂಕೇತವೂ ಹೌದು. ಒಬ್ಬ ಸಾಮಾನ್ಯ ಪ್ರಜೆಗಿರುವ, ಒಬ್ಬ ಸಾಮಾನ್ಯ ಮತದಾರನಿಗಿರುವ ಘನತೆ ಮತ್ತು ವ್ಯಕ್ತಿತ್ವವನ್ನು ಕಳೆದುಕೊಂಡಿರುವ ಮಾಜಿ ಪ್ರಧಾನಿಗಳು ಯಾವುದೇ ತತ್ವ ಸಿದ್ಧಾಂತಕ್ಕೆ ಬದ್ಧರಾಗದೆ ಮಗ ಕುಮಾರಸ್ವಾಮಿಯನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಿ ತಮ್ಮ ಧೃತರಾಷ್ಟ್ರ ಪ್ರೇಮವನ್ನು ಇಡೀ ವಿಶ್ವದ ಮುಂದೆ ಅನಾವರಣಗೊಳಿಸಿದ್ದಾರೆ.

ಸರ್ವಸ್ವವನ್ನು ತ್ಯಜಿಸಿ ಬೆತ್ತಲೆಯಾಗಿ ನಿಂತಿರುವ ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕ ನಡೆಯುತ್ತಿದ್ದ ಸಂದರ್ಭದಲ್ಲಿಯೇ, ತಮ್ಮ ಕುಟುಂಬ ರಾಜಕಾರಣದ ಅಧಿಕಾರದ ದಾಹಕ್ಕಾಗಿ ಬೀದಿಯಲ್ಲಿ ಬೆತ್ತಲೆಯಾಗಿರುವ ದೇವೇಗೌಡರು ಹೈಜೆಕ್ ಯುಗದ ಗೊಮ್ಮಟೇಶ್ವ ರನಾಗಿ ಕಂಗೊಳಿಸುತ್ತಿದ್ದಾರೆ! ಈ ಅವತಾರವನ್ನು ಕಂಡ ರಾಜ್ಯದ ಜನತೆ ನಕ್ಕು ನಕ್ಕು ಸಂಭ್ರಮಿಸುತ್ತಿದ್ದಾರೆ!

ಅಪ್ಪನ ಮಾಸ್ಟರ್ ಮೈಂಡ್‌ನ ಅಣತಿಯಂತೆ ರಾಜ್ಯದ ಮುಖ್ಯಮಂತ್ರಿ ಗಾದಿಯನ್ನು ಹೈಜಾಕ್ ಮಾಡಿರುವ ಕುಮಾರಸ್ವಾಮಿಯವರಿಗಿ ರುವ ರಾಜಕೀಯ ಅನುಭವವಾದರೂ ಏನು? ೧೯೯೬ ರಲ್ಲಿ ತಂದೆ ದೇವೇಗೌಡರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಇವರು ಎಂ.ಪಿ. ಆಗಿದ್ದರು. ಅದೂ ಕೇವಲ ಎರಡು ವರ್ಷದ ಮಟ್ಟಿಗೆ. ನಂತರ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಶಾಸಕ ರಾಗಿ ಆರಿಸಿ ಬಂದರು. ಒಬ್ಬ ದಕ್ಷ ಸಚಿವರಾಗಿ ಇಲ್ಲವೇ ಸಮರ್ಥ ಜನಪ್ರತಿನಿಧಿಯಾಗಿ ಕನಿಷ್ಠ ೫ ವರ್ಷಗಳ ಅನುಭವ ಕೂಡ ಇರದ 'ಕುಮಾರ' ಸ್ವಾಮಿಯವರೀಗ ವಾಮ ಮಾರ್ಗ ದಿಂದ ಮುಖ್ಯಮಂತ್ರಿಯಾಗಿರುವುದು ಕನ್ನಡಿಗರ ದುರಾದೃಷ್ಟವೇ ಸರಿ.

ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ರಾಜಕೀಯ ಕೂಡಾವಳಿಯ ಸಂದರ್ಭದಲ್ಲಿ ತಮ್ಮ ಘನತೆಯನ್ನು ಬದಿಗೊತ್ತಿ ಜೆ.ಡಿ.(ಎಸ್) ಹಾಗೂ ಬಿಜೆಪಿ ಶಾಸಕರು ಕಮಂಗಿಗಳಂತೆ ನಡೆದುಕೊಂಡ ರೀತಿ ಇದೆಯಲ್ಲಾ, ಅದು ಅವರು ತಮ್ಮ ಮತದಾರ ಪ್ರಭು ಗಳಿಗೆ ಮಾಡಿದ ಅವಮಾನ ಮತ್ತು ದ್ರೋಹವಾಗಿದೆ. ತಾವು ಜನ ರಿಂದ ಚುನಾಯಿತರಾದ ಜವಾಬ್ದಾರಿಯುತ ಜನಪ್ರತಿನಿಧಿಗಳು ಎಂಬ ಕಾರಣವನ್ನೇ ಮರೆತು ಮಾರುಕಟ್ಟೆಯಲ್ಲಿ ಬಿಕರಿಗಿರುವ ಸರಕುಗಳಂತೆ ವರ್ತಿಸಿದ ಶಾಸಕರು ರಾಜಕೀಯ ಗುಲಾಮರಂತೆ ನಡೆದು ಕೊಂಡರು. ಅಧಿಕಾರದ ದಾಹಕ್ಕಾಗಿ ಮಾಡರ್ನ್ ಡಿಂಗ್‌ಡಾಂಗ್‌ನ ರೆಸಾರ್ಟ್ಸ್‌ಗಳಲ್ಲಿ ಒತ್ತೆಯಾಳುಗಳಂತೆ ಇದ್ದರು. ಇವರ ಮಂಗಾಟ ವನ್ನು ಕಂಡಿರುವ ರಾಜ್ಯದ ಜನತೆಗೀಗ ಶಾಸಕರಭವನ ಸಗಟು ವ್ಯಾಪಾದ ಮಳಿಗೆಯಾಗಿ ಗೋಚರಿಸಿದರೂ ಆಶ್ಚರ್ಯವಿಲ್ಲ!

ಒಂದು ಕಾಲದಲ್ಲಿ ರಾಜಕೀಯವನ್ನು 'ರಾಜಕೀಯದ ಅಪರಾಧೀಕರಣ, ಎಂದು ಗುರುತಿಸುತ್ತಿದ್ದರು. ಈಗ ಅದನ್ನು 'ರಾಜಕೀಯದ ವ್ಯಾಪಾರೀಕರಣ' ಎಂದು ಬದಲಾಯಿಸುವಂತಾಗಿದೆ. ಸಮಯ ಸಾಧಕತನ ಮತ್ತು ದಂಧೆ ಇಂದಿನ ಪ್ರಸ್ತುತ ರಾಜಕಾರಣದ ಕೇಂದ್ರ ಬಿಂದು ಆಗಿವೆ. ಅಭಿವೃದ್ಧಿ ಹೆಸರಿನಲ್ಲಿ ಹರಿದು ಬರುವ 'ಕಿಕ್‌ಬ್ಯಾಕ್' ಮೇಲೆಯೇ ಅಧಿಕಾರದಲ್ಲಿರುವವರ ಕಣ್ಣು: ಆಡಳಿತದ ಹೆಸರಿನಲ್ಲಿ ವ್ಯಾಪಾರಕ್ಕಿಳಿದವರಿಗೆ ದಲಿತರ ಆಕ್ರಂದನವಾಗಲೀ, ರೈತರ ಅಸಹಾಯಕತೆಯಾಗಲೀ, ಕಾರ್ಮಿಕರ ಕಣ್ಣೀರಾಗಲೀ, ಮಹಿಳೆಯರ ಸಂಕಟವಾಗಲೀ-ಅರ್ಥವಾಗುವುದಿಲ್ಲ. ಮುಸಲ್ಮಾನ-ಕ್ರೈಸ್ತರಂಥ ದುರ್ಬಲ ಸಮುದಾಯಗಳು ಇವರಿಗೆ ಬೇಡವಾದ ವಸ್ತುಗಳು.

ಕರ್ನಾಟಕದಲ್ಲೀಗ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಸರ್ಕಾರ ಮುಂಬರುವ ದಿನಗಳ ಬಿಕ್ಕಟ್ಟಿಗೆ ಮುನ್ನುಡಿಯಾಗಿದೆ. ಯಡಿಯೂರಪ್ಪನವರು ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮರುಕ್ಷಣದಲ್ಲಿಯೇ ತಮ್ಮ ವಿಧಾನಸೌಧದ ಕಛೇರಿಯಿಂದ ಸಂವಿಧಾನ ಶಿಲ್ಪಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವ ಚಿತ್ರವನ್ನು ತೆಗೆಸಿಹಾಕಿದ ಪ್ರಕರಣ ಬಿಜೆಪಿಯ ಫ್ಯಾಸಿಸಮ್‌ನ ಒಂದು ಸೂಚನೆ ಮಾತ್ರವಾಗಿದೆ. ಸಮಾನತೆ, ಸೋದರತೆ ಮತ್ತು ಭ್ರಾತೃತ್ವವನ್ನು ಮೂಲ ಸೆಲೆಯನ್ನಾಗಿಸಿಕೊಂಡಿರುವ ಭಾರತದ ಸಂವಿಧಾನ ಮನುವಾದಿಗಳ ಪಾಲಿಗೆ ಮುಳ್ಳಿನ ಕಿರೀಟವಿದ್ದಂತೆ! ಅವರದೇನಿದ್ದರೂ ಅಸ್ಪೃಶ್ಯತೆ, ಜಾತಿಪದ್ಧತಿ ಹಾಗೂ ಕರ್ಮಸಿದ್ಧಂತವನ್ನು ಎತ್ತಿಹಿಡಿಯುವ ಮನುಸ್ಮೃತಿಯ ಭಜನೆ! ತಮ್ಮ ಮನದಾಳದ ಭಾವನೆಯನ್ನು ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರವನ್ನು ತಮ್ಮ ಕಛೇರಿ ಯಿಂದ ಎತ್ತಂಗಡಿ ಮಾಡುವ ಹೀನ ಕೃತ್ಯದ ಮೂಲಕ ತೋರ್ಪಡಿಸಿಕೊಂಡಿದ್ದಾರಷ್ಟೇ!

ಜೆಡಿ(ಎಸ್) ಹಾಗೂ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ

ರಾಜಧಾನಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ, ಅತ್ತ ಕರಾವಳಿ ಪ್ರದೇಶದಲ್ಲಿ ಅಧಿಕಾರದ ಅಮಲೇರಿಸಿಕೊಂಡ ಭಜರಂಗಿಗಳು ಮುಸಲ್ಮಾನರು ನಡೆಸುತ್ತಿದ್ದ ದನದ ಮಾಂಸದ ಹೋಟೆಲ್‌ಗಳ ಮೇಲೆ ದಾಳಿ ಮಾಡಿ ಧ್ವಂಸಗೊಳಿಸಿದ್ದಾರೆ. ದಲಿತ, ಹಿಂದುಳಿದ, ಕ್ರೈಸ್ತ ಮತ್ತು ಮುಸಲ್ಮಾನರ ಬದುಕಿನ ಭಾಗವಾಗಿರುವ ಬಾಡೂಟವನ್ನು ಅವರಿಂದ ಕಸಿದುಕೊಳ್ಳಲು ಹುನ್ನಾರ ನಡೆಸಿರುವ ಸಂಘ ಪರಿವಾರ ಆಹಾರದಂಥ ಆಯ್ಕೆಯ ವಿಷಯದಲ್ಲಿ ಮೂಗು ತೂರಿಸುತ್ತಿರುವುದು ಸಂವಿಧಾನದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಮೀನುಗಾರಿಕೆ-ಮುಜರಾಯಿ ಹಾಗೂ ತೋಟಗಾರಿಕಾ ಖಾತೆಯನ್ನು ಖರೀದಿಸಿರುವ ಬಿಜೆಪಿಯ ನಾಗರಾಜ ಶೆಟ್ಟಿಗೆ ಗುಜರಾತ್ ನರಮೇಧದ ಡಾ|| ನರೇಂದ್ರ ಮೋದಿಯೇ ಮಾದರಿ ನಾಯಕನಂತೆ. ಅಂದರೆ ಕರ್ನಾಟಕವನ್ನು ಕೂಡ ಮತ್ತೊಂದು ಗುಜರಾತನ್ನಾಗಿ ಮಾಡಬೇಕೆಂಬ ಹಿಡನ್ ಅಜೆಂಡಾ ಈತನ ಪಕ್ಷದ ಭವಿಷ್ಯದ ಯೋಜನೆಯಾಗಿರುವ ಸಾಧ್ಯತೆಗಳಿವೆ ಎಂದಲ್ಲವೇ?

ಅಧಿಕಾರ ಇಲ್ಲದಿರುವ ಸಂದರ್ಭದಲ್ಲಿಯೇ ರಾಜ್ಯದ ಉದ್ದಗಲಕ್ಕೆ ಕೋಮುವಾದದ ದಳ್ಳುರಿಯನ್ನು ಹರಡಲು ಹರಸಾಹಸ ಮಾಡಿದ್ದ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ಅಧಿಕಾರದ ರಾಜಾಶ್ರಯ ದೊರಕಿರುವುದರಿಂದ ರಾಮರಸ ಕುಡಿದಷ್ಟು ಸಂತೋಷವಾಗಿದೆ. ಸೆಕ್ಯುಲರಿಸಮ್ ಅಂದರೆ ಏನೆಂದು ತಮಗೆ ಗೊತ್ತಿಲ್ಲವೆಂದು ಹೇಳುವುದರ ಮೂಲಕ ಕುಮಾರಸ್ವಾಮಿಯವರು ಜೆಡಿ(ಎಸ್)ಗೂ ಬಿಜೆಪಿಯ ತತ್ವಸಿದ್ಧಾಂತಕ್ಕೂ ಯಾವುದೇ ವ್ಯತ್ಯಾಸವಿಲ್ಲವೆಂದು ಸೂಕ್ಷ್ಮವಾಗಿ ಸೂಚನೆ ಕೊಟ್ಟು ತಾವು ಯಾರ ಪರ ಎಂದು ಈಗಾಗಲೇ ತೋರಿಕೊಟ್ಟಿದ್ದಾರೆ. ಅಧಿಕಾರಕ್ಕೆ ಬಂದ ಹೊಸ ಹುರುಪಿನಲ್ಲಿ ದಲಿತ ಚಳುವಳಿಯ ಕಾರ್ಯಕರ್ತರನ್ನು ಹೊರತುಪಡಿಸಿ ಇತರ ಎಲ್ಲ ಸಂಘಟನೆಗಳ ಮೇಲಿನ ಕೇಸುಗಳನ್ನು ರದ್ದುಗೊಳಿಸಲು ಹೊರಟಿದ್ದಾರೆ.

ದೊಂಬಿ-ಗಲಭೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಬಿಜಾಪುರದ ಬಿಜೆಪಿ ಸಂಸದ ಬಸವರಾಜ ಪಾಟೀಲ್ ಯತ್ನಾಳ್ ಮತ್ತು ಒಬ್ಬ ಶಾಸಕರ ಮೇಲಿದ್ದ ಕೇಸನ್ನು ಸರ್ಕಾರದ ಮುಖಾಂತರ ಬರ್ಖಾಸ್ತು ಮಾಡಿದ್ದಾರೆ. ತಮ್ಮದು ತತ್ವಸಿದ್ಧಾಂತವಿಲ್ಲದ ಅಭಿವೃದ್ಧಿ ಪರ ಸರ್ಕಾರವೆಂದು ಘೋಷಿಸಿಕೊಂಡಿರುವ ಈ ಸರ್ಕಾರ ದಲಿತ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಯಾವ ರೀತಿಯ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಲಿದೆ ಎಂಬುದರ ಬಗ್ಗೆ ಬಾಯಿ ಬಿಡುತ್ತಿಲ್ಲ. ಕೋಮುವಾದಿಗಳ ದೌರ್ಜನ್ಯದ ಆತಂಕ ಎದುರಿಸುತ್ತಿರುವ ಮುಸಲ್ಮಾನ-ಕ್ರೈಸ್ತ ಸಮುದಾಯಗಳ ಸಂರಕ್ಷಣೆಗಾಗಿ ಯಾವ ಕಾನೂನಿನ ಕ್ರಮಗಳನ್ನು ಕೈಗೊಳ್ಳಲಿದೆ ಎನ್ನುವುದರ ಬಗ್ಗೆ ದಿವ್ಯಮೌನ ತಾಳಿದೆ. ಆದರೆ ಹಿಂದುತ್ವದ ಉಗ್ರವಾದಿಗಳ ಪರ ವಕಾಲತ್ತು ವಹಿಸುವ ವಕೀಲ ದೊರೈ ರಾಜ್ ಸರ್ಕಾರದ ಅಭಿ ಯೋಜಕರಾಗಿ ಉದ್ಭವಿಸಿದ್ದಾರೆ!

ಮಾಜಿ ಪ್ರಧಾನಿ ದೇವೇಗೌಡ, ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ 'ಯಡ್ಡಿ'ಯ ರಾಜಕೀಯ ಬದುಕಿನ ಗಾಡಿಯನ್ನು ನಡೆಸುತ್ತಿರುವ ಡ್ರೈವರ್ ಒಬ್ಬನೇ. ಅವನೇ ಮನು. ಗುಡಿಗುಂಡಾರಗಳನ್ನು ತಿರುಗುತ್ತ, ಕಂಡ ಕಂಡ ವಿಗ್ರಹಗಳಿಗೆ ಕೈ ಮುಗಿಯುತ್ತ, ಕೈ ಕಾಲಿಗೆ ಸಿಗುವ ಹಿರಿಕಿರಿ ಸ್ವಾಮಿಗಳಿಗೆ ಅಡ್ಡ ಬೀಳುತ್ತ, ಹೋಮಹವನಗಳಲ್ಲಿ ಮೈ ಮರೆಯುತ್ತ, ತಮ್ಮ ರಾಜ

ಮಾಜಿ ಪ್ರಧಾನಿ ದೇವೇಗೌಡ, ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ 'ಯಡ್ಡಿ'ಯ ರಾಜಕೀಯ ಬದುಕಿನ ಗಾಡಿಯನ್ನು ನಡಸುತ್ತಿರುವ ಡ್ರೈವರ್ ಒಬ್ಬನೇ. ಅವನೇ ಮನು.

ಕೀಯ ವೈರಿಗಳು ನಾಶವಾಗಲೆಂದು ಮಾಟಮಂತ್ರಗಳನ್ನು ಮಾಡಿಸುವುದರಲ್ಲಿಯೇ ಕಾಲ ಹಾಕುತ್ತಿರುವ ಜನರಿಂದ 'ಶಿಲಾಯುಗದ ಸರ್ಕಾರ'ವನ್ನು ನಿರೀಕ್ಷಿಸಬಹುದೇ ಹೊರತು ಪ್ರಗತಿಪರ-ಜನಪರ ಸರ್ಕಾರವನ್ನಲ್ಲ.

ಶಿಲಾಯುಗದ ಸರ್ಕಾರದಲ್ಲಿ ಮಠಮಾನ್ಯಗಳಿಗೆ-ಜ್ಯೋತಿಷಿ ಅರ್ಚಕರಿಗೆ ಮನ್ನಣೆ ದೊರೆಯುತ್ತದೆ. ಆಡಳಿತ ಯಂತ್ರಕ್ಕೆ ಮತ ಮೌಢ್ಯದ ತುಕ್ಕು ಹಿಡಿಯುತ್ತದೆ. ಜಾತಿ-ಪಾಳೇಗಾರಿಕೆಯ ಮದವೇರುತ್ತದೆ. ಪ್ರಗತಿ ಮರೀಚಿಕೆಯಾಗಿ ಭ್ರಷ್ಟಾಚಾರ ಹುಲುಸಾಗಿ ಬೆಳೆಯುತ್ತದೆ ಬಡವ-ಬಲ್ಲಿದರ ನಡುವಿನ ಕಂದರ ಮತ್ತಷ್ಟು ವಿಸ್ತಾರವಾಗುತ್ತಾ ಹೋಗುತ್ತದೆ. ಬಡವರ ಬದುಕು ಅತಂತ್ರಗೊಳ್ಳುತ್ತದೆ. ಅವರ ಅತಂತ್ರ ಸ್ಥಿತಿಯನ್ನು ಬಂಡವಾಳ ಮಾಡಿಕೊಂಡು ಕೋಮುವಾದ ಇನ್ನಷ್ಟು ಚಿಗುರಲು ಹವಣಿಸುತ್ತದೆ. ಕೋಮುವಾದದ ಅಲೆಯ ಮೇಲೆ ಬಿಜೆಪಿಯ ಕಮಲ ಅರಳಲು ತವಕಿಸುತ್ತದೆ. ಶಿಲಾಯುಗದ ಸರ್ಕಾರದಲ್ಲಿ ಜಾತೀಯತೆ, ಪಾಳೇಗಾರಿಕೆ, ಫ್ಯಾಸಿಸಮ್ ಮತ್ತು ಪುರುಷ ಪ್ರಧಾನ ಅಂಶಗಳು ಧುಮುಗುಡುತ್ತವೆ. ಈಗಿರುವ ೨೨ ಜನ ಮಂತ್ರಿಗಳ ಸಚಿವ ಸಂಪುಟದಲ್ಲಿ ಒಬ್ಬ ಮಹಿಳೆಯೂ ಇಲ್ಲ ಎಂಬುದು ಇದಕ್ಕೊಂದು ತಾಜಾ ಉದಾಹರಣೆ.

ಕರ್ನಾಟಕದ ಜನಸಂಖ್ಯೆಯಲ್ಲಿ ಶೇ.೧೦ ರಷ್ಟಿರುವ ಒಕ್ಕಲಿಗರು ಮುಖ್ಯಮಂತ್ರಿ ಪದವಿಯ ಜೊತೆಗೆ ೪ ಪ್ರಮುಖ ಸಚಿವ ಸ್ಥಾನಗಳನ್ನು ಮತ್ತು ಶೇ.೧೧ ರಷ್ಟಿರುವ ಲಿಂಗಾಯತರು ಉಪಮುಖ್ಯಮಂತ್ರಿ ಪಟ್ಟ ದೊಂದಿಗೆ ೪ ಮಹತ್ವದ ಖಾತೆಗಳನ್ನು ಹೊಡೆದುಕೊಂಡು ಶೇಕಡ ೮೯% ಇರುವ ದಲಿತ ಹಿಂದುಳಿದ ಮತ್ತು ಮುಸಲ್ಮಾನ ಸಮುದಾಯಗಳಿಗೆ ನಾಮ್‌ಕೆವಸ್ತೆ ಪ್ರಾತಿನಿಧ್ಯ ಕೊಟ್ಟಿ ದ್ದಾರೆ! ಕ್ರೈಸ್ತರನ್ನಂತೂ ಸಂಪೂರ್ಣವಾಗಿ ಮರೆತು ಬಿಟ್ಟಿ ದ್ದಾರೆ.

ಯಾವುದನ್ನು ಸಹಿಸಿಕೊಂಡರೂ ಕರ್ನಾಟಕದ ರಾಜಕೀಯ ಭೂಪಟದಲ್ಲಿ ಕಳೆದುಹೋಗಲಿದ್ದ ಬಿಜೆಪಿಗೆ ಅಧಿಕಾರದ ಜೊತೆಗೆ ರಾಜಕೀಯ ಪುನರ್‌ಜನ್ಮ ನೀಡಿದ ದೇವೇಗೌಡರ ಘಾತಕ ರಾಜಕೀಯದ ಪಾಕಡ ರಾಜಕಾರಣವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಬಂಗಾರಪ್ಪನವರು ನಿರ್ಗಮನ, ಯಡ್ಡಿ-ಅನಂತ್‌ಕುಮಾರ್ ಬಣಗಳ ಒಳಜಗಳದಿಂದ ನಿತ್ರಾಣವಾಗಿದ್ದ ಬಿಜೆಪಿ ಮುಂಬರುವ ವಿಧಾನ ಸಭಾ ಚುನವಣೆಯ ವೇಳೆಗೆ ನಿರ್ನಾಮವಾಗುದರಲ್ಲಿತ್ತು. ಆರ್‌ಎಸ್‌ಎಸ್ ಹಿನ್ನೆಲೆಯಿರದ ಬಹುತೇಕ ಶಾಸಕರು ಪಕ್ಕದಲ್ಲಿನ ಗರ್ಭಗುಡಿ ಸಂಸ್ಕೃತಿಗೆ ಬೇಸತ್ತು ಇತರ ಪಕ್ಷಗಳಿಗೆ ಜಿಗಿಯಲು ಮಾನಸಿಕವಾಗಿ ಸಿದ್ಧರಾಗಿದ್ದರು. ಬಿಜೆಪಿ ತನ್ನ ರಾಜಕೀಯ ಅಸ್ತಿತ್ವವನ್ನೇ ಕಳೆದುಕೊಳ್ಳುವಂಥ ಕುಸಿತದಲ್ಲಿದ್ದಾಗ ಅದರೊಂದಿಗೆ ದೋಸ್ತಿ ಮಾಡಿಕೊಂಡಿರುವ ಗೌಡರು-'ನೀನು ಅತ್ತಂತೆ ಮಾಡು-ನಾನು ಸತ್ತಂತೆ ನಟಿಸುತ್ತೇನೆ' ಎಂದು ಪುತ್ರನಿಗೆ ನಿರ್ದೇಶನ ಮಾಡಿದ್ದಾರೆ!

ಕರ್ನಾಟಕದಲ್ಲಿ ಬಿಜೆಪಿಯ ಕಾಕಿ ಚೆಡ್ಡಿ ತೊಟ್ಟು ಕೈಯಲ್ಲಿ ಆರ್.ಎಸ್.ಎಸ್.ನ ಲಾಠಿ ಹಿಡಿದುಕೊಂಡು ಕವಾಯತ್ ನಡೆಸಿರುವ ಫ್ಯೂಡಲ್ ಕಮ್ ಫ್ಯಾಸಿಸ್ಟ್ ದೇವೇಗೌಡರು ತಾವು ಈಗಲೂ ಜಾತ್ಯತೀತ ನಾಯಕರೆಂದು ರಾಷ್ಟ್ರೀಯ ಮಟ್ಟದಲ್ಲಿ ಮುಖವುಳಿಸಿಕೊಳ್ಳುವ 'ದ್ವಿಪಾತ್ರಾಭಿನಯ' ಮಾಡುತ್ತಿದ್ದಾರೆ. ಬರಲಿರುವ ವಿಧಾನ ಸಭೆಯಲ್ಲಿ ಕೇರಳದ ಎಡಪಕ್ಷಗಳೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಳ್ಳಲು ಹೆಣಗಾಡುತ್ತಿದ್ದಾರೆ. ಜಾಗತಿಕ ಹಂತಕ ಜಾರ್ಜ್ ಬುಷ್ ಭಾರತಕ್ಕೆ ಆಗಮಿಸಿದಾಗ ಜೆಡಿ(ಎಸ್) ಮುಖಾಂತರ ಪ್ರತಿಭಟನೆಗಿಳಿದ ದೇವೇಗೌಡರನ್ನು ಕಂಡು ಅವರ ದೋಸ್ತಿ ಪಕ್ಷದ ವೆಂಕಯ್ಯನಾಯ್ಡು, ನರೇಂದ್ರಮೋದಿ, ಯಡ್ಡಿ-ಅನಂತ್ ಎಂಬ ರಕ್ತಪಿಪಾಸುಗಳು ಮುಸುಮುಸು ನಗುತ್ತಿದ್ದಾರೆ!

ತಮ್ಮೊಂದಿಗೆ ನೆಂಟಸ್ತಿಕೆ ಬೆಳೆಸಿಕೊಳ್ಳುವ ಪಕ್ಷಗಳನ್ನು ದೀರ್ಘಾವಧಿಯಲ್ಲಿ ಗುಡಿಸಿ ಹಾಕುವುದರೊಂದಿಗೆ ರಾಷ್ಟ್ರೀಯ ಮಟ್ಟದಲ್ಲಿ ತೃತೀಯ ಶಕ್ತಿಯನ್ನು ಮುಗಿಸಿ ಹಾಕುವ ಬಿಜೆಪಿಯ ಹಿತಾಸಕ್ತಿಗೆ ಜೆಡಿ(ಎಸ್) ಕೂಡ ಬಲಿಯಾದರೆ ಆಶ್ಚರ್ಯವಿಲ್ಲ! ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಬಿಜೆಪಿಗೆ ಬೆಂಬಲಿಸಿ ಕಾಂಗ್ರೆಸ್ ಪಾಲಿಗೆ ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಭಸ್ಮಾಸೂರ ಆದಂತೆ, ಪುತ್ರನನ್ನು ಮುಖ್ಯಮಂತ್ರಿ ಮಾಡಲು ಅದೇ ಬಿಜೆಪಿಯೊಂದಿಗೆ ಕೈ ಜೋಡಿಸಿರುವ ಮಾಜಿಪ್ರಧಾನಿ ದೇವೇಗೌಡರು ಜೆಡಿ(ಎಸ್) ಶವಪೆಟ್ಟಿಗೆಗೆ ಕೊನೆಯ ಮೊಳೆಯಾದರೂ ಆಗಬಹುದು!

ಭವಿಷ್ಯದ ಮಾತದೇನೇ ಇದ್ದರೂ, ಪ್ರಸ್ತುತ ಅಧಿಕಾರದಲ್ಲಿರುವ ಜೆಡಿ(ಎಸ್)-ಬಿಜೆಪಿ ಮೈತ್ರಿಯ ಶಿಲಾಯುಗದ ಸರ್ಕಾರದ ವಿರುದ್ಧ ದಲಿತ, ರೈತ, ಮಹಿಳಾ ಮತ್ತು ಎಡಪಂಥೀಯ ಸಂಘಟನೆಗಳು ಎಚ್ಚೆತ್ತುಕೊಂಡು ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟವನ್ನು ರೂಪಿಸಬೇಕು. ಫ್ಯೂಡಲ್-ಫ್ಯಾಸಿಸ್ಟ್ ಸರ್ಕಾರವನ್ನು ಕಿತ್ತೆಸೆದು ಜನಪರ ಪರ್ಯಾಯ ಸರ್ಕಾರವನ್ನು ಸ್ಥಾಪಿಸಲು ಪ್ರಯತ್ನದ ಭಾಗವಾಗಿ ಬಹುಜನ ಸಮಾಜ ಪಕ್ಷ, ಕರ್ನಾಟಕ ಸರ್ವೋದಯ ಪಕ್ಷ, ಅಖಿಲ ಭಾರತ ಪ್ರಗತಿಪರ ಜನತಾದಳ, ರೈತ ಸಂಘ, ಸಿ.ಪಿ.ಐ. ಸಿ.ಪಿ.ಐ.(ಎಂ) ಮತ್ತು ಸಮಾಜವಾದಿ ಪಕ್ಷಗಳು ಈಗಿನಿಂದಲೇ ದೂರಗಾಮಿ ನೆಲೆಯಲ್ಲಿ ಹೊಂದಾಣಿಕೆ ಮಾಡಿಕೊಂಡರೆ, ಕರ್ನಾಟಕದಲ್ಲಿ ಜೆಡಿ(ಎಸ್) ಹಾಗೂ ಬಿಜೆಪಿ ಪಕ್ಷಗಳ ಬದಲು ಪರ್ಯಾಯ ಶಕ್ತಿಯಾಗಿ ಹೊರಹೊಮ್ಮಲು ಅವಕಾಶವಿದೆ. □

ಸಂದರ್ಶನ

ಬೌದ್ಧ ಧರ್ಮ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಮಾನತೆಯನ್ನು ಸಾರಿದಂದಿನಿಂದ ಅದು ವ್ಯಾಪಕವಾಗಿ ಬೆಳೆಯಿತು. ರಾಜಕೀಯ ನೆಲೆಯಲ್ಲಿ, ಜನರ ಒಳಿತಿಗೆ ರಾಜ್ಯ ಕಟ್ಟಿದ ಅಶೋಕನಂಥ ವ್ಯಕ್ತಿಗಳು ಇಂಡಿಯಾದಲ್ಲಿ ಹುಟ್ಟಿ ಬಂದರು. ಸಾಮಾಜಿಕ ಬದಲಾವಣೆಯ ಬಗ್ಗೆ ಚಿಂತಿಸಿದ ನಾಗಾರ್ಜುನನಂಥ ಬುದ್ಧಿ ಜೀವಿಗಳು ಇದ್ದರು. ಸಮಾಜದ ಎಲ್ಲರನ್ನೂ ಒಳಗೊಂಡಂತ ನಳಂದ ವಿಶ್ವವಿದ್ಯಾನಿಲಯವಿತ್ತು. ಮೌರ್ಯರ ರಾಜ್ಯದಲ್ಲಿ ಮೊಟ್ಟ ಮೊದಲ ಬ್ರಾಹ್ಮಣ ಪ್ರಧಾನಮಂತ್ರಿ ಕೌಟಿಲ್ಯ "ಅರ್ಥ ಶಾಸ್ತ್ರ"ವನ್ನು ಬರೆದ. ಬುದ್ಧನ ಪ್ರಜಾಸತ್ತಾತ್ಮಕ ಪ್ರಯೋಗಗಳಿಗೆ ವಿರುದ್ಧವಾಗಿ ಪ್ರತಿಗಾಮಿ ಚಿಂತನೆಗಳು ಪ್ರಾರಂಭವಾದವು.

ಅಮಿತ್ ಸೇನ್ ಗುಪ್ತ
ಅನು: ಎನ್.ಪಿ ನಾಗರಾಜ್

ಪ್ರಶ್ನೆ: "ಸಾರ್ವಜನಿಕ ಬುದ್ಧಿ ಜೀವಿಗಳು" ಎನ್ನುವ ಕಲ್ಪನೆಯ ಬಗ್ಗೆ ನಿಮ್ಮ ಅಭಿಮತ 'ಏನು? ಇಂಡಿಯಾದಲ್ಲಿ ಅವರ ಸಂಖ್ಯೆ 'ಏಕೆ ಕಡಿಮೆ ಇದೆ?

ಉತ್ತರ: ಸಾಮಾಜಿಕ ಬದಲಾವಣೆ ತರಲು ಯತ್ನಿಸುವ ವ್ಯಕ್ತಿಗಳನ್ನು "ಸಾರ್ವಜನಿಕ ಬುದ್ಧಿ ಜೀವಿಗಳು" ಎನ್ನಬಹುದು. ಹಿಂದೆ ಬುದ್ಧ ಅಂತಹ ಒಬ್ಬ ಬುದ್ಧಿಜೀವಿಯಾಗಿದ್ದ. ಸಾಮಾಜಿಕ ಬದಲಾವಣೆ ಬಗ್ಗೆ, ಆಗಿನ ಸಮಾಜ ಹಾಗೂ ಅದನ್ನು ಮೀರಿದ ವಿಷಯಗಳ ಬಗ್ಗೆ, ಮೂಲಭೂತ ಪ್ರಶ್ನೆಗಳನ್ನು ಅವನು ಕೇಳಿದ. ಬೌದ್ಧ ಧರ್ಮ ಹರ ಡಲು ಪ್ರಾರಂಭವಾದ ತಕ್ಷಣ, ವರ್ಣಧರ್ಮದ ಕಲ್ಪನೆಗಳನ್ನು ಹೊಂದಿದ್ದ ಬ್ರಾಹ್ಮಣತ್ವದ ಹಿಂದೂ ವ್ಯವಸ್ಥೆ ಇಂಥಹ ವೈಚಾರಿಕ ಚಿಂತನೆಗಳನ್ನು ನಾಶಗೊಳಿಸಲು ಪುಸ್ತಕಗಳನ್ನು ಹೊರತಂದಿತು. ಬುದ್ಧನ ವೈಚಾರಿಕ ಚಿಂತನೆಗಳನ್ನು ವಿರೋಧಿಸಿದ ಮೊದಲ ವ್ಯಕ್ತಿ ಯೆಂದರೆ ಕೌಟಿಲ್ಯ.

ಯಾವಾಗ ಬೌದ್ಧ ಧರ್ಮ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಮಾನತೆಯನ್ನು ಸಾರಿತೋ, ಅಂದಿನಿಂದ ಅದು ಹರಡಲು ಶುರುವಾಯಿತು. ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಸಮಾನತೆ ಬಗ್ಗೆ ಆ ಚಿಂತನೆಗಳು ಇದ್ದವು. ರಾಜಕೀಯ ನೆಲೆಯಲ್ಲಿ, ಜನರ ಒಳಿತಿಗೆ ರಾಜ್ಯ ಕಟ್ಟಿದ ಅಶೋಕನಂಥ ವ್ಯಕ್ತಿಗಳು ಇಂಡಿಯಾದಲ್ಲಿ ಹುಟ್ಟಿ ಬಂದರು. ಸಾಮಾಜಿಕ ಬದಲಾವಣೆಯ ಬಗ್ಗೆ ಚಿಂತಿಸಿದ ನಾಗಾರ್ಜುನನಂಥ ಬುದ್ಧಿ ಜೀವಿಗಳು ಇದ್ದರು. ಸಮಾಜದ ಎಲ್ಲರನ್ನೂ ಒಳಗೊಂಡಂತ ನಳಂದ ವಿಶ್ವವಿದ್ಯಾನಿಲಯವಿತ್ತು. ಮೌರ್ಯರ ರಾಜ್ಯದಲ್ಲಿ ಮೊಟ್ಟ ಮೊದಲ ಬ್ರಾಹ್ಮಣ ಪ್ರಧಾನಮಂತ್ರಿ ಕೌಟಿಲ್ಯ ಮತ್ತು ಅವನು "ಅರ್ಥ ಶಾಸ್ತ್ರ"ವನ್ನು ಬರೆದ. ಬುದ್ಧನ ಪ್ರಜಾಸತ್ತಾತ್ಮಕ ಪ್ರಯೋಗಗಳಿಗೆ ವಿರುದ್ಧವಾಗಿ ಪ್ರತಿಗಾಮಿ ಚಿಂತನೆಗಳು ನಂತರ ಪ್ರಾರಂಭವಾದವು. ವಿಶ್ವಾಮಿತ್ರನೂ ಒಬ್ಬ ಬ್ರಾಹ್ಮಣ ರಾಜ-ಅವನ ಕಾಲದಲ್ಲಿ ಮನು ಎಂಬ ಮಹಾ ವಿನಾಶಕಾರಿ ಬುದ್ಧಿಜೀವಿ ಕ್ರಿ.ಶ ಮೊದಲ ಶತಮಾನದಲ್ಲಿ ಹುಟ್ಟಿ ಬಂದ.



ಮನು ಮತ್ತು ಕೌಟಿಲ್ಯ ಎಂಬ ಅವೈಚಾರಿಕ ಬುದ್ಧಿಜೀವಿಗಳ ನಂತರ ಬೌದ್ಧಿಕ ವಲಯ, ಬ್ರಾಹ್ಮಣತ್ವದ ಸಾಮಾಜಿಕ ಛಿದ್ರತೆಯ ಬಲೆಯಲ್ಲಿ ಸಿಕ್ಕಿಕೊಂಡಿತು. ಇದನ್ನೇ ಕೆಲವರು "ಬ್ರಾಹ್ಮಣ ಸಾಮಾಜಿಕ ಕ್ರಮ ಬದ್ಧ ವ್ಯವಸ್ಥೆ"ಯೆಂದು ಕರೆಯುತ್ತಾರೆ. ಆದರೆ ಬೌದ್ಧಿಕ ಬೆಳವಣಿಗೆಗೆ ಸಮಾನವಾದ ಆಧ್ಯಾತ್ಮಿಕ ಸಂಸ್ಥೆಗಳಾದ ಚರ್ಚುಗಳಲ್ಲಿ, ಬೌದ್ಧ ವಿಹಾರಗಳಲ್ಲಿ ಸಾಧ್ಯವಿದ್ದ ಮುಕ್ತ ಚರ್ಚೆ ಇಂಥ ಸಾಮಾಜಿಕ ಛಿದ್ರತೆಯಲ್ಲಿ ಸಾಧ್ಯವಾಗಲಿಲ್ಲ.

ವಿಶ್ವಾಮಿತ್ರನ ಕಾಲದಲ್ಲಿ ಬಲಿಷ್ಠವಾದ ಹಿಂದೂ ದೇವಸ್ಥಾನ ವ್ಯವಸ್ಥೆ, ಗುಪ್ತರ ಕಾಲದಲ್ಲಿ ಚೆನ್ನಾಗಿ ಬೆಳೆ ಯಿತು. ಗುಪ್ತರು ಇಂಡಿಯವನ್ನಾಳಿದ ಮೊದಲ ವೈಶ್ಯರು. ಅವರು ಬ್ರಾಹ್ಮಣರಿಗೆ ಭೂ ಹಕ್ಕನ್ನು ಒದಗಿಸಿಕೊಟ್ಟು ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿದರು. ಈ ಕಲ್ಪನೆ ಗುಪ್ತ-ಧರ್ಮ, ಅಂದರೆ ಗೋಚ ರಿಸದ ನಿಧಿ, ಎನ್ನುವುದರಿಂದ ಬಂದಿದೆ ಅವರು ಆ ನಂತರ ನಿಧಾನ ವಾಗಿ ಮಾರಾಟ ಮಾಡುವ ವರ್ಗಕ್ಕೆ ಸೇರಿದರು.

ಪ್ರಶ್ನೆ: ಬೌದ್ಧಿಕ ಬದಲಾವಣೆ ತರುವಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್ ಹಾಗೂ ಬೌದ್ಧರ ವಿಹಾರಗಳಲ್ಲಿ ಸಾಮ್ಯತೆ ಮತ್ತು ವ್ಯತ್ಯಾಸ ಗಳು 'ಏನು?

ಉತ್ತರ: ರೋಮನ್ ಕ್ಯಾಥೊಲೀಕ್ ಯುಗದಲ್ಲಿ ಧರ್ಮದ ಬಗ್ಗೆ ಚರ್ಚೆಗೆ ಚರ್ಚುಗಳಲ್ಲಿ ಹೆಚ್ಚು ಅವಕಾಶವಿರಲಿಲ್ಲ. ಆದರೆ ನಾಗರಿಕ ಸಮಾಜದಲ್ಲಿ ಎಲ್ಲರೂ ಸೇರುವ ಸ್ಥಳ ಚರ್ಚು. ವ್ಯಾಪಾರದಿಂದ ಬಂಡವಾಳ ಹೆಚ್ಚಿ ದೊಡ್ಡ ದೊಡ್ಡ ಚರ್ಚುಗಳು ಅಸ್ತಿತ್ವಕ್ಕೆ ಬಂದವು. ವ್ಯಾಪಾರಸ್ಥರು ೫ ರಿಂದ ೯ ನೇ ಶತಮಾನದವರೆಗೆ ಎಲ್ಲ ಕಡೆ ಸಂಚರಿಸುತ್ತಿದ್ದರು. ಅದಕ್ಕೆ ತದ್ವಿರುದ್ಧವಾಗಿ ಇಂಡಿಯಾದಲ್ಲಿ ವರ್ಷ ಧರ್ಮ ಪಾಳೆಯಗಾರಿಕೆ ಸಮಾಜವನ್ನು ಇನ್ನಷ್ಟು ಹಿಂದೂಡಿತು. ಇತಿಹಾಸ ತಜ್ಞ ಆರ್.ಎಸ್ ಶರ್ಮ ಇದನ್ನು 'ಅಗ್ರಹಾರ ಪಾಳೆಯಗಾರಿಕೆ' ಎಂದು ಕರೆಯುತ್ತಾರೆ. ಇಲ್ಲಿ ಜಮೀನಿನ ಹಕ್ಕನ್ನು ದೇವಸ್ಥಾನ ಗಳಿಗೆ ಮತ್ತು ಪುರೋಹಿತರಿಗೆ ನೀಡಲಾಗುತ್ತಿತ್ತು.

ಪ್ರಶ್ನೆ: ಚರ್ಚುಗಳ ಮುಖಾಂತರ, ರೋಮನ್ ಕ್ಯಾಥೋಲಿಕ್ ಧರ್ಮವು ಹೇಗೆ ಜನರನ್ನು ಬಿಡುಗಡೆಗೊಳಿಸುತ್ತಿತ್ತು?

ಉತ್ತರ: ಚರ್ಚು ಬಂಡ ವಾಳಶಾಹಿ ವ್ಯವಸ್ಥೆಯನ್ನು ತನ್ನ ಉದರದಲ್ಲಿ ಧರಿಸಿತ್ತು. ಶ್ರೀಮಂತ ನೊಬ್ಬ ತನ್ನ ಹಣವನ್ನು ಸ್ವಲ್ಪ ತನ್ನ ಭೋಗಕ್ಕಾಗಿ ವ್ಯಯಿಸುತ್ತಿದ್ದ. ಹಾಗೆಯೇ ಉತ್ಪಾದಿಸಲು ಹಣವನ್ನು ಹೂಡುತ್ತಿದ್ದ. ಉತ್ಪಾದನೆ ಆಗ ದಿದ್ದಲ್ಲಿ ಜನರು ಭಿಕಾರಿಗಳಾಗುತ್ತಿದ್ದರು. ಮತ್ತು ಆವಾಗ ಅವರು ಧಂಗೆ ಏಳುತ್ತಿದ್ದರು. ಇಟಲಿ, ಸ್ಪೇನ್ ಮತ್ತು ಬ್ರಿಟನ್‌ಗಳಲ್ಲಿ ಇದೇ ಆಗಿದ್ದು. ನಿಧಾನವಾಗಿ ಪಾಳೆಯಗಾರಿಕೆ ಬಂಡವಾಳಶಾಹಿ ವ್ಯವಸ್ಥೆಯ ಉತ್ಪಾದನೆಯ ಜೊತೆಗೆ ಸಂಬಂಧ ಹೊಂದಿತು. ಆದರೆ ಇಂಡಿಯಾ ದಲ್ಲಿ ಇದು ಆಗಲೇ ಇಲ್ಲ. ನಾಗರಿಕ ಸಮಾಜ ಅರ್ಥಹೀನ ಧಾರ್ಮಿಕ ನಡವಳಿಕೆಗಳಲ್ಲಿ ಹೂತು ಹೋಯಿತು. ಅಲ್ಲಿ ಮೂಢ ನಂಬಿಕೆಗಳು ಹಾಗೂ ಅವೈಜ್ಞಾನಿಕ ಪದ್ಧತಿಗಳು ಹುಟ್ಟಿಕೊಂಡವು. ಹಿಂದು ಇತಿಹಾಸಜ್ಞರು ಗುಪ್ತರ ಕಾಲವನ್ನು ಸುವರ್ಣ ಯುಗವೆಂದು ಕರೆದರು. ಆದರೆ ಅವರ ಪುಸ್ತಕಗಳೂ ಅಗ್ರಹಾರದ ಆರ್ಥಿಕ ಪಾಳೆ ಯಗಾರಿಕೆಗಳಿಂದ ತುಂಬಿ ಹೋಗಿವೆ. ಕಾಳಿದಾಸನಂಥ ಬರಹಗಾ ರರು ಲೈಂಗಿಕ ವಿಷಯಗಳ ಬಗ್ಗೆ ಕೃತಿ ರಚಿಸಿದರು. ಇದೇ ಸಮಯದಲ್ಲಿ 'ಕಾಮ ಸೂತ್ರ' ಕೂಡ ಬರೆಯಲ್ಪಟ್ಟಿತು.

ಪ್ರಶ್ನೆ: 'ಅಭಿಜ್ಞಾನ ಶಾಕುಂತಲ' ಮತ್ತು 'ಕಾಮ ಸೂತ್ರ' ಸೌಂದರ್ಯ ಪ್ರಜ್ಞೆಯಿಲ್ಲದ, ಕೇವಲ ಪ್ರತಿಗಾಮಿ ಕೃತಿಗ ಳೆಂದು ನಿಮಗೆ ಅನ್ನಿಸುತ್ತದೆಯೇ?

ಉತ್ತರ: ಸೌಂದರ್ಯಪ್ರಜ್ಞೆ ಅಲ್ಲಿದೆ. ಆದರೆ ಆ ಕಾಲದ ಸಮಾಜಕ್ಕೆ ಲೈಂಗಿಕ ಪ್ರಜ್ಞೆ ಬೇಕಾಗಿರಲಿಲ್ಲ. ಆವಾಗ ಉತ್ಪಾ ದನಾ ಪ್ರಜ್ಞೆಬೇಕಾಗಿತ್ತು. ಈ ವ್ಯತ್ಯಾಸವನ್ನು ಕಾಣಬೇಕು.

ಮುಂದಿನ ದಿನಗಳಲ್ಲಿ ಕನಸುಗಳನ್ನು ಹೊತ್ತ
ಹೆಣ್ಣು ನಿಜ ಚಿಂತಕಿಯಾಗುತ್ತಾಳೆ

ಪ್ರಶ್ನೆ: ಆದರೆ ಆವಾಗಿನ್ನ ಕಾಲ ಲೈಂಗಿಕ ವಿಚಾರಗಳನ್ನು ಅದುಮಿಟ್ಟ ಕಾಲವಾಗಿರಲಿಲ್ಲ, ಅಲ್ಲವೇ?

ಉತ್ತರ: ಹೌದು. ಆದಿವಾಸಿಗಳು, ಶೂದ್ರರು ಹಾಗೂ ದಲಿ ತರು ಪರಸ್ಪರ ಸಂಬಂಧಗಳನ್ನು ಹೊಂದಿದ್ದರು. ಸಂಸ್ಕೃ ತೀಕರಣದ ಮೂಲಕ ಮೇಲ್ವರ್ಗಗಳು ತಮ್ಮ ಸಂಸ್ಕೃ ತಿಯನ್ನು ಅವರ ಮೇಲೆ ಹೇರುವ ಪ್ರಯತ್ನ ನಡೆಸಿದವು. ಹಿಂದೂ ಬೌದ್ಧಿಕ ಗುಂಪುಗಳು, ಕಾಯಕ ಮಾಡುತ್ತಿದ್ದ ಜಾತಿಗಳ ಜೊತೆ-ಬಡಗಿಯಿಂದ ಚಮ್ಮಾರನವರೆಗೆ, ಕುಂಬಾರನಿಂದ ಕ್ಷೌರಿಕನವರೆಗೆ-ಯಾವುದೇ ರೀತಿ ಸಾಮಾ ಜಿಕ, ಆರ್ಥಿಕ ಹಾಗೂ ವೈಜ್ಞಾನಿಕ ಸಂಬಂಧಗಳು ಇರದ ಹಾಗೆ ಬಹಿಷ್ಕಾರ ಹಾಕಿತು. ಇದು ಅತ್ಯಂತ ಹೇಯ ಅಬೌದ್ಧಿಕ ನಡವಳಿಗೆ.

ನನ್ನ ಪ್ರಕಾರ, ೧೧-೧೧ ನೇ ಶತಮಾನಕ್ಕೆ ಮೊದಲು, ಚೀನಾದಲ್ಲಿ ನಾಲ್ಕು ಮುಖ್ಯ ವಸ್ತುಗಳನ್ನು ಕಂಡು ಹಿಡಿದರು. ಅವುಗಳೆಂದರೆ, ಆಯಸ್ಕಾಂತದ ಕಂಪಾಸು, ಬಂದೂಕಿನ ಗುಂಡು, ಮುದ್ರಿಸುವ ಪ್ರೆಸ್ ಮತ್ತು ಬರೆಯುವ ಹಾಳೆ. ಅದಾದ ಮೇಲೆ ಅವರು ಇನ್ನೇನನ್ನೂ ಕಂಡು ಹಿಡಿಯಲಿಲ್ಲ., ಈ ವೈರುಧ್ಯದ ಬಗ್ಗೆ ಅವರು ಈಗ ಚಿಂತಿಸುತ್ತಿದ್ದಾರೆ. ಆರ್ಯರಿಗಿಂತ ಮುಂಚಿನ ದಿನಗಳಲ್ಲಿ, ಇಂಡಿಯಾ ಪುಡಿಕೆ, ಕುಡಿಕೆ, ಕ್ಷೌರಿಕನ ಕತ್ತಿ (ಆಮೇಲೆ ಕತ್ತರಿ) ಮಣ್ಣಿನ ಸಾಬೂನು ಹಾಗೂ ಪಾದರಕ್ಷೆಗಳನ್ನು, ಅಂದರೆ ಚರ್ಮದ ತಂತ್ರಜ್ಞಾನವನ್ನು ಕಂಡು ಹಿಡಿದಿತ್ತು. ಈ ವಸ್ತುಗಳನ್ನು ಆರ್ಯರಿಗಿಂತ ಹಿಂದಿನ ದ್ರಾವಿಡರು ಕಂಡು ಹಿಡಿದಿದ್ದರಿಂದ ಬ್ರಾಹ್ಮಣರು ಅದಕ್ಕೆ ಬೆಲೆ ನೀಡಲಿಲ್ಲ. ಆದ್ದರಿಂದ ಕ್ಷೌರಿಕ ವಿಜ್ಞಾನಿ, ಚಮ್ಮಾರ ವಿಜ್ಞಾನಿ ಹಾಗೂ ದೋಭಿ ವಿಜ್ಞಾನಿಯನ್ನು ಗುರುತಿಸಲೇ ಇಲ್ಲ. ಇದಾದ ನಂತರ ಇಂಡಿಯಾ ಮೊಟ್ಟ ಮೊದಲು ಎನ್ನಬಹುದಾದ 'ಏನನ್ನು ಕಂಡು ಹಿಡಿಯಲಿಲ್ಲ. ಎ.ಪಿ.ಜೆ. ಅಬ್ದುಲ್ ಕಲಾಂ ಮೊಟ್ಟ ಮೊದಲ ವಿಜ್ಞಾನಿ ಅಲ್ಲ.

ಪ್ರಶ್ನೆ: ಈ ಬೆಳವಣಿಗೆಯನ್ನು ಈಗಿನ ಇಂಡಿಯಾದ ಬಗ್ಗೆ ಹೋಲಿಸಿ ಏನು ಹೇಳಬಹುದು?

ಉತ್ತರ: ೬೦ ವರ್ಷಗಳ ಸ್ವಾತಂತ್ರ್ಯದ ನಂತರವೂ ಅದೇ ರೀತಿಯ ಬ್ರಾಹ್ಮಣೀಯ ಬುದ್ಧಿಜೀವಿಗಳು ದೇಶದಲ್ಲಿ ಪ್ರಬಲರಾಗಿದ್ದಾರೆ. ಅವರು ಜಾತಿ ವಿನಾಶ ಮಾಡುವುದರ ಬಗ್ಗೆ ಒಂದು ಸಿದ್ಧಾಂತ ರೂಪಿಸಿಲ್ಲ. ಈ ವ್ಯವಸ್ಥೆಯಲ್ಲಿ ಅವೈಜ್ಞಾನಿಕ ಮನೋಭಾವ ಒಳಗಿನಿಂದ ಬೆಳೆದು ಬಂದಿರುವ ಬಗ್ಗೆ ಏನು ಹೇಳಿಲ್ಲ. ಮೂಢನಂಬಿಕೆಗಳು, ಸಾಮಾಜಿಕ ಮನಃಸ್ಥಿತಿಯನ್ನು ಹತೋಟಿಯಲ್ಲಿಟ್ಟಿರುವ ಬಗ್ಗೆ ಚಕಾರವೆತ್ತಿಲ್ಲ ಉನ್ನತ ಶಿಕ್ಷಣದಲ್ಲಿ ಸಾಮಾಜಿಕ: ತಂತ್ರಜ್ಞಾನ: ವೈದ್ಯಕೀಯ ಶಿಕ್ಷಣ ಇವೆಲ್ಲಾ ಒಳಗೊಂಡಂತೆ ಬ್ರಾಹ್ಮಣರು ಮೇಲುಗೈ ಪಡೆದಿದ್ದರಿಂದ, ಒರಿಜಿನಲ್ ವಿಜ್ಞಾನವೆನ್ನುವುದು ಇಲ್ಲಿ ಬರಲೇ ಇಲ್ಲ. ಬೇರೆಯವರಿಂದ ಬೇಡಿ ತಂದ ಅಥವಾ ಎರವಲು ಪಡೆದ ವಿಜ್ಞಾನ ನಮ್ಮದಾಗಿದೆ. ನಮ್ಮದೇ ಎನ್ನಬಹುದಾದದ್ದು ಯಾವುದೂ ಇಲ್ಲ.

ಪ್ರಶ್ನೆ: ಅತ್ಯಂತ ಬಡವರು, ದಲಿತರು, ಬಹಳಷ್ಟು ಮಂದಿ ಹಿಂದುಳಿದ ವರ್ಗದವರು ಹಾಗೂ ಆದಿವಾಸಿಗಳ ಮನಸ್ಸು ನಲ್ಲಿ ನಡೆಯುತ್ತಿರಬಹುದಾದ ಹೊಯ್ದಾಟದ ಬಗ್ಗೆ ನೀವು 'ಏನು ಹೇಳುತ್ತೀರಿ?

ಉತ್ತರ: ಇತಿಹಾಸವನ್ನು ನೋಡಿದರೆ, ಬುದ್ಧಿಜೀವಿಗಳಲ್ಲದ ಬ್ರಾಹ್ಮಣೀಯ ಚಿಂತಕರು ಎಲ್ಲ ವಲಯಗಳಲ್ಲಿ ದಲಿತ-ಬಹುಜನರನ್ನು ಮತ್ತು ಹೆಂಗಸರನ್ನು ತುಳಿದಿರುವುದನ್ನು ನೋಡುತ್ತೇವೆ. ಈಗ ಈ ಬುದ್ಧಿಜೀವಿ-ವಿರೋಧದ ನೆಲೆಗೆ ವಿರೋಧ ಕಂಡು ಬರುತ್ತಿದೆ. ಇದು ಪ್ರಾರಂಭವಾದದ್ದು ಮಹಾತ್ಮ ಫುಲೆಯವರಿಂದ. ಅಂಬೇಡ್ಕರ್ ಹುಡುಕಾಟದ ಪ್ರಪಂಚವೊಂದರ ಬಾಗಿಲು ತೆರೆದರು. ಆ ಹುಡುಕಾಟದಲ್ಲಿ ದಲಿತರು, ಆದಿವಾಸಿಗಳು, ಹಿಂದುಳಿದವರು ಹಾಗೂ ಹೆಂಗಸರು ಸೇರಿಕೊಂಡಿದ್ದಾರೆ. ಆದ್ದರಿಂದಲೇ ಮೇಲ್ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಈ ಬೆಳವಣಿಗೆ, ಹಿಂದೂ-ಬ್ರಾಹ್ಮಣೀಯ ಯೋಚನಾ ಕ್ರಮಕ್ಕೆ ವಿರೋಧವಾದದ್ದಾಗಿದೆ.

ಪ್ರಶ್ನೆ: ಬ್ರಾಹ್ಮಣೀಯ ವಿಚಾರವಾದದಲ್ಲಿ ಸಿಲುಕಿಕೊಂಡ ಹೆಣ್ಣು ಮಕ್ಕಳು ಹೊಸ ಪ್ರಪಂಚಕ್ಕೆ ಕಾಲಿಡುತ್ತಿದ್ದಾರೆಂದು ನಿಮ್ಮ ವಾದವೇ?

ಉತ್ತರ: ಪಶ್ಚಿಮ ದೇಶಗಳಲ್ಲಿ ಆಗುತ್ತಿರುವಂತೆ ಕ್ರಾಂತಿಕಾರಿ ಬದಲಾವಣೆಗಳನ್ನು ನಮ್ಮ ಹೆಣ್ಣು ಮಕ್ಕಳು ಮಾಡದಿದ್ದರೂ, ಹಿಂದುತ್ವದ ಯೋಚನಾ ರೀತಿಯನ್ನು ಪ್ರಶ್ನಿಸುವ ಮೂಲಭೂತ ಪ್ರಶ್ನೆಗಳನ್ನು ಅವರು ಎತ್ತುತ್ತಿದ್ದಾರೆ. ಅರುಂಧತಿ ರಾಯ್ ಮತ್ತು ಸುನೀತ ನಾರಾಯಣಿ ಹೊಸ ಯೋಚನೆಗಳಲ್ಲಿ ತೊಡಗಿರುವ ಲೇಖಕರು. ಅರುಂಧತಿ ರಾಯ್‌ರವರ ಬೇರುಗಳು ಕ್ರಿಶ್ಚಿಯನ್ ಧರ್ಮದಲ್ಲಿದೆ. ಆ ಬಗ್ಗೆ ಮಾತನಾಡಲು ಬಹುಶಃ ಅವರು ಇಷ್ಟಪಡುವುದಿಲ್ಲ. ಆದರೆ ಅವರು ಹಿಂದೂ ಬ್ರಾಹ್ಮಣ ಕುಟುಂಬದಲ್ಲಿ ಬೆಳೆ ದಿದ್ದರೆ, ಈಗ ಎತ್ತುತ್ತಿರುವ ಕೆಲವು ಪ್ರಶ್ನೆಗಳನ್ನು ಅವರು ಆಗ ಎತ್ತುತ್ತಿರಲಿಲ್ಲ.

ಪ್ರಶ್ನೆ: ಸ್ವತಂತ್ರ ಆಲೋಚನೆಗಳಿಂದ ಇತಿಹಾಸದ ಸಂಕೋಲೆಗಳನ್ನು ಮುರಿದು ಹೊರಬರಲು ಸಾಧ್ಯವಿಲ್ಲವೇ?

ಉತ್ತರ: ಬ್ರಾಹ್ಮಣ್ಯದಲ್ಲಿ ಇದು ಸಾಧ್ಯವೇ ಇಲ್ಲ.

ಪ್ರಶ್ನೆ: ಬ್ರಾಹ್ಮಣ್ಯವೆನ್ನುವುದು ಒಂದು ಮುಚ್ಚಿದ ಆಲೋ ಚನಾ ಕ್ರಮ. ಅದರ ಒಳಗಡೆ ಅಥವಾ ಹೊರಗಡೆ ಬಿಡುಗಡೆ ಸಾಧ್ಯವಿಲ್ಲವೇ?

ಉತ್ತರ: ಇಂಗ್ಲಿಷ್‌ನಲ್ಲಿ ಬರೆಯುತ್ತಿರುವ ಲೇಖಕರನ್ನು ಉದಾಹರಣೆಗೆ ನೋಡಿ. ಸಲ್ಮಾನ್ ರಶ್ದಿ ಆಧ್ಯಾತ್ಮಿಕ ಸಮಾನತೆಯ ಆದರೆ ಹಿಂದುಳಿದ ಸಾಮಾಜಿಕ ಹಿನ್ನೆಲೆಯಿಂದ ಬಂದ ಮುಸ್ಲಿಂ ಲೇಖಕ. ಅರುಂಧತಿ ರಾಯ್ ಹಳೆಯ ಯೋಜನಾ ಕ್ರಮದಿಂದ ಹೊರಬಂದು ಹೊಸದನ್ನು ಸೃಷ್ಟಿಸಿದ ಲೇಖಕಿ. ಇವರಿಬ್ಬರನ್ನು ಬಿಟ್ಟರೆ ಬೇರೆಯವರೆಲ್ಲಿ? ವಿಕ್ರಮ್ ಸೇಠ್ ಹಾಗೂ ಇತರರು ಹಳೆಯ ಹಿಂದೂ ಪ್ರಪಂಚದಲ್ಲೆ ಇದ್ದಾರೆ. ಅವರ ಸಾಹಿತ್ಯದಲ್ಲಿ ಹೊಸದೇನೂ ಇಲ್ಲ. ಸಲ್ಮಾನ್ ರಶ್ದಿ ಹೆಚ್ಚುಗಾರಿಕೆ ಏನೆಂದರೆ ಇಸ್ಲಾಮಿಕ್ ಮೂಲಭೂತ ವಾದವನ್ನು ಎದಿರುಹಾಕಿಕೊಂಡದ್ದು. ಅರುಂಧತಿ ರಾಯ್ ಕ್ರಿಶ್ಚಿಯನ್ ಧರ್ಮಕ್ಕೆ ಸವಾಲು ಎಸೆದರು-ಕೇರಳದ ಸಿರಿಯನ್ ಕ್ರಿಶ್ಚಿಯನ್ನರಿಗೆ.

ಪಶ್ಚಿಮ ದೇಶಗಳಲ್ಲಿ ಆಗುತ್ತಿರುವಂತೆ ಕ್ರಾಂತಿಕಾರಿ ಬದಲಾವಣೆಗಳನ್ನು ನಮ್ಮ ಹೆಣ್ಣು ಮಕ್ಕಳು ಮಾಡದಿದ್ದರೂ, ಹಿಂದುತ್ವದ ಯೋಚನಾ ರೀತಿಯನ್ನು ಪ್ರಶ್ನಿಸುವ ಮೂಲಭೂತ ಪ್ರಶ್ನೆಗಳನ್ನು ಅವರು ಎತ್ತುತ್ತಿದ್ದಾರೆ. ಅರುಂಧತಿ ರಾಯ್ ಮತ್ತು ಸುನೀತ ನಾರಾಯಣಿ ಹೊಸ ಯೋಚನೆಗಳಲ್ಲಿ ತೊಡಗಿರುವ ಲೇಖಕರು. ಅರುಂಧತಿ ರಾಯ್‌ರವರ ಬೇರುಗಳು ಕ್ರಿಶ್ಚಿಯನ್ ಧರ್ಮದಲ್ಲಿದೆ. ಆ ಬಗ್ಗೆ ಮಾತನಾಡಲು ಬಹುಶಃ ಅವರು ಇಷ್ಟಪಡುವುದಿಲ್ಲ. ಆದರೆ ಅವರು ಹಿಂದೂ ಬ್ರಾಹ್ಮಣ ಕುಟುಂಬದಲ್ಲಿ ಬೆಳೆ ದಿದ್ದರೆ, ಈಗ ಎತ್ತುತ್ತಿರುವ ಕೆಲವು ಪ್ರಶ್ನೆಗಳನ್ನು ಅವರು ಆಗ ಎತ್ತುತ್ತಿರಲಿಲ್ಲ.

ಅರುಂಧತಿ ರಾಯ್

ಪ್ರಶ್ನೆ: ಅರುಂಧತಿ ರಾಯ್ ಜಾಗತೀಕರಣವನ್ನು ಎದುರಿಸುತ್ತಿದ್ದಾರೆ. ದಲಿತರು ಮತ್ತು ಆದಿವಾಸಿಗಳನ್ನು ಸೇರಿಸಿ ಕೊಂಡು ಜೊತೆಗೂಡಿ ಈ ಕೆಲಸ ಮಾಡುವಾಗ ತಮ್ಮ ನೆಲೆಯನ್ನು ಕೂಡ ಪ್ರಶ್ನಿಸಿಕೊಳ್ಳುತ್ತಿದ್ದಾರೆ.....

ಉತ್ತರ: ಕ್ರಿಶ್ಚಿಯನ್ ರಾಷ್ಟ್ರ ವ್ಯವಸ್ಥೆಯ ಕೆಲವು ಮಜಲು ಗಳನ್ನು ಅವರು ಪ್ರಶ್ನಿಸುತ್ತಿದ್ದಾರೆ. ಆದರೆ 'ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಪುಸ್ತಕದ ನಂತರ ಅವರು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸುತ್ತಿಲ್ಲ. ಅವರ ಪುಸ್ತಕದಲ್ಲಿ ಒಂದು ದಲಿತ ಪಾತ್ರ ಬರುತ್ತದೆ. ಇದಾದ ನಂತರ ಜಾತಿಯನ್ನು ವಿರೋಧಿಸಿ, ಹಿಂದೂ ವಿಚಾರ ಕ್ರಮ ವಿರೋಧಿಸಿ ಬರೆದಿಲ್ಲ. ಪರಿಸರವಾದಿ ಹಾಗೂ ರಾಜಕೀಯ ಹೋರಾಟದಲ್ಲಿ ತೊಡಗಿರುವುದು ಒಳ್ಳೆಯದೇ. ಆದರೂ ಕೂಡ ಈ ರೀತಿ ಜಾಗತೀಕರಣದ ವಿರೋಧದ ಹೋರಾಟ ಹುಟ್ಟಿ ಬಂದಿರುವುದು ಪಶ್ಚಿಮ ದೇಶಗಳಿಂದ. ಇದಕ್ಕೂ ಹೆಚ್ಚಿನ ಶಕ್ತಿಯುತ ಚಿಂತಕರು ಸಾಮ್ರಾಜ್ಯ ಶಾಹಿಯನ್ನು ವಿರೋಧಿಸಿರುವವರು ಪಶ್ಚಿಮ ದೇಶಗಳಲ್ಲಿ ಇದ್ದಾರೆ. ಅಂಥ ಪಶ್ಚಿಮದ ಯೋಚನಾ ಕ್ರಮದಲ್ಲಿ ಅರುಂಧತಿ ರಾಯ್ ತೊಡಗಿಸಿಕೊಂಡಿದ್ದಾರೆ. ಜಾತಿ ವಿರೋಧದ ಹೋರಾಟಕ್ಕೆ ಪಶ್ಚಿಮದಲ್ಲಿ ಉದಾಹರಣೆ ಸಿಗುವುದಿಲ್ಲ. ಉದಾಹರಣೆಗೆ, ನಾನು, 'ನಾನು ಹಿಂದೂ ಏಕೆ ಅಲ್ಲ' ಎನ್ನುವ ಪುಸ್ತಕ ಬರೆದಾಗ, ಯಾವ ಕ್ರಮದಲ್ಲಿ ಬರೆಯಬಹುದು ಎನ್ನುವುದು ನಿರ್ಧರಿ

> ಸಲ್ಮಾನ್ ರಶ್ದಿ ಆಧ್ಯಾತ್ಮಿಕ ಸಮಾನತೆಯ ಆದರೆ ಹಿಂದುಳಿದ ಸಾಮಾಜಿಕ ಹಿನ್ನೆಲೆಯಿಂದ ಬಂದ ಮುಸ್ಲಿಂ ಲೇಖಕ. ಅರುಂಧತಿ ರಾಯ್ ಹಳೆಯ ಯೋಜನಾ ಕ್ರಮದಿಂದ ಹೊರಬಂದು ಹೊಸದನ್ನು ಸೃಷ್ಟಿಸಿದ ಲೇಖಕಿ. ಇವರಿಬ್ಬರನ್ನು ಬಿಟ್ಟರೆ ಬೇರೆಯವರೆಲ್ಲಿ? ವಿಕ್ರಮ್‌ಸೇತ್ ಹಾಗೂ ಇತರರು ಹಳೆಯ ಹಿಂದೂ ಪ್ರಪಂಚದಲ್ಲೆ ಇದ್ದಾರೆ. ಅವರ ಸಾಹಿತ್ಯದಲ್ಲಿ ಹೊಸದೇನೂ ಇಲ್ಲ. ಸಲ್ಮಾನ್ ರಶ್ದಿ ಹೆಚ್ಚುಗಾರಿಕೆ ಏನೆಂದರೆ ಇಸ್ಲಾಮಿಕ್ ಮೂಲಭೂತ ವಾದವನ್ನು ಎದಿರು ಹಾಕಿಕೊಂಡದ್ದು. ಅರುಂಧತಿ ರಾಯ್ ಕ್ರಿಶ್ಚಿಯನ್ ಧರ್ಮಕ್ಕೆ ಸವಾಲು ಎಸೆದರು

ಸಲು ಕಷ್ಟವಾಯಿತು. ಫುಲೆಯವರ ಬರಹಗಳಲ್ಲಿ ತೊಡಗಿಸಿಕೊಳ್ಳಬೇಕಾಯಿತು. ಬುದ್ಧನ ಬೋಧನೆಗಳನ್ನು, ಅಂಬೇಡ್ಕರರ ಬರವಣಿಗೆಗಳನ್ನು ನೋಡಬೇಕಾಯಿತು. ಅವೆಲ್ಲಾ ಹೊಚ್ಚ ಹೊಸದಾದ ಒರಿಜಿನಲ್ ಯೋಚನಾಕ್ರಮ.

ಪ್ರಶ್ನೆ: ಅಂಬೇಡ್ಕರ್ ಒರಿಜಿನಲ್ ಚಿಂತಕರು ಎನ್ನುವುದಾದರೆ ಅವರ ಮೇಲೆ ಪಶ್ಚಿಮದ ಪ್ರಭಾವಿಲ್ಲವೇ?

ಉತ್ತರ: ಇಲ್ಲ. ಅವರು ತಮ್ಮದೇ ಆದ ಸಂಪೂರ್ಣ ಒರಿಜಿ ನಲ್ ಸೈದ್ಧಾಂತಿಕ ಯೋಚನಾ ಲಹರಿಯನ್ನು ಸೃಷ್ಟಿಸಿದರು.

ಪ್ರಶ್ನೆ: ಕೊನೆಯ ಪ್ರಶ್ನೆ. ಮುಂದೆ ಭರವಸೆ ಇದೆಯೇ ಅಥವಾ ಬಂಡವಾಳಶಾಹಿ ವ್ಯವಸ್ಥೆಯ ಕಟ್ಟ ಕಡೆಯ-ಗೆಲುವು ಇದು ಎನ್ನಬಹುದೇ?

ಉತ್ತರ: ಜೀಸಸ್ ಬರುವುದಕ್ಕೆ ಮುಂಚೆ, ಸಮಾನವಾದ ಪಾಳೆಯಗಾರ ವ್ಯವಸ್ಥೆ ಬರುವುದು ಅಸಾಧ್ಯ ಎನ್ನಿಸುತ್ತಿತ್ತು. ಅಂಬೇಡ್ಕರ್ ಬರುವುದಕ್ಕೆ ಮೊದಲು; ದಲಿತರು ಹಾಗೂ ಕೆಳವರ್ಗದ ಜನರು ಸ್ವತಂತ್ರವಾಗಿ ಬದುಕುವ ಜಾತಿರಹಿತ ಸಮಾಜ ಅಸಾಧ್ಯ ಎನಿಸುತ್ತಿತ್ತು. ಕಾರ್ಲ್‌ಮಾರ್ಕ್ಸ್‌ಗೆ ಮೊದಲು, ಸಮಾಜವಾದದ ಕಲ್ಪನೆಯೇ ಅಸಾಧ್ಯ ಎನ್ನಿಸು ತ್ತಿತ್ತು. ಆದರೆ ಈಗ ನನಗೆ ಅನ್ನಿಸುತ್ತದೆ ಮುಂದೆ ಚಿಂತಕ: ದಾರ್ಶನಿಕ ಸಾರ್ವಜನಿಕ ಬುದ್ಧಿಜೀವಿ: ಕ್ರಾಂತಿಕಾರಿ, ದೇವರ ಅವತಾರಗಳನ್ನು ನಂಬದ ವ್ಯಕ್ತಿಯೊಬ್ಬ ಜಾತಿ ವ್ಯವ ಸ್ಥೆಯ ದಬ್ಬಾಳಿಕೆಯನ್ನು ಕಿತ್ತು ಒಗೆದು, ನಿಜವಾಗಿ ಬಿಡು ಗಡೆಗೊಳಿಸುವ ಸಮಾಜವೊಂದನ್ನು ಸೃಷ್ಟಿಸುತ್ತಾನೆ. ಹಲವು ಶತಮಾನಗಳ ನಂತರ, ಬಹಳ ಕಾಲದ ಹೋರಾಟದ ಫಲವಾಗಿ, ಆದಿವಾಸಿಗಳು, ದಲಿತರು ಹಾಗೂ ತುಳಿತಕ್ಕೆ ಒಳಗಾದ ಜಾತಿಗಳು ನಿಜವಾಗಿ ಸ್ವತಂತ್ರವಾದ, ಜಾತಿ ಇಲ್ಲದ, ಸಾಮಾಜಿಕವಾಗಿ ಪ್ರಜಾಪ್ರಭುತ್ವವಿರುವ ವೈಜ್ಞಾನಿಕ ಸಮಾಜವನ್ನು ಸೃಷ್ಟಿಸುತ್ತಾರೆ. ಅಂಥ ಸಮಾಜದಲ್ಲಿ ಬ್ರಾಹ್ಮಣತ್ವ ಯಾವುದೇ ರೀತಿಯಲ್ಲಿ ಆಳಲು ಸಾಧ್ಯವಿಲ್ಲ. ಯಾವುದೇ ರೂಪದಲ್ಲಿಯೂ ಸಾಧ್ಯವಾಗಬಾರದು. ಬಹುಶಃ ಇಂತಹ ಅಸಾಧ್ಯವೆನ್ನಿಸುವ ಕಲ್ಪನೆಯನ್ನು ಸಾಕಾರಗೊಳಿಸಲು ಮಹಾನ್ ವ್ಯಕ್ತಿಯೊಬ್ಬನ ಅವಶ್ಯಕತೆ ಇದೆ. ಅಂತಹ ವ್ಯಕ್ತಿ ಒಂದು ಹೆಣ್ಣು ಎನ್ನುವುದು ನನ್ನ ನಂಬಿಕೆ. □

ಸೌಜನ್ಯ: ತೆಹಲ್ಕ



ನಿನ್ನ ಕಣ್ಣೀರಿಗೆ ನನ್ನ ನಮಸ್ಕಾರಗಳು

ತೆಲುಗು ಮೂಲ: ಆಕಾಶ ರಾಜು
ಅನು: ಸಿ. ವೆಂಕಟೇಶ್



ನನ್ನೊಂದಿಗೆ ನಡೆದಷ್ಟು ಹೊತ್ತೂ
ನೀನು ಬಿದ್ದು ಬಿದ್ದು ನಗುತ್ತಲೇ ಇದ್ದೀ
ಎಷ್ಟು ಸಲ ನೋಡಿದರೂ
ಆಕಾಶವನ್ನು ಕೆಳಕ್ಕೆ ಬಾಗಿಸಿದಂತೆ
ನಿನ್ನ ಕಣ್ಣುಗಳನ್ನು ಇಳಿಬಿಟ್ಟುಕೊಳ್ಳುತ್ತಿದ್ದೀ
ಎಷ್ಟೊಂದು ಸಂಕಟ ಪಡುತ್ತಿದೀಯೋ ಆದರೂ
ಇಷ್ಟೊಂದು ನಗುತ್ತಿರುವಂತೆ ನಟಿಸುತ್ತಿದ್ದೀ
ತುಟಿಗಳ ಮೇಲೆ ಕದಲುತ್ತಿರುವ ಮೇಘ
                    ನಿನ್ನ ಮುಗುಳ್ನಗೆ
ಅಪ್ಪಳಿಸುವ ಅಲೆಗಳು ನಿನ್ನ ಓರೆಕಣ್ಣುಗಳು
ಎಷ್ಟೊಂದು ನರಳುತ್ತಿರುವೆಯೋ ತಿಳಿಯದು
ದುಃಖಿಸುವುದು ಒಂದು ಅಸಹ್ಯಕರವಾದ ದೃಶ್ಯ
ಕಣ್ಣೀರು ಕುಡಿದರೆ ಅಮೃತವಾಗಬೇಕೇ ಹೊರತು
ವಿಷವಾಗಬಾರದು ಅಧೈರ್ಯ ಉಂಟಾಗಬಾರದು
ಗಾಯಗಳನ್ನು ಕೆರೆದುಕೊಳ್ಳುವಂತೆ
ಜ್ಞಾಪಕಗಳನ್ನು ಮೆಲುಕು ಹಾಕುವುದೇತಕ್ಕೆ!
ಎದೆ ಒಡೆದು ಹೋಗುತ್ತಿದ್ದರೂ
ಕನಸುಗಳು ಉರುಳಿ ಹೋಗುತ್ತಿದ್ದರೂ
ಬೆಳದಿಂಗಳೆ ಶಿಖರದಂತಿದ್ದೀಯ
ಎಲ್ಲವನ್ನೂ ಕಳೆದುಕೊಂಡು
ಏನೂ ಆಗಿಲ್ಲವೆಂಬಂತೆ ನಿಂತಿರುವ
ನಿನ್ನ ಮನೋಸ್ಥೈರ್ಯಕ್ಕೆ ನನ್ನ
                    ನಮಸ್ಕಾರಗಳು
ಕಣ್ಣೀರನ್ನು ಬಚ್ಚಿಟ್ಟುಕೊಂಡಿರುವ
ನಿನ್ನ ಕಣ್ಣುಗಳಿಗೆ ನನ್ನ ನಮಸ್ಕಾರಗಳು
ಕಣ್ರೆಪ್ಪೆಗಳ ಅಣೆಕಟ್ಟುಗಳನ್ನು ದಾಟದ
ನಿನ್ನ ಕಣ್ಣೀರಿಗೆ ನನ್ನ ನಮಸ್ಕಾರಗಳು

ಅಂಬೇಡ್ಕರ್ ಅವರ 'ಪಾಕಿಸ್ತಾನ ಇಲ್ಲವೇ ಭಾರತದ ವಿಭಜನೆ'

ಮುಸ್ಲಿಂ-ವಿರೋಧಿಯೇ?

ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳ ಮಾಲಿಕೆಯಲ್ಲಿ ಮುಸ್ಲಿಮರ ಬಗ್ಗೆ ಅತಿ ಹೆಚ್ಚಿನ ಚರ್ಚೆಯು ಕಂಡುಬರುವುದು ಪಾಕಿಸ್ತಾನ ಇಲ್ಲವೇ ಭಾರತದ ವಿಭಜನೆ ಎಂಬ ಕೃತಿಯಲ್ಲಿ. ಈ ಕೃತಿಯು ಆಗಿನ ಸಮಕಾಲೀನ ಜ್ವಲಂತ ಸಮಸ್ಯೆಗಳನ್ನು ಚರ್ಚೆಗೆತ್ತಿಕೊಳ್ಳುವುದರ ಜೊತೆಗೆ ಮುಸ್ಲಿಮರ ಬೇಡಿಕೆಯಾದ ಭಾರತದ ವಿಭಜನೆಯ ಬಗೆಗೆ ದೇಶವು ವಿಚಾರಯುತವೂ ನಿರ್ಣಾಯಕವೂ ಆದ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ನೆರವಾಗಬಲ್ಲದೆಂಬ ಆಶಯವನ್ನು ಹೊಂದಿದೆ.

ಎರಡೂ ಸಮುದಾಯಗಳಲ್ಲಿನ ವಿಶಿಷ್ಟವೆನಿಸಿದ ಗುಣಲಕ್ಷಣಗಳ ಮತ್ತು ದೇಶದ ವಿಭಜನೆಯ ಸಂದರ್ಭದಲ್ಲಿ ಹಿಂದೂ ಮುಸ್ಲಿಮರ ನಡುವೆ ಬೆಳೆಯ ತೊಡಗಿದ್ದ ವೈರುಧ್ಯಗಳ ಮೇಲೆಯೇ ಚರ್ಚೆಯು ಅನಿವಾರ್ಯವೆಂಬಂತೆ ಕೇಂದ್ರೀಕೃತವಾಗಿವೆ. ಹೀಗಾಗಿ ಇಲ್ಲಿನ ರಚನಾ ವಿನ್ಯಾಸವು ದುರುದ್ದೇಶದಿಂದ ಕೂಡಿದ ಕುಚೋದ್ಯದ ವ್ಯಾಖ್ಯಾನಕ್ಕೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಬಹುದಾದ ಸಂಕೀರ್ಣತೆಯಿಂದ ಕೂಡಿದ್ದೂ ಆಗಿದೆ. ಸದ್ಯದ ವಿವಾದದಲ್ಲಿ ತನ್ನ ಹೇಳಿಕೆಗೆ ಈ ಕೃತಿಯೇ ಆಕರವಾಗಿದೆ ಎಂದು ಕಟಿಯಾರ್ ಹೇಳುತ್ತಿರುವುದರಿಂದ ಕೃತಿ ರಚನೆಯ ಸಂದರ್ಭವನ್ನೂ ಅಂಬೇಡ್ಕರ್ ಅವರು ಅದರ ರಚನೆಯಲ್ಲಿ ಅನುಸರಿಸಿರುವ ವಿನ್ಯಾಸವನ್ನೂ ಪರಿಶೀಲಿಸುವುದು ಸೂಕ್ತವಾಗಿದೆ.

ಅತ್ಯಂತ ಭಾವೋದ್ರೇಕಕಾರೀ ಎನಿಸಿದ ಭಾರತದ ವಿಭಜನೆಯಂತಹ ಆಗಿನ ಸಮಕಾಲೀನ ಸಮಸ್ಯೆಯನ್ನು ಕುರಿತು ರಚಿಸಲಾದ ಕೃತಿಗಳ ಪೈಕಿ ಪಾಕಿಸ್ತಾನ ಇಲ್ಲವೇ ಭಾರತದ ವಿಭಜನೆಯು ಅತ್ಯುತ್ತಮವಾದ್ದೆಂಬ ಪ್ರಶಂಸೆಗೆ ಪಾತ್ರವಾಗಿತ್ತು. ಪೂರ್ವಾಗ್ರಹಗಳಿಂದ ಸಂಪೂರ್ಣವಾಗಿ ಮುಕ್ತವಾಗಿದೆ ಎನಿಸಿಕೊಂಡು ಹಿಂದೂ ಮುಸ್ಲಿಮರ ಎರಡೂ ಪಂಗಡಗಳಿಂದಷ್ಟೇ ಅಲ್ಲದೆ ಈ ಸಮಸ್ಯೆಯನ್ನು ಬಗೆಹರಿಸಲು ಉತ್ಸುಕರಾಗಿದ್ದ ಎಲ್ಲರಿಂದಲೂ ಉಲ್ಲೇಖನಾರ್ಹ ಕೃತಿಯೆಂಬ ಪ್ರಶಂಸೆಗೂ ಪಾತ್ರವಾಗಿತ್ತು. ಸಮಸ್ಯೆಯನ್ನು ಪ್ರಸ್ತುತ ಚೌಕಟ್ಟಿನಲ್ಲಿ ಗುರುತಿಸುವುದು, ಅದರ ಸುತ್ತಲೂ ಎದ್ದಿರುವ ವಾದ ವಿವಾದಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು ಮತ್ತು ವಸ್ತುನಿಷ್ಠ ಮೌಲ್ಯಮಾಪನದ ಮೂಲಕ ತೀರ್ಮಾನಕ್ಕೆ ಬರುವುದು–ಈ ಕೃತಿಯ ರಚನೆಯಲ್ಲಿ ಅಂಬೇಡ್ಕರ್ ಅಳವಡಿಸಿಕೊಂಡಿರುವ ವಿನ್ಯಾಸ ಇದು.

ಹಿಂದೂ ಮುಸ್ಲಿಮರು ತಮ್ಮದೇ ರಾಷ್ಟ್ರೀಯತೆಗಳ ಹಕ್ಕುಗಳಿಗಾಗಿ ಪೈಪೋಟಿಗಿಳಿದಿದ್ದರು. ಭಾವೋನ್ಮಾದದ ಆ ಸನ್ನಿವೇಶದಲ್ಲಿ ಸ್ವ–ಹಿತಾಸಕ್ತಿಗಳಿಂದ ಬಿಡಿಸಿಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಆ ಕೋಮುಗಳಿಗೆ ಸಾಧ್ಯವಿರಲಿಲ್ಲ. ಅಂಬೇಡ್ಕರ್ ಆಗಿನ ಆತಂಕಗಳನ್ನು ಅವುಗಳ ಹಿನ್ನೆಲೆಯಲ್ಲೇ ಅರ್ಥಮಾಡಿಕೊಂಡು ಆ ಎರಡೂ ಕೋಮುಗಳಿಗೆ ನಿಲುಕದ ನಿಷ್ಪಕ್ಷಪಾತ ನಿಲುವಿನಿಂದ ವಾದಗಳನ್ನು ಮಂಡಿಸುತ್ತಾರೆ. ಸಾಧ್ಯವಿರುವಷ್ಟು ಮಟ್ಟಿಗೆ ಚರ್ಚೆಯು ಸಮಗ್ರವಾಗಿಯೂ ಪರಿಗಣನೀಯವಾಗಿಯೂ ಸಮಂಜಸವಾಗಿ ಇರುವಂತೆ ಪ್ರಯತ್ನಿಸುತ್ತಾರೆ. ಚರ್ಚೆಗೆ ಪುಷ್ಟಿಯೊದಗಿಸುವ ದೃಷ್ಟಿಯಿಂದ ಪ್ರಸ್ತುತವೆನಿಸಿದ ಹಲವಾರು ವಿದ್ವಾಂಸರನ್ನು ಕೃತಿಯುದ್ದಕ್ಕೂ ಉಲ್ಲೇಖಿಸುತ್ತಾರೆ. ಅತ್ಯಂತ ದಟ್ಟ ನಿರೂಪಣೆಯಿರುವ ಈ ಕೃತಿಯನ್ನು ಲಕ್ಷ್ಯವಿಟ್ಟು ಓದದಿದ್ದರೆ ಕೃತಿಯಲ್ಲಿರುವ ಸರ್ವಸ್ವವೂ ಕೃತಿಕಾರನ ಅಭಿಪ್ರಾಯಗಳೇ ಎಂಬ ಗೊಂದಲಕ್ಕೆ ಸಿಕ್ಕಿಬೀಳುವುದು ಅಸಹಜವೇನಲ್ಲ.

ವಸ್ತುಸ್ಥಿತಿ ಹೀಗಿರುವಾಗ ವಿನಯ್ ಕಟಿಯಾರ್‌ನಂತಹವರು ಅಂಬೇಡ್ಕರ್ ಮುಸ್ಲಿಂ–ವಿರೋಧಿ ಎಂದೋ ಹಿಂದೂತ್ವ–ಪರ ಎಂದೋ ನಿರೂಪಿಸಲು ದುರುದ್ದೇಶದಿಂದ ಹೂಡಿರುವ ಸಂಚಿಗೆ ಅನುಕೂಲವಾಗುವಂತೆ ಕೃತಿಯ ಭಾಗಗಳನ್ನು ತಿರುಚಿ ಬಳಸಿಕೊಳ್ಳುವುದು ಅಸಾಧ್ಯವೇನಲ್ಲ.

ಈ ಕೃತಿಯಲ್ಲಿ ಕಂಡುಬರುವ ವಾದಸರಣಿಯ ವಿಶಾಲ ಭೂಮಿಕೆಯು ಮುಸ್ಲಿಂ–ವಿರೋಧಿಯಾದ್ದಲ್ಲ ಎಂಬುದು ವಾಸ್ತವ ಸಂಗತಿ. ಹಿಂದೂತ್ವವಾದಿಗಳು ಅಖಂಡಭಾರತವನ್ನು ನಿರ್ಮಾಣ ಮಾಡುವ ವಾದವನ್ನು ಪ್ರತಿಪಾದಿಸುತ್ತಿದ್ದರು. ಈ ಪ್ರತಿಪಾದನೆಗೆ ಪ್ರತಿಯಾಗಿ ಅಂಬೇಡ್ಕರ್ ಮುಸ್ಲಿಮರ ಪಾಕಿಸ್ತಾನದ ಬೇಡಿಕೆಯು ಈ ಹಿನ್ನೆಲೆಯಲ್ಲಿ ಸಮರ್ಥನೀಯ ಎಂಬ ನಿಲುವನ್ನು ತಳೆದದ್ದು ಕಂಡುಬರುತ್ತದೆ. ಪ್ರಚಲಿತ ವಿದ್ಯಮಾನಗಳ ಸಂದರ್ಭದಲ್ಲಿ ತಾವು ಸೂಚಿಸುವಂತಹ ವಿಭಜನೆಯು ಹೇಗೆ ಅತ್ಯುತ್ತಮ ಪರಿಹಾರವಾಗಬಲ್ಲದು ಎಂಬುದನ್ನು ಮನಗಾಣಿಸಲು ಧಾರ್ಮಿಕ, ಐತಿಹಾಸಿಕ, ಸಾಮಾಜಿಕ, ರಾಜಕೀಯ, ಆಡಳಿತ ಮತ್ತು ಮಿಲಿಟರಿ– ಈ ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುವ ಆಧಾರಗಳನ್ನು ಬಳಸಿಕೊಂಡು ತಮ್ಮ ವಾದವನ್ನು ಅವರು ಮಂಡಿಸುತ್ತಾರೆ. ಸಮಗ್ರತೆಯ ಗುಣಾಂಶವನ್ನು ಕಾಪಾಡಿಕೊಳ್ಳುವ ಸಲುವಾಗಿ ಎರಡೂ ಪಂಗಡಗಳಲ್ಲಿರುವ ಉತ್ತಮ ಅಂಶಗಳನ್ನೂ ನ್ಯೂನತೆಗಳನ್ನೂ ವಸ್ತುನಿಷ್ಠವಾಗಿ ಕೃತಿಯಲ್ಲಿ ಚರ್ಚೆಗೊಳಪಡಿಸುತ್ತಾರೆ. ಬಹುಸಂಖ್ಯಾತ ಹಿಂದೂಗಳು ಅಲ್ಪಸಂಖ್ಯಾತರೊಂದಿಗೆ ಅಧಿಕಾರ ಹಂಚಿಕೊಳ್ಳಲು ನಿರಾಕರಿಸಿದ್ದೇ ವಿಭಜನೆಯನ್ನು ಅನಿವಾರ್ಯಗೊಳಿಸಿತು ಎನ್ನುವುದೇ ಈ ಕೃತಿಯಿಂದ ಹೊರಹೊಮ್ಮುವ ಮುಖ್ಯ ಸಂದೇಶವಾಗಿದೆ.

ದೌರ್ಜನ್ಯ ಮತ್ತು ದಬ್ಬಾಳಿಕೆಯ ಆಡಳಿತದಿಂದ ಪ್ರತ್ಯೇಕವಾಗಬೇಕು ಎಂಬಂತಹ ಸಂಕಷ್ಟ–ಸೂತ್ರವನ್ನು ಮುಸ್ಲಿಮರು ಕಂಡುಕೊಳ್ಳುವಂತಾಯಿತು. ಹಿಂದೂಗಳು ಅಲ್ಪಸಂಖ್ಯಾತರ ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಅವರಿಗೆ ಅಧಿಕಾರದಲ್ಲಿ ನ್ಯಾಯೋಚಿತವಾಗಿ ದೊರಕಬೇಕಿದ್ದ ಪಾಲನ್ನು ನಿರಾಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದ ಬೇಡಿಕೆಯನ್ನು ಮುಂದಿಟ್ಟಿರುವ ಮುಸ್ಲಿಮರನ್ನು ದೂರುವಂತಿಲ್ಲ. ಮುಸ್ಲಿಮರ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ವಿರೋಧಿಸುವ ಕಾರಣದಿಂದಲೇ ಹಿಂದೂಗಳು ಭಾರತವನ್ನು ಹಿಂದೂರಾಷ್ಟ್ರವಾಗಬೇಕೆನ್ನುವುದು ಹಾಸ್ಯಾಸ್ಪದ ವಿಚಾರವಾಗಿದೆ–ಎಂಬಂತಹ ಹಲವು ಗುರುತರವಾದ ದೋಷಾರೋಪಣೆಗಳು ಕೂಡ ಕೃತಿಯಲ್ಲಿವೆ. ಮೇಲಿನ ಕಾರಣಗಳಿಂದಾಗಿ ತಮ್ಮದೇ ರಾಷ್ಟ್ರವೆಂದು ಗುರುತಿಸಬಹುದಾದ ಪಾಕಿಸ್ತಾನವನ್ನು ಅಸ್ತಿತ್ವಕ್ಕೆ ತರುವ ಮುಸ್ಲಿಮರ ಸಮರ್ಥನೆಯು ಪ್ರತ್ಯೇಕ ಭೂಪ್ರದೇಶದ ನಿವಾಸಿಗಳಾಗಬೇಕೆಂಬ ಅವರ ಇಚ್ಛಾಶಕ್ತಿಯ ಅಭಿವ್ಯಕ್ತಿಯಾಗಿದೆ ಎಂದೂ ಹೇಳಲಾಗುತ್ತದೆ. ಆದರೆ ರಾಷ್ಟ್ರೀಯತೆಯನ್ನು ಕುರಿತಂತೆ ಮುಸ್ಲಿಂ ದೃಷ್ಟಿಕೋನವನ್ನು ಮೀರಿದಂತಹ ದೃಷ್ಟಿಕೋನವು ಅಂಬೇಡ್ಕರ್ ಅವರದ್ದಾಗಿತ್ತು. ಆದ್ದರಿಂದಲೇ ಪಾಕಿಸ್ತಾನದ ಬೇಡಿಕೆಯು ರಾಷ್ಟ್ರೀಯತೆಯಾಗಿರದೆ ರಾಷ್ಟ್ರೀಯವಾದವಾಗಿದೆ ಎಂದು ಷರಾ ಬರೆಯುತ್ತಾರೆ.

ಈ ಕೃತಿಯು ದೇಶದ ಹಿಂದೂ ಮುಸ್ಲಿಂ ಸಮುದಾಯಗಳ ಆಗಿನ ವೈರುಧ್ಯಗಳಿಗೆ ಹಿಡಿದ ಕನ್ನಡಿಯಂತಿದೆ. ಅದರಲ್ಲಿ ಮುಸ್ಲಿಮರ ಮುಖ ಕರ್ರಗಿದೆ ಎಂದು ಕಟಿಯಾರ್ ಎತ್ತಾಡುತ್ತಿದ್ದಾನೆ. ಪಾಪ! ಈ ಕೃತಿಯು ಅವನಂತಹ ಹಿಂದೂತ್ವವಾದಿಗಳ ಕರೀಮುಖಕ್ಕೂ ಹಿಡಿದ ಕನ್ನಡಿಯಾಗಿದೆ ಎಂಬುದನ್ನು ಅವನು ಮರೆತಂತಿದೆ.

(ಅಂಬೇಡ್ಕರ್ ಮತ್ತು ಮುಸ್ಲಿಮರು ಕೃತಿಯಿಂದ)

ಹಿಂದೂ ಮುಸ್ಲಿಂ ಸಮುದಾಯಗಳ ವೈರುಧ್ಯಗಳಿಗೆ ಹಿಡಿದ ಕನ್ನಡಿ

○ ಡಾ॥ ಆನಂದ್ ತೇಲ್‌ತುಂಬ್ಡೆ
ಅನು: ಪ್ರೊ॥ ಬಿ. ಗಂಗಾಧರಮೂರ್ತಿ

ವಾಗ್ವಾದ

ಈ ಕೃತಿಯಲ್ಲಿ ಕಂಡುಬರುವ ವಾದಸರಣಿಯ ವಿಶಾಲ ಭೂಮಿಕೆಯು ಮುಸ್ಲಿಂ-ವಿರೋಧಿಯಾದ್ದಲ್ಲ ಎಂಬುದು ವಾಸ್ತವ ಸಂಗತಿ. ಹಿಂದೂತ್ವವಾದಿಗಳು ಅಖಂಡಭಾರತವನ್ನು ನಿರ್ಮಾಣ ಮಾಡುವ ವಾದವನ್ನು ಪ್ರತಿಪಾದಿಸುತ್ತಿದ್ದರು. ಈ ಪ್ರತಿಪಾದನೆಗೆ ಪ್ರತಿಯಾಗಿ ಅಂಬೇಡ್ಕರ್ ಮುಸ್ಲಿಮರ ಪಾಕಿಸ್ತಾನದ ಬೇಡಿಕೆಯು ಈ ಹಿನ್ನೆಲೆಯಲ್ಲಿ ಸಮರ್ಥನೀಯ ಎಂಬ ನಿಲುವನ್ನು ತಳೆದದ್ದು ಕಂಡುಬರುತ್ತದೆ. ಪ್ರಚಲಿತ ವಿದ್ಯಮಾನಗಳ ಸಂದರ್ಭದಲ್ಲಿ ತಾವು ಸೂಚಿಸುವಂತಹ ವಿಭಜನೆಯು ಹೇಗೆ ಅತ್ಯುತ್ತಮ ಪರಿಹಾರವಾಗಬಲ್ಲದು ಎಂಬುದನ್ನು ಮನಗಾಣಿಸಲು ಎಲ್ಲಾ ಆಧಾರಗಳನ್ನು ಬಳಸಿಕೊಂಡು ತಮ್ಮ ವದವನ್ನು ಅವರು ಮಂಡಿಸುತ್ತಾರೆ.

ತ್ಯಾಗಿ ಅವರು ರಾಜ್ಯ ಸಂಚಾಲಕರಾಗಿದ್ದಾಗ, ರಾಜ್ಯ ಸಮಿತಿಯ ಸಭೆಗಳು, ಕಾರ್ಯಕರ್ತರ ತರಬೇತಿ ಶಿಬಿರಗಳು ಶಿಸ್ತುಬದ್ಧವಾಗಿ ನಡೆಯುತ್ತಿದ್ದವು. ತ್ಯಾಗಿ ಅವರು ಭೂ ಶಾಸನಗಳ ಕುರಿತು ಎಲ್ಲಾ ಕಡೆ ಮಾತನಾಡುತ್ತಿದ್ದರು. ರಾಜ್ಯದ ಬಹುತೇಕ ಕಡೆ, ದಲಿತರ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಗಳಿಗೆ ಭೂ ಸಂಬಂಧವಾದ ಕಾರಣಗಳೇ ಪ್ರಮುಖವಾಗಿದ್ದವು. ಅವರು ಕಂಡಿದ್ದು-ಕೇಳಿದ್ದನ್ನು ವಿಶೇಷವಾಗಿ ಗ್ರಹಿಸಿ ಪರಿಣಾಮಕಾರಿಯಾಗಿ ನಿರೂಪಿಸುತ್ತಿದ್ದರು.

ತಾಯಿ ಹೃದಯದ 'ತ್ಯಾಗಿ'

ಮಾರ್ಚ್. ೧೩-೨೦೦೬ ರ ಬೆಳಿಗ್ಗೆ ಎಂದಿನಂತೆ ಕಾಲೇಜಿಗೆ ಹೊರಟ್ಟಿದ್ದೆ ನನ್ನ ಆತ್ಮೀಯ ಗೆಳೆಯ ತ್ಯಾಗಿ, ಅವರ ನಿಧನದ ಸುದ್ದಿ ತಿಳಿಯಿತು. ಮಂಕು ಕವಿದಂತಾಗಿ ನೇರವಾಗಿ ಬಸ್ಸು ನಿಲ್ದಾಣಕ್ಕೆ ಬಂದು ಹಾಸನದ ಬಸ್ಸು ಹತ್ತಿದೆ. ಮೂರು ದಿನ ಮುಂಚೆ, ಹಾಸನದ ಕೆ.ಎಸ್ ತಿಮ್ಮಯ್ಯನವರು ಸಿಕ್ಕಿದ್ದರು. ಮೈಸೂರಿನ ಆಸ್ಪತ್ರೆಯಲ್ಲಿ ತ್ಯಾಗಿ ಅವರಿಗೆ ಶಸ್ತ್ರ ಚಿಕಿತ್ಸೆ ಆಗಿರುವುದಾಗಿ ಹಾಗೂ ಅವರು ನನ್ನೊಡನೆ ಮಾತನಾಡ ಬಯಸಿರುವುದಾಗಿ ಹೇಳಿದ್ದರು. ಮೈಸೂರಿಗೆ ಹೋಗಿಬರಬೇಕು ಎಂದು ಯೋಚಿಸುವಷ್ಟರಲ್ಲಿ ಈ ಕೆಟ್ಟಸುದ್ದಿ ನನ್ನನ್ನು ತಲ್ಲಣ್ಣಗೊಳಿಸಿತು.

ಬೆಂಗಳೂರಿನ ಆಸ್ಪತ್ರೆಯಿಂದ ಬಂದ ನಂತರ ತುಂಬಾ ಚೇತರಿಸಿಕೊಂಡಿದ್ದರು. ಜನವರಿ ತಿಂಗಳ ಮೊದಲ ವಾರ ಭೇಟಿ ಮಾಡಿದ್ದೆ. ಬಹಳ ಹೊತ್ತು ಹಲವು

ಮಾತಾನಾಡಿದೆನೊ ತಿಳಿಯದು. ಅಂದೇ ತ್ಯಾಗಿಯವರು ನನ್ನನ್ನು ಮೆಚ್ಚಿಕೊಂಡಿದ್ದರು. ಆಗಾಗ ಈ ಘಟನೆಯನ್ನು ನನಗೆ ಹೇಳುತ್ತಿದ್ದರು.

ಅಂದರೆ, ಪ್ರಾರಂಭದ ದಿನಗಳಲ್ಲಿ, ನಾವೆಲ್ಲಾ ತುಂಬಾ ಭಾವನಾತ್ಮಕವಾಗಿ ದಲಿತರ ಸಂಘಟನೆಯಲ್ಲಿ ಭಾಗಿಗಳಾಗುತ್ತಿದ್ದೇವು.

೧೯೮೦-೮೫ರವರೆಗೆ, ನಾನು ಹಾಸನದಲ್ಲಿ ಕಾಲೇಜೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಕಾಲೇಜು ಮುಗಿದು ತಕ್ಷಣ, ತ್ಯಾಗಿ ಅವರ ಭೇಟಿ. ಜಿಲ್ಲೆಯ-ರಾಜ್ಯ ದಸಂಸ ಸಂಘಟನೆಯ ಬಗ್ಗೆ ಚರ್ಚೆ ನಡೆಸುತ್ತಿದ್ದೆವು. ತ್ಯಾಗಿ ಅವರ ಜೊತೆಯಲ್ಲಿ ಯಾವಾಗಲೂ ೫-೬ ಜನ ಹಳ್ಳಿಯ ದಲಿತರು ಇರುತ್ತಿದ್ದರು. ಅವರ ಸಮಸ್ಯೆಗಳನ್ನು ಕೇಳುವುದು, ಡಿಸಿ/ಎಸ್ ಪಿ ಗಳಿಗೆ ಅರ್ಜಿ ಬರೆಯುವುದು.

ವಿಷಯಗಳ ಕುರಿತು ಮಾತನಾಡಿದೆವು. ತುಂಬಾ ಲವಲವಿಕೆಯಿಂದ ಇದ್ದನು.

ನನ್ನ ಮತ್ತು ತ್ಯಾಗಿಯವರ ಗೆಳೆತನದ ನಂಟು ದಸಂಸದಿಂದ ಪ್ರಾರಂಭ. ೧೯೮೦ ರಲ್ಲಿ ಹಾಸನದ ಎಂ. ಕೃಷ್ಣ ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದೆ. ಆಗ ತ್ಯಾಗಿಯವರು ಹಾಸನ ಜಿಲ್ಲಾ ಸಂಚಾಲಕರು.

ತ್ಯಾಗಿ, ಅವರು ದಲಿತ ಸಂಘರ್ಷ ಸಮಿತಿಯ ಉಗಮ ಮತ್ತು ಬೆಳವಣಿಗೆಯಲ್ಲಿ ತುಂಬಾ ಕೆಲಸ ಮಾಡಿದ್ದರು. ೧೯೭೮ ರಲ್ಲಿ ಭದ್ರವತಿಯಲ್ಲಿ ನಡೆದ ದಲಿತ ಲೇಖಕ-ಕಲಾವಿದರ ಪ್ರಥಮ ಸಮ್ಮೇಳನದ ಯಶಸ್ವಿಗಾಗಿ ಬಿ. ಕೃಷ್ಣಪ್ಪನವರೊಡನೆ ದುಡಿದಿದ್ದರು. ಕೃಷ್ಣಪ್ಪನವರ ವ್ಯಕ್ತಿತ್ವ ಅವರ ಮೇಲೆ ಪ್ರಭಾವಬೀರಿತ್ತು. ರಾಜಕಾರಣಿಗಳಲ್ಲಿ ಬಿ. ಬಸವಲಿಂಗಪ್ಪನವರ ಬಗ್ಗೆ ತುಂಬಾ ಅಭಿಮಾನವುಳ್ಳವರಾಗಿದ್ದರು.

ಹಾಸನದಲ್ಲಿ ದಸಂಸ ಪ್ರಾರಂಭಿಸಿದಾಗ, ಅಂತಹ ಒಳ್ಳೆಯ ಪ್ರತಿಕ್ರಿಯೆಯನೂ ಇರಲಿಲ್ಲ. ನಾರಾಯಣ ದಾಸ್-ತ್ಯಾಗಿಯವರು ದಲಿತ ವಿದ್ಯಾರ್ಥಿ ನಿಲಯಗಳಲ್ಲೇ ಎಷ್ಟೋ ಸಾರಿ ಉಳಿಯುತ್ತಿದ್ದರು. ದಲಿತ ಉಪನ್ಯಾಸಕರು, ಸಣ್ಣ ಪುಟ್ಟ ನೌಕರರು ಮೊದಲಿಗೆ ಬೆಂಬಲಿಸುತ್ತಿದ್ದರು.

೧೯೮೯ ರ ಏಪ್ರಿಲ್ ತಿಂಗಳಲ್ಲಿ, ಹಾಸ್ಟೆಲ್‌ವೊಂದರಲ್ಲಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ, ಸುಮಾರು ೧೫೦ ಜನ ದಲಿತರ ಸಭೆ. ನನ್ನನ್ನು ಯಾರೊ ಮಾತನಾಡುವಂತೆ ಹೇಳಿದರು. ನಾನು ಅಂದು ಏನು

ಕಛೇರಿಗಳನ್ನು ಭೇಟಿ ಮಾಡಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುವುದು, ನಿತ್ಯದ ದಿನಚರಿ.

ಅರ್ಜಿಗಳ ಮೂಲಕ ಸಮಸ್ಯೆಗಳು ಬಗೆಹರಿಯದಿದ್ದರೆ, ಧರಣಿ-ಪ್ರತಿಭಟನೆ ಮೆರವಣಿಗೆಗಳು ನಡೆಸಲಾಗುತ್ತಿತ್ತು. ೮೦ ರ ದಶಕದಲ್ಲಿ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ದಸಂಸ ಪ್ರಾರಂಭವಾಯಿತು. ದಿನನಿತ್ಯ ದಲಿತರ ಮೇಲೆ ನಡೆಯುತ್ತಿದ್ದ ಅನ್ಯಾಯ, ಅಕ್ರಮಗಳನ್ನು ಪ್ರಶ್ನಿಸಿ ಜನ ಜಾಗೃತಿಯನ್ನು ಉಂಟುಮಾಡುವಲ್ಲಿ ಸಂಘಟನೆ ಯಶಸ್ವಿಯಾಗಿತ್ತು. ತ್ಯಾಗಿಯವರು ಜಿಲ್ಲೆಯ ಎಲ್ಲಾ ಕಡೆ ತಿರುಗಿ, ಗ್ರಾಮಾಂತರ ಪ್ರದೇಶಗಳಲ್ಲೂ ಸಂಘಟನೆಯನ್ನು ಕಟ್ಟಿ ಬೆಳೆಸಿದರು. ಹಾಸನ ನಗರದಲ್ಲಿ ೧೫-೨೦ ಸಾವಿರ ಜನರ ಬೃಹತ್ ಮೆರವಣಿಗೆಗಳು ನಡೆಯುತ್ತಿದ್ದವು.

ಹಾಸನದ ಬಿದರೆ ಕಾವಲು ಭೂ ಹೋರಾಟ, ಬಾಳ್ಳು ಪೇಟೆ ಭೂ ಹೋರಾಟ ಬಹಳ ಮಹತ್ವದ ಘಟನೆಗಳು. ತ್ಯಾಗಿಯವರ ನಾಯಕತ್ವದಲ್ಲಿ ಇಡೀ ರಾಜ್ಯ ದಸಂಸ ಭಾಗಿಯಾಗಿತ್ತು. ಎಲ್ಲಾ ಜಾತಿಯ ಬಡ ಭೂಹೀನ ರೈತರಿಗೆ ಭೂ ಒಡೆತನದ ಹಕ್ಕಿಗಾಗಿ ೧೯೮೪-೮೩ ರವರೆಗೆ ದೀರ್ಘ ಹೋರಾಟ ನಡೆಯಿತು.

ಬಿದರೆ ಕಾವಲು ಭೂ-ಹೋರಾಟದಿಂದ ದಸಂಸ ತನ್ನ ವ್ಯಾಪ್ತಿಯಲ್ಲಿ ಎಲ್ಲಾ ಜಾತಿಯ ಬಡವರನ್ನು ಒಳಗೊಳ್ಳುವ ಪ್ರಯತ್ನ ನಡೆಯಿತು. ಈ ಹೋರಾಟದಿಂದ ತ್ಯಾಗಿಯವರು ರಾಜ್ಯ ಮಟ್ಟದಲ್ಲಿ ಗುರುತಿಸಲ್ಪಟ್ಟರು.

ಅಗಲಿಕೆ

ಚಂದ್ರ ಪ್ರಸಾದ್ ತ್ಯಾಗಿ ದಲಿತ ಚಳವಳಿಯ ಆತ್ಮದಂತಿದ್ದರು. ಅವರು ರಾಜ್ಯ ಸಂಚಾಲಕರಾಗಿದ್ದಾಗ ಚಳವಳಿ ಅತ್ಯಂತ ಉಚ್ರಾಯ ಸ್ಥಿತಿಯಲ್ಲಿತ್ತು. ತನ್ನ ಬದುಕಿನ ಅದಮ್ಯ ಆಶಯವಾದ ಶೋಷಿತರ ಬಿಡುಗಡೆಗಾಗಿ ತುಳಿಯ ಬೇಕಾದ ಹಾದಿಯ ಬಗ್ಗೆ ತ್ಯಾಗಿ ತುಂಬಾ ಭಾವನಾ ತ್ಮಕವಾಗಿ ಮಾತನಾಡು ತ್ತಿದ್ದರು. ಹಾಸನ ಜಿಲ್ಲೆಯ ರೈತ-ದಲಿತ ಚಳುವಳಿ ಗಳನ್ನು ಪರಸ್ಪರ ಒಗ್ಗೂಡಿಸಿ ಕೆಲಸ ಮಾಡುವ ವಾತಾವರಣ ವನ್ನು ನಿರ್ಮಿಸಿದ್ದರು. ಕಡು ಬಡತನದಲ್ಲಿ ಹುಟ್ಟಿ ಬೆಳೆದ ತ್ಯಾಗಿ ಸದಾ ಹೋರಾಟ ಮತ್ತು ಕನಸುಗಳ ಗಣಿಯೇ ಆಗಿದ್ದರು. ಅವರ ಅಗಲಿಕೆ ಯಿಂದ ನಾಡಿನ ದಲಿತ ಸಮುದಾಯ ಹೃದಯ ವಂತ ನಾಯಕನನ್ನು ಕಳೆದುಕೊಂಡಿದೆ.

ಹೆಚ್.ಎಂ. ರುದ್ರಸ್ವಾಮಿ

೧೯೮೬ರಲ್ಲಿ ದ.ಸಂ.ಸ ರಾಜ್ಯ ಸಂಚಾಲಕರಾದರು. ರಾಜ್ಯದ ಎಲ್ಲಾ ಭಾಗಗಳಲ್ಲಿ ಸಂಚರಿಸಿ ಸಂಘಟಿಸಿದರು, ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ದಸಂಸ ಸಕ್ರಿಯವಾಯಿತು.

ತ್ಯಾಗಿ ಅವರು ರಾಜ್ಯ ಸಂಚಾಲಕರಾಗಿದ್ದಾಗ, ರಾಜ್ಯ ಸಮಿತಿಯ ಸಭೆಗಳು, ಕಾರ್ಯಕರ್ತರ ತರಬೇತಿ ಶಿಬಿರಗಳು ಶಿಸ್ತುಬದ್ಧವಾಗಿ ನಡೆಯುತ್ತಿದ್ದವು. ತ್ಯಾಗಿ ಅವರು ಭೂ ಶಾಸನಗಳ ಕುರಿತು ಎಲ್ಲಾ ಕಡೆ ಮಾತನಾಡುತ್ತಿದ್ದರು. ರಾಜ್ಯದ ಬಹುತೇಕ ಕಡೆ, ದಲಿತರ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಗಳಿಗೆ ಭೂ ಸಂಬಂಧವಾದ ಕಾರಣಗಳೇ ಪ್ರಮುಖವಾಗಿದ್ದವು. ಅವರು ಕಂಡಿದ್ದು-ಕೇಳಿದ್ದನ್ನು ವಿಶೇಷವಾಗಿ ಗ್ರಹಿಸಿ, ಪರಿಣಾಮಕಾರಿಯಾಗಿ ನಿರೂಪಿಸುತ್ತಿದ್ದರು.

ತ್ಯಾಗಿ ಅವರದ್ದು ತುಂಬು ಸಂಸಾರ. ಹಾಸನದ ಸಂತೆ ಮೈದಾನದ ಒಂದು ಹೋಟಲ್‌ನ ಸಣ್ಣ ಕೊಠಡಿಯಲ್ಲಿ ೪-೫ ವರ್ಷಗಳು ಸಂಸಾರ ಸಾಗಿಸಿದರು. ಆಗ, ಅವರ ದಿನನಿತ್ಯದ ಕುಟುಂಬ ಖರ್ಚಿಗೆ ಹಣವಿರಲಿಲ್ಲ. ಅವರ ಪತ್ನಿ ಶ್ರೀಮತಿ ಚಂದ್ರಮ್ಮ ಹಾಸನದ ಸಂತೆಯಲ್ಲಿ ಸೊಪ್ಪು ಮಾರಾಟ ಮಾಡುತ್ತಿದ್ದರು. ಅವರು ಕುಟುಂಬದ ಕಡೆ ಗಮನ ಹರಿಸಿದ್ದೇ ಕಡಿಮೆ. ಆ ಹೊಣೆಯನ್ನು ಶ್ರೀಮತಿ ಚಂದ್ರಮ್ಮನವರೇ ನಿಭಾಯಿಸುತ್ತಿದ್ದರು.

೧೯೯೪ರಲ್ಲಿ ಕೊಳಚೆ ನಿರ್ಮೂಲನ ಮಂಡಳಿ ಅಧ್ಯಕ್ಷರಾದರು. ಆಗಲೂ, ಅವರು ದಸಂಸ ಸಂಪರ್ಕ ಬಿಟ್ಟಿರಲಿಲ್ಲ. ಅವರ ಕಛೇರಿಯಲ್ಲಿ ರಾಜ್ಯದ ಯಾವುದಾದರೂ ಭಾಗದಿಂದ ಬಂದಿದ್ದ ಕಾರ್ಯಕರ್ತರು ಇರುತ್ತಿದ್ದರು. ಜಿಲ್ಲೆಗಳ ಸಮಸ್ಯೆಗಳನ್ನು ಉನ್ನತ ಅಧಿಕಾರಿಗಳು-ಮಂತ್ರಿಗಳಿಗೆ ಮನವರಿಕೆ ಮಾಡುವ ಕೆಲಸ ಮಾಡುತ್ತಿದ್ದರು. ಆ ಸಂದರ್ಭದಲ್ಲೆ ರಾಜಕೀಯ ಪ್ರವೇಶ ಮಾಡಿದರು. ಆದರೂ ಕೊನೆವರೆಗೂ ದಸಂಸ ಗೆಳೆಯರ ನಡುವೆಯೇ ಬದುಕಿದರು.

ದೇವನೂರು ಮಹದೇವ, ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು ಅವರ ಬಗ್ಗೆ ಅಪಾರ ಪ್ರೀತಿ ವಿಶ್ವಾಸ ಇಟ್ಟುಕೊಂಡಿದ್ದರು. ರಾಜ್ಯದ ಯಾವುದೇ ಮೂಲೆಯ ದಸಂಸ ಗೆಳೆಯರನ್ನು ತಮ್ಮ ಬಂಧು ಬಳಗದವರಂತೆ ನೋಡಿಕೊಳ್ಳುತ್ತಿದ್ದರು.

ಕಳೆದ ಜನವರಿ ೧೯ ರಂದು ಲಕ್ಷಾಂತರ ಜನ ಸೇರಿದ್ದ 'ಅಹಿಂದ' ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು. ಅದು ಅವರ ಕೊನೆಯ ಸಾರ್ವಜನಿಕ ಸಭೆ. ತನ್ನ ಬದುಕಿನ ಅದಮ್ಯ ಆಶಯ ಶೋಷಿತರ ಬಿಡುಗಡೆಗೆ ಮುನ್ನಡೆಯಬೇಕಾದ ದಿಕ್ಕುದಿಸೆಯ ಬಗ್ಗೆ ತುಂಬಾ ಭಾವನಾತ್ಮಕವಾಗಿ ಮಾತನಾಡಿದರು. ಹಾಸನ ಜಿಲ್ಲೆಯ ರೈತ-ದಲಿತ ಚಳುವಳಿಗಳನ್ನು ಪರಸ್ಪರ ಒಗ್ಗೂಡಿಸಿ ಕೆಲಸ ಮಾಡುವ ವಾತಾವರಣವನ್ನು ನಿರ್ಮಿಸಿದ್ದರು. ಮಂಜುನಾಥ ದತ್ತ, ವೆಂಕಟೇಶ ಮೂರ್ತಿ ಅವರೊಡನೆ ಅನ್ಯೋನ್ಯ ಸಂಬಂಧ ಹೊಂದಿದ್ದರು. ನಮ್ಮ ನಡುವಿನ ಪ್ರತಿಭಾವಂತ ಕಲಾವಿದರಾದ ಕೆ.ಟಿ. ಶಿವಪ್ರಸಾದ್ ದಸಂಸದಲ್ಲಿ ಕೆಲಸ ಮಾಡಿದರು.

ಕಳೆದ ೨ ವರ್ಷಗಳಿಂದ ಅನಾರೋಗ್ಯದಿಂದ ತತ್ತರಿಸಿದ್ದ ತ್ಯಾಗಿಯವರು ನಮ್ಮನ್ನಗಲಿದ್ದು ತುಂಬಾ ದುಃಖಕರವಾದ ಸಂಗತಿ. ತುಂಬು ಜೀವನೋತ್ಸಾಹ ಹೊಂದಿದ್ದ ಸ್ನೇಹಮಯಿ ನಮ್ಮ ನಡುವೆ 'ಇಲ್ಲಾ' ಎಂಬುದನ್ನು ನೆನಪಿಸಿಕೊಳ್ಳುವುದು ಕಠಿಣವಾಗುತ್ತದೆ. ದಲಿತ ಜನ ಸಮೂಹ, ನ್ಯಾಯ-ಸಮಾನತೆಯ ಹೋರಾಟದಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ತ್ಯಾಗಿ, ಅವರ ಆಸೆಗಳು ಚಿಗುರೊಡೆಯುವಂತೆ ಮಾಡಬೇಕಾಗಿದೆ. □

ಎಲ್ಲಮ್ಮ?



ಗಂಡುತನ ಹೆಣ್ಣುತನ ಮಣ್ಣು ಗೂಡಿಸುವಾಕಿ
ಗಡ್ಡ ಮೀಸೆ ತಗಿಸಿ ಹಡ್ಡಲಗಿ ಹಿಡಿಸುವಾಕಿ
ಜಡೆ ಬರಿಸಿ ಬಳೆ ತೊಡಿಸಿ
ಹುಣ್ಣಿಮೆಯ ರಾತ್ರಿಗಳಲ್ಲಿ ಉಡಿಯ
ತುಂಬಿಸಿಕೊಂಡು
ಗುಡಿಯಲ್ಲೆ ಸೇವೆ ಪಡೆಯುವಾಕಿ
ನಿನ್ನ ಹೆಸರಲ್ಲಿ ಪೌಳಿಯ ಒಳಹೊರಗೆ
ಹಗಲು ಹಾದರಗಳ ಸಂತೆ ನೆರೆವಾಗ
ಎಲ್ಲಮ್ಮ ನೀನು ಎಲ್ಲಮ್ಮ?

ಬತ್ತಿ ಬಣಗುಡುವ ಏಳುಕೊಳ್ಳಗಳ
ಕೊಳೆತ ಯೋನಿಗಳ ತೊಳೆಯುವದು ಯಾವಾಗ?
ಸೆರಗಿನೊದ್ದೆಯ ಹಾಗಿದ್ದ ಮಲಪಹಾರಿ
ಒಣಗಿ ನಿಂತಿರುವಾಗ; ಸೀಳು ಬಿರುಕುಗಳಲ್ಲಿ
ನವಿಲು ತೀರ್ಥದ ತೇವ ಸೋರಿ ಹೋಗಿರುವಾಗ
ಜೋಗುಳದ ಭಾವಿಯಲ್ಲಿ ಸೊಲ್ಲುಗಳು ಇಂಗಿ
ಎಕ್ಕಯ್ಯ ಜೋಗಯ್ಯ ಮೂಕರಾಗಿ ಮೂಲೆ
ಸೇರಿರುವಾಗ
ಎಲ್ಲಮ್ಮ ನೀನು ಎಲ್ಲಮ್ಮ?

ಬೆಟ್ಟಗಳ ಹೊಟ್ಟೆಯಲ್ಲಿ ಕುದಿವ ಬೆಂಕಿ
ಹೊರಗೆ ಸುಡುವ ಸೂರ್ಯನ ಹಂತಿ
ಗುಡದರಿಯ ಇಳಿಜಾರುಗಳಲ್ಲಿ
ಹಸಿದು ಓಡುತ್ತಿರುವ ಬಿಸಿಲು ಗುದುರೆಯ ಸಾಲು
ಹತ್ತಿ ಉರಿಯುತ್ತಿರುವ ಕಲ್ಲ ಬಣಿವೆಗಳ ಹಾಗಿರುವ
ಗುಡ್ಡ-ಪಂಕ್ತಿಗಳಿಗೆ ತಂಪು ಹಾಲೆರೆವ ತಾಯಿ
ಎಲ್ಲಮ್ಮ ನೀನು ಎಲ್ಲಮ್ಮ

○ಬಸವರಾಜ ವಕ್ಕುಂದ

ಕಣ್ಣೆದುರಿನ ದಂತ ಕತೆ

ಸಾಮಾನ್ಯರ ನಾಯಕ



ವಿದಾಯ

ಡಾ॥ ರಾಜ್ ಅವರು ಏರಿದ ಎತ್ತರ, ಬೀರಿದ ಪ್ರಭಾವ, ಗಳಿಸಿದ ಜನಪ್ರಿಯತೆ ಸಾಮಾನ್ಯ ವಿವರಣೆಗೆ ದಕ್ಕಲಾರದು. ಒಂದು ವೃತ್ತಿಯನ್ನು ತಪಸ್ಸಿನಂತೆ ಸ್ವೀಕರಿಸಿ, ತನ್ಮಯವಾಗಿ ಆರಾಧಿಸಿದರೆ ಎಂಥ ಎತ್ತರಕ್ಕೆ ಏರಬಹುದೆಂಬುದಕ್ಕೆ ಡಾ॥ ರಾಜ್ ದೊಡ್ಡ ನಿದರ್ಶನ. ದಕ್ಷಿಣ ಭಾರದಲ್ಲೇ ಅತ್ಯಂತ ಕಿರಿದಾದ ಚಲನಚಿತ್ರೋದ್ಯಮ ಕ್ಷೇತ್ರವನ್ನು ಹೊಂದಿದ್ದ ಕನ್ನಡ ಚಿತ್ರರಂಗವನ್ನು ಆರಂಭದಲ್ಲಿ ವಿಸ್ತರಿಸಿದರು. ಎಪ್ಪತ್ತು ವರ್ಷಗಳ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಐವತ್ತು ವರ್ಷಗಳನ್ನು ಆಳಿದರು. ಕನ್ನಡ ಚಲನಚಿತ್ರರಂಗದ ಇತಿಹಾಸವನ್ನು ರಾಜ್ ಕುಮಾರ್ ಅವರ ಬದುಕಿನಿಂದ ಬೇರೆಯಾಗಿ ನೋಡುವುದು ಅಸಾಧ್ಯವೆನಿಸುವಷ್ಟರ ಮಟ್ಟಿಗೆ ಅವೆರಡೂ ಬೆರತುಹೋಗಿವೆ.

ಡಾ॥ ಕೆ. ಪುಟ್ಟಸ್ವಾಮಿ

ಕೆಲವು ವಾರಗಳ ಹಿಂದೆ ಎಸ್.ಪಿ. ವರದರಾಜ್ ಅವರ ನಿಧನದಿಂದ ಅಣ್ಣ ಮುತ್ತುರಾಜ್ ಅವರ ಶೋಕದ ಕೋಡಿ ಹರಿದಿತ್ತು. ಇದೀಗ ಕನ್ನಡದ ಮೇರುನಟ ನಟಸಾರ್ವಭೌಮ ಡಾ॥ ರಾಜ್ ಕುಮಾರ್ ಅವರ ನಿಧನದಿಂದ ಮುತ್ತುರಾಜ್ ಅನುಭವಿಸಿದ ಶೋಕವನ್ನು ಕನ್ನಡಿಗರು ಅನುಭವಿಸುತ್ತಿದ್ದಾರೆ.

ಇಂದು (೧೨.೪.೨೦೦೬) ರಾಜ್ ಅವರ ನಿಧನ ವಾರ್ತೆ ಕೇಳಿದಾಗ ನಿಜವಾಗಲೂ 'ದಿಗ್ಭ್ರಮೆ' ಉಂಟಾಯಿತು. ಅನೇಕ ಘಟನೆಗಳು, ನೆನಪುಗಳು ಸಾಲುಸಾಲೇ ಹರಿದು ಬಂದು ಮನಸ್ಸು ಒಂದು ಬಗೆಯ ಸಂಕಟದಿಂದ ತತ್ತರವಾಯಿತು. ಬಂಧುವಲ್ಲ. ಗೆಳೆಯನಲ್ಲ ಹತ್ತಿರದ ನೆಂಟರಲ್ಲ. ಸಮಚಿತ್ತವಾಗಿ ಸ್ವೀಕರಿಸುವ ನನ್ನಂಥವರಿಗೂ ಇಂಥ ಆಘಾತವೇ! ನಮ್ಮ ಬದುಕನ್ನು ಕಟ್ಟಿದ, ಅನುಭವಗಳನ್ನು ವಿಸ್ತರಿಸಿದ, ಜೀವನೋತ್ಸಾಹವನ್ನು ಬತ್ತದ ಸೆಲೆಯನ್ನಾಗಿಸಿದ, ಅನೇಕ ಮೌಲ್ಯಗಳಿಗೆ ಸಂಕೇತವಾದ, ಅವರ ಜೊತೆಯಲ್ಲೇ ಬೆಳೆದ, ಅವರ ಬದುಕೇ ನಮ್ಮ ಬದುಕು ಎಂದು ಪರಿಭಾವಿಸಿ ಆ ಭ್ರಮೆಯಲ್ಲೇ ಬದುಕು ಕಳೆದ ನಮ್ಮಂಥವರಿಗೆ ರಾಜಣ್ಣನ ನಿಧನ ಬಂಧು-ಬಳಗ ನೆಂಟ-ಗೆಳೆಯರಿಗಿಂತಲೂ ಮಿಗಿಲಾದದ್ದು ಎಂಬುದರ ಅರಿವು ಇದೀಗ ಆಯಿತು.

ರಾಜ್‌ಕುಮಾರ್ ಅವರ ನಟನಾ ಸಾಮರ್ಥ್ಯದ ಬಗ್ಗೆ ಅನೇಕರು ಗಂಟೆಗಟ್ಟಲೇ ಹೇಳಬಲ್ಲರು. ಪುಟಗಟ್ಟಲೆ ಬರೆಯಬಲ್ಲರು ಆದರೆ ನನಗೆ ಅವರ ನಟನೆಗಿಂತಲೂ, ಆ ನಟನೆಯ ಮೂಲಕ ಅವರು ಸಮುದಾಯ ನಾಯಕರಾಗಿ ಬೆಳೆದ ರೀತಿಯೇ ಹೆಚ್ಚು ಆಸಕ್ತಿದಾಯಕವಾಗಿ ಕಾಣುತ್ತದೆ.

ರಾಜ್ ನಿಧನದಿಂದ ದಿಗ್ಭ್ರಮೆ ಅನುಭವಿಸುತ್ತಿರುವಾಗ, ಬರೆಯಲು ತಡಕಾಡುತ್ತಿರುವಾಗಲೇ ನನಗೆ ಕನ್ನಡದ ಪ್ರಖ್ಯಾತ ವಿಮರ್ಶಕ ಮತ್ತು ಭಾಷಾತಜ್ಞ ಡಾ॥ ಕೆ.ವಿ. ನಾರಾಯಣ ಅವರು ಡಾ॥ ರಾಜ್ ಬಗ್ಗೆ ಎಂದೊ ಬರೆದಿದ್ದ ಲೇಖನದ ಸಾಲುಗಳು ಮನದಂಗಳದಲ್ಲಿ ಮಿನುಗಿ ಸ್ಪಷ್ಟವಾದವು. (ವಿಚಿತ್ರವೆಂದರೆ, ಡಾ॥ ಕೆ.ವಿ. ನಾರಾಯಣ ಅಂಥವರ ತೂಕದ ಮಾತುಗಳು ಹೆಚ್ಚು ವಿಶ್ಲೇಷಣೆಗೆ ಒಳಪಡುವುದೇ ಇಲ್ಲ). ಡಾ॥ ನಾರಾಯಣರ ಪ್ರಕಾರ ಸುಲಭ ವ್ಯಾಖ್ಯೆಗೆ ಸಿಗದ ಸಮುದಾಯದ ನಾಯಕರನ್ನು ಸಮೂಹವೇ ತನ್ನದೆ ಆದ ಬಗೆಗಳಲ್ಲಿ ಗುರುತಿಸಿಕೊಳ್ಳುತ್ತದೆ. ಯಾಕೆಂದರೆ, ಸಮುದಾಯಕ್ಕೆ ನಾಯಕರು ಬೇಕು. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಯಕರು ರೂಪುಗೊಳ್ಳುವುದು ಚುನಾವಣೆ ಮೂಲಕ. ಅದೂ ಸಹ ಸಮುದಾಯದ ಮಾನಸಿಕ ಅಭೀಪ್ಸೆಯ ಮೂರ್ತರೂಪವೇ ಆಗಿರುತ್ತದೆ. ಆದರೆ ಪಕ್ಷಪ್ರಣಾಳಿಕೆ-ಆಸೆ-ಆಮಿಷಗಳ ಪರಿಧಿಯನ್ನು ದಾಟಿ, ಜಾತಿ-ಮತಗಳ ಭೇದವನ್ನು ಪುಡಿಗಟ್ಟಿ ತನ್ನ ಅಂತರಂಗದ ಅಭೀಪ್ಸೆಯ ನಾಯಕರನ್ನು ಸಮೂಹ ಕಲೆ, ವಿಜ್ಞಾನ, ಕ್ರೀಡೆ ಇನ್ನಿತರ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆಯ್ದುಕೊಳ್ಳುತ್ತದೆ. ಚುನಾವಣೆಯ ಮೂಲಕ ಉದ್ಭವವಾಗುವ ನಾಯಕರ 'ಆಯುಷ್ಯ' ತೀರಾ ಅಲ್ಪವಾದರೆ, ಸಾಂಸ್ಕೃತಿಕ ನಾಯಕರು ಜನಮಾನಸದಲ್ಲಿ ಎಂದೆಂದಿಗೂ ಚಿರಾಯುಗಳು. ಅಧಿಕಾರ ಕೇಂದ್ರದಿಂದ ಹೊರಗುಳಿದರೂ, ಈ ನಾಯಕರು ಹಲವು ವಿಧಗಳಲ್ಲಿ ಜನಮಾನಸವನ್ನು ಪ್ರಭಾವಿಸುವ ಅತುಳ ಸಾಮರ್ಥ್ಯ ಹೊಂದಿರುತ್ತಾರೆ.

ನಿಸ್ಸಂದೇಹವಾಗಿ ಡಾ॥ ರಾಜ್ ಇಪ್ಪತ್ತನೆ ಶತಮಾನದಲ್ಲಿ ಕರ್ನಾಟಕ ಕಂಡ ಬಹುದೊಡ್ಡ ಸಮುದಾಯ ನಾಯಕರಲ್ಲಿ ಅಗ್ರಗಣ್ಯರು. ಕುವೆಂಪು, ಕಾರಂತ, ಬೇಂದ್ರೆ, ಪಿ. ಕಾಳಿಂಗರಾಯರು, ಅನಿಲ್ ಕುಂಬ್ಳೆ, ಸಿ.ಎನ್.ಆರ್. ರಾವ್ ಮುಂತಾದ ಸಾಂಸ್ಕೃತಿ ನಾಯಕರ ಪಟ್ಟಿಯಲ್ಲಿ ಜನಮಾನಸವನು ಪ್ರಭಾವಿಸಿದ ಆಧಾರದಲ್ಲಿ ಡಾ॥ ರಾಜ್ ಅಗ್ರಗಣ್ಯರೆನಿಸಿಕೊಳ್ಳುತ್ತಾರೆ.

ಕೇವಲ ಹೊಟ್ಟೆಪಾಡಿಗಾಗಿ ನಟನೆಯನ್ನು ವೃತ್ತಿಯನ್ನಾಗಿ ಸ್ವೀಕರಿಸಿದರೂ, ಡಾ॥ ರಾಜ್ ಅವರು ಏರಿದ ಎತ್ತರ, ಬೀರಿದ ಪ್ರಭಾವ, ಗಳಿಸಿದ ಜನಪ್ರಿಯತೆ ಸಾಮಾನ್ಯ ವಿವರಣೆಗೆ ದಕ್ಕಲಾರದು. ಒಂದು ವೃತ್ತಿಯನ್ನು ತಪಸ್ಸಿನಂತೆ ಸ್ವೀಕರಿಸಿ, ತನ್ಮಯವಾಗಿ ಆರಾಧಿಸಿದರೆ ಎಂಥ ಎತ್ತರಕ್ಕೆ ಏರಬಹುದೆಂಬುದಕ್ಕೆ ಡಾ॥ ರಾಜ್ ದೊಡ್ಡ ನಿದರ್ಶನ. ಸುಮಾರು ಐವತ್ತು ವರ್ಷಗಳ ಕಾಲ ಜನರಂಜನೆಗಾಗಿ ತಮ್ಮ ವೃತ್ತಿ ಬದುಕು ಸಾಗಿಸಿದರೂ, ಅವರು ಪ್ರತಿನಿಧಿಸಿದ ಅನೇಕ ಮೌಲ್ಯಗಳಿಂದ ಗಟ್ಟಿಯಾದರು. ದಕ್ಷಿಣ ಭಾರತದಲ್ಲೇ ಅತ್ಯಂತ ಕಿರಿದಾದ

ಚಲನಚಿತ್ರೋದ್ಯಮ ಕ್ಷೇತ್ರವನ್ನು ಹೊಂದಿದ್ದ ಕನ್ನಡ ಚಿತ್ರರಂಗವನ್ನು ಆರಂಭದಲ್ಲಿ ವಿಸ್ತರಿಸಿದರು. ಎಪ್ಪತ್ತು ವರ್ಷಗಳ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಐವತ್ತು ವರ್ಷಗಳನ್ನು ಆಳಿದರು. ಕನ್ನಡ ಚಲನಚಿತ್ರರಂಗದ ಇತಿಹಾಸವನ್ನು ರಾಜ್‌ಕುಮಾರ್ ಅವರ ಬದುಕಿನಿಂದ ಬೇರೆಯಾಗಿ ನೋಡುವುದು ಅಸಾಧ್ಯವೆನಿಸುವಷ್ಟರ ಮಟ್ಟಿಗೆ ಅವೆರಡೂ ಬೆರೆತುಹೋಗಿವೆ. ಕನ್ನಡ ಚಿತ್ರರಂಗ ಮತ್ತು ಡಾ॥ ರಾಜ್‌ಕುಮಾರ್ ಜೊತೆ ಜೊತೆಯಾಗಿಯೇ ಬೆಳೆದು ಅರಳಿದ್ದಾರೆ.

ಕೇವಲ ಕನ್ನಡ ಚಲನಚಿತ್ರರಂಗಕ್ಕೆ ಒಳಬಲವಾದ ಸಾಧನೆ, ಚಿತ್ರರಂಗಕ್ಕೆ ನೀಡಿದ ಕೊಡುಗೆಯಿಂದಲೇ ಡಾ॥ ರಾಜ್ ಸಮುದಾಯ ನಾಯಕನ ಸ್ಥಾನಕ್ಕೇರಿಲ್ಲ. ಅವರ ನಟನೆಯನ್ನು, ಅವರ ಚಿತ್ರಗಳನ್ನು ಸಾಮಾನ್ಯ ದೃಷ್ಟಿಕೋನದಿಂದ ನೋಡಿದರೂ ಅವರ ಸಾಧನೆಯ ಆಧಾರಗಳು ದೊರಕವು. ಹೆಚ್ಚೂ ಕಡಿಮೆ ಕರ್ನಾಟಕ ಏಕೀಕರಣದ ಚಳವಳಿ ಕಾವೇರುವ ಕಾಲದಲ್ಲೇ ಡಾ॥ ರಾಜ್ ಚಲನಚಿತ್ರರಂಗಕ್ಕೆ ಆಗಮಿಸಿದ್ದು ಒಂದು ಸುದೈವ ಅಥವಾ ಅದೃಷ್ಟ. ಹರಿದುಹಂಚಿಹೋಗಿದ್ದ ಕನ್ನಡ ನಾಡನ್ನು ಒಂದುಗೂಡಿಸಿದ್ದು ಕನ್ನಡ ಭಾಷೆಯೇ ಆದರೂ ಏಕೀಕರಣದ ಕನಸನ್ನು ಬಿತ್ತಿದವರು, ಹಂಚಿದವರು ಸಾಂಸ್ಕೃತಿ ನಾಯಕರೇ! ವೃತ್ತಿ ನಾಟಕಗಳ ಸ್ಥಾನವನ್ನು ನಿಧಾನವಾಗಿ ಆಕ್ರಮಿಸಿಕೊಂಡ ಕನ್ನಡ ಚಲನಚಿತ್ರಗಳು ಕರ್ನಾಟಕದ ಎಲ್ಲೆಡೆ ವಿಸ್ತೃತಗೊಳ್ಳುವಂತೆ ಮಾಡಿದ್ದು ರಾಜ್ ಅವರ ತಾಜಾತನದ ಅಭಿನಯ, ಕನ್ನಡ ಭಾಷೆಯ ಮೇಲಿನ ಅಪೂರ್ವ ಹಿಡಿತ, ಜೊತೆಗೆ ಕನ್ನಡದ ವ್ಯಕ್ತಿತ್ವದ ಪ್ರತಿಬಿಂಬದ ರೀತಿಯಲ್ಲೇ ಇದ್ದ ಅವರ ಶರೀರ.

ಇಂದಿಗೂ ಅವರು ಕನಕನ ಪಾತ್ರದಲ್ಲಿ ಥೇಟ್ ಕನಕನಂತೇ ಕಾಣುತ್ತಾರೆ, ಹಾಡುತ್ತಾರೆ. ಕೃಷ್ಣದೇವರಾಯನ ಪಾತ್ರದಲ್ಲಿ ಜನರ ಕಲ್ಪನಾಶಕ್ತಿಯ ಪ್ರತಿರೂಪದಂತೆ ರಾಯನಾಗಿ ಮೈದಳೆಯುತ್ತಾರೆ, ವಿಜೃಂಭಿಸುತ್ತಾರೆ. ಪುರಂದರದಾಸ, ಕಣ್ಣಪ್ಪ, ಗೋರ, ಪುಲಿಕೇಶಿ, ಕಂಠೀರವ, ಮಲ್ಲಸರ್ಜ ಹೀಗೆ ಕನ್ನಡನಾಡಿನ ಅನೇಕ ಮೌಲಿಕ ಪ್ರತಿಭೆಯನ್ನು ಜನ ಇವರಲ್ಲಿ ಗುರುತಿಸಿದ್ದಾರೆ. ಈಗಲೂ ಕನಕದಾಸ, ಪುರಂದರದಾಸ, ಕೃಷ್ಣದೇವರಾಯ, ಮಂತ್ರಾಲಯ ರಾಘವೇಂದ್ರರವರ ಚಿತ್ರಗಳನ್ನು ಬರೆಯುವ ಕಲಾವಿದರಿಗೂ ರಾಜ್‌ರವರ ಪ್ರಭಾವವನ್ನು ನಿವಾರಿಸಿಕೊಳ್ಳಲಾಗಿಲ್ಲ ಎಂದರೆ ಅತಿಶಯೋಕ್ತಿಯಲ್ಲ.

ಆದರೂ ನನಗೊಮ್ಮೆ ಅನ್ನಿಸಿದ್ದಿದೆ; ಜಪಾನ್‌ನ ಪ್ರತಿಭಾವಂತ ನಟ ತೊಷಿರೊ ಮಿಫ್ಯೂನೆಗೆ ಅಕಿರಾ ಕುರಸೋವ ದಕ್ಕಿದಂತೆ, ಬಂಗಾಳಿ ಚಿತ್ರನಟ ಸೌಮಿತ್ರ ಚಟರ್ಜಿಗೆ ಸತ್ಯಜಿತ್‌ರೇ ಸಿಕ್ಕಿದಂತೆ ನಮ್ಮ ರಾಜ್‌ಗೆ ಒಬ್ಬ ಕುರಸೋವಾ, ಸತ್ಯಜಿತ್‌ರೆ ಸಿಕ್ಕಬಾರದಿತ್ತೆ?

ಇದರ ಜೊತೆಗೆ ಡಾ॥ ರಾಜ್ ಅವರು ವಹಿಸಿದ ಸಾಮಾಜಿಕ ಪಾತ್ರಗಳ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಆ ನಾಯಕ ಪಾತ್ರಗಳು ಕರುನಾಡ ಸಮಾಜದ ಆದರ್ಶ ಕನ್ನಡಿಗನ ಪ್ರತಿರೂಪಗಳೇ ಆಗಿರುವುದು ಕಾಕತಾಳೀಯವಿರಬಹುದು. ಆದರೆ ಸಮುದಾಯ ಅರ್ಥೈಸಿಕೊಂಡ ಜನಪ್ರಿಯ ಬಿಂಬವನ್ನೇ ಡಾ॥ ರಾಜ್‌ಕುಮಾರ್ ಅವರು ಅಭಿವ್ಯಕ್ತಿಸಿದ್ದರಿಂದ ಸಹಜವಾಗಿಯೇ ಸಮೂಹ ಅವರನ್ನು ಸ್ವೀಕರಿಸಿತು. ತಾಯಿಯನ್ನು ಆರಾಧಿಸುವ ವಾತ್ಸಲ್ಯಮಯಿ ಮಗ, ಜನಸಮುದಾಯ ಮೆಚ್ಚುವ ಸಾಹಸ, ತ್ಯಾಗ, ನಿಷ್ಠೆ,



ಸ್ತ್ರೀಸಮುದಾಯ ಇಷ್ಟಪಡುವ ಒಲವಿನ ಅಣ್ಣ, ಬಾಳಿನ ಸಂಗಾತಿ ಜೊತೆ ಕಾಲ-ದೇಶ ಬದ್ಧವಲ್ಲದ ಸಾರ್ವತ್ರಿಕ ಮೌಲ್ಯಗಳ ಪ್ರತಿರೂಪಗಳಲ್ಲಿ ಅವರು ಹಲವು ಚಿತ್ರಗಳಲ್ಲಿ ಅಭಿನಯಿಸಿರುವುದು ಅವರ ಜನಪ್ರಿಯತೆಯ ವಿಸ್ತರಣೆಗೆ ಆಧಾರವೆನಿಸಿತು. 'ಬಂಗಾರದ ಮನುಷ್ಯ' ಚಿತ್ರವನ್ನು ಕಂಡ ಅನೇಕ ಸೋದರಿಯರು ತಮ್ಮ ಸೋದರರಲ್ಲಿ 'ರಾಜೀವ್'ನನ್ನು ಹುಡುಕಿದ ಉದಾಹರಣೆಗಳಿವೆ. 'ನಮ್ಮ ಸಂಸಾರ' ಚಿತ್ರದಿಂದ ಪ್ರಭಾವಗೊಂಡ ಅಣ್ಣಂದಿರು ಸಂಸಾರಕ್ಕಾಗಿ ತ್ಯಾಗಮಾಡಿದ ದೃಷ್ಟಾಂತಗಳಿವೆ. 'ಕರುಳಿನ ಕರೆ' ಚಿತ್ರದಿಂದ ಕಾರ್ಮಿಕ ನಾಯಕನಾಗಲು ಹಂಬಲಿಸಿದ ಪ್ರಕರಣಗಳಿವೆ. 'ಜೀವನ ಚೈತ್ರ' ಚಿತ್ರದ ಪ್ರಭಾವದಿಂದ ಹೆಂಡದಂಗಡಿಗಳನ್ನು ಮುಚ್ಚಿಸಿದ ಘಟನೆಗಳು ವರದಿಯಾಗಿವೆ. ಇವೆಲ್ಲ ವ್ಯಕ್ತರೂಪಗಳು. ಅವ್ಯಕ್ತ ಭಾವಕೋಶದಲ್ಲಿ ರಾಜ್‌ರವರನ್ನು ಮುಂದಿಟ್ಟುಕೊಂಡು ಸಂತನಾಗಲು, ದುಷ್ಟಶಿಕ್ಷೆಗೆ ಶಿಷ್ಟರಕ್ಷಣೆಗೆ ಮುಂದಾಗಲು ಬಯಸುತ್ತಿದ್ದ ಕೋಟಿ ಕೋಟಿ ಹೃದಯಗಳಿವೆ. ಈ ಹಿನ್ನೆಲೆಯಲ್ಲಿ ರಾಜ್‌ಕುಮಾರ್ ಅವರು ಏಕೆ ಕನ್ನಡ ಸಮುದಾಯದ ಸಾಂಸ್ಕೃತಿಕ ನಾಯಕರಾದರು ಎಂಬುದು ಸ್ಪಷ್ಟವಾಗುತ್ತದೆ.

ರಾಜ್ ಅವರು ಕೇವಲ ನಾಯಕರಾದರು ಎಂದು ಹೇಳಿ ಅವರ ನಟನೆಯ ಸಾಮರ್ಥ್ಯದ ಬಗ್ಗೆ ಹೇಳದಿದ್ದರೆ ಆ ಹಿರಿಯ ಚೇತನಕ್ಕೆ ಖಂಡಿತಾ ಅಪಚಾರವಾಗುತ್ತದೆ. ಆರಂಭದಲ್ಲಿ ಯಾವುದೇ ಪಾತ್ರದಲ್ಲಿ ತಲ್ಲೀನರಾಗಿ ಮೈದಳೆಯುತ್ತಿದ್ದ ಡಾ॥ ರಾಜ್ ಕಾಲಾನಂತರದಲ್ಲಿ ಅಭಿನಯದ ಶೈಲಿಯೊಂದನ್ನು ರೂಪಿಸಿಕೊಂಡಿರುವುದು ಚಲನಚಿತ್ರರಂಗದ ಯಾವುದೇ ಗಂಭೀರ ವಿದ್ಯಾರ್ಥಿಗೆ ಸ್ಪಷ್ಟವಾಗಿ ಕಾಣುತ್ತದೆ. ಆದರೆ, ಈ ಅಭಿನಯದ ಶೈಲಿ ಅವರದೇ.

> **ಅವರು ಕನಕನ ಪಾತ್ರದಲ್ಲಿ ಥೇಟ್ ಕನಕನಂತೇ ಕಾಣುತ್ತಾರೆ, ಹಾಡುತ್ತಾರೆ. ಕೃಷ್ಣದೇವರಾಯನ ಪಾತ್ರದಲ್ಲಿ ಜನರ ಕಲ್ಪನಾಶಕ್ತಿಯ ಪ್ರತಿರೂಪದಂತೆ ರಾಯನಾಗಿ ಮೈದಳೆಯುತ್ತಾರೆ, ವಿಜೃಂಭಿಸುತ್ತಾರೆ. ಪುರಂದರ ದಾಸ, ಕಣ್ಣಪ್ಪ, ಗೋರ, ಪುಲಿಕೇಶಿ, ಕಂಠೀರವ, ಮಲ್ಲಸರ್ಜ ಹೀಗೆ ಕನ್ನಡನಾಡಿನ ಅನೇಕ ಮೌಲಿಕ ಪ್ರತಿಭೆಯನ್ನು ಜನ ಇವರಲ್ಲಿ ಗುರುತಿಸಿದ್ದಾರೆ. ಈಗಲೂ ಕನಕ ದಾಸ, ಪುರಂದರದಾಸ, ಕೃಷ್ಣದೇವರಾಯ, ಮಂತ್ರಾಲಯ ರಾಘವೇಂದ್ರರವರ ಚಿತ್ರಗಳನ್ನು ಬರೆಯುವ ಕಲಾವಿದರಿಗೂ ರಾಜ್‌ರವರ ಪ್ರಭಾವವನ್ನು ನಿವಾರಿಸಿಕೊಳ್ಳಲಾಗಿಲ್ಲ**

ಒಂದು ಒರಿಜಿನಲ್, ಅಪ್ಪಟ ಶೈಲಿ ಅವರದ್ದೇ. ಒಂದು ಒರಿಜಿನಲ್, ಅಪ್ಪಟ ಶೈಲಿ. ಏಕೆಂದರೆ, ದಕ್ಷಿಣ ಭಾರತದ ಸಿನಿಮಾಗಳಿಗೆಲ್ಲ ತಮಿಳು ಸಿನಿಮಾಗಳು ಮಾದರಿಯಾಗಿದ್ದ ಕಾಲದಲ್ಲಿ ತಮಿಳು ನಟನೆಯೇ ಮಾದರಿಯಾಗಿತ್ತು. ಪುಟಗಟ್ಟಲೇ ಸಂಭಾಷಣೆ, ಮುಖಸ್ನಾಯುಗಳ ವಿಲಕ್ಷಣ ಚಲನೆ, ಧ್ವನಿಯ ಅಪಾರ ಏರಿಳಿತ ಹಾಗೂ ಆಂಗಿಕ ಚೇಷ್ಟೆಯೇ ಅಭಿನಯವಾಗಿತ್ತು. ಅದನ್ನು ಇತರ ಭಾಷಾ ನಟರು ಅನುಕರಿಸುವ ಸ್ಪರ್ಧೆಗಿಳಿದಿದ್ದಾಗ ರಾಜ್ ಭಾವವೇಷವಿಲ್ಲದ, ಅನುಕರಣೆಯಿಂದ ವಿಮುಖರಾಗಿ ತಮ್ಮದೇ ಕನ್ನಡ ಶೈಲಿಯನ್ನು ರೂಪಿಸಿಕೊಂಡರು. ಡಾ॥ ನಾರಾಯಣ ಅವರು ಹೇಳುವಂತೆ, ಕನ್ನಡದ ಪ್ರಮಾಣೀಕೃತ ಉಚ್ಚಾರಣೆಗೆ ಒಂದು ಮಾದರಿ ಎಂಬಂತೆ ಅವರ ವಾಚಕಾಭಿನಯ ಬೆಳೆದುಬಂದಿದೆ.

ಈಗ ರಾಜ್ ನಿಧನರಾಗಿದ್ದಾರೆ. ಹಾಡಿ ಹೊಗಳುವವರ ಸಂಖ್ಯೆ ಕಡಿಮೆಯೇನೂ ಇಲ್ಲ. ಆದರೆ ಅವರನ್ನು ಹೊಗಳಬೇಕಾಗಿದ್ದ ಕಾಲದಲ್ಲಿ ಸಮೂಹ ಮಾಧ್ಯಮಗಳು ಟೀಕಾಸ್ತ್ರಗಳನ್ನು ನಿರಂತರವಾಗಿ ಪ್ರಯೋಗಿಸಿದವು. ನೂರೈವತ್ತನೇ ಚಿತ್ರದ ಸಮಾರಂಭದಲ್ಲಿ ಮೊದಲಬಾರಿಗೆ ಡಾ॥ ರಾಜ್ ಕೆರಳಿ ಪತ್ರಕರ್ತರನ್ನು ತರಾಟೆಗೆ ತೆಗೆದುಕೊಂಡಾಗ 'ರಸಿಕರ ರಾಜನ ಗುಡುಗು' ಎಂದು ಗೇಲಿ ಮಾಡಿದವು. ಆದರೆ ಯಾವ ಹಿನ್ನೆಲೆಯನ್ನೂ ನೋಡದೆ ರಾಜ್ ಎಂಬ ಕಲಾವಿದನನ್ನು ಜನಸಮೂಹ ಮಾಧ್ಯಮದ ಅಭಿಪ್ರಾಯಗಳಿಗೆ ವಿರುದ್ಧವಾಗಿ ಬೆಂಬಲಿಸಿತು. ಮಾಧ್ಯಮಗಳು ತೆಪ್ಪಗಾದವು. ರಾಜ್‌ರವರ ಏಕತಾನತೆಯ ಅಭಿನಯವನ್ನು ಅಟ್ಟಕ್ಕೇರಿಸಿದವು. ಕೆಲವು ಬುದ್ಧಿ ಜೀವಿಗಳಂತೂ ಡಾ॥ ರಾಜ್ ಬುದ್ಧನ ಪಾತ್ರ ಮಾಡಿದರೆ 'ಆಸ್ಕರ್' ಗ್ಯಾರಂಟಿ ಎಂದೂ ಅಪ್ಪಣೆ ಕೊಡಿಸಿಬಿಟ್ಟರು. (ಮೋಷನ್ ಪಿಕ್ಚರ್ಸ್ ಅಸೋಸಿಯೇಷನ್ ಆಫ್ ಅಮೆರಿಕಾ ಸಂಸ್ಥೆಯ ಸದಸ್ಯತ್ವವಿಲ್ಲದ ಇಂಗ್ಲಿಷೇತರ ಭಾಷೆಯ ಚಿತ್ರಗಳಿಗೆ 'ವಿದೇಶಿ ವಿಭಾಗ' ಬಿಟ್ಟರೆ ಯಾವುದೇ ತಾಂತ್ರಿಕತೆ, ನಿರ್ದೇಶನ, ನಟನೆಯ ಆಸ್ಕರ್‌ಗಳನ್ನು ಕೊಡುವುದಿಲ್ಲ ಎಂಬ ಅಲ್ಪ ಮಾಹಿತಿಯೂ ಅವರಿಗಿದ್ದಂತಿರಲಿಲ್ಲ). ರಾಜ್ ಅವರ ಚಿತ್ರಗಳನ್ನು, ಅವರಿಗೆ ಸಂಬಂಧಿಸಿದ ಸುದ್ದಿಗಳನ್ನು ನಿರಂತರವಾಗಿ ಬೆನ್ನುಹತ್ತಿ ಬಂದ ನಾನು ಮಾಧ್ಯಮಗಳು ಬಗೆದ ದ್ರೋಹದ ಬಗ್ಗೆ ಬರೆಯಲು ಇದು ಸಂದರ್ಭವಲ್ಲವೆಂದು ಭಾವಿಸಿದ್ದೇನೆ. ಇದಲ್ಲದೆ ಕರ್ನಾಟಕ ಏಕೀಕರಣದ ನಂತರ ಕನ್ನಡ ಭಾಷೆಯ ಅಭಿಮಾನ ಮತ್ತು ಕನ್ನಡ ಚೇತನವನ್ನು ತಮ್ಮ ಚಿತ್ರಗಳ ಮೂಲಕ ನಿರಂತರವಾಗಿ ಕಾಪಿಟ್ಟುಕೊಂಡು ಬಂದದ್ದೂ ಅವರ ವ್ಯಕ್ತಿತ್ವವನ್ನು ಮೆಚ್ಚಲು ಮತ್ತೊಂದು ಕಾರಣ.

ಡಾ॥ ರಾಜ್, ಕನ್ನಡ ಸಂಸ್ಕೃತಿಯ ಅಂತರಂಗವನ್ನು ಕದ ತೆರೆದು ಆಹ್ವಾನಿಸಿ, ಹಾಡಿದ ರಸಿಕರ ರಾಜ, ನಮ್ಮೆಲ್ಲರ ಬದುಕನ್ನು ಚೇತೋಹಾರಿಯಾಗಿಟ್ಟವರು. ಅಲ್ಲದೆ ತಮ್ಮ ಸರಳತೆ ಮತ್ತು ಅಪರೂಪದ ಸಜ್ಜನಿಕೆಯಿಂದ ಸಂಸ್ಕೃತಿಯ ಇನ್ನೊಂದು ಮಗ್ಗುಲನ್ನು ಪರಿಚಯಿಸಿದ ಮಾನವೀಯ ಜೀವ. ಅಪೂರ್ವವಾದ ನಟನೆ, ಅಪರೂಪದ ವ್ಯಕ್ತಿತ್ವದಿಂದ ಕನ್ನಡ ಜನಮಾನಸವನ್ನು ಎಚ್ಚರಿಸಿದ ಡಾ॥ ರಾಜ್ ಹಠಾತ್ತನೆ ನಮ್ಮೆಲ್ಲರನ್ನು ಅಗಲಿದ್ದಾರೆ. ಅವರ ಕುಟುಂಬದಲ್ಲಿ ರಾಜ್‌ರವರ ಅಭೀಪ್ಸೆಗಳು ಮುಂದುವರಿಯಲಿ. ಕನ್ನಡಿಗರಲ್ಲಿ ಅವರ ಸಜ್ಜನಿಕೆ ಎದ್ದು ಕಾಣಲಿ. □

ಅಸ್ಪೃಶ್ಯತೆಯ ಸೂಕ್ಷ್ಮ ನೆಲೆಗಳು

ಜಿಜ್ಞಾಸೆ

ವಚನ ಸಂಸ್ಕೃತಿಯಲ್ಲಿ ಅಸ್ಪೃಶ್ಯತೆ ಕುರಿತಂತೆ ವಿಸ್ತೃತವಾದ ಚಿಂತನೆ ನಡೆದಿದೆ. ಅತ್ಯಂತ ಸೂಕ್ಷ್ಮವಾಗಿ ಮತ್ತು ವಿಸ್ತೃತವಾಗಿ ಅಸ್ಪೃಶ್ಯತೆ ಕುರಿತಂತೆ ವಚನ ಸಂಸ್ಕೃತಿ ಬಿಟ್ಟರೆ ಭಾರತದ ಸಂದರ್ಭದಲ್ಲಿ ಚಿಂತನೆ ನಡೆಸಿದ ಮತ್ತೊಂದು ನಿದರ್ಶನ ನಮಗೆ ದೊರೆಯುವುದಿಲ್ಲ. ವಚನ ಸಂಸ್ಕೃತಿಯ ಮಹತ್ವವಿರುವುದೇ ಅದರ ಪರಿಶಿಷ್ಟವಾದಿತ್ವದಲ್ಲಿ ಎಂಬುದು ಸ್ಪಷ್ಟವಾಗಿದೆ. ಅಸ್ಪೃಶ್ಯತೆ ಕುರಿತಂತೆ ವಚನಕಾರರು ಯಾಕೆ ಚಿಂತನೆ ನಡೆಸಿದರು? ಅಂತಹ ಪ್ರಮೇಯ ಅವರಿಗೇನಿತ್ತು? ಅಸ್ಪೃಶ್ಯತೆ ಕುರಿತಂತೆ ವಚನ ಸಂಸ್ಕೃತಿಯಲ್ಲಿದ್ದ ಭಿನ್ನ ಸ್ವರಗಳಾವುವು? ಈ ಪ್ರಶ್ನೆಗಳನ್ನು ಕುರಿತಂತೆ ಚರ್ಚೆ ಮಾಡುವ ಅಗತ್ಯವಿದೆ.

ಡಾ|| ಟಿ.ಆರ್. ಚಂದ್ರಶೇಖರ

ನಮ್ಮ ಸಮಾಜದ ಸಂದರ್ಭದಲ್ಲಿ ಅಸ್ಪೃಶ್ಯತೆಯೆಂಬುದು ಮುಟ್ಟಿಸಿಕೊಳ್ಳುವ-ಮುಟ್ಟಿಸಿಕೊಳ್ಳದ ಸಂಗತಿಗಳಿಗೆ ಮಾತ್ರ ಮೀಸಲಾದುದಲ್ಲ. ಸ್ಥೂಲ ವಾಗಿ ಅದು ಸ್ಪೃಶ್ಯ-ಅಸ್ಪೃಶ್ಯತೆಗೆ ಸಂಬಂಧಿಸಿದ ಸಂಗತಿಯೆಂಬುದು ನಿಜ. ಅಷ್ಟೇ ನಿಜವಾದ ಸಂಗತಿಯೆಂದರೆ ಅದು ಸಮಾಜದ ಇತರೆ ಸಂಗತಿಗಳ ಜೊತೆಗೆ ಸಂಬಂಧ ಹೊಂದಿದೆ. ಅದೊಂದು ಸಾಂಸ್ಕೃತಿಕ ವಿಚಾರ ಪ್ರಣಾಳಿಕೆಯಾಗಿದೆ. ಅದು ಕೇವಲ ಮಡಿ-ಮೈಲಿಗೆಗಳಿಗೆ ಸಂಬಂಧಿಸಿದ ಸಂಗತಿಯಲ್ಲ ಅದು ಸ್ಥೂಲವಾಗಿ ಜನವರ್ಗವನ್ನು ಒಳಗಿನವರು ಮತ್ತು ಹೊರಗಿನವರು ಎಂದು ವರ್ಗೀಕರಿಸುತ್ತದೆ. ಅಸ್ಪೃಶ್ಯರು ಎಲ್ಲ ಬಗೆಯ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಸರಿಯಾಗಿ ಹೇಳಬೇಕೆಂದರೆ ಅವರು ಎಲ್ಲ ಬಗೆಯ ಹಕ್ಕುಗಳಿಗೆ ಅನರ್ಹರಾಗಿದ್ದಾರೆ, ಅಥವಾ ಹಕ್ಕುಗಳಿಗೆ ಅವರು ಅನರ್ಹರೆಂದು ಪರಿಗಣಿಸಲಾಗಿದೆ. ಅಸ್ಪೃಶ್ಯತೆಯೆಂಬುದು ವಂಚಿತತೆಯ ಸಂಗತಿಯಲ್ಲ. ಅದು ಅನರ್ಹತೆಯ ಸಮಸ್ಯೆ.

ವಚನ ಸಂಸ್ಕೃತಿಯಲ್ಲಿ ಅಸ್ಪೃಶ್ಯತೆ ಕುರಿತಂತೆ ವಿಸ್ತೃತವಾದ ಚಿಂತನೆ ನಡೆದಿದೆ. ಅತ್ಯಂತ ಸೂಕ್ಷ್ಮವಾಗಿ ಮತ್ತು ವಿಸ್ತೃತವಾಗಿ ಅಸ್ಪೃಶ್ಯತೆ ಕುರಿತಂತೆ ವಚನ ಸಂಸ್ಕೃತಿ ಬಿಟ್ಟರೆ ಭಾರತದ ಸಂದರ್ಭದಲ್ಲಿ ಚಿಂತನೆ ನಡೆಸಿದ ಮತ್ತೊಂದು ನಿದರ್ಶನ ನಮಗೆ ದೊರೆಯುವುದಿಲ್ಲ. ವಚನ ಸಂಸ್ಕೃತಿಯ ಮಹತ್ವವಿರುವುದೇ ಅದರ ಪರಿಶಿಷ್ಟವಾದಿತ್ವದಲ್ಲಿ ಎಂಬುದು ಸ್ಪಷ್ಟವಾಗಿದೆ. ಅಸ್ಪೃಶ್ಯತೆ ಕುರಿತಂತೆ ವಚನಕಾರರು ಯಾಕೆ ಚಿಂತನೆ ನಡೆಸಿದರು? ಅಂತಹ ಪ್ರಮೇಯ ಅವರಿಗೇನಿತ್ತು? ಅಸ್ಪೃಶ್ಯತೆ ಕುರಿತಂತೆ ವಚನ ಸಂಸ್ಕೃತಿಯಲ್ಲಿದ್ದ ಭಿನ್ನ ಸ್ವರಗಳಾವುವು? ಈ ಪ್ರಶ್ನೆಗಳನ್ನು ಕುರಿತಂತೆ ಚರ್ಚೆ ಮಾಡುವ ಅಗತ್ಯವಿದೆ. ಅಸ್ಪೃಶ್ಯತೆ ಕುರಿತಂತೆ ವಚನಕಾರರಿಗೆ ತಿರಸ್ಕಾರವಿಲ್ಲದಿದ್ದರೆ ಅವರು ಅದನ್ನು ತಮ್ಮ ಚಿಂತನೆಯ ಮುಖ್ಯ ನೆಲೆಯನ್ನಾಗಿ ಮಾಡಿಕೊಳ್ಳುತ್ತಿರಲಿಲ್ಲ. ಅದರ ಬಗ್ಗೆ ಅವರಿಗೆ ತೀವ್ರ ಕಸಿವಿಸಿಯಿತ್ತು. ಅದರ ಕರಾಳ ಮುಖಗಳ ಅರಿವಿತ್ತು. ಆದ್ದರಿಂದಲೇ ಅದರ ವಿವಿಧ ಮುಖಗಳನ್ನು ಗುರುತಿಸುವುದು ಅವರಿಗೆ ಸಾಧ್ಯವಾಯಿತು.

ವಚನ ಸಂಸ್ಕೃತಿಯಲ್ಲಿ ಅಸ್ಪೃಶ್ಯತೆ ಕುರಿತಂತೆ ನಡೆದ ಚರ್ಚೆಯ ಬಗ್ಗೆ ಒಂದು ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ವಚನ ಸಂಸ್ಕೃತಿಯು ಅಸ್ಪೃಶ್ಯತೆಯ ನಿವಾರಣೆಯಲ್ಲಿ ಯಶಸ್ವಿಯಾಯಿತೆ? ಇದು ಮುಖ್ಯವಾದ ಪ್ರಶ್ನೆ. ಇದಕ್ಕೆ ಉತ್ತರ ಇಲ್ಲವೆಂಬುದು ಸ್ಪಷ್ಟ. ಆದರ ಯಶಸ್ಸು-ವೈಫಲ್ಯಗಳನ್ನು ಹೀಗೆ ಸೀಮಿತ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ಸರಿಯಲ್ಲ. ಅಸ್ಪೃಶ್ಯತೆ ಯನ್ನು ತೊಡೆದು ಹಾಕುವುದು ಅವರಿಗ ಸಾಧ್ಯವಾಗಲಿಲ್ಲವೆಂಬುದು, ನಿಜ. ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಬೇರೆಯಾಗಬೇಕಾಗಿದೆ. ವಚನಕಾರರು ಅಸ್ಪೃಶ್ಯತೆ ಬಗ್ಗೆ ಪ್ರಜ್ಞಾಪೂರ್ವಕ ಚಿಂತನೆ ನಡೆಸಿದ್ದು, ಅದರ ಬಗ್ಗೆ ಪ್ರಶ್ನೆ ಎತ್ತಿದ್ದು ಮತ್ತು ಅದರ ಔಚಿತ್ಯದ ಬಗ್ಗೆ ಚರ್ಚೆ ಮಾಡಿದ್ದು ತುಂಬಾ ಮುಖ್ಯವಾದ ಸಂಗತಿಯಾಗಿದೆ. ಇದು ವಚನ ಸಂಸ್ಕೃತಿಯ ಯಶಸ್ಸು. ಈ ವಿಷಯ ಕುರಿತಂತೆ ಇದು ಅವರ ಕೊಡುಗೆ ಯಾಗಿದೆ. ವಚನ ಸಂಸ್ಕೃತಿಯು ಅಸ್ಪೃಶ್ಯತೆಯನ್ನು ಅಲಾಯಿದವಾಗಿ ಪರಿಗಣಿಸದೆ ಒಂದು ಚಿಂತನಾ ಮಾದರಿಯ ಭಾಗವಾಗಿ ಪರಿಗಣಿಸಿದ್ದಾರೆ. ಜ್ಞಾನದ ವಾರಸುದಾರಿಕೆ ಕುರಿತ ಸಂಗತಿಯ ಹಿನ್ನೆಲೆಯಲ್ಲಿ ಅವರು ಅಸ್ಪೃಶ್ಯತೆಯನ್ನು ಚರ್ಚಿಸಿದ್ದಾರೆ. ಯಾರು ಒಳಗಿನವರು, ಯಾರು ಹೊರಗಿನವರು ಎಂಬ ವರ್ಗೀಕರಣವನ್ನು ಅವರು ಪ್ರಶ್ನೆ ಮಾಡಿದ್ದಾರೆ. ಅವರು ಎತ್ತಿರುವ 'ಒಳ ಹೊರ'ಗೆಂಬ ಸಂಗತಿಗಳು ಕೇವಲ ವ್ಯಕ್ತಿಗತವಾಗಿರಲಿಲ್ಲ. ಅವು ಸಾಮಾಜಿಕ ಸಂಗತಿಗಳಾಗಿದ್ದವು. ಅವರು ಎತ್ತಿರುವ Insider ಮತ್ತು Outsider ನುಡಿಗಳು ತುಂಬಾ ಮುಖ್ಯವಾಗಿವೆ. ವಚನಕಾರರು ಮತ್ತೆ ಮತ್ತೆ ಇಂತಹ ಪರಿಭಾಷೆ ಬಳಸಿದ್ದಾರೆ. ಭಾರತೀಯ ಚಿಂತನಾ ಪರಂಪರೆಯ ಅವಿಭಾಜ್ಯ ಅಂಗವಾಗಿ ವಚನಕಾರರು ಅಸ್ಪೃಶ್ಯತೆಯನ್ನು ಪರಿಭಾವಿಸಿಕೊಂಡಿದ್ದಾರೆ. ಅದು ಕೇವಲ ಅಬಿರೇಶನ್ ಆಗಿರಲಿಲ್ಲ. ಅದು ಭಾರತೀಯ ಚಿಂತನ ಪರಂಪರೆಯ ಅಜೆಂಡಾ ಆಗಿತ್ತು. ಇಲ್ಲಿ 'ಒಳ ಹೊರ'ಗೆಂಬ ಸಂಗತಿಗಳನ್ನು ವಚನಕಾರರು ಒಂದು ಸಂಸ್ಕೃತಿಯ ವ್ಯಾಪ್ತಿಯೊಳಗೆ ಚರ್ಚೆ ಮಾಡುತ್ತಿದ್ದಾರೆ. ಒಂದು ಸಂಸ್ಕೃತಿಯ ವ್ಯಾಪ್ತಿಯನ್ನು ಮೀರಿದ ನೆಲೆಯಲ್ಲಿ ಒಳಹೊರಗೆಂಬ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗುತ್ತಿಲ್ಲ.

ತಿರುಳು	ಪರಟೆ
ಅಂತರಂಗ	ಬಹಿರಂಗ
ವೃತ್ತಿ (ಗುಣ)	ತನು (ದೇಹ)
ಒಳಗಣ	ಹೊರಗಣ
ಶವಕುಲ	ಚಾಂಡಾಲ

ಈ ಹಿನ್ನೆಲೆಯಲ್ಲಿ ಕೆಲವು ವಚನಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಈ ವಚನಗಳು ಅಸ್ಪೃಶ್ಯತೆ ಬಗ್ಗೆ ತುಂಬಾ ಸೂಕ್ಷ್ಮವಾದ ಒಳನೋಟ ನೀಡುತ್ತವೆ. ವಚನಕಾರರು ತಮಗೆ ಗೊತ್ತಿದ್ದೊ ಅಥವಾ ಗೊತ್ತಿಲ್ಲದೆಯೋ ಸಾಮಾಜಿಕವಾಗಿ ತುಂಬಾ ಮಹತ್ವವಾದ ಸಂಗತಿಗಳನ್ನು ಚರ್ಚೆಯ ಮುಂಚೂಣಿಗೆ ತಂದಿದ್ದಾರೆ.

ಇಲ್ಲಿ ಚರ್ಚೆಗೆ ಅನುಸಂಧಾನಕ್ಕೆ ಆಯ್ಕೆ ಮಾಡಿಕೊಂಡಿರುವ ವಚನಗಳು ಹೆಚ್ಚು ಚರ್ಚೆಗೆ ಒಳಗಾಗಿಲ್ಲ. ಒಂದು ವಿಧದಲ್ಲಿ ಇವು 'ಮೂಲೆ ಗುಂಪಾಗಿರುವ' ವಚನಗಳಾಗಿವೆ. ಈ ವಚನಗಳು ಅನೇಕ 'ಅಹಿತ' ಅಥವಾ 'ಮುಜುಗರ'ದ ಸಂಗತಿಗಳನ್ನು ನಮ್ಮ ಮುಂದಿಡುತ್ತವೆ. ಇದನ್ನು ಎದುರಿಸುವುದು ಅನೇಕರಿಗೆ ಸಾಧ್ಯವಾಗುವುದಿಲ್ಲ. ಈ ಬಗೆಯ 'ಅಹಿತ' ಅಥವಾ 'ಮುಜುಗರ'ವನ್ನು ಎದಿರಿಸುವುದು ಬೇಡವೆಂದು ಇಂತಹ ವಚನಗಳನ್ನು ಮೂಲೆ ಗುಂಪು ಮಾಡಲಾಗಿದೆ.

ಚನ್ನ ಬಸವಣ್ಣನ ಪ್ರಸಿದ್ಧ ವಚನವೊಂದು ಹೀಗಿದೆ.

ತೆಂಗಿನೊಳಗಣ ತಿರುಳು ಸೇವಿಸಬರ್ಪುದಲ್ಲದೆ
ಹೊರಗಣ ಪರಟೆ ಸೇವಿಸಲು ಬಾರದು.
ಚಾಂಡಾಲಂಗೆ ಜ್ಞಾನವಂಕುರಿಸಲು
ಆತನ ಅಂತರಂಗದ ವೃತ್ತಿಗೆ ಪೂಜ್ಯತೆಯಲ್ಲದೆ
ಬಹಿರಂಗದ ತನುವಿಗೆ ಪೂಜ್ಯತೆಯಾಗದು.
ಒಳಹೊರಗೆಂಬ ಬೇಧವಿಲ್ಲದೆ ಸೇವಿಸಲುಚಿತವಪ್ಪಂತೆ
ಶಿವಕುಲ ಪ್ರಸೂತಂಗೆ ಶಿವಜ್ಞಾನವಾಗಲು
ಆತನ ತನು ವೃತ್ತಿಗಳೆರಡೂ ಸೇವಿಸಲಾಗಿರ್ಪವು
ಕೂಡಲ ಚನ್ನಸಂಗಮದೇವಾ (೩:೧೩೧೩).

ಈ ವಚನದಲ್ಲಿ ಎರಡು ಪರಸ್ಪರ ವಿರೋಧವಾದ ಸಂಗತಿಗಳನ್ನು ಮುಖಾಮುಖಿಯಾಗಿಸಲಾಗಿದೆ.

ಈ ವರ್ಗೀಕರಣವು ಸಾಮಾಜಿಕವಾಗಿ ಅರ್ಥಗರ್ಭಿತವಾಗಿದೆ. ಪರಟೆ, ಬಹಿರಂಗ, ದೇಹ ಮತ್ತು ಹೊರಗಣ–ಇವು ಚಾಂಡಾಲನನ್ನು ಪ್ರತಿನಿಧಿಸಿದರೆ ತಿರುಳು, ಅಂತರಂಗ, ಗುಣ ಮತ್ತು ಒಳಗಣ–ಇವು ಕುಲಜನರನ್ನು ಪ್ರತಿನಿಧಿಸುತ್ತವೆ. ಇಲ್ಲಿ ಕುಲಜರು ಮಾತ್ರ ಜ್ಞಾನಕ್ಕೆ ವಾರಸುದಾರರು. ಏಕೆಂದರೆ ಅವರಲ್ಲಿ 'ಒಳಹೊರ'ಗೆಂಬ ಬೇಧವಿಲ್ಲ. ಒಂದು ವೇಳೆ ಚಾಂಡಾಲಂಗೆ (ಅಸ್ಪೃಶ್ಯರಿಗೆ) ಜ್ಞಾನ ಅಂಕುರಿಸಿದರೆ ಅಲ್ಲಿ ಅವನ ಜ್ಞಾನಕ್ಕೆ ಗೌರವ ನೀಡಲಾಗುತ್ತದೆ ವಿನಾಃ ದೇಹಕ್ಕಲ್ಲ. ಒಳಹೊರಗೆಂಬ ಬೇಧವಿಲ್ಲದವರು ಕುಲಜರು. ಅವರ ಜ್ಞಾನಕ್ಕೆ ಗೌರವವಿದೆ. ಅವರ ದೇಹಕ್ಕೂ ಮನ್ನಣೆಯಿದೆ. ಚನ್ನಬಸವಣ್ಣನು ಅಂದು ಆಚರಣೆಯಲ್ಲಿದ್ದ ವರ್ಣ ಸಮಾಜದ ಬಗ್ಗೆ ಒಂದು ಚಿತ್ರಣವನ್ನು ನೀಡುತ್ತಿದ್ದಾನೆ. ಇಲ್ಲಿ ಅವನು ತಿರುಳಿನ ಪರವಾಗಿದ್ದಾನೋ ಅಥವಾ ಪರಟೆಯ ಪರವಾಗಿದ್ದನೋ ಎಂಬುದು ಬೇರೆ ಪ್ರಶ್ನೆ. ಆದರೆ ಈ ವಚನವು ಸಮಾಜದ ಆಕೃತಿಯೊಂದನ್ನು ಕಟ್ಟಿ ಕೊಡುತ್ತಿದೆ.

'ಒಳಹೊರ'ಗೆಂಬ ಬೇಧವನ್ನು ಕುರಿತಂತೆ ಬೊಂತಾದೇವಿಯ ವಚನವೊಂದು ಬೇರೆ ಬಗೆಯ ಬೆಳಕು ಚೆಲ್ಲುತ್ತದೆ.

ಊರ ಒಳಗಣ ಬಯಲು ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ ಬಯಲೆಂದುಂಟೆ?
ಎಲ್ಲಿ ನೋಡಿದರೆ ಬಯಲೊಂದೆ.
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ.
(೫:೮೪೮).

ಕುಲಜರು ಮಾತ್ರ ಜ್ಞಾನಕ್ಕೆ ವಾರಸುದಾರರು. ಏಕೆಂದರೆ ಅವರಲ್ಲಿ 'ಒಳಹೊರ'ಗೆಂಬ ಬೇಧವಿಲ್ಲ. ಒಂದು ವೇಳೆ ಚಾಂಡಾಲಂಗೆ (ಅಸ್ಪೃಶ್ಯರಿಗೆ) ಜ್ಞಾನ ಅಂಕುರಿಸಿದರೆ ಅಲ್ಲಿ ಅವನ ಜ್ಞಾನಕ್ಕೆ ಗೌರವ ನೀಡಲಾಗುತ್ತದೆ ವಿನಾಃ ದೇಹಕ್ಕಲ್ಲ. ಒಳಹೊರಗೆಂಬ ಬೇಧವಿಲ್ಲದವರು ಕುಲಜರು. ಅವರ ಜ್ಞಾನಕ್ಕೆ ಗೌರವವಿದೆ. ಅವರ ದೇಹಕ್ಕೂ ಮನ್ನಣೆಯಿದೆ. ಚನ್ನಬಸವಣ್ಣನು ಅಂದು ಆಚರಣೆಯಲ್ಲಿದ್ದ ವರ್ಣ ಸಮಾಜದ ಬಗ್ಗೆ ಒಂದು ಚಿತ್ರಣವನ್ನು ನೀಡುತ್ತಿದ್ದಾನೆ. ಇಲ್ಲಿ ಅವನು ತಿರುಳಿನ ಪರವಾಗಿದ್ದಾನೋ ಅಥವಾ ಪರಟೆಯ ಪರವಾಗಿದ್ದನೋ ಎಂಬುದು ಬೇರೆ ಪ್ರಶ್ನೆ. ಆದರೆ ಈ ವಚನವು ಸಮಾಜದ ಆಕೃತಿಯೊಂದನ್ನು ಕಟ್ಟಿ ಕೊಡುತ್ತಿದೆ.

ಈ ವಚನವು ಚನ್ನಬಸವಣ್ಣನ ವಚನದಂತೆ 'ಒಳಹೊರ'ಗೆಂಬ ಸಂಗತಿಯ ಬಗ್ಗೆ ಮಾತನಾಡುತ್ತಿದೆ. ಇದು ಮಡಿ–ಮೈಲಿಗೆ ಬಗ್ಗೆ ಮಾತನಾಡುತ್ತಿದೆ./ ಅದು 'ಸ್ಪರ್ಶತೆ–'ಅಸ್ಪೃಶ್ಯತೆ' ಬಗ್ಗೆಯೂ ಮಾತನಾಡುತ್ತಿದೆ. ಬೊಂತಾದೇವಿಯ ಪ್ರಕಾರ ಬಯಲು ಅನ್ನೊದು ಎರಡಿರಲು ಸಾಧ್ಯವಿಲ್ಲ. ಬಯಲು ಎಂಬುದು ಒಂದೆ! 'ಒಳಹೊರ'ಗೆಂಬ ತಾರತಮ್ಯವು ಸಾಮಾಜಿಕವಾಗಿ ಕಟ್ಟಿಕೊಂಡ ಸಂಗತಿಗಳು ಎಂಬುದನ್ನು ಆಕೆ ಸ್ಪಷ್ಟವಾಗಿ ಹೇಳುತ್ತಿದ್ದಾಳೆ. ಇಲ್ಲಿರುವುದು ಕೂಡ ವರ್ಣ ಸಮಾಜವೇ ಆಗಿದೆ. ಅದನ್ನು ಮೀರುವ ಬಗ್ಗೆ ವಚನವು ಚಿಂತನೆ ನಡೆಸಿದೆ. ಈ 'ಒಳಹೊರ'ಗೆಂಬ ಸಂಗತಿಗಳು ದೈವ ನಿಯಮಿತವಾದ ಅಥವಾ ಜೈವಿಕವಾದ ಸಂಗತಿಗಳಲ್ಲವೆಂಬುದು ಇಲ್ಲಿನ ವಚನದ ಮುಖ್ಯ ಸಂದೇಶವಾಗಿದೆ.

ಅಸ್ಪೃಶ್ಯತೆಯನ್ನು ಕುರಿತಂತೆ ತನ್ನ ವ್ಯಾಕುಲವನ್ನು ಹೇಳುತ್ತಿರುವ ಡೋಹರ ಕಕ್ಕಯ್ಯನ ವಚನವೊಂದು ತುಂಬಾ ಧ್ವನಿಪೂರ್ಣವಾಗಿದೆ. ಅವನ ವಚನದ ಪಾಠ ಹೀಗಿದೆ–

ಎನ್ನ ಕಷ್ಟಕುಲದಲ್ಲಿ ಹುಟ್ಟಿಸಿದೆಯಯ್ಯಾ
ಎಲೆ ಲಿಂಗಿ ತಂದೆ,
ಕೆಟ್ಟೆನಯ್ಯಾ ನಿಮ್ಮ ಮುಟ್ಟಿಯೂ ಮುಟ್ಟದಿಹನೆಂದು
ಎನ್ನ ಕೈ ಮುಟ್ಟದಿರ್ದಡೆ ಮನ ಮುಟ್ಟಲಾಗದೆ?
ಅಭಿನವ ಮಲ್ಲಿಕಾರ್ಜುನ. (೭–೯೧)

ಮುಟ್ಟುವ–ಮುಟ್ಟದಿರುವ ಬಗ್ಗೆ ವಚನವು ಮಾತನಾಡುತ್ತಿದೆ. ಚನ್ನಬಸವಣ್ಣನ ವಚನದಲ್ಲಿ ಬಂದಿರುವ 'ಶಿವಕುಲ' ಎಂಬುದರ ಮುಂದೆ 'ಕಷ್ಟಕುಲ'ಎಂಬುದನ್ನು ಇಟ್ಟು ನೋಡಬಹುದು. 'ಒಳಹೊರ'ಗೆಂಬ ಪರಿಭಾವನೆಗಳಿಗೆ ಸಂವಾದಿಯಾಗಿ ಶಿವಕುಲ–ಕಷ್ಟಕುಲವನ್ನು ಬಳಸಬಹುದು. ಮಲ್ಲಿಕಾರ್ಜುನನನ್ನು ಕಕ್ಕಯ್ಯ ಮುಟ್ಟಿದರೂ ಅವನನ್ನು ಮುಟ್ಟದಿರುವನೆಂದು ಪರಿಗಣಿಸಲಾಗುತ್ತಿದೆ. ಇದು ಸ್ಪಷ್ಟವಾಗಿ ಅಸ್ಪೃಶ್ಯತೆಯನ್ನು ಕುರಿತಂತೆ ಹೇಳುತ್ತಿರುವ ವಚನವಾಗಿದೆ. ಕೈ ಮುಟ್ಟದಿದ್ದರೆ, ಅಂದರೆ ದೈಹಿಕವಾಗಿ ಸ್ಪರ್ಶತೆ ಸಾಧ್ಯವಾಗದಿರಬಹುದು. ಕಕ್ಕಯ್ಯನ ಸಮಾಧಾನವೆಂದರೆ ಮಾನಸಿಕವಾಗಿ ಮಲ್ಲಿಕಾರ್ಜುನನನ್ನು ಮುಟ್ಟಬಹುದಾಗಿದೆ. ವಚನ ಸಂಸ್ಕೃತಿ ಅದನ್ನು ಸಾಧ್ಯ ಮಾಡಿಕೊಟ್ಟಿದೆ.

ವಚನ ಸಂಸ್ಕೃತಿಯನ್ನು ಕುರಿತಂತೆ ಸಾಮಾಜಿಕವಾದ ಅನುಸಂಧಾನ ನಡೆಸುವುದರಿಂದ ಸೂಕ್ಷ್ಮವಾದ ಒಳನೋಟಗಳನ್ನು ಪಡೆದುಕೊಳ್ಳುವುದು ಸಾಧ್ಯ. ಅಂತಹ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಸ್ಪೃಶ್ಯತೆ ಕುರಿತಂತೆ ವಚನ ಸಂಸ್ಕೃತಿಯಲ್ಲಿ ನಡೆದ ಅನುಸಂಧಾನದ ನೆಲೆಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ಟಿಪ್ಪಣಿ

ಈ ಲೇಖನದಲ್ಲಿ ಬಳಸಿರುವ ಪ್ರತಿ ವಚನದ ಕೊನೆಯಲ್ಲಿ ಅದರ ಆಕರವನ್ನು ನೀಡಲಾಗಿದೆ. ಅಲ್ಲಿ ನೀಡಿರುವ ಎರಡು ಅಂಕಿಗಳಲ್ಲಿ ಮೊದಲನೆಯದು ಸಮಗ್ರ ವಚನ ಸಾಹಿತ್ಯ ಸಂಪುಟದ ಸಂಖ್ಯೆಯನ್ನು ಪ್ರತಿನಿಧಿಸಿದರೆ ಎರಡನೆಯ ಅಂಕಿಯು ಸಂಬಂಧಿಸಿದ ಸಂಪುಟದೊಳಗಿನ ವಚನದ ಸಂಖ್ಯೆಯನ್ನು ಸೂಚಿಸುತ್ತದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಭಗತ್ ಸಿಂಗ್:

ಮರೆಯಾದ ಕ್ರಾಂತಿಕಾರಿ

ನೆನಪು

ಭಾರತೀಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಜನತೆಯ ಮನಗಳಲ್ಲಿ ಉಳಿಯುವ ಓರ್ವ ಸ್ವಾತಂತ್ರ ಹೋರಾಟಗಾರ, ಕ್ರಾಂತಿಕಾರೀ ಯುವಕ, ಭಗತ್ ಸಿಂಗ್. ಭಗತ್ ಸಿಂಗ್ ಹುತಾತ್ಮನಾದ ಈ ಸಂದರ್ಭವನ್ನು ಸುವರ್ಣ ಮಹೋತ್ಸವವೆಂದು ಸಂಭ್ರಮದಿಂದ ಆಚರಿಸಲಾಗುವುದಿಲ್ಲವಾದರೂ, ಬ್ರಿಟೀಷರ ದೃಷ್ಟಿಯಲ್ಲಿ ಭಯೋತ್ಪಾದಕನಾಗಿದ್ದ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ದೃಷ್ಟಿಯಲ್ಲಿ ಉಗ್ರಗಾಮಿಯಾಗಿದ್ದ, ಅಪ್ರತಿಮ ಕ್ರಾಂತಿಕಾರಿ ಯುವಕ ಭಗತ್ ಸಿಂಗ್‌ನನ್ನು ನೆನೆಯುವುದು ಪ್ರಜ್ಞಾವಂತ ಭಾರತೀಯರ ಕರ್ತವ್ಯ. ಭಗತ್ ಸಿಂಗ್ ಹುತಾತ್ಮನಾದ ೭೫ನೆಯ ವರ್ಷದಲ್ಲಿ, 'ಸಂವಾದ'ದ ನಮನ.

ನಾ. ದಿವಾಕರ

ವಾರ್ಷಿಕೋತ್ಸವಗಳನ್ನು ಆಚರಿಸುವುದರಲ್ಲಿ ಮನುಜ ಸಮಾಜ ತನ್ನ ಗತ ವೈಭವವನ್ನು ನೆನೆಯುವುದೇ ಅಲ್ಲದೆ, ಇತಿಹಾಸದಿಂದ ಆಯ್ದ ತುಣುಕುಗಳಿಂದ ಭವಿಷ್ಯವನ್ನು ರೂಪಿಸಿಕೊಳ್ಳುವ ತವಕದಲ್ಲಿರುತ್ತದೆ. ಇತಿಹಾಸದಲ್ಲಿ ತಮ್ಮದೇ ಆದ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ, ಖ್ಯಾತಿ ಗಳಿಸಿರುವ ನಾಯಕರುಗಳ ಜನ್ಮ ದಿನ, ಪುಣ್ಯ ತಿಥಿಗಳನ್ನು ಆಚರಿಸುವುದು ಸಾರ್ವತ್ರಿಕವಾದ ಪದ್ಧತಿ. ಕೆಲವು ಐತಿಹಾಸಿಕ ಸಂದರ್ಭಗಳ ವಾರ್ಷಿಕೋತ್ಸವವನ್ನೂ ಆಚರಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ, ಜೀವ ವಿರೋಧಿ ಯುದ್ಧಗಳ ಹಾಗೂ ಭಯೋತ್ಪಾದಕ ಕೃತ್ಯಗಳ ವಾರ್ಷಿಕೋತ್ಸವವನ್ನೂ ಆಚರಿಸುವ ಪರಿಪಾಠ ಆರಂಭಗೊಂಡಿದೆ.

ವಿಶೇಷವಾಗಿ ಭಾರತೀಯರು ಈ ರೀತಿ ವಾರ್ಷಿಕೋತ್ಸವಗಳನ್ನು ಆಚರಿಸುವುದರಲ್ಲಿ ನಿಸ್ಸೀಮರೆಂದೇ ಹೇಳಬಹುದು. ನಮ್ಮ ದೇಶದಲ್ಲಿ ಮಹಾನ್ ನಾಯಕರ ಜನ್ಮ ದಿನಾಚರಣೆಯ ನೆಪದಲ್ಲಿ ಹಲವಾರು ಗುಂಪುಗಳು, ಸಂಘಟನೆಗಳೇ ಹುಟ್ಟಿಕೊಂಡುಬಿಡುತ್ತವೆ. ಇತಿಹಾಸದ ಪುಟಗಳಿಂದ ಹಲವು ಖ್ಯಾತನಾಮರನ್ನು ಆರಿಸಿ ಅವರ ಧ್ಯೇಯ ಆದರ್ಶಗಳನ್ನು ವರ್ಷಕ್ಕೊಮ್ಮೆ ನೆನೆಯುವುದು ಅಪರಾಧವೇನಲ್ಲ. ಆದರೆ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಬಲಿದಾನ ನೀಡಿದ ಅನೇಕ ಎಲೆಮರೆ ಕಾಯಿಗಳು ಈ ನಿಟ್ಟಿನಲ್ಲಿ ನಿರ್ಲಕ್ಷಗೊಂಡಿರುವುದು ವಿಷಾದನೀಯ. ನಮ್ಮ ರಾಷ್ಟ್ರೀಯ ನಾಯಕರುಗಳಾದ ಗಾಂಧಿ, ಅಂಬೇಡ್ಕರ್, ನೆಹರೂ, ಪಟೇಲ್, ಮುಂತಾದವರ ಜನ್ಮದಿನವನ್ನು, ಮರಣ ದಿನವನ್ನು ರಾಷ್ಟ್ರೀಯ ಹಬ್ಬದಂತೆಯೇ ಆಚರಿಸಲಾಗುತ್ತದೆ. ಇನ್ನು ಕೆಲವು ರಾಜಕೀಯ ನಾಯಕರುಗಳ ಜನ್ಮದಿನಗಳನ್ನೂ ಅದ್ದೂರಿಯಿಂದ ಆಚರಿಸಲಾಗುತ್ತದೆ.

ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸಂಜಯ್ ಗಾಂಧಿಯವರುಗಳು ಮರಣ ಹೊಂದಿದ ದಿನಗಳನ್ನು ದೇಶಾದ್ಯಂತ ಆಚರಿಸಲಾಗುತ್ತದೆ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರುಗಳು ಭಯೋತ್ಪಾದನೆಗೆ ಬಲಿಯಾದರೂ, ಈರ್ವ ನಾಯಕರು ತಾವು ಬೀಸಿದ ಬಲೆಗೆ ತಾವೇ ಸಿಲುಕಿದ್ದು ಇತಿಹಾಸ ಕಂಡ ನಗ್ನ ಸತ್ಯ. ಆದಾಗ್ಯೂ ಅಕ್ಟೋಬರ್ ೩೦ ಮತ್ತು ಮೇ ೨೧ ರಂದು ಹುತಾತ್ಮ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಕಾಂಗ್ರೆಸ್ ಪಕ್ಷಕ್ಕಾಗಲೀ, ಈ ದೇಶದ ಜನತೆಗಾಗಲೀ ಈ ಆಚರಿಸುವ ಹಕ್ಕಿದೆ ನಿಜ. ಆದರೆ ಮಾರ್ಚಿ ೨೩ ಭಾರತೀಯ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ ದಿನ. ಅಹಿಂಸಾ ತತ್ವದಿಂದ ಮಾತ್ರ ದೇಶ ಸ್ವಾತಂತ್ರ್ಯ ಗಳಿಸಲು ಸಾಧ್ಯ ಎಂದು ಬಹುಪಾಲು ಜನತೆ ನಂಬಿದ್ದ ಕಾಲದಲ್ಲಿ, ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸ್ವತಂತ್ರ ಸಂಗ್ರಾಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ, ದೇಶದ ಯುವ ಜನತೆಯಲ್ಲಿ ಕ್ರಾಂತಿಯ ಕಿಡಿ ಹೊತ್ತಿಸಿ, ಎಳೆ ವಯಸ್ಸಿನಲ್ಲೇ ಬ್ರಿಟಿಷರ ವಿರುದ್ಧ ಹೋರಾಡಿ, ತನ್ನ ೨೪ನೆಯ ವಯಸ್ಸಿನಲ್ಲೇ, ಇನ್ ಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಯೊಂದಿಗೆ ನೇಣುಗಂಬ ಏರಿದ, ಭಗತ್ ಸಿಂಗ್ ಮತ್ತವನ ಸಹಚರರಾದ ರಾಜಗುರು, ಸುಖ್‌ದೇವ್‌ರವರುಗಳು ಹುತಾತ್ಮರಾದ ದಿನ ಮಾರ್ಚಿ ೨೩.೧೯೩೦ ಅಂದರೆ ೨೦೦೬ ಮಾರ್ಚಿ ೨೩ಕ್ಕೆ ಈ ಯುವ ಕ್ರಾಂತಿಕಾರಿಗಳು ಹುತಾತ್ಮರಾಗಿ ೭೫ ವರ್ಷಗಳಾಯಿತು.

ವಿವಿಧ ನಾಯಕರುಗಳ ಜನ್ಮ ದಿನ, ಪುಣ್ಯ ತಿಥಿಗಳನ್ನು ಆಚರಿಸುವ ಬಗ್ಗೆ ಈ ಮುನ್ನ ಪ್ರಸ್ತಾಪಿಸಿದ ಉದ್ದೇಶವೆಂದರೆ, ಭಗತ್ ಸಿಂಗ್ ಹುತಾತ್ಮನಾದ ೭೫ನೆಯ ವರ್ಷದಲ್ಲಿ, ಆ ಐತಿಹಾಸಿಕ ಕ್ಷಣವನ್ನು ನೆನಪಿಸಿಕೊಳ್ಳುವ ಅಗಲಿದ ಯುವ ಕ್ರಾಂತಿಕಾರಿ ನಾಯಕನಿಗೆ ೭೫ನೆಯ ವರ್ಷದಲ್ಲಾದರೂ, ಗೌರವಯುತ ಶ್ರದ್ಧಾಂಜಲಿ ವ್ಯಕ್ತ ಪಡಿಸುವ ಸೌಜನ್ಯವನ್ನೂ ನಾವು ಕಳೆದುಕೊಂಡುಬಿಟ್ಟಿದ್ದೇವೆ ಎಂದೆನಿಸುವಂತೆ, ಕಳೆದ ಮಾರ್ಚಿ ೨೩ರಂದು, ಭಗತ್ ಸಿಂಗ್ ಕುರಿತಂತೆ ಯಾವುದೇ ಕಾರ್ಯಕ್ರಮ ಇರಲಿಲ್ಲ. ಸರ್ಕಾರವೂ ಸಹ ಈ ದಿನವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಇತರ ರಾಷ್ಟ್ರೀಯ ನಾಯಕರುಗಳಿಗೆ ಗೌರವ ಸೂಚಿಸಲು ನಡೆಸುವ ಭಜನೆ ನಡೆಸಲಿಲ್ಲ. ಗುರು ಗೋಲ್ವಾಲ್ಕರ್‌ರವರ ಜನ್ಮದಿನದ ಅಂಗವಾಗಿ ಸಾಮರಸ್ಯ ಜಾಥಾ ನಡೆಸಿದೆ. ಸಂಘ ಪರಿವಾರ ದೇಶಾಭಿಮಾನಿಗಳಿಗೆ, ಈ ಅಪ್ರತಿಮ ದೇಶಾಭಿಮಾನಿ ಏಕೋ ನೆನಪಾಗಲಿಲ್ಲ.

ಅಯೋಧ್ಯಾ ಕಾಂಡದ ಸಮಯದಲ್ಲಿ, ಭಗತ್ ಸಿಂಗ್‌ನ ಸೋದರರನ್ನು ರಥದಲ್ಲಿ ವಿಜೃಂಭಿಸಿ, ಮೆರೆದ ಭಾರತೀಯ ಜನತಾ ಪಕ್ಷದ ನಾಯಕರುಗಳಿಗೆ ಈಗ ಭಗತ್ ಸಿಂಗ್ ಬೇಡವಾಗಿರಬಹುದು. ವಿಷಾದನೀಯ ಅಂಶವೆಂದರೆ, ದಿನ ನಿತ್ಯ ತಮ್ಮ ದೇಶಾಭಿಮಾನವನ್ನು ಪ್ರದರ್ಶಿಸಲು ಪೈಪೋಟಿ ನಡೆಸುವ ಟಿ.ವಿ. ಮಾಧ್ಯಮಗಳು ಹಾಗೂ ಪತ್ರಿಕೆಗಳೂ ಸಹ, ಭಗತ್ ಸಿಂಗ್ ಬಗ್ಗೆ ಒಂದು ಕಾಲಂ ಸಹ ಪ್ರಕಟಿಸಲಿಲ್ಲ. ಇಂದಿನ ಮಾರುಕಟ್ಟೆ ಯುಗದಲ್ಲಿ ಸುದ್ದಿಗಳನ್ನೂ ಒಂದು ಸರಕಾಗಿ ಕಾಣುವ ಮಾಧ್ಯಮಗಳಿಗೆ, ಈಗ ಭಗತ್ ಸಿಂಗ್ ಉತ್ತಮ ಸರಕಾಗಲಾರ ಎಂದೆನಿಸುತ್ತದೆ. ಆದರೆ ಸ್ವಾತಂತ್ರ ದಿನದಂದು ದೇಶಭಿಮಾನದ ಬಗ್ಗೆ ಘಂಟೆಗಟ್ಟಲೆ ಭಾಷಣ ಬಿಗಿಯುವ, ಸ್ವತಂತ್ರ ಹೋರಾಟಗಾರರನ್ನು

ಕೊಂಡಾಡುವ ನಮ್ಮ ರಾಜಕೀಯ ನ್ಯಾಯಕರಿಗೆ, ಭಗತ್ ಸಿಂಗ್ ಹುತಾತ್ಮನಾದ ೭೫ನೆಯ ವರ್ಷದಲ್ಲಿ ಆತನ ವೀರೋಚಿತ ಮರಣವನ್ನಾದರೂ ನೆನೆಯುವಷ್ಟು ಸೌಜನ್ಯ ಇಲ್ಲದಾಯಿತೇ. ರೋಮಾಂಚಕಾರಿ ವಿಷಯಗಳಿಗೆ ಪ್ರಾಶಸ್ತ್ಯ ನೀಡುವ ಪತ್ರಿಕೆಗಳಿಗೆ, ಟಿ.ವಿ. ಮಾಧ್ಯಮಗಳಿಗೆ, ಆ ದಿನವನ್ನು ನೆನೆಯುವಷ್ಟು ವ್ಯವಧಾನ ಇಲ್ಲವಾಯಿತೇ? ನಿಜವಾದ ಪ್ರಜ್ಞಾವಂತ, ಪ್ರಜಾತಾಂತ್ರಿಕ ವ್ಯಕ್ತಿಯ ಮನಸ್ಸಿನಲ್ಲಿ ಈ ಪ್ರಶ್ನೆಗಳು ಉದ್ಭವಿಸದಿರಲಾರದು.

ಏಕೆಂದರೆ ಭಾರತೀಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಜನತೆಯ ಮನಗಳಲ್ಲಿ ಉಳಿಯುವ ಓರ್ವ ಸ್ವಾತಂತ್ರ ಹೋರಾಟಗಾರ, ಕ್ರಾಂತಿಕಾರಿ ಯುವಕ, ಭಗತ್ ಸಿಂಗ್. ಭಗತ್ ಸಿಂಗ್ ಹುತಾತ್ಮನಾದ ಈ ಸಂದರ್ಭವನ್ನು ಸುವರ್ಣ ಮಹೋತ್ಸವವೆಂದು ಸಂಭ್ರಮದಿಂದ ಆಚರಿಸಲಾಗುವುದಿಲ್ಲವಾದರೂ, ಬ್ರಿಟಿಷರ ದೃಷ್ಟಿಯಲ್ಲಿ ಭಯೋತ್ಪಾದಕನಾಗಿದ್ದ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ದೃಷ್ಟಿಯಲ್ಲಿ ಉಗ್ರಗಾಮಿಯಾಗಿದ್ದ, ಅಪ್ರತಿಮ ಕ್ರಾಂತಿಕಾರಿ ಯುವಕ ಭಗತ್ ಸಿಂಗ್‌ನನ್ನು ನೆನೆಯುವುದು ಪ್ರಜ್ಞಾವಂತ ಭಾರತೀಯರ ಕರ್ತವ್ಯ. ಆಳುವ ವರ್ಗಗಳ ಯಾವುದೇ ವ್ಯವಸ್ಥೆಯು, ತನ್ನ ವಿರುದ್ಧ ಹೋರಾಡುವ ವ್ಯಕ್ತಿ ಮತ್ತು ಸಂಘಟನೆಗಳನ್ನು, ದೇಶದ್ರೋಹಿಗಳಂತೆಯೋ, ಉಗ್ರಗಾಮಿಗಳಂತೆಯೋ, ಅಥವಾ ಭಯೋತ್ಪಾದಕನಂತೆಯೋ ಚಿತ್ರಿಸುವುದು ಇತಿಹಾಸದಲ್ಲಿ ಸ್ಪಷ್ಟವಾಗಿ ದಾಖಲಾಗಿದೆ.

ಜೈಲಿನಲ್ಲಿ ಭಗತ್ ಸಿಂಗ್

ಭಗತ್ ಸಿಂಗ್ ಸಹ ಇದಕ್ಕೆ ಹೊರತಾಗಿ ರಲಿಲ್ಲ. ಜಾನ್ ಸಾಂಡರ್ಸ್ ಎಂಬ ಬ್ರಿಟಿಷ್ ಅಧಿಕಾರಿಯ ಹತ್ಯೆಯ ಆರೋಪದ ಮೇಲೆ, ನ್ಯಾಯಾಲಯವು ಭಗತ್ ಸಿಂಗ್ ಮತ್ತು ಆತನ ಸಂಗಾತಿಗಳಾದ ಸುಖ್ ದೇವ್, ರಾಜ್ ಸಿಂಗ್‌ರವರಿಗೆ ಗಲ್ಲು ಶಿಕ್ಷೆ ವಿಧಿಸಿತು. ಸ್ವತಂತ್ರ ಮತ್ತು ಹಕ್ಕುಗಳ ವಿರುದ್ಧ, ಆಳುವ ವರ್ಗ ಬಲಪ್ರಯೋಗ ಮಾಡಿದಾಗಲೆಲ್ಲಾ, ನ್ಯಾಯಾಲಯಗಳು ಪರಿಣಾಮಕಾರಿ ಅಸ್ತ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಯುದ್ಧ ಭೂಮಿಯ ಹೊರತಾಗಿ ಅತಿ ಹೆಚ್ಚು ಅನ್ಯಾಯ ಜರುಗುವುದು ನ್ಯಾಯಾಲಯಗಳಲ್ಲೇ ಎಂದು ಹೇಳಲಾಗುತ್ತದೆ. ಯೇಸು ಕ್ರಿಸ್ತ, ಸಾಕ್ರೆಟಿಸ್, ಗೆಲಿಲಿಯೋ ಮುಂತಾದವರು ಈ ನಿಟ್ಟಿನಲ್ಲಿ ನಿದರ್ಶನಗಳಷ್ಟೆ. ೧೮೫೮ ರಲ್ಲಿ ಬಹದೂರ್ ಷಾ ಜಫರ್‌ನಿಂದ ಆರಂಭಗೊಂಡ, ಬ್ರಿಟಿಷ್ ವಸಾಹತು ಶಾಹಿ ಆಳ್ವಿಕೆಯ ರಾಜಕೀಯ ಪ್ರೇರೇಪಿತ ನ್ಯಾಯಾಂಗ ತನಿಖೆ ೧೮೯೭ ರಲ್ಲಿ ಬಾಲಗಂಗಾಧರ ತಿಲಕ್ ನಂತರ ೧೯೩೧ ರಲ್ಲಿ ಭಗತ್ ಸಿಂಗ್‌ನಲ್ಲಿ ಪರ್ಯಾವಸಾನಗೊಂಡಿತೆಂದು ಹೇಳಬಹುದು.

೧೯೦೭ ನೆಯ ಇಸವಿ ಅಕ್ಟೋಬರ್ ೨೭ ರಂದು ಪಂಜಾಬ್‌ನ ಬಾಂಗಾ ಎಂಬ ಗ್ರಾಮದಲ್ಲಿ ಜನಿಸಿದ ಭಗತ್ ಸಿಂಗ್ ಸ್ವತಂತ್ರ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು, ಗದರ್ ಚಳುವಳಿಯ ಪ್ರಭಾವದಿಂದ. ಅಕಾಲಿಗಳ ನೇತೃತ್ವದ ಗದರ್ ಚಳುವಳಿ, ಒಂದು ಧರ್ಮನಿರಪೇಕ್ಷ, ಜನಪರ ಚಳುವಳಿಯಾಗಿದ್ದು, ಭಾರತದಲ್ಲಿ ಅನೇಕ ಯುವಕರನ್ನು ಸ್ವತಂತ್ರ ಚಳುವಳಿಗೆ ಸೆಳೆಯುವುದರಲ್ಲಿ ಯಶಸ್ವಿಯಾಗಿತ್ತು. ಗಾಂಧೀಜಿಯವರ ಅಹಿಂಸಾ ಮಾರ್ಗ ಭಾರತೀಯ ಯುವಜನತೆಯನ್ನು ನಿಷ್ಕ್ರಿಯರ ನ್ನಾಗಿ ಮಾಡುತ್ತದೆ, ಬ್ರಿಟಿಷರ ದಬ್ಬಾಳಿಕೆಯನ್ನು ಎದುರಿಸಲು ಕ್ರಾಂತಿ ಮಾರ್ಗವೇ ಸೂಕ್ತ ಎಂದು ದೃಢವಾಗಿ ನಂಬಿದ್ದ ಭಗತ್ ಸಿಂಗ್‌ಗೆ, ೧೭ ನೆಯ ನವೆಂಬರ್ ೧೯೨೮ ರಂದು, ಬ್ರಿಟೀಷ್ ಪೋಲೀಸರು, ಅಂದಿನ ಯುವಕರಿಗೆ ಆದರ್ಶ ಪ್ರಾಯರಾಗಿದ್ದ ಲಾಲಾ ಲಜಪತ ರಾಯ್‌ರವರನ್ನು ಹತ್ಯೆ ಮಾಡಿದ್ದು ಸ್ವತಂತ್ರ ಸಂಗ್ರಾಮದಲ್ಲಿ ಧುಮುಕಲು ಪ್ರೇರೇಪಿಸಿತ್ತು.

ಸಿ.ಆರ್. ದಾಸ್‌ರವರ ಪತ್ನಿ ಬಸಂತಿ ದೇವಿಯವರು, ಲಾಲಾರವರ ಶ್ರದ್ಧಾಂಜಲಿ ಸಭೆಯಲ್ಲಿ "ನಮ್ಮ ದೇಶದಲ್ಲಿ ಯುವಶಕ್ತಿ ಮತ್ತು ಪುರುಷತ್ವ ಇನ್ನೂ ಜೀವಂತವಾಗಿದೆಯೇ, ಇದ್ದಲ್ಲಿ ಅವರಿಗೆ ಈ ಕ್ರೂರ ಕೃತ್ಯದಿಂದ ಆಕ್ರೋಶ ಬರುವುದಿಲ್ಲವೇ, ಭಾರತೀಯರ ಅಸಹಾಯಕ ಸ್ಥಿತಿಯಿಂದ ನಾಚಿಕೆ, ಜಿಗುಪ್ಸೆ ಉಂಟಾಗುವುದಿಲ್ಲವೇ" ಎಂದು ಗುಡುಗಿದಾಗ ಭಗತ್ ಸಿಂಗ್ ಮತ್ತವನ ಸಹಚರರು ಲಾಲಾರವರ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಮುಂದಾದರು. ೧೭ ನೆಯ ಡಿಸೆಂಬರ್ ೧೯೨೮ ರಂದು ಭಗತ್ ಸಿಂಗ್ ಮತ್ತು ಆತನ ಸಂಗಾತಿಗಳಾದ ರಾಜಗುರು ಮತ್ತು ಸುಖದೇವ್‌ರವರು, ಸಂಚು ನಡೆಸಿ, ಜಾನ್ ಸಾಂಡರ್ಸ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ಕೊಲೆ ಮಾಡಿ, ಬ್ರಿಟಿಷ್ ಆಳ್ವಿಕೆಯಲ್ಲಿ ಪ್ರಪ್ರಥಮ ಭಯೋತ್ಪಾದಕ ಚಟುವಟಿಕೆಗೆ ನಾಂದಿ ಹಾಡಿದ್ದರು.

ಆದರೆ . ಬ್ರಿಟಿಷರ ದೃಷ್ಟಿಯಲ್ಲಿ ಭಯೋತ್ಪಾದಕನಾಗಿದ್ದ ಭಗತ್ ಸಿಂಗ್, ಭಾರತೀಯ ಯುವ ಜನತೆಯ ದೃಷ್ಟಿಯಲ್ಲಿ ಒಬ್ಬ ಕ್ರಾಂತಿಕಾರಿಯಾಗಿ ಹೊರಹೊಮ್ಮಿದ್ದ. ಮಾರ್ಕ್ಸ್‌ವಾದಲ್ಲಿ ಸಂಪೂರ್ಣ ವಿಶ್ವಾಸ ವಿರಿಸಿದ್ದ ಭಗತ್ ಸಿಂಗ್, ಸಶಸ್ತ್ರ ಹೋರಾಟದಲ್ಲಿ ನಂಬಿಕೆ ಇರಿಸಿದ್ದನಾದರೂ, ಹಿಂಸೆ ಅಥವಾ ಬಾಂಬ್ ಸಂಸ್ಕೃತಿಯನ್ನು ವೈಭವೀಕರಿಸಲಿಲ್ಲ. ಕ್ರಾಂತಿಯಿಂದಲೇ ಸ್ವಾತಂತ್ರ ಗಳಿಸುವ ಆತನ ಛಲ ಅಚಲವಾಗಿತ್ತು. "ನಮ್ಮ ದೇಶದ ಜನರೇ ನಮ್ಮನ್ನು ಭಯೋತ್ಪಾದಕರೆಂದು, ಉಗ್ರಗಾಮಿಗಳೆಂದು ಹೀಯಾಳಿಸಿದರೂ, ನಾವು ದಬ್ಬಾಳಿಕೆಯ ವಿರುದ್ಧ ಹೋರಾಡುತ್ತೇವೆ, ದಮನವನ್ನು ಎದುರಿಸುತ್ತೇವೆ. ಹಾಗೆಯೇ ಪಾತಕಿಗಳಿಗೆ ಬುದ್ಧಿ ಕಲಿಸುತ್ತೇವೆ. ನೇಣುಗಂಬ ಏರುವವರೆಗೂ ನಮ್ಮ ಕ್ರಾಂತಿಯ ಕಹಳೆಯನ್ನು ಮೊಳಗಿಸುತ್ತಿರುತ್ತೇವೆ. ಉರುಳಿಗೆ ಕೊರಳು ನೀಡುವ ಮುನ್ನವೂ ಕ್ರಾಂತಿ ಚಿರಾಯುವಾಗಲಿ ಎಂದು ಹೇಳುತ್ತೇವೆ. "ಎಂಬ ಭಗತ್‌ಸಿಂಗ್‌ನ ನುಡಿಗಳು ಆತನ ಕ್ರಾಂತಿಕಾರಿ ಸಿದ್ಧಾಂತದ ಪ್ರತಿಪಾದನೆಯಷ್ಟೆ. ಮಾರ್ಕ್ಸ್‌ವಾದವೇ ಭಾರತೀಯ ಸಾಮಾಜಿಕ ಬಿಕ್ಕಟ್ಟುಗಳಿಗೆ ಪರಿಹಾರವೆಂದು ಪ್ರತಿಪಾದಿಸುತ್ತಿದ್ದ ಭಗತ್‌ಸಿಂಗ್, ಬ್ರಿಟೀಷರ ಕೆಂಗಣ್ಣಿಗೆ ಗುರಿಯಾದದ್ದು ಲಾಹೋರ್ ಅಸೆಂಬ್ಲಿಯ ಮೇಲೆ, ಭಗತ್ ಸಿಂಗ್ ಮತ್ತವನ ಸಂಗಾತಿಗಳು ಬಾಂಬ್ ಎಸೆದ ಕಾರಣಕ್ಕಾಗಿ.

ಈ ಪ್ರಕರಣವನ್ನು ಒಂದು ಭಯೋತ್ಪಾದಕ ಚಟುವಟಿಕೆಯೆಂದೇ ಇತಿಹಾಸದಲ್ಲಿ ಚಿತ್ರಿಸಲಾಗಿದೆ. ಆದರೆ ವಾಸ್ತವಾಂಶ ಭಿನ್ನವಾಗಿತ್ತೆಂದು ಭಗತ್‌ಸಿಂಗ್‌ರವರ ಆತ್ಮ

> ಬ್ರಿಟೀಷರ ದೃಷ್ಟಿಯಲ್ಲಿ ಭಯೋತ್ಪಾದಕನಾಗಿದ್ದ ಭಗತ್ ಸಿಂಗ್, ಭಾರತೀಯ ಯುವ ಜನತೆಯ ದೃಷ್ಟಿಯಲ್ಲಿ ಒಬ್ಬ ಕ್ರಾಂತಿಕಾರಿಯಾಗಿ ಹೊರಹೊಮ್ಮಿದ್ದ. ಮಾರ್ಕ್ಸ್‌ವಾದಲ್ಲಿ ಸಂಪೂರ್ಣ ವಿಶ್ವಾಸವಿರಿಸಿದ್ದ ಭಗತ್ ಸಿಂಗ್, ಸಶಸ್ತ್ರ ಹೋರಾಟದಲ್ಲಿ ನಂಬಿಕೆ ಇರಿಸಿದ್ದನಾದರೂ, ಹಿಂಸೆ ಅಥವಾ ಬಾಂಬ್ ಸಂಸ್ಕೃತಿಯನ್ನು ವೈಭವೀಕರಿಸಲಿಲ್ಲ. ಕ್ರಾಂತಿಯಿಂದಲೇ ಸ್ವಾತಂತ್ರ ಗಳಿಸುವ ಆತನ ಛಲ ಅಚಲವಾಗಿತ್ತು. "ನಮ್ಮ ದೇಶದ ಜನರೇ ನಮ್ಮನ್ನು ಭಯೋತ್ಪಾದಕರೆಂದು, ಉಗ್ರಗಾಮಿಗಳೆಂದು ಹೀಯಾಳಿಸಿದರೂ, ನಾವು ದಬ್ಬಾಳಿಕೆಯ ವಿರುದ್ಧ ಹೋರಾಡುತ್ತೇವೆ, ನೇಣುಗಂಬ ಏರುವ ವರೆಗೂ ನಮ್ಮ ಕ್ರಾಂತಿಯ ಕಹಳೆಯನ್ನು ಮೊಳಗಿಸುತ್ತಿರುತ್ತೇವೆ. ಉರುಳಿಗೆ ಕೊರಳು ನೀಡುವ ಮುನ್ನವೂ ಕ್ರಾಂತಿ ಚಿರಾಯವಾಗಲಿ ಎಂದು ಹೇಳುತ್ತೇವೆ." ಎಂಬ ಭಗತ್‌ಸಿಂಗ್ ನುಡಿಗಳು ಆತನ ಕ್ರಾಂತಿಕಾರಿ ಸಿದ್ಧಾಂತದ ಪ್ರತಿಪಾದನೆಯಷ್ಟೆ.

ಚರಿತ್ರೆಯಲ್ಲಿ ಸಾಬೀತಾಗಿದೆ. ೧೯೨೯ ರ ಏಪ್ರಿಲ್ ೮ ರಂದು ಬ್ರಿಟಿಷ್ ಸರ್ಕಾರವು, ಸಾರ್ವಜನಿಕ ಸಂರಕ್ಷಣೆ ಮತ್ತು ಕೈಗಾರಿಕಾ ವಿವಾದಗಳ ಎರಡು ಮಸೂದೆಗಳನ್ನು ಅನುಮೋದಿಸಲು ತೀರ್ಮಾನಿಸಿತ್ತು. ಒಂದು ವೇಳೆ ಈ ಕೈಗಾರಿಕಾ ಮಸೂದೆ ಅಂಗೀಕೃತವಾಗಿದ್ದಲ್ಲಿ, ದೇಶದ ಕಾರ್ಮಿಕರಿಗೆ ಮುಷ್ಕರದ ಹಕ್ಕೇ ಇರುತ್ತಿರಲಿಲ್ಲ. ಅಲ್ಲದೆ ದುಡಿಯುವ ವರ್ಗಗಳ ನ್ಯಾಯಯುತ ಹಕ್ಕುಗಳನ್ನು ಕಸಿದುಕೊಳ್ಳುವ ಅಂಶಗಳು ಈ ಮಸೂದೆಯಲ್ಲಿದ್ದವು. ಈ ಮಸೂದೆ ಅಂಗೀಕಾರವಾಗುವುದನ್ನು ಹೇಗಾದರೂ ಮಾಡಿ ತಪ್ಪಿಸುವುದು ಭಗತ್‌ಸಿಂಗ್ ಮತ್ತು ಆತ ಸ್ಥಾಪಿಸಿದ್ದ ಹಿಂದುಸ್ಥಾನ್ ಸೋಷಿಯಲಿಸ್ಟ್ ರೆವಲ್ಯೂಷನರಿ ಆರ್ಮಿ ಎಂಬ ಸಂಘಟನೆಯ ಮುಖ್ಯ ಧ್ಯೇಯವಾಗಿತ್ತು.

ಸಾರ್ವಜನಿಕ ಸಂರಕ್ಷಣಾ ಮಸೂದೆಯನ್ನು ಅಂಗೀಕರಿಸುವಾಗ ನಡೆದ ಸಂವಾದವನ್ನು ಆಲಿಸಿದ್ದ ಭಗತ್‌ಸಿಂಗ್ ಮತ್ತವನ ಸಂಗಾತಿಗಳಿಗೆ, ಕಾರ್ಮಿಕ ವಿರೋಧಿ ಮಸೂದೆಯನ್ನು ತಡೆಗಟ್ಟುವುದು ಆದ್ಯತೆಯಾಗಿತ್ತು. ಹಾಗಾಗಿ ಈ ಮಸೂದೆಯನ್ನು ಅಂಗೀಕರಿಸುವ ಕೆಲವೇ ಕ್ಷಣಗಳ ಮುನ್ನ, ಅಸೆಂಬ್ಲಿ ಹಾಲ್ ಮೇಲ್ ಬಾಂಬ್ ಎಸೆದು, ಗಾಳಿಯಲ್ಲಿ ಎರಡು ಸುತ್ತು ಗುಂಡು ಹಾರಿಸುವ ಮೂಲಕ, ಭಗತ್‌ಸಿಂಗ್, ಮಸೂದೆಯ ಅಂಗೀಕಾರವನ್ನು ತಪ್ಪಿಸಿದ್ದರು. "ನಮಗೆ ಯಾರನ್ನೂ ಕೊಲ್ಲುವ ಉದ್ದೇಶವಿರಲಿಲ್ಲ, ನಮ್ಮ ದಾಳಿಯಿಂದ ಯಾರೂ ಸಾಯಲೂ ಇಲ್ಲ. ಆದರೆ ಭಾರತದಲ್ಲಿ ಕ್ರಾಂತಿಕಾರಿ ಚಳುವಳಿ ಜೀವಂತವಾಗಿದೆ ಎಂಬ ಅಂಶವನ್ನು ನಾವು ಬ್ರಿಟಿಷರಿಗೆ ಮನದಟ್ಟು ಮಾಡಿದ್ದೇವೆ. "ಎಂದು ಹೇಳಿದ್ದ ಭಗತ್‌ಸಿಂಗ್, ತಮ್ಮ ಕ್ರಾಂತಿಯ ಸ್ವರೂಪವನ್ನು ಸ್ಪಷ್ಟವಾಗಿ ಗ್ರಹಿಸಿದ್ದರು.

"ಕ್ರಾಂತಿ ಎಂದರೆ ನಮಗೆ ಕೇವಲ ಹಿಂಸೆಯಲ್ಲ, ಅದು ವ್ಯವಸ್ಥೆಯನ್ನು ಬದಲಿಸಲು ಉಪಯೋಗಿಸುವ ರಾಜಕೀಯ ತಂತ್ರ. ಶೋಷಕರಿಂದ ಲೂಟಿಗೊಳಗಾಗುವ ಕಾರ್ಮಿಕರು, ರೈತರು, ನೇಕಾರರು, ಮೇಸ್ತ್ರಿಗಳು, ಬಡಗಿಗಳು ಮತ್ತು ಸಮಸ್ತ ದುಡಿಯುವ ವರ್ಗಗಳನ್ನು ರಕ್ಷಿಸುವುದೇ ನಮ್ಮ ಧ್ಯೇಯ. "ಮಾನವನಿಂದ ಮಾನವನ, ದೇಶಗಳಿಂದ ದೇಶಗಳ, ಶೋಷಣೆಯನ್ನು ತಡೆಗಟ್ಟುವುದೇ ನಮ್ಮ ಕ್ರಾಂತಿಯ ಉದ್ದೇಶ" ಎಂದು ಹೇಳುತ್ತಿದ್ದ ಭಗತ್‌ಸಿಂಗ್, ರಾಜಕೀಯ ಖೈದಿಗಳ ಬಿಡುಗಡೆಗಾಗಿ ಒಂದು ತಿಂಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಈ ಸತ್ಯಾಗ್ರಹದಲ್ಲಿ ಜತೀಂದ್ರನಾಥ್ ದಾಸ್ ಎಂಬ ಕ್ರಾಂತಿಕಾರಿ ಯುವಕ ಹಸಿವಿನಿಂದ ಅಸು ನೀಗಿದ್ದರೂ, ಬ್ರಿಟಿಷ್ ಸರ್ಕಾರವು, ಭಗತ್‌ಸಿಂಗ್‌ನ ಗೈರು ಹಾಜರಿಯಲ್ಲೇ, ಮೊಕದ್ದಮೆ ನಡೆಸಿತ್ತು. ಜಿನ್ನಾ ಇದನ್ನು ವಿರೋಧಿಸಿದ್ದರೂ, ಗಾಂಧಿಜಿಯವರು ಈ ಸತ್ಯಾಗ್ರಹಕ್ಕೆ ಬೆಂಬಲ ನೀಡಲಿಲ್ಲ. "ಭಗತ್‌ಸಿಂಗ್ ತನ್ನ ಹಿಂಸಾತ್ಮಕ ಅಥವಾ ಭಯೋತ್ಪಾದಕ ಚಟುವಟಿಕೆಗಳಿಂದ ಪ್ರಸಿದ್ಧಿ ಪಡೆಯಲಿಲ್ಲ, ಯಾವುದೇ ಉಗ್ರಗಾಮಿಯೂ ಭಗತ್‌ಸಿಂಗ್ ನಷ್ಟು ಖ್ಯಾತಿ ಗಳಿಸಲಿಲ್ಲ ಎಂಬ ಅಂಶವನ್ನು ನಾವು ಒಪ್ಪಿಕೊಳ್ಳಲೇ ಬೇಕು" ಎಂದು ನೆಹರೂ ಹೇಳಿದ್ದರೂ, ಭಗತ್‌ಸಿಂಗ್, ರಾಜಗುರು, ಸುಖ್‌ದೇವ್‌ರವರಿಗೆ ಗಲ್ಲು ಶಿಕ್ಷೆ ವಿಧಿಸಿದಾಗ, ಕಾಂಗ್ರೆಸ್ ಅಧಿವೇಶನವು ಅದನ್ನು ವಿರೋಧಿಸಲಿಲ್ಲ. ಗಾಂಧೀಜಿಯವರು ಗಲ್ಲು ಶಿಕ್ಷೆಯ ಮುಂದೂಡಿಕೆಗೆ ಆಗ್ರಹಿಸಿದ್ದರೇ ಹೊರತು, ಅದನ್ನು ವಿರೋಧಿಸಿರಲಿಲ್ಲ.

ಹಾಗಾಗಿ, ಭಯೋತ್ಪಾದಕನೆಂಬ ಹಣೆಪಟ್ಟಿಯನ್ನು ಹೊತ್ತುಕೊಂಡೇ ಭಗತ್‌ಸಿಂಗ್ ೧೯೩೦ ರ ಮಾರ್ಚ್ ೨೩ರಂದು ನೇಣುಗಂಬ ಏರಬೇಕಾಯಿತು. ಗಾಂಧೀಜಿ ಮನಸ್ಸು ಮಾಡಿದ್ದಲ್ಲಿ ಭಗತ್‌ಸಿಂಗ್‌ನ ಗಲ್ಲು ಶಿಕ್ಷೆ ತಪ್ಪಿಸಬಹುದಿತ್ತು. ಆದರೆ ಇರ್ವಿನ್ ಒಪ್ಪಂದದ ನಂತರ ಈ ವಿಷಯವನ್ನು ಪ್ರಸ್ತಾಪಿಸುತ್ತಾ ಗಾಂಧೀಜಿಯವರು "ಭಗತ್‌ಸಿಂಗ್ ಮತ್ತವನ ಸಹಚರರ ಕ್ರಾಂತಿಕಾರಿ ನೀತಿಯನ್ನು ನಾವು ಒಪ್ಪುತ್ತೇನೆ, ಆದರೆ ಅವರು ಅನುಸರಿಸುವ ಹಿಂಸಾತ್ಮಕ ಮಾರ್ಗವನ್ನಲ್ಲ "ಎಂದು ಹೇಳುವ ಮೂಲಕ, ಭಗತ್‌ಸಿಂಗ್‌ನ ಗಲ್ಲು ಶಿಕ್ಷೆಯನ್ನು ಮುಂದೂಡುವಂತೆ ಬ್ರಿಟಿಷರ ಸರ್ಕಾರವನ್ನು ವಿನಂತಿಸಿಕೊಂಡರೇ ಹೊರತು, ಗಲ್ಲು ಶಿಕ್ಷೆಯನ್ನು ತಪ್ಪಿಸಲಿಲ್ಲ. ೭೫ ವರ್ಷಗಳ ನಂತರ, ಗಾಂಧೀಜಿಯವರ ಈ ಪರಂಪರೆ ಇನ್ನೂ ಜೀವಂತವಾಗಿರುವುದನ್ನು ನಾವು ನೋಡುತ್ತಿದ್ದೇವೆ.

ಜಾಗತೀಕರಣದ ಹೆಸರಿನಲ್ಲಿ ಮತ್ತೆ ನವ ವಸಾಹತೀಕರಣದತ್ತ ಸಾಗುತ್ತಿರುವ ಭಾರತದಲ್ಲಿ, ಯುವ ಪೀಳಿಗೆಗೆ ಭಗತ್‌ಸಿಂಗ್ ಒಂದು ಪ್ರೇರಕ ಶಕ್ತಿಯಾಗಬಲ್ಲ. ಹಿಂಸೆಯನ್ನು ವೈಭವೀಕರಿಸುವುದೇ ಕ್ರಾಂತಿ ಎಂದು ಭಾವಿಸಿರುವ ಸಂಘಟನೆಗಳಿಗೆ, ಭಗತ್‌ಸಿಂಗ್ ಒಂದು ಆದರ್ಶವಾಗಬಲ್ಲ. ಚಳುವಳಿಗಳೆಂದರೆ ಕೇವಲ ಘೋಷಣೆ ಮತ್ತು ವ್ಯಕ್ತಿ ಪೂಜೆಗಳಿಗೆ ಸೀಮಿತಗೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ. ಭಗತ್‌ಸಿಂಗ್ ಪ್ರಜಾ ತಾಂತ್ರಿಕ ಚಳುವಳಿಗೆ ಉತ್ತಮ ಮಾರ್ಗದರ್ಶಕನಾಗಬಲ್ಲ. ಭಾರತದ ಕಾರ್ಮಿಕ ವರ್ಗವು, ಮಾರ್ಕ್ಸ್‌ವಾದದಷ್ಟೇ, ಭಗತ್‌ಸಿಂಗ್‌ಗೂ ಋಣಿಯಾಗಿರಬೇಕು. ಏಕೆಂದರೆ, ಲಾಹೋರ್ ಅಸೆಂಬ್ಲಿಯ ಮೇಲೆ ಬಾಂಬ್ ಎಸೆಯುವುದರ ಮೂಲಕ, ಬ್ರಿಟಿಷರ ಕರಾಳ ಕಾರ್ಮಿಕ ವಿರೋಧಿ ಶಾಸನದ ಅನುಷ್ಠಾನವನ್ನು ತಡೆಗಟ್ಟುವುದರ ಮೂಲಕ, ಭಗತ್‌ಸಿಂಗ್ ತನ್ನ ತಾಯ್ನಾಡಿನ ದುಡಿಯುವ ವರ್ಗಗಳಿಗೆ ತಮ್ಮ ಹೋರಾಟದ ಪ್ರಬಲ ಅಸ್ತ್ರವಾದ ಮುಷ್ಕರದ ಹಕ್ಕನ್ನು ಉಳಿಸಿಹೋಗಿದ್ದಾನೆ. ಇಂತಹ ಧೀರೋದ್ಧಾತ್ತ ಯುವ ಕ್ರಾಂತಿಕಾರಿಯು, ನಮ್ಮ ದೇಶದ ಯುವ ಜನತೆಯ, ಪ್ರಜ್ಞಾವಂತ ಜನತೆಯ ಮನಸ್ಸಿನಿಂದ ಮರೆಯಾಗಿರುವುದು ದುರದೃಷ್ಟಕರವಷ್ಟೇ ಅಲ್ಲ, ಅವಮಾನಕರವೂ ಹೌದು. □

ಜಾಗತೀಕರಣದ ಹೆಸರಿನಲ್ಲಿ ಮತ್ತೆ ನವ ವಸಾಹತೀಕರಣದತ್ತ ಸಾಗುತ್ತಿರುವ ಭಾರತದಲ್ಲಿ, ಯುವ ಪೀಳಿಗೆಗೆ ಭಗತ್‌ಸಿಂಗ್ ಒಂದು ಪ್ರೇರಕ ಶಕ್ತಿಯಾಗಬಲ್ಲ. ಹಿಂಸೆಯನ್ನು ವೈಭವೀಕರಿಸುವುದೇ ಕ್ರಾಂತಿ ಎಂದು ಭಾವಿಸಿರುವ ಸಂಘಟನೆಗಳಿಗೆ, ಭಗತ್‌ಸಿಂಗ್ ಒಂದು ಆದರ್ಶವಾಗಬಲ್ಲ. ಚಳುವಳಿಗಳೆಂದರೆ ಕೇವಲ ಘೋಷಣೆ ಮತ್ತು ವ್ಯಕ್ತಿ ಪೂಜೆಗಳಿಗೆ ಸೀಮಿತಗೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ. ಭಗತ್‌ಸಿಂಗ್ ಪ್ರಜಾತಾಂತ್ರಿಕ ಚಳುವಳಿಗೆ ಉತ್ತಮ ಮಾರ್ಗದರ್ಶಕನಾಗಬಲ್ಲ.

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅವರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕಾವ್ಯ

ಮುಕ್ಕಾಲು ಪಾಲಿನವರು

ಟಿ.ಎಸ್. ವಿವೇಕಾನಂದ



ಕಾಡುಗಳು ಜಗದ ಪುಪ್ಪಸಗಳಂತೆ!
ಹೀಗೆಂದು ಹೇಳುತ್ತಾರೆ
ನಮ್ಮ ಪೂರ್ವಿಕರು...
ನದಿಗಳು ನೆಲದ ಜೀವಕೋಶಗಳಂತೆ!
ನೆಲದ ಗುಟ್ಟುಗಳ ಆದಿಯಿಂದ
ಬಲ್ಲವರು ಇವರು....
ಕಾಣದ್ದನ್ನ ಹೇಳಲಾರರು!
ಜಲದ ಮಟ್ಟುಗಳ ಗಾಳಿಯ ತಟ್ಟುಗಳ
ಹಿಡಿಯವರೆಗೆ ಸಲಹಿದವರು.

ಮಣ್ಣಿನೊಳಗೊಂದಾಗಿ
ಜೀವ ನೇಯ್ಗೆಯಲೊಂದು
ಎಲೆಯಾದವರು ಇವರು
ಈ ನೆಲವನ್ನೇ ನಂಬಿದವರು....
ಹೊಟ್ಟೆಗೆ ಬಟ್ಟೆಗೆ ಕೊನೆಗೆ
ಆತ್ಮಗೌರವಕೆ...., ಮಣ್ಣುಕಾಡುಗಳ ಕೂಡಿಕೆಗೆ
ಮಕ್ಕಳಾದವರು ಮಕ್ಕಳಂತೆ ಹೆತ್ತವರ
ಕಂಡವರು ನೂರೆಂಟು ಜೀವರಾಶಿಗಳ ತನ್ನಂತೆ.

ದೂರದಿಂದಲೇ ನಮಿಸಿದರು ಹುಲಿಗೆ
ಆನೆಗಳ ಮನೆದೇವರ ಮಾಡಿಕೊಂಡವರು
ಪೇರಿಸಿಟ್ಟು ಕಾಡುಗಲ್ಲುಗಳ
ಮಾಳದ ಒಡೆಯನೆಂದವರು
ತಿಲಕವಿಟ್ಟು ಮರದ ಬೊಡ್ಡೆಗೆ
ಕಾಡಪ್ಪನೆಂದವರು
ಸೊಡರು ಹಚ್ಚಿ ತಲಪರಿಗೆಯ ಮುಂದೆ
ಜಲದೇವಿಯರ ಕಂಡವರು.

ಇವರಲ್ಲಿ ಇಲ್ಲ....,
ಹುಲಿಯ ಕೋರೆ-ಪಂಜಗಳು
ಆನೆಯ ದಂತ-ಚರ್ಮಗಳು
ಸಾಗುವಾನಿ ಕರಿಮರಗಳ
ಮಂಚ ಟೀಪಾಯಿ ಸೋಫಾ ಸೆಟ್ಟುಗಳು...
ಚಿನ್ನದಾಭರಣಗಳು ಕಾರು ಬಂದೂಕಗಳು
....ಕೊನೆಗೆ ಉಣ್ಣುವ ತಟ್ಟೆಗಳು...
ಲಂಗೋಟಿಗಳು...

ಇವರು ಬಂಗಲೆಗಳ ಕಟ್ಟಲಿಲ್ಲ
ಮರಮಟ್ಟುಗಳ ಹೊಟ್ಟಲಿಲ್ಲ
ನದಿ ಸಾಗರಗಳಿಗೆ ವಿಷ ಬಿತ್ತಲಿಲ್ಲ
ಕಾಡಿಗೆ ಬೆಂಕಿಗೆ ಶುದ್ಧಕಾಳಜಿಯ ಅಡ್ಡಗೆಡವಿ
ಕಾಡ್ಗಿಚ್ಚಿಗೆ ಸಡ್ಡುಹೊಡೆದವರು.

ಇವರು ಕಪ್ಪು ಬಣ್ಣದವರು
ಉಪ್ಪಿಗೂ ಪರದಾಡುವವರು
ಅಕ್ಷರದ ಬೆಳಕಿಲ್ಲದವರು
ಕಲಿತ ಪದಗಳಲ್ಲೇ
ಜೀವ-ಕಾವ್ಯ ಕಟ್ಟಿದವರು
ಭೂತಾಯಿಗೆ ಬಸಿರಡಿಗೆ ಮಾಡಿಟ್ಟವರು
ಇವರೇ ಈ ನೆಲದ ಮೂಲ ಜೀವಾತ್ಮರು
ನಿರ್ಬೀಜರ ಧಾಳಿಗೆ ತುತ್ತಾಗಿ
ನಿರಾಶ್ರಿತರಾದವರು.

ಕಾಡ ಮರೀಚಿಕೆಯಲ್ಲಿ ನಾಡಿಂದ
ಹೊರಗಾಗಿ ಬಿದಿರು ತಡಿಕೆಗಳ ಗೌಗತ್ತಲ
ನಡುವೆ ಪರತಂತ್ರರಾದವರು
ತಲೆತಲಾಂತರದ ಅನ್ನಪಾನ ವಂಚಿತರು.
ಹೃದಯ ಪುಪ್ಪುಸಗಳ ಅನ್ಯಾಕ್ರಮಣದ
ಮುಂದೆ ಬಿಡುಗಣ್ಣು ಬಿಟ್ಟವರು.
ಕಾಡ ಖಾಕಿಗಳ ನಾಡ ಖಾದಿಗಳ
ಕಾಯ್ದೆಕಾನೂನುಗಳ ಬಿಚ್ಚುಗತ್ತಿಯಡಿ
ನಿತ್ಯವಿಹ್ವಲರು ಇವರೇ
ಈ ಭೂಮಿಯ ಮುಕ್ಕಾಲುಪಾಲಿನವರು.

ಮಾರ್ಕ್ಸ್, ಲೋಹಿಯಾರ ನಂತರ...

ಬಂಡವಾಳಶಾಹಿ–ಸಾಮ್ರಾಜ್ಯಶಾಹಿಗಳನ್ನು ಅರ್ಥೈಸಿಕೊಳ್ಳಲು ಸಿದ್ಧಪಡಿಸಿದ ಸ್ಥೂಲ ಟಿಪ್ಪಣಿ

ವಿಶ್ಲೇಷಣೆ

ಜನ ಸಾಮಾನ್ಯರ ಈ ಪ್ರತಿರೋಧ–ಭಾರತದಲ್ಲೇ ಆಗಲಿ, ವಿಶ್ವದಲ್ಲೇ ಆಗಲಿ–ಒಂದು ನಿರ್ದಿಷ್ಟ ಸೈದ್ಧಾಂತಿಕ ಚೌಕಟ್ಟಿಗೆ ಒಳಪಟ್ಟು ನಡೆಯುತ್ತಿಲ್ಲ. ವಿಶಾಲಾರ್ಥದಲ್ಲಿ ಅದು ಎಡಪಂಥೀಯ ವಿಚಾರಧಾರೆಯ ಕಕ್ಷೆಯೊಳಗೆ ಇದ್ದರೂ, ಮಾರ್ಕ್ಸ್‌ವಾದಿ/ ಎಡಪಂಥೀಯ ಎಂಬ ಸಾಂಪ್ರದಾಯ ಚೌಕಟ್ಟಿನಲ್ಲಿ ಪ್ರತಿರೋಧದ ಗುಂಪುಗಳು ತಮ್ಮನ್ನು ಗುರುತಿಸಿಕೊಂಡಿಲ್ಲ; ಅಲ್ಲದೆ ಸಾಂಪ್ರದಾಯಿಕ ಎಡಪಂಥೀಯ ಪರಿಣತರ ನಿರೀಕ್ಷೆಯನ್ನು ಮತ್ತು ಲೆಕ್ಕಾಚಾರವನ್ನು ಈ ಪ್ರತಿರೋಧಗಳು ಹುಸಿಗೊಳಿಸಿವೆ. ಈ ಹಿನ್ನೆಲೆಯಲ್ಲಿ ಕಾಲಾಂತರದಲ್ಲಿ ಸಮಾಜವಾದದ ಸೈದ್ಧಾಂತಿಕ ದೃಷ್ಟಿಕೋನವೂ ಮಾರ್ಪಾಡಾಗುವುದು ಅತ್ಯವಶ್ಯವಾಗಿದೆ.

ಸುನಿಲ್
ಅನು: ಮಂಗ್ಳೂರ ವಿಜಯ

ಜಾಗತೀಕರಣದೊಂದಿಗೆ ವಿಶ್ವ ಬಂಡವಾಳಶಾಹಿಯು ಹೊಸ ಘಟ್ಟವನ್ನು ಪ್ರವೇಶಿಸಿದೆ. ಇದರಿಂದಾಗಿ ವಿಶ್ವದ ಮೇಲೆ ಕೆಲವು ಶ್ರೀಮಂತ ರಾಷ್ಟ್ರಗಳ ಪ್ರಭುತ್ವ ಸ್ಥಾಪನೆಯಾಗಿದ್ದು, ವಿಶ್ವದಲ್ಲಿ ಅಸಮಾನತೆ ಹೆಚ್ಚಿದೆ. ಈ ಶ್ರೀಮಂತ ರಾಷ್ಟ್ರಗಳು ತಮ್ಮ ಆಳ್ವಿಕೆಯ ಜಾಲವನ್ನು ಬೀಸಿ, ವಿಶ್ವ ಅರ್ಥ ವ್ಯವಸ್ಥೆಯನ್ನು ನಿಯಂತ್ರಣಕ್ಕೆ ಒಳಪಡಿಸಿಕೊಂಡಿವೆ. ವಿಶ್ವದ ಇತರ ರಾಷ್ಟ್ರಗಳು ತಮ್ಮನ್ನು ಈ ಶ್ರೀಮಂತ ರಾಷ್ಟ್ರಗಳ ಹೂಡಿಕೆ ಮತ್ತು ವಾಣಿಜ್ಯಕ್ಕೆ ಹೆಚ್ಚು ಹೆಚ್ಚು ತೆರೆದುಕೊಳ್ಳುತ್ತಿವೆ. ರಾಷ್ಟ್ರೀಯ ಸರ್ಕಾರಗಳು ತಮ್ಮ ಅರ್ಥ ವ್ಯವಸ್ಥೆಯ ಮೇಲೆ ನಿಯಂತ್ರಣವನ್ನು ಕಳೆದುಕೊಂಡು, ಬಹುರಾಷ್ಟ್ರೀಯ ಕಂಪನಿಗಳಿಗೆ ಒದಗಿಸುವ ಏಜೆನ್ಸಿಗಳ ಮಟ್ಟಕ್ಕೆ ಇಳಿದಿವೆ. ವಿಶ್ವ ವಾಣಿಜ್ಯ ಸಂಘಟನೆ (World Trade Organisation – WTO), ಅಂತರರಾಷ್ಟ್ರೀಯ ಹಣಕಾಸು ನಿಧಿ International Monitory Fund- IMF), ವಿಶ್ವ ಬ್ಯಾಂಕು(World Bank-WB), ಏಷ್ಯಾ ಅಭಿವೃದ್ಧಿ ಬ್ಯಾಂಕ್ (Asian Development Bank-ADB) ಮುಂತಾದವುಗಳೂ ಈ ಹೊಸ ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಸ್ಥಾಪಿಸುವುದರಲ್ಲಿ, ಬಲಗೊಳಿಸುವುದರಲ್ಲಿ ಮತ್ತು ಜಾರಿಗೊಳಿಸುವುದರಲ್ಲಿ ನಿರತವಾಗಿವೆ.

ವಿಶ್ವ ಬಂಡವಾಳಶಾಹಿಯ ಈ ಹೊಸ ಘಟ್ಟವು ಹೊಸ ಬಿಕ್ಕಟ್ಟನ್ನು ಸೃಷ್ಟಿಸಿದೆ. ನಿರುದ್ಯೋಗ, ಬಡತನ, ಅವಕಾಶಹೀನತೆ, ಸ್ಥಳಾಂತರ, ಆತ್ಮಹತ್ಯೆ, ಅಪೌಷ್ಟಿಕತೆ, ಬರಗಾಲ, ಪರಿಸರನಾಶ, ಯುದ್ಧ, ಸಾರ್ವಭೌಮತೆಗೆ ಸಂಚಕಾರ ಮುಂತಾದವುಗಳು ಈ ಬಿಕ್ಕಟ್ಟಿನ ವಿವಿಧ ರೂಪಗಳಾಗಿವೆ. ಇವುಗಳ ವಿರುದ್ಧ ಪ್ರತಿಭಟನೆಗಳು, ಜನಾಂದೋಲನಗಳು, ದಂಗೆಗಳು, ಹಿಂಸಾಕ್ರಾಂತಿಗಳ ಮೂಲಕ ಜನರ ಪ್ರತಿರೋಧ ಕಾಣಿಸಿಕೊಂಡಿದೆ.

ಲ್ಯಾಟಿನ್ ಅಮೆರಿಕ ಕಂಡ ಅದ್ಭುತಗಳು

ಅಮೆರಿಕಾ ಮತ್ತು ಅಲ್ಲಿನ ಬಹುರಾಷ್ಟ್ರೀಯ ಕಂಪನಿಗಳು, ಲ್ಯಾಟಿನ್ ಅಮೆರಿಕಾ ರಾಷ್ಟ್ರಗಳ ಆರ್ಥಿಕತೆಗಳ ಮೇಲೆ ಸಂಪೂರ್ಣ ಸ್ವಾಮ್ಯ ಸಾಧಿಸಿದ ಬಳಿಕ ತಲೆದೋರಿದ ಬಿಕ್ಕಟ್ಟು ಮತ್ತು ಅದರ ವಿರುದ್ಧ ಸಂಘಟಿತಗೊಂಡ ಜನತೆಯ ಪ್ರತಿರೋಧಗಳಿಗೆ ಲ್ಯಾಟಿನ್ ಅಮೆರಿಕಾ ಉತ್ತಮ ಉದಾಹರಣೆಯಾಗಿದೆ. ಜಾಗತೀಕರಣ ಮತ್ತು ಉದಾರೀಕರಣದ ಜಾಲಕ್ಕೆ ವಿಶ್ವದಲ್ಲಿ ಮೊದಲ ಬಾರಿಗೆ ಸಿಲುಕಿದ್ದು, ಲ್ಯಾಟಿನ್ ಅಮೆರಿಕಾ ಲ್ಯಾಟಿನ್, ಅಮೆರಿಕಾ ರಾಷ್ಟ್ರಗಳು. ಸರ್ವನಾಶಕ್ಕೆ ಮೊದಲು ತುತ್ತಾಗಿದ್ದೂ ಈ ರಾಷ್ಟ್ರಗಳೇ; ಅನಂತರ ಜನತೆಯಿಂದ ತೀವ್ರವಾಗಿ ಪ್ರತಿರೋಧಗಳು ರೂಪುಗೊಂಡಿದ್ದೂ ಇಲ್ಲೇ.

ಅನೇಕ ರಾಷ್ಟ್ರಗಳು ತಮ್ಮ ಕರೆನ್ಸಿ ಅಮೆರಿಕ ಡಾಲರ್‌ನೊಂದಿಗೆ ಸಂಪೂರ್ಣವಾಗಿ ಪರಿವರ್ತನೆಗೊಳಿಸಲರ್ಹ ಎಂದು ತೀರ್ಮಾನಿಸಿದವು. ಇನ್ನೂ ಕೆಲವು ರಾಷ್ಟ್ರಗಳು ಡಾಲರನ್ನೇ ತಮ್ಮ ರಾಷ್ಟ್ರದ ಕರೆನ್ಸಿಯಾಗಿ ಸ್ವೀಕರಿಸುವ ಮಟ್ಟಿಗೆ IMF-WB ನೀಡಿದ ನಿರ್ದೇಶನಗಳನ್ನು ಪಾಲಿಸಿದವು. ಇದರ ಫಲಿತಾಂಶವೂ ಸ್ಪಷ್ಟವಾಗಿ ಕಾಣಿಸಿತು. ಬಡತನ, ನಿರುದ್ಯೋಗ, ಅವಕಾಶಹೀನತೆ, ದಿವಾಳಿಯೇಳುವಿಕೆಗಳು ಗಗನಕ್ಕೇರಿದವು. ಪ್ರತಿರೋಧವೂ ಪ್ರಬಲವಾಗಿ ರೂಪುಗೊಂಡಿತು. ಪ್ರತಿಭಟನೆ, ಜನಾಂದೋಲನ, ಹಿಂಸಾಕ್ರಾಂತಿಗಳ ಪರಿಣಾಮವಾಗಿ ಅಮೆರಿಕ ಕೈಗೊಂಬೆ ಸರ್ಕಾರಗಳು ಉರುಳಿದವು. ಅಮೆರಿಕಾ



ಲೋಹಿಯಾ

ವಿರೋಧಿ ಅಲೆ ಎಲ್ಲೆಡೆ ವ್ಯಾಪಿಸಿತು. ಜಾಗತೀಕರಣ ನೀತಿ ವಿರುದ್ಧ ಜನ ಸಿಡಿದೆದ್ದರು. ಎಡಪಂಥೀಯ ಸರ್ಕಾರಗಳು ಜನಬೆಂಬಲ ಗಳಿಸಿ ಅಧಿಕಾರಕ್ಕೆ ಬಂದವು. ಅಮೆರಿಕಾ–IMF ನಿರ್ದೇಶನಗಳನ್ನು ಅನುಸರಿಸುತ್ತಿದ್ದ ದೇಶಗಳಲ್ಲಿ ಜನಾಂದೋಲನಗಳೂ ನಡೆಸಿದ ಹೋರಾಟದಿಂದಾಗಿ ಬ್ರೆಜಿಲ್, ವೆನಜ್ಯುಯೆಲಾ, ಬೊಲಿವಿಯಾ. ಅರ್ಜೆಂಟೀನಾ, ಉರುಗ್ವೆ, ಚಿಲಿ, ಹೈಟಿ... ಹೀಗೆ ಒಂದಾದ ಮೇಲೊಂದರಂತೆ ಅನೇಕ ರಾಷ್ಟ್ರಗಳು ಎಡಪಂಥೀಯರ ಕೈವಶವಾದವು. ೨೦೦೬ ರಲ್ಲಿ ಹಲವಾರು ರಾಷ್ಟ್ರಗಳಲ್ಲಿ ಚುನಾವಣೆಗಳು ನಡೆಯಲಿದ್ದು, ಈ ಪಟ್ಟಿಗೆ ಇನ್ನೂ ಹಲವು ಸೇರ್ಪಡೆಯಾಗಲಿವೆ. ವೆನಜ್ಯುಯೆಲಾದ ಅಧ್ಯಕ್ಷ ಹ್ಯೂಗೊ ಚಾವೆಜ್, ಬೊಲಿವಿಯಾ ಅಧ್ಯಕ್ಷ ಇವೊ ಮೊರೇಲ್ಸ್ ಇಬ್ಬರೂ ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋ ಜೊತೆ ಸೇರಿ, ಅಮೆರಿಕಾದ ಹೆಜಿಮನಿಗೆ ಬಹಿರಂಗವಾಗಿ ಸವಾಲು ಹಾಕಿದ್ದಾರೆ. NAFTA (North American Free Trade Area) ಮಾದರಿಯಲ್ಲಿ FTAA (Free Trade Area or America) ರಚಿಸಲು ಬುಷ್ ನಡೆಸಿದ ಪ್ರಯತ್ನಗಳು ವಿಫಲವಾಗಿರುವುದು ಇಲ್ಲಿ ಗಮನಾರ್ಹವಾಗುತ್ತದೆ.

ಲ್ಯಾಟಿನ್ ಅಮೆರಿಕಾದಲ್ಲಿ ಅಚ್ಚರಿಗಳು ಸಂಭವಿಸುತ್ತಿವೆ. ಕಳೆದ ಡಿಸೆಂಬರ್‌ನಲ್ಲಿ ಇವೊ ಮೊರೇಲ್ಸ್ ಬೊಲಿವಿಯಾ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾದಾಗ, ನ್ಯೂಯಾರ್ಕ್ ಟೈಂಸ್ ಪತ್ರಿಕೆ ತನ್ನ ಸಂಪಾದಕೀಯದಲ್ಲಿ (೨೪.೧೨.೦೫) "ಲ್ಯಾಟಿನ್ ಅಮೆರಿಕದಲ್ಲಿ ರಾಜಕೀಯವು ಎಡಪಂಥೀಯರ ಕೈವಶವಾಗುತ್ತಿರುವುದು ನಿಚ್ಚಳವಾಗಿದೆ. ದ. ಅಮೆರಿಕಾದ ೩೬.೫೦ ಕೋಟಿ ಜನರ ಪೈಕಿ

೦.೦೦ ಕೋಟಿ ಜನ ಈಗ ಎಡ ಪಂಥೀಯ ಆಡಳಿತಕ್ಕೆ ಒಳಪಟ್ಟಿದ್ದಾರೆ" ಎಂದು ದಾಖಲಿಸಿತ್ತು. ಮೊರೇಲ್ಸ್ ಜಯಭೇರಿ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ.

೧. ಆದಿವಾಸಿ ಜನಾಂಗಕ್ಕೆ ಸೇರಿ, ಲ್ಯಾಟಿನ್ ಅಮೆರಿಕಾದ ರಾಷ್ಟ್ರವೊಂದರ ಅಧ್ಯಕ್ಷರಾಗಿ ಚುನಾಯಿತರಾದ ಮೊದಲ ಪ್ರತಿನಿಧಿ ಮೊರೇಲ್ಸ್. ಅವರು ತಮ್ಮ ಮೊದಲ ಭಾಷಣದಲ್ಲಿ " ೫೦೦ ವರ್ಷಗಳ ನಿರಂತರ ಪ್ರತಿರೋಧದ ಬಳಿಕ ಆದಿವಾಸಿ ಜನಾಂಗದವರ ಆಶೋತ್ತರವನ್ನು ಈಡೇರಿಸುವುದು ಸಾಧ್ಯವಾಗುತ್ತಿದೆ. ಕಳೆದುಕೊಂಡಿರುವ ಸಶಕ್ತತೆ ಮತ್ತು ಹೈಡ್ರೊ ಕಾರ್ಬನ್‌ಗಳೇ ಮೊದಲಾದ ಪ್ರಾಕೃತಿಕ ಸಂಪತ್ತು ಮತ್ತೆ ಆದಿವಾಸಿಗಳಿಗೆ ದೊರಕುವಂತೆ ಮಾಡಿಕೊಳ್ಳಲು ಈ ಅಧಿಕಾರದ ಬಳಕೆಯಾಗಬೇಕಾಗಿದೆ" ಎಂದಿದ್ದರು.

೨. ಸ್ವತಃ ರೈತರಾಗಿದ್ದ ಮೊರೇಲ್ಸ್ ಕೊಕೊ ಬೆಳೆಗಾರರ ಸಂಘದ ನೇತಾರರಾಗಿ ಹಂತದ ಮೂಲಕ ರಾಷ್ಟ್ರದ ಅಧ್ಯಕ್ಷರಾದವರು.

೩. ಅವರು ಸ್ಥಾಪಿಸಿದ್ದು "Movement towards Socialism" ಪಕ್ಷವನ್ನು. ರೂಪುಗೊಂಡಿದ್ದು ಸಮಾಜವಾದಿಯಾಗಿ, ತಮ್ಮ ಮಿತ್ರ ಚಾವೆಜ್‌ರಂತೆ, ಲ್ಯಾಟಿನ್ ಅಮೆರಿಕಾ ಕ್ರಾಂತಿಕಾರಿಗಳಿಂದ ಸ್ಫೂರ್ತಿ ಪಡೆದವರು.

೪. ಲ್ಯಾಟಿನ್ ಅಮೆರಿಕಾದ ಮೇಲೆ, ಅಮೆರಿಕಾ ಹೊಂದುತ್ತಾ ಬಂದಿರುವ ಸ್ವಾಮ್ಯವನ್ನು ಪ್ರಶ್ನಿಸಿದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಾರರಿಗೆ ಕೇವಲ ಲ್ಯಾಟಿನ್ ಅಮೆರಿಕಾದಲ್ಲಷ್ಟೇ ಅಲ್ಲದೆ ಇಡೀ ವಿಶ್ವದಲ್ಲಿ ಏಳುತ್ತಿರುವ ಪ್ರತಿರೋಧದ ಅಲೆಗೆ ಸಂಕೇತ ಮೊರೇಲ್ಸ್.

ವಿಶ್ವದ ಇತರ ಭಾಗಗಳಲ್ಲೂ ಇಂಥ ಪ್ರತಿರೋಧ ಎದ್ದಿದೆ. ಬದುಕು ದುರ್ಭರವಾಗುತ್ತಾ ಬಂದು, ಜನತೆಯಲ್ಲಿ ಅತೃಪ್ತಿ ಹೆಚ್ಚುತ್ತಿದೆ. ಭಾರತದಲ್ಲಿ ಜಾಗತೀಕರಣಕ್ಕೆ ಬಲಿಪಶುವಾಗುತ್ತಿರುವ ಎರಡು ವಿಶಿಷ್ಟ ಸಮುದಾಯಗಳೆಂದರೆ, ರೈತರು ಮತ್ತು ಆದಿವಾಸಿಗಳು. ತಮ್ಮ ಬದುಕು ಮತ್ತು ಜೀವನಾವಶ್ಯಕ ಅವಶ್ಯಕತೆಗಳ ಮೇಲೆ ಮಾರಕಾಂತಿಕ ಆಘಾತ ನಡೆದಾಗ, ಈ ಜನವರ್ಗಗಳೂ ಬೀದಿಗಿಳಿದು, ಪ್ರತಿರೋಧ ಸೂಚಿಸುವುದು ಅನಿವಾರ್ಯವಾಗಿದೆ.

ಈ ಸಂದರ್ಭದಲ್ಲಿ ಇತ್ತೀಚಿನ ಎರಡು ಬೆಳವಣಿಗೆಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಒಂದು:

ಕಳೆದ ವರ್ಷ ರಾಜಸ್ಥಾನದ ಎರಡು ಜಿಲ್ಲೆಗಳಾದ ಗಂಗಾನಗರ ಮತ್ತು ಬಿಕಾನೇರಗಳಲ್ಲಿ ಇಂದಿರಾ ಗಾಂಧಿ ಕೆನಲ್‌ನಿಂದ ನೀರಾವರಿಗಾಗಿ ನೀರು ಒದಗಿಸುವ ವಿಚಾರದಲ್ಲಿ ರೈತರ ಆಂದೋಲನ ತಿಂಗಳಾನುಗಟ್ಟಲೆ ನಡೆಯಿತು. ಚಳವಳಿ ತೀವ್ರಗೊಂಡಾಗ ಪೊಲೀಸ್ ಫೈರಿಂಗ್ ನಡೆಯಿತು. ಅನೇಕರು ಅಸು ನೀಗಿದರು. ಆದರೂ ಜನ ಬೀದಿಗೆ ಬರುವುದು ನಿಲ್ಲಲಿಲ್ಲ. ಪೊಲೀಸ್ ಗೋಲಿಬಾರ್‌ಗಳೂ ಮುಂದುವರೆದವು. ರೈತರ ಹೆಣಗಳೂ ಉರುಳಿದವು. ಕೊನೆಗೆ ರಾಜಸ್ಥಾನದ ಬಿಜೆಪಿ ಸರ್ಕಾರ, ರೈತರೊಂದಿಗೆ ಮಾತುಕತೆ ನಡೆಸುವುದು ಅನಿವಾರ್ಯವಾಯಿತು (ಆದರೆ ಸರ್ಕಾರ ತನ್ನ ಮಾತನ್ನು ಉಳಿಸಿಕೊಳ್ಳಲಿಲ್ಲ ಎಂಬುದು ಬೇರೆ ವಿಚಾರ). ಇದರ ಪರಿಣಾಮವಾಗಿ ರಾಜ್ಯದ ಇತರ ಭಾಗಗಳಲ್ಲೂ ನೀರು ಮತ್ತು ವಿದ್ಯುತ್ ಪೂರೈಕೆಗಾಗಿ ರೈತರು ಚಳವಳಿ ದಾರಿ ಹಿಡಿದರು.

ಕಳೆದ ವರ್ಷ ರಾಜಸ್ಥಾನದ ಎರಡು ಜಿಲ್ಲೆಗಳಾದ ಗಂಗಾನಗರ ಮತ್ತು ಬಿಕಾನೇರಗಳಲ್ಲಿ ಇಂದಿರಾ ಗಾಂಧಿ ಕೆನಲ್‌ನಿಂದ ನೀರಾವರಿಗಾಗಿ ನೀರು ಒದಗಿಸುವ ವಿಚಾರ ದಲ್ಲಿ ರೈತರ ಆಂದೋಲನ ತಿಂಗಳಾನುಗಟ್ಟಲೆ ನಡೆಯಿತು. ಚಳವಳಿ ತೀವ್ರಗೊಂಡಾಗ ಪೊಲೀಸ್ ಫೈರಿಂಗ್ ನಡೆ ಯಿತು. ಅನೇಕರು ಅಸು ನೀಗಿದರು. ಆದರೂ ಜನ ಬೀದಿಗೆ ಬರುವುದು ನಿಲ್ಲಲಿಲ್ಲ. ಪೊಲೀಸ್ ಗೋಲಿಬಾರ್ ಗಳೂ ಮುಂದುವರೆದವು. ರೈತರ ಹೆಣಗಳೂ ಉರುಳಿದವು. ಕೊನೆಗೆ ರಾಜಸ್ಥಾನದ ಬಿಜೆಪಿ ಸರ್ಕಾರ, ರೈತ ರೊಂದಿಗೆ ಮಾತುಕತೆ ನಡೆಸುವುದು ಅನಿವಾರ್ಯವಾಯಿತು (ಆದರೆ ಸರ್ಕಾರ ತನ್ನ ಮಾತನ್ನು ಉಳಿಸಿ ಕೊಳ್ಳಲಿಲ್ಲ ಎಂಬುದು ಬೇರೆ ವಿಚಾರ). ಇದರ ಪರಿಣಾಮವಾಗಿ ರಾಜ್ಯದ ಇತರ ಭಾಗಗಳಲ್ಲೂ ನೀರು ಮತ್ತು ವಿದ್ಯುತ್ ಪೂರೈಕೆಗಾಗಿ ರೈತರು ಚಳವಳಿ ದಾರಿ ಹಿಡಿದರು. ರಾಜಧಾನಿ ಜೈಪುರದ ೫೦.೦೦೦ ರೈತರ ದಂಡು ಬೀಡು ಬಿಟ್ಟು, ಸರ್ಕಾರಕ್ಕೆ ನಡುಕ ಉಂಟು ಮಾಡಿದರು. ಕಳೆದ ಕೆಲವು ವರ್ಷಗಳಲ್ಲಿ ಇಂಥ ಅನೇಕ ಪ್ರತಿರೋಧಗಳು ದೇಶಾದ್ಯಂತ ನಡೆದಿವೆ.



ಗಾಂಧೀಜಿ

ರಾಜಧಾನಿ ಜೈಪುರದ ೫೦.೦೦೦ ರೈತರ ದಂಡು ಬೀಡು ಬಿಟ್ಟು, ಸರ್ಕಾರಕ್ಕೆ ನಡುಕ ಉಂಟು ಮಾಡಿತ್ತು. ಕಳೆದ ಕೆಲವು ವರ್ಷಗಳಲ್ಲಿ ಇಂಥ ಅನೇಕ ಪ್ರತಿರೋಧಗಳು ದೇಶಾದ್ಯಂತ ನಡೆದಿವೆ.

ಎರಡು:

ಒರಿಸ್ಸಾದ ಕಳಿಂಗ ನಗರದಲ್ಲಿ ಟಾಟಾ ಸ್ಟೀಲ್ ಸ್ಥಾವರ ಪುನರಾರಂಭವಾಗಿದ್ದರಿಂದ ಸ್ಥಳಾಂತರಗೊಂಡ ಆದಿವಾಸಿಗಳು ಸಂಘಟನೆಗೊಂಡು ಭಾರಿ ಪ್ರತಿರೋಧ ತೋರಿದರು. ನವೆಂಬರ್-ಡಿಸೆಂಬರ್ ೨೦೦೫ರಲ್ಲಿ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆಗಳು ನಡೆದವು; ಜನವರಿ ೨ ರಂದು ಪೊಲೀಸ್ ಗೋಲಿಬಾರ್‌ಗೆ ಹದಿಮೂರು ಜನ ಆದಿವಾಸಿಗಳು ಪ್ರಾಣಕೊಟ್ಟರು. ಇದು ಬಿಡಿ ಪ್ರಕರಣವೇನಲ್ಲ. ಒರಿಸ್ಸಾ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಜನತೆ ಪ್ರತಿರೋಧ ವ್ಯಕ್ತಪಡಿಸುವುದು, ಅದನ್ನು ಹತ್ತಿಕ್ಕಲು ಪ್ರಭುತ್ವ ಗೋಲಿಬಾರ್ ಮಾಡುವುದು ನಿರಂತರವಾಗಿ ನಡೆಯುತ್ತಾ ಬಂದಿದೆ. ಒರಿಸ್ಸಾದಲ್ಲೇ ರಾಯಗಢ ಜಿಲ್ಲೆಯ ಕಾಶಿಪುರದಲ್ಲಿ ಒಂದೆರಡು ವರ್ಷಗಳ ಹಿಂದೆ ಆದಿವಾಸಿಗಳು ಪೊಲೀಸ್ ಗುಂಡುಗಳಿಗೆ ಬಲಿಯಾಗಿದ್ದರು.

ಕಳಿಂಗ ನಗರ ಗೋಲಿಬಾರ್ ಪ್ರಕರಣವು ಪೂರ್ವ ಭಾರತಾದ್ಯಂತ ವಿದ್ಯುತ್ ಸಂಚಾರವನ್ನುಂಟು ಮಾಡಿತು. ವಿವಿಧ ಪ್ರಾಂತಗಳಲ್ಲಿ ಪ್ರತಿರೋಧ ವ್ಯಕ್ತವಾಯಿತು. ಒರಿಸ್ಸಾ, ಝಾರಖಂಡ್ ಮತ್ತು ಛತ್ತೀಸ್‌ಗಢ ರಾಜ್ಯಗಳಿಗೂ ಈ ಪ್ರತಿರೋಧದ ಜ್ವಾಲೆ ಹಬ್ಬಿತು. ಪ್ರತಿಭಟನಾ ಮೆರವಣಿಗೆಗಳು, ಬಂದ್‌ಗಳು ನಡೆದು ಜನತೆಯ ಅಪಾರ ಬೆಂಬಲವನ್ನು ಪಡೆಯಿತು. ಈ ರಾಜ್ಯಗಳಲ್ಲಿ ಆದಿವಾಸಿಗಳು ಬೀದಿಗಿಳಿದು, ತಮ್ಮ ಆಶೋತ್ತರಗಳಿಗೆ ಸ್ಪಂದಿಸದ ಸರ್ಕಾರದ ವಿರುದ್ಧ ಸಿಡಿದು ನಿಂತರು. ಇದು ಕಳಿಂಗ ನಗರದ ಆದಿವಾಸಿಗಳ ಮೇಲೆ ಪ್ರಭಾವ ಬೀರಿತು. ಮೊದಲು ಪೊಲೀಸ್ ಗುಂಡಿಗೆ ಬಲಿಯಾದ ಆದಿವಾಸಿಗಳ ಕುಟುಂಬಕ್ಕೆ ಪರಿಹಾರ ಧನ ಮತ್ತು ಉದ್ಯೋಗ ಹಾಗೂ ಟಾಟಾ ಸ್ಟೀಲ್ ಸ್ಥಾವರಕ್ಕೆಂದು ವಶಪಡಿಸಿಕೊಳ್ಳಲಾಗಿದ್ದ ಜಮೀನಿಗೆ ಪರಿಹಾರ ಧನ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದ ಆದಿವಾಸಿಗಳು, ಅನಂತರ ತಮ್ಮ ಒತ್ತಾಯಗಳನ್ನು ಬದಲಾಯಿಸಿಕೊಂಡರು. ಅವರು ಪರಿಹಾರ ಧನ ಮತ್ತು ಉದ್ಯೋಗ ತಿರಸ್ಕರಿಸಿ, ಯಾವ ಕಾರಣಕ್ಕೂ ತಮ್ಮ ಜಮೀನನ್ನು ಸ್ಥಾವರಕ್ಕೆ ಬಿಟ್ಟು ಕೊಡುವುದಿಲ್ಲ ಎಂದು ಪಟ್ಟು ಹಿಡಿದರು; ಇಂಥ ವಿನಾಶಕಾರಿ ಸ್ಥಾವರವನ್ನು ಸ್ಥಾಪಿಸಲೇ ಕೂಡದೆಂದು ಆಗ್ರಹಪಡಿಸಿದರು.

ಪೊಲೀಸ್ ಗೋಲಿಬಾರ್ ನಡೆದು ಎರಡೂವರೆ ತಿಂಗಳಾಗಿದೆ. ಪರದೀಪ್ ಹೆದ್ದಾರಿಯಲ್ಲಿ ಆದಿವಾಸಿಗಳ, ರೈತರ, ಕಾರ್ಮಿಕರ, ಯುವ ಜನರ 'ರಸ್ತೆ ತಡೆ' ಸತ್ಯಾಗ್ರಹ ಇನ್ನೂ ನಡೆಯುತ್ತಿದೆ. ಸ್ವತಂತ್ರ ಭಾರತದಲ್ಲಿ ಅತ್ಯಂತ ದೀರ್ಘಕಾಲದವರೆಗೆ ರಾಷ್ಟ್ರೀಯ ಹೆದ್ದಾರಿ ತಡೆ ನಡೆದ ಉದಾಹರಣೆ ಇದು. ಅಲ್ಲಿ ಈಗ ಗೋಲಿಬಾರ್‌ಗೆ ಆದೇಶ ನೀಡುವ ಧೈರ್ಯ ಒರಿಸ್ಸಾ ರಾಜ್ಯ ಸರ್ಕಾರಕ್ಕೂ ಇಲ್ಲ.

ಕಳಿಂಗ ನಗರಕ್ಕಿಂತ ಮುಂಚೆ ಒರಿಸ್ಸಾದಲ್ಲಿ ಅನೇಕ ಪ್ರತಿರೋಧಗಳು ಕಾಣಿಸಿವೆ. ಸ್ಥಳಾಂತರ, ಪೊಲೀಸ್ ದೌರ್ಜನ್ಯ, ಪ್ರಾಕೃತಿಕ ಸಂಪನ್ಮೂಲಗಳ ಮೇಲಣ ಒಡೆತನ ಮುಂತಾಗಿ ಹಲವು ವಿಷಯಗಳಿಗೆ ಸಂಬಂಧಿಸಿದಂತೆ, ಸಾಮಾನ್ಯ ಜನರು ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಗಾಂಧಾರಮರ್ದನ, ಚಿಲಿಕಾ, ಬಲಿಯಾಪಾಲ್, ಗೋಪಾ

ಲಪುರ, ಕಾಶಿಪುರ, ಲಾಂಜಿಗಢ, ಸುಕ್ತೆಲ್ ಮುಂತಾದ ಕಡೆ ಜನಸಾಮಾನ್ಯರು ತಮ್ಮ ಆಕ್ರೋಶವನ್ನು ದಾಖಲಿಸಿದ್ದಾರೆ. ಭಾರತೀಯ ಹಾಗೂ ವಿದೇಶಿ ಕಂಪನಿಗಳೊಂದಿಗೆ ಒರಿಸ್ಸಾ, ಝಾರಖಂಡ ಮತ್ತು ಛತ್ತೀಸಗಢ ರಾಜ್ಯ ಸರ್ಕಾರಗಳು ಮಾಡಿಕೊಂಡ ಒಪ್ಪಂದಗಳು ತಮ್ಮನ್ನು ಸ್ಥಳಾಂತರಗೊಳಿಸಿ, ನಿರ್ವಸಿತಗೊಳಿಸುವುದು ಸ್ಪಷ್ಟವಾದ ಬಳಿಕ, ಜನಸಾಮಾನ್ಯರು ಪಟ್ಟುಹಿಡಿದು ಸರ್ಕಾರಗಳ ವಿರುದ್ಧ ನಿಂತಿದ್ದಾರೆ. ಆದಿವಾಸಿಗಳ ಹಾಗೂ ಜನತೆಯ ಆಕ್ರೋ ಶದ ಮುಂದೆ ಸರ್ಕಾರಗಳು ಥರಗುಟ್ಟುತ್ತಿವೆ.

ಭಾರತದ ವಿವಿಧ ಭಾಗಗಳಲ್ಲಿ ಜನತೆಯ ಪ್ರತಿರೋಧದ ಅಸಂಖ್ಯ ಪ್ರಕರಣಗಳು ಸಂಭವಿಸುತ್ತಿವೆ. ಎನ್ನಲು ಸಂಕೇತ ಮಾತ್ರವಾಗಿ ಮೇಲಿನ ಅಂಶಗಳನ್ನು ಗಮನಿಸಬೇಕಾಗಿದೆ. ರಾಜಿರಹಿತ ಹೋರಾಟಗಳು ಛಲದಿಂದ ನಿರಂತರವಾಗಿ ನಡೆಯುತ್ತಿರುವುದರ ಮೂಲದಲ್ಲಿ ಸರ್ಕಾರಗಳೂ ಬಂಡವಾಳಶಾಹಿ/ಸಾಮ್ರಾಜ್ಯಶಾಹಿ ನೀತಿಯ ಏಜೆಂಟರಂತೆ ವರ್ತಿಸುತ್ತಿರುವುದೇ ಆಗಿದೆ. ಜಾಗತೀಕರಣದ ಹೆಸರಿನಲ್ಲಿ ನಡೆದಿರುವ ಈ ಸ್ಥಳಾಂತರವನ್ನು ತಮ್ಮ ಜೀವನ್ಮರಣದ ಪ್ರಶ್ನೆಯನ್ನಾಗಿ ಶ್ರಮಜೀವಿ ಜನತೆ ಪರಿಗಣಿಸಿದೆ ಎಂಬುದು ಇದರಿಂದ ಸ್ಪಷ್ಟಗೊಳ್ಳುತ್ತದೆ.

'ಜಾಗತೀಕರಣವಾದಿಗಳು ಪ್ರತಿಪಾದಿಸುವಂತೆ ಈ ಪ್ರಕ್ರಿಯೆ ಬಹುಸಂಖ್ಯಾತ ಜನರಿಗೆ ಅನಿವಾರ್ಯವೇನಲ್ಲ; ಭವಿಷ್ಯ ರೂಪಿಸಲು ಈ ಮಾರ್ಗಕ್ಕೆ ಪರ್ಯಾಯವಿದೆ' ಎಂಬ ಇನ್ನೊಂದು ಅಂಶವನ್ನೂ ವಿಶ್ವದಲ್ಲಿ ಹಾಗೂ ಭಾರತದಲ್ಲಿ ನಡೆದಿರುವ ಈ ಪ್ರತಿರೋಧದ ಅಲೆಗಳು ಸ್ಪಷ್ಟಪಡಿಸುತ್ತಿದೆ. ಈ ಹಿನ್ನೆಲೆಯಲ್ಲೇ, ಸಮಾಜವಾದ ನಮ್ಮ ರಾಜಕೀಯ ಅಜೆಂಡಾದಲ್ಲಿ ಮತ್ತೆ ಪ್ರಾಮುಖ್ಯ ಪಡೆಯುತ್ತಿದೆ ಎಂಬ ಮಾತನ್ನು ಒತ್ತಿ ಹೇಳಬಹುದು.

ಈ ಘಟ್ಟದಲ್ಲಿ ಹೊಸ ಅಂಶವೊಂದು ಎದ್ದು ಕಾಣುತ್ತಿದೆ. ಜನ ಸಾಮಾನ್ಯರ ಈ ಪ್ರತಿರೋಧ–ಭಾರತದಲ್ಲೇ ಆಗಲಿ, ವಿಶ್ವದಲ್ಲೇ ಆಗಲಿ–ಒಂದು ನಿರ್ದಿಷ್ಟ ಸೈದ್ಧಾಂತಿಕ ಚೌಕಟ್ಟಿಗೆ ಒಳಪಟ್ಟು ನಡೆಯುತ್ತಿಲ್ಲ. ವಿಶಾಲಾರ್ಥದಲ್ಲಿ ಅದು ಎಡಪಂಥೀಯ ವಿಚಾರಧಾರೆಯ ಕಕ್ಷೆಯೊಳಗೆ ಇದ್ದರೂ, ಮಾರ್ಕ್ಸ್‌ವಾದಿ/ಎಡಪಂಥೀಯ ಎಂಬ ಸಾಂಪ್ರದಾಯ ಚೌಕಟ್ಟಿನಲ್ಲಿ ಪ್ರತಿರೋಧದ ಗುಂಪುಗಳು ತಮ್ಮನ್ನು ಗುರುತಿಸಿಕೊಂಡಿಲ್ಲ; ಅಲ್ಲದೆ ಸಾಂಪ್ರದಾಯಿಕ ಎಡಪಂಥೀಯ ಪರಿಣತರ ನಿರೀಕ್ಷೆಯನ್ನು ಮತ್ತು ಲೆಕ್ಕಾಚಾರವನ್ನು ಈ ಪ್ರತಿರೋಧಗಳು ಹುಸಿಗೊಳಿಸಿವೆ. ಏಕೆಂದರೆ, ಈ ಪ್ರತಿರೋಧದ ಮೂಲದಲ್ಲಿ ಭಿನ್ನಾಂಶಗಳಿವೆ. ಇವುಗಳನ್ನು ಪ್ರಸ್ತಾಪಿಸುತ್ತಿರುವ ಗುಂಪುಗಳ ಸಂರಚನೆ ವಿಭಿನ್ನ ರೀತಿಯಲ್ಲಾಗಿದೆ. ಈ ಹಿನ್ನೆಲೆಯಲ್ಲಿ ಕಾಲಾಂತರದಲ್ಲಿ ಸಮಾಜವಾದದ ಸೈದ್ಧಾಂತಿಕ ದೃಷ್ಟಿಕೋನವೂ ಮಾರ್ಪಾಡಾಗುವುದು ಅತ್ಯವಶ್ಯವಾಗಿದೆ.

ವಿಭಿನ್ನ ಪ್ರತಿರೋಧಗಳು–ಆಯಾಮಗಳು

ಜನತೆಯ ಪ್ರತಿರೋಧಗಳು ಪಡೆದುಕೊಳ್ಳುತ್ತಿರುವ ವಿಭಿನ್ನ ಆಯಾಮಗಳನ್ನು ಹೀಗೆ ಗುರುತಿಸಬಹುದು.

೧. ಕಾರ್ಲ್‌ಮಾರ್ಕ್ಸ್ ಮತ್ತು ಇತರರು ಗುರುತಿಸಿದ್ದಂತೆ ಇಂದು ಸಂಘಟಿತ ಕಾರ್ಖಾನೆ ನೌಕರರನ್ನು ಒಳಗೊಂಡ ಬಲಿಷ್ಠ ಶ್ರಮಿಕ ವರ್ಗ ಇಲ್ಲ. ಈ ಹೊತ್ತಿನಲ್ಲಿ ಯಾಂತ್ರೀಕರಣ, ಕಂಪ್ಯೂಟರೀಕರಣ, ಸ್ವಯಂಚಾಲಿತ ಯಂತ್ರಗಳ ಸಂವಹನ ಸಾಧನಗಳ ವ್ಯಾಪಕ ಬಳಕೆ ಹಾಗೂ Outsourcing ಮುಂತಾದ ಕಾರಣಗಳಿಂದಾಗಿ ಗರಿಷ್ಠ ಸಂಖ್ಯೆಯ ಕಾರ್ಮಿಕರು ಇರುವ ಕಾರ್ಖಾನೆಗಳು–



ಕಾರ್ಲ್‌ಮಾರ್ಕ್ಸ್

ಕಾರ್ಲ್‌ಮಾರ್ಕ್ಸ್ ಮತ್ತು ಇತರರು ಗುರುತಿಸಿದ್ದಂತೆ ಇಂದು ಸಂಘಟಿತ ಕಾರ್ಖಾನೆ ನೌಕರರನ್ನು ಒಳ ಗೊಂಡ ಬಲಿಷ್ಠ ಶ್ರಮಿಕ ವರ್ಗ ಇಲ್ಲ. ಈ ಹೊತ್ತಿನಲ್ಲಿ ಯಾಂತ್ರೀಕರಣ, ಕಂಪ್ಯೂಟರೀಕರಣ, ಸ್ವಯಂಚಾಲಿತ ಯಂತ್ರಗಳ ಸಂವಹನ ಸಾಧನಗಳ ವ್ಯಾಪಕ ಬಳಕೆ ಹಾಗೂ Outsourcing ಮುಂತಾದ ಕಾರಣಗಳಿಂದಾಗಿ ಗರಿಷ್ಠ ಸಂಖ್ಯೆಯ ಕಾರ್ಮಿಕರು ಇರುವ ಕಾರ್ಖಾನೆಗಳು–ಕೈಗಾರಿಕೆಗಳೇ ಇಲ್ಲವಾಗಿದೆ. ಒಂದು ಜಾಗದಲ್ಲಿ ಸಹಸ್ರಾರು ಕಾರ್ಮಿಕರು ಲಭ್ಯವಾಗುವುದೇ ಅಪರೂಪವಾಗಿದೆ. ಬೃಹತ್ ಕೈಗಾರಿಕಾ ಸಮುಚ್ಚಯಗಳು ಕಾಣೆಯಾಗುತ್ತಿವೆ. ನಿರುದ್ಯೋಗವು ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ನಿರುದ್ಯೋಗಿಗಳ ದಂಡು ಹೆಚ್ಚುತ್ತಿದ್ದು, ಕಡಿಮೆ ವೇತನಕ್ಕೂ ಕೆಲಸ ಮಾಡುವವರ ಸಂಖ್ಯೆ ವೃದ್ಧಿಗೊಳ್ಳುತ್ತಿದ್ದು, ಕೈಗಾರಿಕೆ ಗಳಿಗೆ ಕಾನೂನು ಮತ್ತು ಸರ್ಕಾರಗಳ ಒತ್ತಾಸೆ ಕ್ಷೀಣಿಸುತ್ತಿರುವುದರಿಂದ ಕನಿಷ್ಠ ಕೂಲಿಯೂ ಸೇರಿದಂತೆ ತಮ್ಮ ಇನ್ನಿತರ ಮೂಲಭೂತ ಹಕ್ಕುಗಳಿಗಾದರೂ ಹೋರಾಟಕ್ಕೆ ಮುಂದಾಗುವ ಶಕ್ತಿ ಕಾರ್ಮಿಕ ವರ್ಗದಲ್ಲಿ ಕುಂದುತ್ತಿದೆ.

ಕೈಗಾರಿಕೆಗಳೇ ಇಲ್ಲವಾಗಿದೆ. ಒಂದು ಜಾಗದಲ್ಲಿ ಸಹಸ್ರಾರು ಕಾರ್ಮಿಕರು ಲಭ್ಯವಾಗುವುದೇ ಅಪರೂಪವಾಗಿದೆ. ಬೃಹತ್ ಕೈಗಾರಿಕಾ ಸಮುಚ್ಚಯಗಳು ಕಾಣೆಯಾಗುತ್ತಿವೆ. ನಿರುದ್ಯೋಗವು ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ನಿರುದ್ಯೋಗಿಗಳ ದಂಡು ಹೆಚ್ಚುತ್ತಿದ್ದು, ಕಡಿಮೆ ವೇತನಕ್ಕೂ ಕೆಲಸ ಮಾಡುವವರ ಸಂಖ್ಯೆ ವೃದ್ಧಿಗೊಳ್ಳುತ್ತಿದ್ದು, ಕೈಗಾರಿಕೆಗಳಿಗೆ ಕಾನೂನು ಮತ್ತು ಸರ್ಕಾರಗಳ ಒತ್ತಾಸೆ ಕ್ಷೀಣಿಸುತ್ತಿರುವುದರಿಂದ ಕನಿಷ್ಠ ಕೂಲಿಯೂ ಸೇರಿದಂತೆ ತಮ್ಮ ಇನ್ನಿತರ ಮೂಲಭೂತ ಹಕ್ಕುಗಳಿಗಾದರೂ ಹೋರಾಟ ಮುಂದಾಗುವ ಶಕ್ತಿ ಕಾರ್ಮಿಕ ವರ್ಗದಲ್ಲಿ ಕುಂದುತ್ತಿ ಬ್ಯಾಂಕ್, ವಿಮೆ, ರೇಲ್ವೆ, ಟೆಲಿಕಾಂ ಮುಂತಾದ ಕ್ಷೇ ಗಳಲ್ಲಿನ ಸಂಘಟಿತ ಕಾರ್ಮಿಕರು ಬಿಳಿಕಾಲರ್‌ನವರಾ ಸರಕು ಸಂಸ್ಕೃತಿಯ ವ್ಯಾಮೋಹಕ್ಕೆ ಬಲಿಯಾಗಿದ್ದಾ ಅವರಲ್ಲಿ ಪರಿವರ್ತನಾಕಾಂಕ್ಷೆ ಬತ್ತಿ ಹೋಗಿದೆ; ಶ್ರಮಜೀ ವರ್ಗದ ಅಭ್ಯೋದಯಕ್ಕಾಗಿ ಮುಂಚೂಣಿಯಲ್ಲಿರಬೇಕಾ ತಮ್ಮ ಹೊಣೆಗಾರಿಕೆಯನ್ನು ಅವರು ಮರೆತು ಬಿಟ್ಟಿದ್ದಾ ಈ ಕ್ಷೇತ್ರಗಳನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದ್ದರೂ, ಕನಿಷ್ಠ ತಮ್ಮ ಉಳಿ ಗಾದರೂ ನಿರ್ಣಾಯಕ ದನಿ ಎತ್ತುವಲ್ಲಿ ಅವು ಸೋ ಹೋಗಿವೆ. ಖಾಸಗೀಕರಣ–ಉದಾರೀಕರಣವನ್ನು ಯಶ ಯಾಗಿ ಪ್ರತಿರೋಧಿಸುವಲ್ಲಿ, ಬಹುರಾಷ್ಟ್ರೀಯ ಕಂಪ ಗಳಿಗೆ ತಮ್ಮ ಕೈಗಾರಿಕೆಗಳು ಬಾಲಂಗೋಸಿಯಾಗು ದನ್ನು ತಡೆಗಟ್ಟುವಲ್ಲಿ ಅವು ವಿಫಲಗೊಂಡಿವೆ.

೨. ಕಣ್ಣಿಗೆ ಹೊಡೆಯುವಂತೆ ಕಾಣುವ ಸ ವೆಂದರೆ, ಶ್ರಮಜೀವಿ ವರ್ಗದ ವಿಮೋಚನೆಯ ದ ಯಾಗಿ ರೈತರು, ನಗರವಾಸಿ ಬಡವರು, ಆದಿವಾಸಿಗಳು ಮೀನುಗಾರರು, ನೇಕಾರರು ಮುಂತಾದ ಜನವಿಭಾಗ ಳಿಂದ ಕೇಳಿಬರುತ್ತಿದೆ. ತಮ್ಮ ಜೀವನ ಭದ್ರತೆಗೇ ಅಪಾಯ ಬಂದ ಕಾರಣ ಹಾಗೂ ಭವಿಷ್ಯದ ಭರವ ಲೇಶಮಾತ್ರವೂ ಉಳಿದಿರದ ಕಾರಣ ಈ ಜನವಿಭಾಗಗಳ ಹೋರಾಟವನ್ನು ಜೀವನ್ಮರಣದ ಪ್ರಶ್ನೆಯಾಗಿ ಕೈಗೆ ಕೊಂಡಿವೆ. ಉದ್ಯೋಗಾವಕಾಶಗಳನ್ನು ಕಳೆದುಕೊಂಡ ಕುಶಲಕರ್ಮಿಗಳು, ತಲತಲಾಂತರದಿಂದ ಜೀವನೋಪಾ ಯಕ್ಕಾಗಿ ಹಪಹಪಿಸುತ್ತಾ ಬಂದ ಕೃಷಿ ಕೂಲಿಕಾರರು ಅಭಿವೃದ್ಧಿಯ ಮಧ್ಯೆಯೇ ಭೀಕರ ಬದುಕಿಗೆ ತಮ್ಮನ್ನು ಒಡ್ಡಿಕೊಳ್ಳಲು ಬಲಾತ್ಕರಿಸಲ್ಪಟ್ಟಿರುವ ನಗರವಾಸಿ ಬಡವರು ವಿದ್ಯಾವಂತ ನಿರುದ್ಯೋಗಿಗಳು, ವಿದ್ಯೆ ವ್ಯಾಪಾರೀಕರಣ ಗೊಂಡಿದ್ದರಿಂದಾಗಿ ಅದರಿಂದ ವಂಚಿತರಾದ ಅವಿದ್ಯಾ ವಂತ ಯುವಜನರು.... ಹೀಗೆ ಹಲವು ಜನವಿಭಾಗಗಳಲ್ಲಿ ಹತಾಶೆ ಮಡುಗಟ್ಟಿದೆ; ಆಕ್ರೋಶ ಹಲವೊಮ್ಮೆ ಹಿಂಸಾ ರೂಪ ತಾಳಿದೆ; ಹಿಂಸೆಗೆ–ವಿಚ್ಛಿದ್ರಕಾರಿ ಪ್ರವೃತ್ತಿಗೆ ಜನತ ದೂಡಲ್ಪಟ್ಟಿದ್ದಾರೆ. ಶೋಷಿತವರ್ಗ ಕ್ರುದ್ಧಗೊಂಡಿದೆ. ಆಧು ನಿಕ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟ ಜನ ವಿಭಾ ಗಗಳು ಕನಲಿ ನಿಂತಿವೆ.

ಈ ಆಕ್ರೋಶ–ಹತಾಶೆಗಳು ಈ ಜನವಿಭಾಗಗಳಲ್ಲಿ ಒಗ್ಗಟ್ಟನ್ನು ಮೂಡಿಸಿವೆ; ಪ್ರಭುತ್ವವನ್ನು ಎದುರಿಸಲು ಅವು ಸಜ್ಜಾಗಿವೆ. ಭಾರತದಲ್ಲಿ ಹೀಗೆ ತಮ್ಮ ಹಕ್ಕುಗಳನ್ನು ಛಲ ದಿಂದ ಆಗ್ರಹಪಡಿಸುತ್ತಾ ಪ್ರಭುತ್ವಕ್ಕೆ ಮುಖಾಮುಖಿಯಾಗಿ ನಿಂತಿರುವುದು ಆದಿವಾಸಿಗಳೂ ಸೇರಿದಂತೆ ಅತ್ಯಂತ ಶೋಷಿತ ಜನವಿಭಾಗಗಳು. ಶೋಷಕ ಸಮಾಜ ವ್ಯವಸ್ಥೆ ಬದಲಾಗಲು ಸಾಧ್ಯವಿದೆ ಎಂಬ ನಂಬಿಕೆ–ಆಶಾವಾದವನ್ನು ಹುಟ್ಟುಹಾಕಿದ್ದೇ ಈ ಜನವಿಭಾಗಗಳ ದಿಟ್ಟ ಹೋರಾಟ.

೩. ಹೋರಾಟಗಳು ಮುಂದಿಟ್ಟಿರುವ ವಸ್ತು–ವಿಷ ಯಗಳಾಗಿಲ್ಲ. ಇಂದಿನ ಬಹುತೇಕ ಪ್ರಶ್ನೆಗಳು ಪ್ರಾಕೃತಿಕ ಸಂಪನ್ಮೂಲಗಳ ಮೇಲಿನ ಒಡೆತನ ಹಾಗೂ ಅವುಗಳ ಹಂಚಿಕೆಗೆ ಸಂಬಂಧಿಸಿವೆ. ಭೂಮಿ, ಅರಣ್ಯ, ನೀರು, ಖನಿ ಜಗಳು, ಮೀನು ಮುಂತಾವುಗಳ ಮೇಲೆ ತಲೆಮಾರುಗ ಳಿಂದ ತಮಗಿದ್ದ ಹಕ್ಕಿಗೆ ಧಕ್ಕೆ ಉಂಟಾಗಿರುವುದನ್ನು ಕಂಡು ಶ್ರಮಜೀವಿ ವರ್ಗ ತಿರುಗಿ ನಿಂತಿದೆ. ರಾಷ್ಟ್ರಗಳ ನಡುವಣ ಯುದ್ಧಗಳಿಗೆ ತೈಲ ಮತ್ತು ನೈಸರ್ಗಿಕ ಅನಿಲಗಳ

ಒುಲಣ ಒಡೆತನ ಹಾಗೂ ಇವುಗಳ ಹಂಚಿಕೆಯಲ್ಲಿ ಎದ್ದಿ ುವ ವಿವಾದವೇ ಮೂಲಕಾರಣವಾಗಿರುವುದು ನಗ್ನ ಸತ್ಯ. ರಾನ್, ಇರಾಕ್, ಅಫ್ಘಾನಿಸ್ತಾನ, ವೆನಿಜ್ಯುಯೆಲಾ, ನೈಜೀ ಯಾ, ಬೋಲಿವಿಯಾ, ರಷ್ಯಾ, ಉಕ್ರೇನ್ ಹೀಗೆ ಎಲ್ಲೆಡೆ ಣಿಸಿಕೊಂಡಿರುವ ಘರ್ಷಣೆಗಳ ಮೂಲದಲ್ಲಿ ತೈಲ ುತ್ತು ನೈಸರ್ಗಿಕ ಅನಿಲಗಳೇ ವಿವಾದದ ಮುಖ್ಯಾಂಶಗಳಾ ವೆ. ನೀರಿನ ಖಾಸಗೀಕರಣವನ್ನು ಖಂಡಿಸಿ ರೂಪು ಂಡ ಸಶಕ್ತ ಜನಾಂದೋಲನ ಬೊಲಿವಿಯಾದಲ್ಲಿ ನಡೆ ುತು; ಕೊಚಕೊಂಬಾ ಪಟ್ಟಣಕ್ಕೆ ನೀರು ಪೂರೈಕೆಯ ುತ್ತಿಗೆಯನ್ನು ಬಹುರಾಷ್ಟ್ರೀಯ ಕಂಪನಿಯೊಂದಕ್ಕೆ ಡಲು ಅಲ್ಲಿನ ಸರ್ಕಾರ ಒಪ್ಪಂದ ಮಾಡಿಕೊಂಡಾಗ ನಾಕ್ರೋಶ ಗಗನ ಮುಟ್ಟಿತು. ಲ್ಯಾಟಿನ್ ಅಮೆರಿಕಾದ್ಯಂತ ಣಿಗಳನ್ನು ರಾಷ್ಟ್ರೀಕರಿಸುವುದಕ್ಕೆ ಹಾಗೂ ಈ ಸಂಪತ್ತಿ ಂದ ಬಂದ ಆದಾಯವನ್ನು ರಾಷ್ಟ್ರೀಯ ಜನತೆಯ ಹಿತ ಗಿ ವೆಚ್ಚ ಮಾಡುವುದಕ್ಕೆ ಒತ್ತಾಯಿಸಲಾಗುತ್ತಿದೆ. ಭಾರಿ ಮಾಲೀಕರಿಂದ ಭೂಮಿಯನ್ನು ಕಿತ್ತುಕೊಂಡು, ದನ್ನು ಭೂರಹಿತ ಕೃಷಿಕರಿಗೆ ಹಂಚಬೇಕೆಂಬುದು ನ್ನೊಂದು ಜನಪ್ರಿಯ ಒತ್ತಾಯವಾಗಿದೆ. ಬ್ರೆಜಿಲ್‌ನಲ್ಲಿ ಷಿ ಕೂಲಿಕಾರರೊಂದಿಗೆ ಜೊತೆಗೂಡಿ ತಮ್ಮ ಹೋರಾ ವನ್ನು ಮುನ್ನಡೆಸಿದ ಬಳಿಕವೇ ಕಾರ್ಮಿಕ ಪಕ್ಷದ ಲಾ, ಅಧ್ಯಕ್ಷ ಚುನವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು. ಥಾಕಥಿತ ಅಭಿವೃದ್ಧಿ ಯೋಜನೆಗಳಿಗಾಗಿ, ಕೃಷಿ ಭೂಮಿ ಗಿ, ಗಣಿ, ಅಣೆಕಟ್ಟು, ಕೈಗಾರಿಕಾ ಸಮುಚ್ಚಯ, ಟೌನ್ ಪ್, ನ್ಯಾಷನಲ್ ಪಾರ್ಕ್, ಪಕ್ಷಿ–ಪ್ರಾಣಿಧಾಮ ಇತ್ಯಾದಿಗಳಿ ಗಿ ತಮ್ಮ ಭೂಮಿಯನ್ನು ಕಳೆದುಕೊಂಡ ವರು, ಳಾಂತರಿಸ್ಪಟ್ಟವರು ತಮ್ಮ ಬದುಕು ಸೂರೆಗೊಂ ಡಾಗ ತಿರೋಧ ತೋರಿದವರು ಸರ್ಕಾರಗಳ ವಿರುದ್ಧ ಂತಿರುವುದು ಇತ್ತೀಚಿನ ಚರಿತ್ರೆಯಲ್ಲಿ ಕಾಣುತ್ತಿರುವ ಧಾನ ಲಕ್ಷಣವಾಗಿದೆ.

ಇನ್ನೊಂದು ಬೃಹದಾಕಾರದ ಆಂದೋಲನ ಕಾಣು ರುವುದು ರೈತರದು. ನಮ್ಮ ದೇಶದಲ್ಲಿ ಈ ಗುಂಪು ರಿಷ್ಠ ಸಂಖ್ಯೆ ಹೊಂದಿದೆ. ಬಹುಸಂಖ್ಯಾತ ಬಡವರೂ ಗುಂಪಿನಲ್ಲಿದ್ದಾರೆ. ತಮ್ಮ ಬೆಳೆಗೆ ನ್ಯಾಯವಾದ ಬೆಲೆ ಡೆಯಲು ಇವರು ಹೋರಾಡುತ್ತಿದ್ದಾರೆ; ನೀರು, ದ್ಯುತ್, ಗೊಬ್ಬರ, ಬೆಳೆ ಮಾರಾಟ–ಸಂಗ್ರಹಣೆ–ದಾಸ್ತಾನು ುಂತಾದವು ಇವರನ್ನು ಕಾಡುತ್ತಿವೆ. ತಮ್ಮನ್ನು ಶೋಷಿ ುವ ಕ್ರಮ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಂತರ್ಗತ ಾಗಿದೆ ಎಂಬುದು ಇವರಿಗೆ ಅರಿವಾಗಿದೆ. ಆಧುನಿಕ ಅಭಿ ೃದ್ಧಿ ಮಾದರಿಗಳೂ, ಮುಕ್ತ ವಾಣಿಜ್ಯ ನೀತಿ ಮತ್ತು ಜಾಗ ೀಕರಣ ಪ್ರಕ್ರಿಯೆಗಳು ತಮ್ಮ ಪರಿಸ್ಥಿತಿಯನ್ನು ದಿನದಿಂದ ನಕ್ಕೆ ಶೋಚನೀಯಗೊಳಿಸುತ್ತಿವೆ ಎಂಬ ವಿಚಾರವೂ ವರಲ್ಲಿ ಮೂಡಿದೆ.

ಲ್ಯಾಟಿನ್ ಅಮೆರಿಕದಲ್ಲಿ ಸಾಕ್ಷರತೆ, ಶಿಕ್ಷಣ, ರೋಗ್ಯ, ವಸತಿ, ನಾಗರಿಕ ಸೌಲಭ್ಯಗಳ ಕೊರತೆಗಳು ನಸಾಮಾನ್ಯರಲ್ಲಿ ರಾಜಕೀಯ ತಿಳುವಳಿಕೆಯನ್ನು ಮೂಡಿ ಲು ಕಾರಣವಾಗಿವೆ. ಇಷ್ಟೇ ಅಲ್ಲದೆ, ವಿಶ್ವಾದ್ಯಂತ ಎದ್ದಿ ುವ ಪ್ರತಿರೋಧಗಳೂ ಧಾರ್ಮಿಕ ಮತ್ತು ನೈತಿಕ ಸ್ವರೂ ದತ್ತಲೂ ಚಿಂತನೆಯನ್ನು ಹರಿಸಿವೆ. ಸಾಂಸ್ಕೃತಿಕ, ಸಾಂಗೀಯ ಮತ್ತು ಧಾರ್ಮಿಕ ಐಡೆಂಟಿಟಿಗಳೂ ಈ ತಿರೋಧಗಳಿಗೆ ಮಹತ್ವದ ಅಂಶಗಳಾಗಿವೆ. ಅಸ್ತಿತ್ವದಲ್ಲಿ ುವ ರಾಜಕೀಯ ಸಿದ್ಧಾಂತಗಳೂ ಇಂಥ ಮುಖ್ಯವಾದ ಂಶಗಳನ್ನು ಕುರಿತು ಚಿಂತಿಸಲು ಹಾಗೂ ಒಂದು

ಈ ಪ್ರತಿರೋಧಗಳಲ್ಲಿ ಬಹುಪಾಲು ಆಂದೋ ಲನಗಳು ಪ್ರಜಾಸತ್ತಾತ್ಮಕ–ಅಹಿಂಸಾತ್ಮಕ ಆಶಯಕ್ಕೆ ಬದ್ಧ ವಾಗಿವೆ. ಕ್ರಾಂತಿಕಾರಿ ಬದಲಾವಣೆಯನ್ನು ಅಹಿಂಸಾತ್ಮಕ ವಾಗಿ ಜನಸಂಘಟನೆ ಮಾಡಿ ಮತಪೆಟ್ಟಿಗೆ ಮೂಲಕ ತರಲು ಸಾಧ್ಯ ಎಂಬುದನ್ನು ಲ್ಯಾಟಿನ್ ಅಮೆರಿಕಾ ವಿದ್ಯ ಮಾನಗಳು ಬಹುಮಟ್ಟಿಗೆ ಸಾಬೀತುಪಡಿಸಿವೆ. ಅಲ್ಲಿ ಅಧಿ ಕಾರಕ್ಕೆ ಬಂದಿರುವ ಸರ್ಕಾರಗಳು ಹಲವಾರು ಒತ್ತಡಗಳಿಗೆ ಗುರಿಯಾಗಿ ಜನತೆಯ ಆಸೆ–ಆಕಾಂಕ್ಷೆಗಳನ್ನು ಪೂರ್ತಿ ಯಾಗಿ ಈಡೇರಿಸದೇ ಹೋದಾಗ, ಅಲ್ಲಿನ ಜನತೆ ಇನ್ನೂ ಉತ್ತಮವಾದ ಸರ್ಕಾರವನ್ನು ಅಧಿಕಾರಕ್ಕೆ ತರಲು ನಿರ್ಧರಿಸುತ್ತಾರೆ.

ನಿರ್ದಿಷ್ಟ ನಿಲವಿಗೆ ಬರಲು ವಿಫಲವಾಗಿರುವುದನ್ನು ಈ ಪ್ರತಿರೋಧಗಳೂ ಗುರುತಿಸಿವೆ.

೪. ಈ ಪ್ರತಿರೋಧಗಳೆಲ್ಲ ಬಹುತೇಕವಾಗಿ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಅಮೆರಿಕಾ ವಿರೋಧಿಯಾಗಿವೆ. ಪ್ರತಿರೋಧ ಏಳುವುದಕ್ಕೆ ಕಾರಣವಾಗಿರುವ ಜನವಿರೋಧಿ ನೀತಿಯ ಮೂಲದಲ್ಲಿ ಜಗತೀಕರಣ ಇರುವುದು ಹಾಗೂ ಅಮೆರಿಕಾ–ಯುರೋಪ್ ಹೆಜಿಮನಿ ಸ್ಥಾಪಿಸ ಹೊರಟಿರುವುದು ಸ್ಪಷ್ಟವಾಗಿರುವ ಹಿನ್ನೆಲೆಯಲ್ಲಿ ಪ್ರತಿರೋಧಗಳ ಈ ನಿಲುವು ತರ್ಕಬದ್ಧವಾಗಿದೆ.

೫. ಈ ಪ್ರತಿರೋಧಗಳಲ್ಲಿ ಬಹುಪಾಲು ಆಂದೋಲನಗಳು ಪ್ರಜಾಸತ್ತಾತ್ಮಕ–ಅಹಿಂಸಾತ್ಮಕ ಆಶಯಕ್ಕೆ ಬದ್ಧವಾಗಿವೆ. ಕ್ರಾಂತಿಕಾರಿ ಬದಲಾವಣೆಯನ್ನು ಅಹಿಂಸಾತ್ಮಕವಾಗಿ ಜನಸಂಘಟನೆ ಮಾಡಿ ಮತಪೆಟ್ಟಿಗೆ ಮೂಲಕ ತರಲು ಸಾಧ್ಯ ಎಂಬುದನ್ನು ಲ್ಯಾಟಿನ್ ಅಮೆರಿಕಾ ವಿದ್ಯಮಾನಗಳು ಬಹುಮಟ್ಟಿಗೆ ಸಾಬೀತುಪಡಿಸಿವೆ. ಅಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರಗಳು ಹಲವಾರು ಒತ್ತಡಗಳಿಗೆ ಗುರಿಯಾಗಿ ಜನತೆಯ ಆಸೆ–ಆಕಾಂಕ್ಷೆಗಳನ್ನು ಪೂರ್ತಿಯಾಗಿ ಈಡೇರಿಸದೇ ಹೋದಾಗ, ಅಲ್ಲಿನ ಜನತೆ ಇನ್ನೂ ಉತ್ತಮವಾದ ಸರ್ಕಾರವನ್ನು ಅಧಿಕಾರಕ್ಕೆ ತರಲು ನಿರ್ಧರಿಸುತ್ತಾರೆ.

ವಿಫಲಗೊಂಡ ಸಾಂಪ್ರದಾಯಕ ಚೌಕಟ್ಟು

ಪ್ರಬಲ ಪ್ರತಿರೋಧವನ್ನು ಒಡ್ಡಿರುವ ಈ ಆಂದೋಲನಗಳು ಮಾರ್ಕ್ಸ್‌ವಾದಿ–ಎಡಪಂಥೀಯ ಚೌಕಟ್ಟಿನ ಒಳಗೆ ಕೂಡುವುದಿಲ್ಲ. ಹಾಗಾದರೆ ಇವುಗಳನ್ನು ಗ್ರಹಿಸುವುದು ಹೇಗೆ? ಇವುಗಳ ಹಿಂದಿರುವ ಚಾರಿತ್ರಿಕ ಶಕ್ತಿಗಳಾವುವು? ಅವುಗಳಿಗೆ ಸಾಮಾನ್ಯ ಬೇರುಗಳೇನಾದರೂ ಇವೆಯೆ? ಅವುಗಳು ಸ್ಥಳೀಯ ಸಮಸ್ಯೆಗಳಿಂದಾಗಿ ಹೊರ ಹೊಮ್ಮಿದ ಆಂದೋಲನಗಳೆ? ಅಥವಾ ಚಾರಿತ್ರಿಕ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ಪ್ರಕ್ರಿಯೆಯೊಂದಿಗೆ ಒಳ ಸಂಬಂಧ ಹೊಂದಿರುವಂಥವುಗಳೇ? ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ಜಾಗತೀಕರಣವನ್ನು ಕುರಿತ ನಮ್ಮ ತಿಳುವಳಿಕೆಯನ್ನು ಇವುಗಳು ಪ್ರತಿಫಲಿಸುವುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು, ಅಗತ್ಯವಾದ ವಿವರಣೆಯನ್ನು ಸಿದ್ಧಪಡಿಸಿಕೊಳ್ಳುವುದು ಇಂದಿನ ತುರ್ತು.

ಎಡಪಂಥೀಯ ಚಿಂತನೆಯ ಸಂಕಥನದಲ್ಲಿ ಹೊರಗಟ್ಟಲ್ಪಟ್ಟಿರುವವರೆಂದು ಗುರುತಿಸಲಾಗಿರುವ ಮೂವರು ಧೀಮಂತರ ವ್ಯಕ್ತಿತ್ವ, ಚಿಂತನೆ ಹಾಗೂ ನಡೆಗಳನ್ನು ಗಮನಿಸುವ ಮೂಲಕ ಬಹುಶಃ ನಾವು ಹೊಸದಾರಿಯನ್ನು ಕಂಡುಕೊಳ್ಳಲು ಸಾಧ್ಯವಿದೆ. ವಿಭಿನ್ನ ಆಯಾಮಗಳನ್ನು ಹಾಗೂ ಹೊಳಹುಗಳನ್ನು ಒಳಗೊಂಡು ಎದ್ದಿರುವ ಈ ಪ್ರತಿರೋಧಗಳಿಗೆ, ವಿನೂತನವಾದ ಮತ್ತು ಸುಸಂಬದ್ಧವಾದ ಸೈದ್ಧಾಂತಿಕ ದಾರಿಯನ್ನೇ ರೂಪಿಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ನಾವು ರೋಸಾ ಲಕ್ಸಂಬರ್ಗ್, ಮಹಾತ್ಮಗಾಂಧಿ ಮತ್ತು ಡಾ॥ ರಾಮ ಮನೋಹರ ಲೋಹಿಯಾರನ್ನು ದರ್ಶಿಸಬೇಕು. ಬಂಡವಾಳ ಒಟ್ಟುಗೂಡುವಿಕೆಗೆ ಸಂಬಂಧಿಸಿದಂತೆ ಮಾರ್ಕ್ಸ್ ನೀಡಿದ ವಿವರಣೆಯಲ್ಲಿನ ಮೂಲದೋಷವನ್ನು ಮೊದಲ ಬಾರಿಗೆ ಎತ್ತಿ ತೋರಿದ್ದು ರೋಸ. ಹೊರಗಿನ ಬಂಡವಾಳಶಾಹೇತರ ಪ್ರದೇಶದಿಂದ ಅಂದರೆ ವಸಾಹತುಶಾಹಿ ಶೋಷಣೆಯಿಂದಲ್ಲದೆ ಈ ವಾದವನ್ನು ಪುಷ್ಟೀಕರಿಸುವ ಅನೇಕ ಉದಾಹರಣೆಗಳನ್ನು ಆಕೆ ನೀಡಿದ್ದಾಳೆ.

ಬೌದ್ಧಿಕ ಹಾಗೂ ಸೈದ್ಧಾಂತಿಕ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಬಗ್ಗೆ ಗಾಂಧೀಜಿ ಕಾಳಜಿ ವಹಿಸಲಿಲ್ಲ. ಆದರೆ ಆಧುನಿಕ ಬಂಡವಾಳಶಾಹಿ ನಾಗರಿಕತೆಯ ಮೇಲೆ ತೀವ್ರ ಪೆಟ್ಟು ನೀಡಿದ ಅವರ ಶಕ್ತಿಯನ್ನು 'ಹಿಂದ್ ಸ್ವರಾಜ್' ಕೃತಿಯಲ್ಲಿ ಮತ್ತು ಇತರ ಬರಹಗಳಲ್ಲಿ ನಾವು ನೋಡಬಹುದು. ಅವರು, ವಸಾಹತುಶಾಹಿ ಹೊಡೆಯುವ ಕೊಳ್ಳೆ ಮತ್ತು ಕೈಗೊಳ್ಳುವ ಸರ್ವನಾಶಗಳು ಆಧುನಿಕ ಬಂಡವಾಳಶಾಹಿ ನಾಗರಿಕತೆಯೊಳಗೆ ಹಾಸುಹೊಕ್ಕಾಗಿರುತ್ತವೆ ಎಂದರು. ಇದನ್ನು 'ಸೈತಾನನ ನಾಗರಿಕತೆ' ಎಂದು ಅವರು ಉಲ್ಲೇಖಿಸಿದರು.

ವಸಾಹತುವಾದಿ ಆಯಾಮ

ಈ ಕುರಿತು ತೀಕ್ಷ್ಣ ಕ್ಷ–ಕಿರಣ ಬೀರಿ, ಬೌದ್ಧಿಕವಾಗಿ ಚಿಕಿತ್ಸಕ ವಿಶ್ಲೇಷಣೆಗೆ ಗುರಿಪಡಿಸಿ, ಶಿಸ್ತಿನ ವಿವರಣೆಯನ್ನು ಮಂಡಿಸಿದ್ದು, ಡಾ॥ ಲೋಹಿಯಾ. ೧೯೪೩ ರಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದಾಗ ಅವರು ರಚಿಸಿದ 'Economics after Marx' ಎಂಬ ಪ್ರಬಂಧವನ್ನು ನಾವು ಗಮನಿಸಬೇಕು. ಬಂಡವಾಳವಾದಿ ರಾಷ್ಟ್ರಗಳಲ್ಲಿ ಶ್ರಮಜೀವಿ ಗಳ ಶೋಷಣೆಯು ಹೆಚ್ಚುವರಿ ಮೌಲ್ಯದ ಮೂಲ ಮತ್ತು ಬಂಡವಾಳದ ಒಟ್ಟುಗೂಡುವಿಕೆಗಳಿಂದಲೇ ಸಂಭವಿಸುತ್ತದೆ ಎಂಬ ನಿಲುವಿಗೆ ಮಾರ್ಕ್ಸ್ ಬಂದಿದ್ದು ತಪ್ಪು ಎಂದು ಡಾ॥ ಲೋಹಿಯಾ ತಿಳಿಸಿಕೊಟ್ಟರು. ಶೋಷಣೆಯ ಜ್ವಾಲೆಗೆ ವಸಾಹತುಗಳಲ್ಲಿನ ಜನತೆ ಸಿಕ್ಕಿಕೊಂಡಿದ್ದಾರೆಯೇ ಹೊರತು, ಪಶ್ಚಿಮ ಯುರೋಪ್‌ನ ಕಾರ್ಮಿಕರಲ್ಲ. ವಾಸ್ತವವಾಗಿ, ಈ ಕಾರ್ಮಿಕರು ವಸಾಹತುಗಳನ್ನು ಕೊಳ್ಳೆ ಹೊಡೆದು ಸಾಮ್ರಾಜ್ಯವಾದಿ ಶಕ್ತಿಗಳೂ ಸಂಗ್ರಹಿಸಿದ್ದರಲ್ಲಿ ಪಾಲು ಪಡೆದರು; ಜೊತೆಗೆ ಬಂಡವಾಳವಾದಿ ವ್ಯವಸ್ಥೆಯ ಉಳಿವಿಗೆ ಹಾಗೂ ಮುಂದುವರಿಕೆಗೆ ಕಾರಣರಾದರು. ಮಾರ್ಕ್ಸ್ ಲೆಕ್ಕಾಚಾರದಂತೆ, ಕ್ರಾಂತಿಯು ಪಶ್ಚಿಮ ಯುರೋಪ್‌ನಲ್ಲಿ ಸಂಭವಿಸದಿರಲು ಇದೇ ಕಾರಣ. ಲೋಹಿಯಾ ಹೇಳುವ 'ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಒಟ್ಟುಗೂಡುವ ಎಲ್ಲಾ ಲಾಭ ಮತ್ತು ಭಾರಿ ಸಂಪಾದನೆಯ ಮೊತ್ತವಾಗುವ ಹೆಚ್ಚುವರಿ ಮೌಲ್ಯವು ಬಹುತೇಕವಾಗಿ

ಸಂಗ್ರಹವಾಗುವುದು ಹೊಲ-ಗದ್ದೆಗಳಿಂದ ಹಾಗೂ ಗಣಿಗಳಿಂದ" ಎಂಬ ಮಾತು ಮಾರ್ಮಿಕವಾಗಿದೆ.

ಅವರು ಮುಂದುವರೆದು, "ಬಂಡವಾಳಶಾಹಿ ಅಭಿವೃದ್ಧಿಯ ಚರಿತ್ರೆ ಎಂದರೆ ವಸಾಹತುಶಾಹಿಗೆ ಸಿಲುಕಿದ ಜನತೆಯ ಮೇಲೆ ಬಡತನದ ಕರಾಳಛಾಯೆ ತೀವ್ರಗೊಂಡು, ಅವರು ಹಸಿವಿನ ಹಾಹಾಕಾರಣದಿಂದಾಗಿ ಆಕ್ರಂದನಗೈಯ್ದ ಚರಿತ್ರೆ; ಬಂಡವಾಳಶಾಹಿಯ ನಗ್ನ ನರ್ತನದಲ್ಲಿ ತೊತ್ತಳದುಳಿತದಕ್ಕೆ ಒಳಗಾಗುವವರು ಸಾಮಾನ್ಯ ಜನತೆಯೇ. ವರ್ಗ ಹೋರಾಟ ಎಂಬ ಕಮ್ಯುನಿಸ್ಟ್ ಪರಿಕಲ್ಪನೆಯ ಔಚಿತ್ಯವನ್ನು ಮಾನ್ಯ ಮಾಡಿದರೂ, ಅದರ ಮೂಲಾಧಾರವನ್ನು ಬದಲಿಸುವ ತುರ್ತು ಈಗಿದೆ. ಬಂಡವಾಳಶಾಹಿಯ ಗೋರಿಯನ್ನು ತೋಡುವವರು ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಕಾರ್ಮಿಕ ವರ್ಗವಲ್ಲ, ಬದಲಾಗಿ ವಸಾಹತುಗಳಲ್ಲಿರುವ ಜನತೆ" ಎಂದು ವಿವರಿಸಿದರು.

ಬಂಡವಾಳಶಾಹಿಯ ಬೀಸು ಆರಂಭವಾದಾಗಿನಿಂದ ವಸಾಹತುಗಳನ್ನು ಕೊಳ್ಳೆಹೊಡೆಯುವ ಮತ್ತು ಅಲ್ಲಿನ ಜನತೆಯನ್ನು ಶೋಷಿಸುವ ಪ್ರಕ್ರಿಯೆ ಪ್ರಾರಂಭಗೊಂಡಿದೆ ಎಂಬುದನ್ನು ಲೋಹಿಯಾ ಬಿಡಿಸಿಟ್ಟರು. ಈ ಪ್ರಕ್ರಿಯೆಯಲ್ಲದೆ ಬಂಡವಾಳ ಚಿಗಿಯಲು ಮತ್ತು ಅಭಿವೃದ್ಧಿ ಹೊಂದಲು ಸಾಧ್ಯವೇ ಇಲ್ಲ. ಆದುದರಿಂದ ಲೆನಿನ್ ಹೇಳಿದಂತೆ ಸಾಮ್ರಾಜ್ಯಶಾಹಿಯು ಬಂಡವಾಳಶಾಹಿಯಕೊನೆಯ ಹಂತವಲ್ಲ. ಬದಲಾಗಿ ಅದು ಬಂಡವಾಳಶಾಹಿಯ ಮೊದಲನೇ ಮತ್ತು ಪ್ರಾಥಮಿಕ ಹಂತ ಎಂದ ಲೋಹಿಯಾ, ಬಂಡವಾಳಶಾಹಿಯಲ್ಲಿ ಕಾಲಕಾಲಕ್ಕೆ ಕಾಣುವ ಬಿಕ್ಕಟ್ಟುಗಳನ್ನು ವಸಾಹತುಶಾಹಿ-ಸಾಮ್ರಾಜ್ಯಶಾಹಿ ಶೋಷಣೆಯೊಂದಿಗೆ ಜೋಡಿಸಬೇಕು ಎಂದು ಆಗ್ರಹಪಡಿಸಿದರು.

"ಜನತೆಯಿಂದ ಆಗುವ ಉತ್ಪಾದನೆ ಮತ್ತು ಅವರ ಕೊಳ್ಳುವಶಕ್ತಿಗಳ ನಡುವಣ ಅಂತರದಿಂದಾಗಿ ಕೈಗಾರಿಕಾ ಬಿಕ್ಕಟ್ಟುಗಳು ನಿರ್ಮಾಣವಾಗುತ್ತವೆ ಎನ್ನುವುದು ಹಾಗೂ ಕೈಗಾರಿಕಾ ಸಂಶೋಧನೆಗಳಿಂದ ಮತ್ತು ಭಾರಿ ಪ್ರಮಾಣದಲ್ಲಿ ಬಂಡವಾಳ ತೊಡಗಿಸುವಿಕೆಯಿಂದ ಇದನ್ನು ಪರಿಹರಿಸಿಕೊಳ್ಳಬಹುದು ಎನ್ನುವುದು ಅರ್ಧಸತ್ಯ ಹೇಳಿದಂತೆ ಮತ್ತು ಕೇವಲ ಮೇಲ್ನೋಟಕ್ಕೆ ಕಾಣುವುದನ್ನು ಗ್ರಹಿಸಿದಂತೆ. ಕೈಗಾರಿಕಾ ಬಿಕ್ಕಟ್ಟುಗಳು ಆಂತರಿಕ ಆದಾಯಗಳ ಬಂಡವಾಳವಾದಿ ವಿತರಣೆಯ ಭಾಗಶಃ ಫಲಿತಾಂಶವಾಗಿ ಹೊರಹೊಮ್ಮಿದವು. ಆದರೆ ಇವು ಮುಖ್ಯವಾಗಿ ಹಳೆಯ ಸಾಮ್ರಾಜ್ಯವಾದ ಅಂತ್ಯ ಮತ್ತು ಹೊಸದರ ಅನ್ವೇಷಣೆಯ ನಡುವಣ ಕಾಲಾವಕಾಶದ ಕೊರತೆಯಿಂದಾಗಿ ಹೊರಹೊಮ್ಮಿದವು ಎಂಬುದು ಹೆಚ್ಚಿನಮಟ್ಟಿಗೆ ಸಮರ್ಪಕವಾದ ವಿಶ್ಲೇಷಣೆ. ಸಾಮ್ರಾಜ್ಯಶಾಹಿಯು ವಿಶಾಲ ಪ್ರದೇಶದಲ್ಲಿರುವ ವಸಾಹತುಗಳ ಶೋಷಣೆಗೆ ಹಳೆಯ ಉತ್ಪಾದನಾ ವಿಧಾನಗಳನ್ನು ಬಳಸುವುದರಿಂದ ಬಿಕ್ಕಟ್ಟುಗಳು ಉದ್ಭವಿಸುತ್ತವೆ. ಹೊಸ ಸಂಶೋಧನೆಯೊಂದು ಕಂಡು ಹಿಡಿಯಲ್ಪಟ್ಟು ಅದು ಬಳಕೆಯಾಗಲು ಹೊಸ ಪ್ರದೇಶವೊಂದು ಜಯಿಸಲ್ಪಡುವವರೆಗೆ ಈ ಬಿಕ್ಕಟ್ಟುಗಳು ಮುಂದುವರೆಯುತ್ತದೆ.

ಹೀಗೆ, "ವಿಶ್ವದ ಮೇಲಣ ಸಂಪೂರ್ಣ ಜಯಭೇರಿಯೊಂದಿಗೆ ಮತ್ತು ಸಾಮ್ರಾಜ್ಯಶಾಹಿಯ ಹೊಸ ಆಯಾಮಗಳು ಅಸಾಧ್ಯವಾಗುವುದರೊಂದಿಗೆ ಬಂಡವಾಳಶಾಹಿಯು ಒಂದು ಮಹಾಬಿಕ್ಕಟ್ಟಿನ ಹಂತವೊಂದನ್ನು ಪ್ರವೇಶಿಸಿದೆ" ಎಂದು ಲೋಹಿಯಾ ತಮ್ಮ ವಿಶ್ಲೇಷಣೆಯನ್ನು ಸಮಾಪ್ತಿಗೊಳಿಸಿದ್ದರು. ಸಾಮ್ರಾಜ್ಯಶಾಹಿಯು

ಬಂಡವಾಳಶಾಹಿ ಮೂಲ ಸಾರ ಅದರ ಬಾಹ್ಯ ಆಯಾಮಗಳಲ್ಲಿ ಅಡಗಿದೆ. ಬಂಡವಾಳಶಾಹಿಯ ಕೇಂದ್ರ ಶಕ್ತಿಯಾಗಿ ವಸಾಹತುವಾದಿ ಅಥವಾ ನವವಸಾಹತುವಾದಿ ಶೋಷಣೆ ಉಳಿದೇ ಉಳಿಯುತ್ತದೆ. ಈ ಶೋಷಣೆಗೆ ಅವಕಾಶ ಕಲ್ಪಿಸದೇ ಹೋದರೆ; ಬಂಡವಾಳಶಾಹಿಯ ಉಳಿವು -ಬೆಳವಣಿಗೆ ಸಾಧ್ಯವಿಲ್ಲ. ಆದುದರಿಂದ ಬಂಡವಾಳಶಾಹಿಯನ್ನು ಕಿತ್ತೊಗೆಯುವ ದಿಕ್ಕಿನಲ್ಲಿ ನಡೆಯುವ ಯಾವುದೇ ಕಾರ್ಯತಂತ್ರವನ್ನು ಕೈಗಾರಿಕೀಕೃತವಾಗಿಲ್ಲದ ಜಗತ್ತಿನ ಜನತೆಯ ಮೇಲೆ ಕೇಂದ್ರೀಕರಿಸುವುದು ಅನಿವಾರ್ಯವಾಗುತ್ತದೆ.

ಹೊಸ ಪ್ರದೇಶಗಳನ್ನು ಪ್ರವೇಶಿಸದಂತೆ ಅಲ್ಲಿ ಬಂಡವಾಳಶಾಹಿಯ ಪರಿಣಾಮಗಳು ಪ್ರಸಾರವಾಗದಂತೆ ನೋಡಿಕೊಳ್ಳಬೇಕೆಂದು ಲೋಹಿಯಾ ಎಚ್ಚರಿಸಿದರು.

ನವ ವಸಾಹತುಶಾಹಿಯಿಂದ ಶೋಷಣೆ ಮತ್ತು ಆಂತರಿಕ ವಸಾಹತುಗಳು

ಈ ಹಂತದಲ್ಲಿ ಲೋಹಿಯಾರನ್ನು ತಪ್ಪಾಗಿ ತಿಳಿದುಕೊಳ್ಳಲಾಯಿತು. ಲೋಹಿಯಾ ಭಾವಿಸಿದ್ದಕ್ಕಿಂತ ಹೆಚ್ಚಿನ ಮಟ್ಟಿಗೆ ಬಂಡವಾಳಶಾಹಿಯು ಚಾಣಾಕ್ಷತೆ-ವಂಚನೆಯನ್ನು ಮೆರೆದು ಶಕ್ತಿಶಾಲಿಯಾಯಿತು. ವಿಶ್ವದ ಜನತೆಯ ರಕ್ತ ಹೀರಲು ಬಂಡವಾಳ ಶಾಹಿಯು ಹೊಸ ರೀತಿಗಳನ್ನು ರೂಪಿಸಿಕೊಂಡಿತು. ಒಂದೊಮ್ಮೆ ವಸಾಹತುಗಳಾಗಿದ್ದ ರಾಷ್ಟ್ರಗಳು ಸ್ವತಂತ್ರಗೊಂಡ ಬಳಿಕವೂ, ಬಂಡವಾಳಶಾಹಿ ಶೋಷಣೆಯು ನವ ವಸಾಹತುವಾದಿ ಮತ್ತು ನವ ಸಾಮ್ರಾಜ್ಯಶಾಹಿ ವರಸೆಗಳನ್ನು ರೂಢಿಸಿಕೊಂಡಿತು. ಅಂತರರಾಷ್ಟ್ರೀಯ ಸಹಾಯ ಮತ್ತು ಸಾಲ, ಅಂತರರಾಷ್ಟ್ರೀಯ ವಾಣಿಜ್ಯ, ಅಂತರರಾಷ್ಟ್ರೀಯ ಬಂಡವಾಳ (ಅಂದರೆ ಬಹುರಾಷ್ಟ್ರೀಯ ಕಂಪನಿಗಳೂ)ಗಳನ್ನು ಸಾಧನಗಳನ್ನಾಗಿ ಮಾಡಿಕೊಂಡ ಬಂಡವಾಳವಾದಿ ಕೈಗಾರೀಕೃತ ರಾಷ್ಟ್ರ ಗಳು, ವಿಶ್ವದ ಇತರ ರಾಷ್ಟ್ರಗಳನ್ನು ಮೆಟ್ಟಿ ನಿಂತು ಕೊಳ್ಳೆ ಹೊಡೆಯುವುದನ್ನು ಮುಂದುವರೆಸಿವೆ. ಜಾಗತೀಕರಣದ ಈಗಿನ ಹಂತದಲ್ಲಿ ಈ ರಾಷ್ಟ್ರಗಳು ಗರಿಷ್ಠ ಮಟ್ಟದಲ್ಲಿ ಕೊಳ್ಳೆಹೊಡೆಯಲು ಹೊಸ ಅವಕಾಶಗಳನ್ನು ಹುಡುಕಿಕೊಳ್ಳುತ್ತಿವೆ. ನೈಸರ್ಗಿಕ ಸಂಪನ್ಮೂಲಗಳ ಸುಲಿಗೆ, ತಂತ್ರಜ್ಞಾನ ಮೂಲದ ದುರಾಡಳಿತ, ಭೋಗವಾದಿ ಸಂಸ್ಕೃತಿ, ಹಣಕಾಸಿನ ಜಾಗತಿ ಕರಣವನ್ನು ಸಾಧ್ಯವಾಗಿಸಲು ಬೃಹತ್ ಮಾರುಕಟ್ಟೆಯ ನಿರ್ಮಾಣ, ಸೇವೆಗಳ ಖಾಸಗೀಕರಣ, ಬೌದ್ಧಿಕ ಆಸ್ತಿಯ ಬಳಕೆ ಮುಂತಾದವುಗಳಿಂದಾಗಿ ಬಂಡವಾಳಶಾಹಿಯ ಬಲ ಹೆಚ್ಚುತ್ತಾ ಹೋಗಿದೆ.

ಆಂತರಿಕ ವಸಾಹತುಗಳು ಸೃಷ್ಟಿಯಾಗಿರುವುದು, ಬಂಡವಾಳಶಾಹಿಯ ಉಳಿವಿಗೆ ಹಾಗೂ ಬೆಳವಣಿಗೆಗೆ ಕಾರಣವಾಗಿದೆ ಎಂಬುದು ಪರಿಗಣನಾರ್ಹವಾಗಿದೆ. ಸಮಾಜವಾದಿ ಚಿಂತಕ ಸಚ್ಚಿದನಂದ ಸಿನ್ಹಾ ಈ ಪರಿಕಲ್ಪನೆಯನ್ನು ಮೊದಲು ಮಂಡಿಸಿದರು. ಹೊಸದಾಗಿ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳು ಕೈಗಾರಿಕೀಕರಣಕ್ಕೆ ಒಳಪಟ್ಟವು. ಬಂಡವಾಳಶಾಹಿ ಕೈಗಾರಿಕೀಕರಣ ಅಗತ್ಯಪಡಿಸುವಂತೆ ವಸಾಹತುಗಳು ಶೋಷಣೆಗೊಳಪಟ್ಟವು; ಹೊಸ ವಸಾಹತುಗ[…] ಇಲ್ಲವಾದಾಗ ಈ ರಾಷ್ಟ್ರಗಳು ತಮ್ಮೊಳಗೇ ವಸಾಹ[…]ಗಳನ್ನು ನಿರ್ಮಿಸಿಕೊಂಡವು.

ಆಂತರಿಕ ವಸಾಹತುಗಳಲ್ಲಿ ಎರಡು ವಿಧ.

(೧) ಹಿಂದುಳಿದ ಮತ್ತು ಆದಿವಾಸಿ ಬಾಹುಳ್[…]ರುವ ರಾಜ್ಯಗಳು

(ಉದಾ: ಒರಿಸ್ಸಾ, ಝಾರಖಂಡ, ಛತ್ತೀಸಗ[…] ಬಿಹಾರ, ಮಧ್ಯಪ್ರದೇಶ, ತೆಲಂಗಾಣ, ವಿದರ್ಭ, ಉತ್[…] ಪ್ರದೇಶದ ಪೂರ್ವ ಭಾಗ, ಪಶ್ಚಿಮ ಬಂಗಾಲದ ಉತ್[…] ಭಾಗ ಇತ್ಯಾದಿ.)

(೨) ಅರ್ಥಶಾಸ್ತ್ರದ ಎಲ್ಲಾ ಕ್ಷೇತ್ರಗಳು:

ವಿಶೇಷವಾಗಿ ಕೃಷಿ ಮತ್ತು ಗ್ರಾಮೀಣ ಅರ್ಥ ವ್ಯ[…]ಸ್ಥೆಗಳು ಬಲಿಯಾದವು. ಸ್ವತಂತ್ರ ಭಾರತದಲ್ಲಿ ಕೃಷಿ ಉ[…]ನ್ನಗಳ ಬೆಲೆಯನ್ನು ಉದ್ದೇಶಪೂರ್ವಕವಾಗಿ ಹತ್ತಿಕ್ಕಿ, ಕೈಗಾ[…]ರಿಕಾ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸಲಾಯಿತು. ಭಾರ[…]ವಷ್ಟೇ ಅಲ್ಲ, ಸೋವಿಯತ್ ಒಕ್ಕೂಟ ಮತ್ತು ಚೀ[…] ಕೂಡ ಕೈಗಾರೀಕರಣದ ಪ್ರಕ್ರಿಯೆಯಲ್ಲಿ ಆಂತರಿಕ ವಸ[…]ಹತುಗಳನ್ನು ಸೃಷ್ಟಿಸಿದವು; ರಷ್ಯಾಯೇತರ ಹಾಗೂ ಏಷ[…] ಪ್ರದೇಶ ಆಂತರಿಕ ವಸಾಹತುಗಳಾದವು. ಈ ಕಾರ[…]ದಿಂದಲೇ ಈ ಪ್ರದೇಶದಲ್ಲಿ ಸೋವಿಯೆತ್ ಒಕ್ಕೂ[…] ವಿರೋಧಿ ಭಾವನೆ ಬೆಳೆದು, ಉಲ್ಬಣಿಸಿ, ಒಂದೊ[…] ಆಸ್ಫೋಟಗೊಂಡಿತು; ಕೇಂದ್ರ ಶಕ್ತಿ ಕ್ಷೀಣಿಸಿದಾಗ, […] ಪ್ರದೇಶದ ರಾಷ್ಟ್ರಗಳೂ ಸ್ವಾತಂತ್ರ್ಯದ ಬಾವುಟ ಹಾರ[…]ದವು.

ಆದರೆ, ಬಂಡವಾಳಶಾಹಿ ಕೈಗಾರಿಕೀಕರಣದ್ದು ಆ[…]ತೃಪ್ತಿಯಲ್ಲ. ಭಾರಿ ಪ್ರಮಾಣದಲ್ಲಿ ಶೋಷಣೆ ನಡೆಯ[…]ವುದನ್ನು ಅದು ಅಪೇಕ್ಷಿಸುತ್ತದೆ. ಆಂತರಿಕ ವಸಾಹತುಗ[…] ಸೃಷ್ಟಿಯು ಇದರ ಉಳಿವು-ಬೆಳವಣಿಗೆಗೆ ಯಾತಕ[…] ಸಾಲದು. ಹಾಗಾಗಿ ಅದು ತನ್ನ ಕೆನ್ನಾಲಿಗೆಯನ್ನು ಹೊ[…] ಹೊಸ ಪ್ರದೇಶಗಳತ್ತ ಚಾಚುತ್ತಾ ಬಂದಿದೆ.

ಈ ಕುರಿತು ಲೋಹಿಯಾ ಪ್ರತಿಪಾದಿಸಿದ ವಿಶ್ಲೇ[…]ಣೆಯ ಮೂಲಾಶಯ ಅಧ್ಯಯನ ಯೋಗ್ಯವಾಗೇ ಉ[…]ದಿದೆ. ಬಂಡವಾಳಶಾಹಿ ಮೂಲ ಸಾರ ಅದರ ಬಾ[…] ಆಯಾಮಗಳಲ್ಲಿ ಅಡಗಿದೆ. ಬಂಡವಾಳಶಾಹಿಯ ಕೇಂ[…] ಶಕ್ತಿಯಾಗಿ ವಸಾಹತುವಾದಿ ಅಥವಾ ನವವಸಾಹತುವಾ[…] ಶೋಷಣೆ ಉಳಿದೇ ಉಳಿಯುತ್ತದೆ. ಈ ಶೋಷಣೆಗೆ ಅ[…]ಕಾಶ ಕಲ್ಪಿಸದೇ ಹೋದರೆ; ಬಂಡವಾಳಶಾಹಿಯ ಉಳಿ[…] -ಬೆಳವಣಿಗೆ ಸಾಧ್ಯವಿಲ್ಲ. ಆದುದರಿಂದ ಬಂಡವಾಳಶಾ[…]ಯನ್ನು ಕಿತ್ತೊಗೆಯುವ ದಿಕ್ಕಿನಲ್ಲಿ ನಡೆಯುವ ಯಾವು[…] ಕಾರ್ಯತಂತ್ರವನ್ನು ಕೈಗಾರಿಕೀಕೃತವಾಗಿಲ್ಲದ ಜಗತ್[…] ಜನತೆಯ ಮೇಲೆ ಕೇಂದ್ರೀಕರಿಸುವುದು ಅನಿವಾಯ[…]ವಾಗುತ್ತದೆ.

ಶೋಷಣೆಯ ನಾಲ್ಕು ಮಾರ್ಗಗಳು

ಶೋಷಣೆಯ ನಾಲ್ಕು ರೀತಿಗಳನ್ನು ಸರಳವಾ[…] ಹೀಗೆ ಮಂಡಿಸಬಹುದು. ಬಂಡವಾಳಶಾಹಿ ವ್ಯವಸ್ಥೆಯ[…] ಹೆಚ್ಚುವರಿ ಮೌಲ್ಯವನ್ನು ಸೆಳೆದುಕೊಳ್ಳುವ ನಾಲ್ಕು ರೀತಿಗ[…]ನ್ನಾಗಿಯೂ ಇವುಗಳನ್ನು ಪರಿಗಣಿಸಬಹುದು.

೧. ಬಂಡವಾಳಶಾಹಿಗಳಿಂದ ಅಥವಾ ಕೈಗಾರಿ[…] ಮಾಲಿಕರಿಂದ ಕಾರ್ಮಿಕರ ಶೋಷಣೆ.

೨. ಕೈಗಾರಿಕೀಕೃತ ರಾಷ್ಟ್ರಗಳಿಂದ ವಸಾಹತುವಾ[…] ಮತ್ತು ನವ ವಸಾಹತುವಾದಿ ರಾಷ್ಟ್ರಗಳ ಕಾರ್ಮಿಕ[…]

ತ್ಪಾದಕರು, ಗ್ರಾಹಕರ ಮತ್ತು ಒಟ್ಟಾರೆ ಜನತೆಯ
ೋಷಣೆ.

೩. ಮೂರನೇ ಜಗತ್ತಿನ ರಾಷ್ಟ್ರಗಳ ಒಳಗೆ ಸೃಷ್ಟಿ
ಂಡ ಆಂತರಿಕ ವಸಾಹತುಗಳ ಶೋಷಣೆ.

೪. ಸ್ಥಳೀಯ ಮತ್ತು ಬಹುರಾಷ್ಟ್ರೀಯ ಬಂಡವಾ
ಂದ ಪ್ರಾಕೃತಿಕ ಸಂಪತ್ತಿನ ಸುಲಿಗೆ.

ಇವುಗಳು ಯಾವಾಗಲೂ ಪ್ರತ್ಯೇಕವಾಗಿರುತ್ತವೆ ದೇನಿಲ್ಲ; ಇವು ಒಂದಕ್ಕೊಂದು ಸಂಬಂಧ ಹೊಂದಿ ತ್ತವೆ ಅಥವಾ ಒಂದರೊಡನೊಂದು ಬೆಸೆದುಕೊಂಡಿ ತ್ತವೆ. ಉದಾಹರಣೆಗೆ, ಆಂತರಿಕ ವಸಾಹತುವಾದಿ ೋಷಣೆಯು ನವ ವಸಾಹತುವಾದಿ ಶೋಷಣೆಗೆ ನಳಿಕೆ ಪದಲ್ಲಿ ಹೊಂದಿಕೊಂಡಿರುತ್ತದೆ. ಪ್ರಾಕೃತಿಕ ಸಂಪತ್ತಿನ ಶ ಮತ್ತು ಲೂಟಿ ನಡೆದಾಗ, ಇವುಗಳನ್ನು ಆಧಾರವಾಗಿ ಕೊಂಡೇ ಬದುಕುತ್ತಿರುವ ಜನತೆಯು ಒಟ್ಟಾರೆ ಅವ ಹೀನತೆಗೆ ಬಲಿಯಾಗಿ, ದಿವಾಳಿಯೇಳುತ್ತದೆ. ಾಗ್ಯೂ ಬಡ ರಾಷ್ಟ್ರಗಳಲ್ಲಿನ ಪ್ರಾಕೃತಿಕ ಸಂಪತ್ತು ನಾಶ ಟಿಗೆ ಒಳಗಾಗಿ, ಪರಿಣಾಮವೆಂಬಂತೆ ಅಲ್ಲಿನ ಜನ ಯು ಭೀಕರ ಶೋಷಣೆಗೆ ಒಳಗಾಗುತ್ತಾರೆ ಎಂಬ ಶವು ಸ್ಪಷ್ಟವಾಗುವುದಿಲ್ಲವಾದ್ದರಿಂದ ಈ ಅಂಶವನ್ನು ತ್ಯೇಕವಾಗಿ ಪರಿಗಣಿಸುವುದು ಅಗತ್ಯವಾಗುತ್ತದೆ. ಪ್ರಾಕೃತಿಕ ಂಪತ್ತಿನ ನಾಶ ಮತ್ತು ಲೂಟಿಯು, ಬಂಡವಾಳಶಾ ಯ ಒಂದು ಹೊಸ ಆಯಾಮವಾಗಿ ಕಾಣಿಸಿಕೊಂಡಿದೆ. ರಿಸರ ಮತ್ತು ಜೀವ ಸಂಕುಲದ ಬಿಕ್ಕಟ್ಟು, ಪರಿಸರ ಳಜಿ ಹಾಗೂ ಪರಿಸರ ರಕ್ಷಣೆಗೆ ಸಂಬಂಧಿಸಿದ ಂದೋಲನಗಳಿಂದಾಗಿ ಇದನ್ನು ಕಳೆದ ಕೆಲವು ದಶಕ ಂದ ಮಾತ್ರ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿದೆ.

ಮಾರ್ಕ್ಸ್, ಲೋಹಿಯಾ ಯಾರು ಈ ಅಂಶದ ಡೆಗೆ ಅಗತ್ಯ ಗಮನ ಹರಿಸಿರಲಿಲ್ಲ ಹಾಗೂ ಬಂಡವಾಳ ಹಿಯ ಈ ಆಯಾಮವನ್ನು ಗುರುತಿಸಿ, ವ್ಯಾಖ್ಯಾನಿಸಿರ ಲ್ಲ. ಗಾಂಧಿ ಮಾತ್ರ ಅಪವಾದ ಎನ್ನಬಹುದು. ಪ್ರಕೃತಿ ತ್ತು ಆಧುನಿಕ ನಾಗರಿಕತೆಗಳ ನಡುವೆ ಬಿಕ್ಕಟ್ಟು ಡುವ ಸಾಧ್ಯತೆಯನ್ನು ಅವರು ತಮ್ಮ ಅಸಾಮಾನ್ಯ ೂರದೃಷ್ಟಿಯಿಂದಾಗಿ ಮುಂಗಾಣುತ್ತಾ, ಅದನ್ನು ತಮ್ಮದೇ ಶೈಲಿಯಲ್ಲಿ ಜನರೆದುರು ನೂರು ವರ್ಷಗಳ ಹಿಂದೆಯೇ ಂಡಿಸಿದ್ದರು.

ಈ ಅಂಶದೊಂದಿಗೆ ಇನ್ನೊಂದು ಸಮಸ್ಯೆ ತಳಕು ಕಿಕೊಂಡಿದೆ. ಪ್ರಾಕೃತಿಕ ಸಂಪತ್ತಿನ ಶೋಷಣೆಯಿಂದ ಚ್ಚುವರಿ ಮೌಲ್ಯವನ್ನು ಸಂಪಾದಿಸುತ್ತದೆ ಎಂಬುದನ್ನು ಪ್ಪಿದರೆ, ಮೌಲ್ಯದ ಶ್ರಮ ಸಿದ್ಧಾಂತ ಸಮಸ್ಯೆಯಾಗುತ್ತದೆ. ದುದರಿಂದ ಈ ಸಿದ್ಧಾಂತವನ್ನು ನಾವು ಪುನರ್ ವಿಮ ರ್ಶಿಸಿ, ತಿದ್ದಿಕೊಳ್ಳಬೇಕು; ಅಲ್ಲದೆ ಮಾನವ ಶ್ರಮ ಮತ್ತು ಪ್ರಾಕೃತಿಕ ಸಂಪನ್ಮೂಲಗಳೂ ಮೌಲ್ಯವನ್ನು ಸೃಷ್ಟಿಸುವ ಪ್ರಾಥಮಿಕ ಮೂಲಗಳೆಂದು ಪರಿಗಣಿಸಬೇಕು.

ಮಾರ್ಕ್ಸ್ ಮಾಡಿದ ತಪ್ಪೆಂದರೆ, ಆತ ಮಾನವ ಶ್ರಮದ ಶೋಷಣೆಯಾಗುತ್ತಿರುವುದನ್ನು ಮಾತ್ರ ಗುರುತಿಸಿದ. ಈ ಅಂಶವನ್ನು ಆಧರಿಸಿ, ತನ್ನ ಸಿದ್ಧಾಂತವನ್ನು ರೂಪಿಸಿದ. ಪ್ರಾಕೃತಿಕ ಸಂಪತ್ತಿನ ಲೂಟಿಯನ್ನು ಪರಿಗಣಿಸಿ, ಅದನ್ನು ತನ್ನ ವಿಶ್ಲೇಷಣೆಯ ಭಾಗವನ್ನಾಗಿಸಲೇ ಇಲ್ಲ. ಪ್ರತಿಯೊಬ್ಬ ಚಿಂತಕರು–ಅವರೆಷ್ಟೇ ದೊಡ್ಡವರಾಗಿರಲಿ–ತಮ್ಮ ಕಾಲ ಮತ್ತು ಪ್ರದೇಶದ ಸೃಷ್ಟಿಯಾಗಿರುತ್ತಾರೆ ಎಂಬ ಮಾತನ್ನು ಖುದ್ದು ಮಾರ್ಕ್ಸ್ ಕೂಡ ಹೇಳಿರುವ ಹಿನ್ನೆಲೆಯಲ್ಲಿ ಈ ಸಂಬಂಧದಲ್ಲಿ ದೋಷಾರೋಪ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಈಗ ಹೆಚ್ಚು ಅನುಭವ ಹಾಗೂ ಒಳನೋಟಗಳು ಲಭ್ಯವಾಗಿರುವ ಹಿನ್ನೆಲೆಯಲ್ಲಿ, ನಾವು ಬಂಡವಾಳಶಾಹಿಯನ್ನು ಸಮರ್ಥವಾಗಿ ಅರ್ಥೈಸಿಕೊಂಡು, ಅದರ ವಿರುದ್ಧ ಹೋರಾಡಲು ಹಾಗೂ ಅದನ್ನು ನಾಶಪಡಿಸಲು ಸಮರ್ಥ ಕಾರ್ಯಾತಂತ್ರವನ್ನು ರೂಪಿಸಿಕೊಳ್ಳುವುದು ಅತ್ಯಗತ್ಯ.

ಈ ತಿಳುವಳಿಕೆಯ ಬೆಳಕಲ್ಲಿ ೨, ೩, ಮತ್ತು ೪ನೇ ರೀತಿಯ ಶೋಷಣೆಯ ವಿರುದ್ಧ ವಿಶ್ವಾದ್ಯಂತ ಇಂದು ಜನತೆ ಆಕ್ರೋಶಪೂರಿತ ಪ್ರತಿರೋಧವನ್ನು ತೋರುತ್ತ ಬಂಡೆದ್ದಿದ್ದಾರೆ ಎಂಬುದನ್ನು ನಾವು ಮನಗಾಣಬಹುದಾಗಿದೆ. ವಿವಿಧೆಡೆ ರೂಪುಗೊಂಡಿರುವ ಪ್ರತಿರೋಧಗಳು ಒಂದಕ್ಕೊಂದು ಸಂಬಂಧಿಸಿವೆ; ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ವಿರೋಧಿ ಬಂಡುಕೋರ ಆಂದೋಲನ ಗಳು ಈ ಹಿನ್ನಲೆಯಲ್ಲಿ ಮೈದಾಳಿವೆ. ವಿಶ್ವದ ಈ ಪ್ರತಿರೋಧಗಳು ವಿಚಾರ ವಿನಿಮಯ ಮಾಡಿಕೊಂಡು ತಮ್ಮ ಸಂಕಷ್ಟಗಳಿಗೆ ಮೂಲ ಕಾರಣವನ್ನು ಹಾಗೂ ಪರಿ ಹಾರೋಪಾಯಗಳನ್ನು ಕಂಡುಕೊಳ್ಳಲು ಮುಂದಾಗ ಬೇಕು; ಆಗಲೇ ಈ ಪ್ರತಿರೋಧಗಳು ಕ್ರಾಂತಿಕಾರಿ ಆಂದೋಲನಗಳಾಗಿ ರೂಪುಗೊಳ್ಳುತ್ತವೆ. ಮಾರ್ಕ್ಸ್, ಲೋಹಿಯಾ ಮತ್ತು ವಿಶ್ವದ ಅಸಂಖ್ಯ ಧೀಮಂತರ ಕನಸಾಗಿರುವ ಸಮಾಜವಾದಿ ಸಮಾಜ ವ್ಯವಸ್ಥೆಯು ಸಾಕಾರ ಗೊಳ್ಳುವುದು ತಡವಾಗುವುದಿಲ್ಲ.

<u>ಉಲ್ಲೇಖಗಳು</u>

೧. ರೋಸಾ ಲಕ್ಸಂಬರ್ಗ್ ಅವರ The Accumulation of Capital.

೨. ಮಹಾತ್ಮಾ ಗಾಂಧಿ ಅವರ Hind Swaraj or Indian Home Rule.

೩. ರಾಮಮನೋಹರ ಲೋಹಿಯಾ ಅವರ Marx, Gandhi and Socialism ಕೃತಿಯಲ್ಲಿನ Economics After Marx ಪ್ರಬಂಧ.

೪. ಐಜಾಜ್ ಅಹ್ಮದ್ ಅವರ

i. Fire the plains, Fire in the Mountains: Bolivia Revolution Through the Ballot?

ii. Fire in the plains, Fire in the Mountains: Is Socialism possible in Bolivia?

iii. Latin America's pink Tide
Frontline Jan. 13, Jan. 27 March 10 2006

(ಲೋಹಿಯಾ ಜನ್ಮದಿನ ದಿನಾಂಕ ೨೩.೩.೨೦೦೬ ರಂದು ಬೆಂಗಳೂರಿನಲ್ಲಿ ಡಾ॥ ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ). □

ಪ್ರಾಕೃತಿಕ ಸಂಪತ್ತಿನ ಶೋಷಣೆಯಿಂದ ಹೆಚ್ಚುವರಿ ಮೌಲ್ಯವನ್ನು ಸಂಪಾದಿಸುತ್ತದೆ ಎಂಬುದನ್ನು ಒಪ್ಪಿದರೆ, ಮೌಲ್ಯದ ಶ್ರಮ ಸಿದ್ಧಾಂತ ಸಮಸ್ಯೆಯಾಗುತ್ತದೆ. ಆದುದರಿಂದ ಈ ಸಿದ್ಧಾಂತವನ್ನು ನಾವು ಪುನರ್ ವಿಮರ್ಶಿಸಿ, ತಿದ್ದಿಕೊಳ್ಳಬೇಕು; ಅಲ್ಲದೆ ಮಾನವ ಶ್ರಮ ಮತ್ತು ಪ್ರಾಕೃತಿಕ ಸಂಪನ್ಮೂಲಗಳೂ ಮೌಲ್ಯವನ್ನು ಸೃಷ್ಟಿಸುವ ಪ್ರಾಥಮಿಕ ಮೂಲಗಳೆಂದು ಪರಿಗಣಿಸಬೇಕು.



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೧
ದೂರವಾಣಿ : ೩೨೮ ೭೪೮೩/೯೪೪೮೦೪೮೩೦೬

ವಿಡಂಬನೆ

ಜಾರ್ಜ್ ಆರ್ವೆಲ್‌ನ ವಿಖ್ಯಾತ ಕೃತಿ 'ಅನಿಮಲ್ ಫಾರ್ಮ್'ನ ಮುಂದುವರೆದ ಕಂತಾಗಿ ಖ್ಯಾತ ಲೇಖಕಿ ಮತ್ತು ಹೋರಾಟ ಗಾರ್ತಿ ಅರುಂಧತಿ ರಾಯ್ 'ಅನಿಮಲ್ ಫಾರ್ಮ್-೨' ಅನ್ನು ರಚಿಸಿದ್ದಾರೆ. ಜಗತ್ತಿಗೇ ಹಿರಿಯಣ್ಣ ನಾಗಲು ಹೊರಟಿರುವ ಅಮೆರಿಕ ಅಧ್ಯಕ್ಷ ಜಾರ್ಜ್ ಬುಷ್‌ನ ಜನವಿರೋಧಿ ರಾಕ್ಷಸತನವನ್ನು ಪರಿಣಾಮಕಾರಿಯಾಗಿ ಇಲ್ಲಿ ಬಯಲು ಮಾಡಿದ್ದಾರೆ. ಜಾರ್ಜ್ ಬುಷ್‌ನ ಅಂತರಂಗ ದಲ್ಲಿರುವುದನ್ನು ಅರುಂಧತಿ ನಾಟಕ ರೂಪದಲ್ಲಿ ಇಲ್ಲಿ ಬಹಿರಂಗ ಪಡಿಸಿದ್ದಾರೆ.

ಅರುಂಧತಿ ರಾಯ್
ಅನು: ಎಂ. ಆರ್. ಸತ್ಯಪ್ರಕಾಶ್
ಎಸ್. ಕೃಷ್ಣಮೂರ್ತಿ ರಾವ್

ಅನಿಮಲ್ ಫಾರ್ಮ್

ಭಾಗ-೨

ಮುಂದುವರೆದ ದಿನ, ಪುರಾನಾ ಖಿಲಾ, ಡೆಲ್ಲಿ ಮೃಗಾಲಯ

ಅದು ವಸಂತ. ಬೇವಿನ ಮರ ಬರಿದಾಗಿದೆ. ಸಿಲ್ಕ್ ಕಾಟನ್ ಮತ್ತು ಕಚ್ನಾರ್ ಮೈದುಂಬಿವೆ. ತಮ್ಮ ಎ.ಸಿ. ಮತ್ತ ಎಂಜಿನ್ ಚಲಾವಣೆಯಲ್ಲಿಟ್ಟ ಮರ್ಸೀಡೀಸ್‌ಗಳು ವಾಹನ ನಿಲುಗಡೆಯಲ್ಲಿ ಉಸಿರುಗಟ್ಟಿ ನಿಂತಿವೆ. ಅದರಲ್ಲಿರುವ ಬೇಜಾರಿನ ಡ್ರೈವರ್‌ಗಳು ಶೋಕಿ ಸ್ಟೀರಿಯೋದಲ್ಲಿ ಹಳೆಯ ಹಿಂದಿ ಚಿತ್ರಗೀತೆ ಕೇಳುತ್ತಿದ್ದಾರೆ. ಮೃಗಾಲಯದ ಒಳಗಿನ ಬೋನುಗಳನ್ನು ಈಗಷ್ಟೇ ಸ್ವಚ್ಛಗೊಳಿಸಲಾಗಿದೆ. ಅದರಿಂದ ಫಿನಾಯಿಲ್ ವಾಸನೆ ಮೂಗಿಗೆ ಬಡಿಯುತ್ತಿದೆ. ಬೋನಿನ ಸಲಾಖೆಗಳಿಗೆ ಸಿಕ್ಕಿಸಿದ ಅಮೆರಿಕಾ ಮತ್ತು ಭಾರತದ ಪುಟ್ಟ ಪುಟ್ಟ ಬಾವುಟಗಳು ಪಟ ಪಟನೆ ಹೊಡೆದುಕೊಳ್ಳುತ್ತಿದೆ. ಅಲ್ಲಿದ್ದ ಕಟ್ಟು ಮಸ್ತಿನ ಕಪ್ಪು ಕನ್ನಡಕದ ಅಮೆರಿಕಾ ರಕ್ಷಣಾ ದಳದವರು ತಮ್ಮ ಕನ್ನಡಕದ ಹಿಂದಿರುವ ಕಣ್ಣುಗ ಳಿಂದ ಗಲಾಟೆಯ ಯಾವುದೇ ಲಕ್ಷಣಗಳಿಗೆ ಹುಡುಕಾಡುತ್ತಿದ್ದಾರೆ. ಅವ ರಿಗೆ ವಿಶೇಷವಾಗಿ ಅಲ್ಲಿನ ಪ್ಯಾಂಗೋಲಿನ್ ಮೇಲೆ ಮುಜುಗರ. ಬುಷ್ ತಮ್ಮ ಬುಲೆಟ್ ಪ್ರೂಫ್ ಬೋನಿನಲ್ಲಿ ನಿಂತಿದ್ದಾರೆ. ಅವರ ಭಾಷಣಕ್ಕೆ ಶ್ರೋತೃಗಳು- ಶ್ರೀಮಂತ ಕೈಗಾರಿಕೋದ್ಯಮಿಗಳು, ಎಂಪಿಗಳು ಮತ್ತು ಸಿನಿಮಾ ತಾರೆಯರು. ಮಾಸಿದ ಕೆಂಪುದಾರ, ಬೆರಳುಗಳ ತುಂಬ ಇದ್ದ ಅನೇಕಾನೇಕ ಉಂಗುರಗಳು ಅವರೆಲ್ಲರಲ್ಲೂ ಸಾಮಾನ್ಯವಾಗಿದ್ದ ಅಂಶ.

ಬುಷ್: ಹಲೋ ಅದೃಷ್ಟವಂತ ಜನರೇ! ನಿಮ್ಮ ಅಮೂಲ್ಯ ವಾದ ಸಮಯವನ್ನು ಅಮೆರಿಕಾ ಸಂಸ್ಥಾನದ ಅಧ್ಯಕ್ಷರ ಭಾಷಣ ಕೇಳಲು ಮೀಸಲಿಟ್ಟಿರುವುದಕ್ಕಾಗಿ ಧನ್ಯವಾದಗಳು.

ಗಿಬ್ಬನ್ ಹೂಳಿಡುತ್ತದೆ. ಆದರೆ ಒರಂಗುಟಾನ್ ತಲೆ ಎತ್ತಿ ಸಹಾ ನೋಡಲು ಸಮಯವಿಲ್ಲದೆ ಹೇನು ಹುಡುಕಾಟದಲ್ಲಿದೆ. ಚಿರತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜೋರಾಗಿ ನಡೆದಾಡುತ್ತಿದೆ. ಸ್ಲೋಲಾರಿಸ್ (ಮಂದಗತಿ ನಡಿಗೆಯ ಕೋತಿ) ಅದೇಕೋ ಆಶ್ಚರ್ಯಚಕಿತವಾಗಿದೆ.

ನಾನಿಂದು ಮಾತನಾಡಲು ಬಂದಿರುವುದು ಏಷ್ಯಾದ ಎರಡು ಅತಿದೊಡ್ಡ ಪ್ರಜಾಪ್ರಭುತ್ವಗಳ ಬಗ್ಗೆ. ಈ ಇಬ್ಬರನ್ನು ನಾನು ಈಗಲೇ ನನ್ನ ಅಂತಃಪುರಕ್ಕೆ ಸ್ವಾಗತಿಸುತ್ತೇನೆ. ಅವುಗಳೆಂದರೆ, ಇಂಡಿಯಾ (ಭಾರತ) ಮತ್ತು ಆಫ್ಘಾನಿಸ್ತಾನ- ಅಲ್ಲಲ್ಲ... ಕ್ಷಮಿಸಿ- ಪಾಕಿಸ್ತಾನ. ಛೇ ಈ ದೇಶದ ಹೆಸರು ಹಿಂದೋ ಮುಂದೋ 'ಸ್ತಾನ್' ಇದ್ದೇ ಇದೆ ಎಂದು ನನಗೆ ಗೊತ್ತು ಬಿಡಿ-ಆದರೆ ಈಗಾಗಲೇ ಆಫ್ಘಾನಿಸ್ತಾನ ನನ್ನ ಅಂತಃಪುರದಲ್ಲಿದೆಯಲ್ಲಾ. ಹ್ಹೇ! ಹ್ಹೇ!

ಇನ್ನಿಯಾ ಒಂದು ಪ್ರಜಾಸತ್ತೆ, ಯಾಕೆಂದರೆ ಇಲ್ಲಿನ ಜನರು ಮತಹಾಕಿ ತಂದ ಸರ್ಕಾರ ನಮ್ಮನ್ನು ಅನುಸರಿಸುತ್ತದೆ. ಪಾಕಿಸ್ತಾನವೂ ಒಂದು ಪ್ರಜಾಸತ್ತೆ. ಯಾಕೆಂದರೆ ಜ. ಮುಷರಫ್‌ಗೆ ನನ್ನ ಮತವಿದೆ. ಅದೇರೀತಿ ಮಧ್ಯ ಏಷ್ಯಾ ಮತ್ತು ಸೌದಿಯ ಮತಾಂಧರಿಗೆ ಸಹಾ. ಪ್ಯಾಲಿಸ್ಟೈನ್ ಪ್ರಜಾಸತ್ತೆಯಾಗಿಲು ಸಾಧ್ಯವಿಲ್ಲ, ಯಾಕೆಂದರೆ ಮತ ಪಡೆದ ಅಲ್ಲಿನ ನಾಯಕರಿಗೆ ನನ್ನ ಸಹಮತವಿಲ್ಲ. ಆದರೆ ಭಾರತ ನನ್ನ ನೆಚ್ಚಿನ ಪ್ರಜಾಸತ್ತೆ.

ಐದು ಶತಮಾನಗಳಿಗೂ ಹಿಂದೇಯೇ ಖ್ಯಾತ ಸಾಮೂಹಿಕ ಕೊಲೆಗಡುಕ ಹಾಗೂ ನಮ್ಮ ಸಂಸ್ಥಾನದ ಸ್ಥಾಪಕ ಕ್ರಿಸ್ಟೋಫರ್ ಕೊಲಂಬಸ್ ನಿಮ್ಮ ದೇಶ ಹುಡುಕಲು ಹೊರಟು ಭೂಮಿ ಗೋಳಾ ಗಿದೆ ಎಂಬ ತೀರ್ಮಾನಕ್ಕೆ ಬಂದ. ಈಗ ನನ್ನ ಗೆಳೆಯ ಥಾಮಸ್ ಫ್ರೀಡ್‌ಮನ್ ಭೂಮಿ ಚಪ್ಪಟೆಯಾಗಿದೆ ಎನ್ನುತ್ತಿದ್ದಾನೆ. ನಿಜ ಹೇಳಬೇ ಕೆಂದರೆ ಭೂಮಿ ಗೋಳಾ ಕಾರವಾಗಿದ್ದರೇನು? ಚಪ್ಪಟೆಯಾಗಿದ್ದ ರೇನು? ಅದು ನಮ್ಮದಾಗಿದ್ದರೆ ಸಾಕು. ಆದರೆ ನೀವು ತಿಳಿದಿರುವಂತೆ ಕ್ರಿಸ್ ಇನ್ನಿಯಾ ಅನ್ವೇಷಿಸಲು ಹೋಗಿ ಅಮೆರಿಕಾಕ್ಕೆ ಬಂದ. ಅದೃಷ್ಟವ ಶಾತ್ ಅಲ್ಲೂ ಬೇಕಾದಷ್ಟು ಇಂಡಿಯನ್ನರು ಇದ್ದರು. ದೇವರ ದಯೆ ಯಿಂದ ನಾವು ಅವರೆಲ್ಲರನ್ನೂ ಕೊಂದೆವು- ನಲವತ್ತೋ ಅಥವಾ ಅರವತ್ತೋ ದಶಲಕ್ಷ ಜನರಷ್ಟಿರಬೇಕು. ನನ ಸರಿಯಾದ ಅಂಕಿ ಅಂಶ ತಿಳಿದಿಲ್ಲ. ಬೇಕಾದರೆ ನನ್ನ ಕಛೇರಿ ಸರಿ ಯಾದ ಮಾಹಿತಿ ಒದಗಿಸುತ್ತದೆ. ಒಂದು ಸಣ್ಣ ಹತ್ಯಾಕಾಂಡಕ್ಕೇಕೆ ನಮ್ಮಲ್ಲಿ ಮನಸ್ತಾಪ? ಅಲ್ಲವೇ? ಇದೆಲ್ಲದರಿಂದಾದ ಒಳ್ಳೆಯ ವಿಷಯವೇನೆಂದರೆ, ಈಗ ದೇಶ ನಮ್ಮ ಕೈಯಲ್ಲಿದೆ. "ಸ್ವತಂತ್ರರ ನಾಡು, ಧೈರ್ಯಶಾಲಿಗಳ ತವರು." ನಮ್ಮಲ್ಲಿ ಈಗ ನೀವ್ಯಾರೂ ಊಹಿಸಲಾಗದಷ್ಟು 'ನ್ಯೂಕ್ಲೂ ಲರ್' ಶಸ್ತ್ರಾಸ್ತ್ರಗಳಿವೆ. ಕೆಟ್ಟ ಮೂಡ್‌ನಲ್ಲಿದ್ದಾಗ ನಾನು ಬೇಕಾದರೆ, ಕೇವಲ ಒಂದು ನಿಮಿಷದ ಇಡೀ ವಿಶ್ವವನ್ನೇ ನಾಶಮಾಡಬಲ್ಲೆ. ಹ್ಹೇ! ಹ್ಹೇ! ಸುಮ್ಮನೆ ತಮಾಷ ಮಾಡಿದೆ ಅಷ್ಟೇ. ನಾನು ನಿಜವಾಗಿ 'ಮೂಡಿ' ಅಲ್ಲ. ಅದಲ್ಲದೆ....ನಾನೀಗ ನಿಮ್ಮ ಪರ ವಹಿಸುತ್ತಿದ್ದೇನೆ. ಅಂದರೆ ನಿಮ್ಮ ಪರವಾಗಿದ್ದೇನೆ. ನಾನೇನು ನಿಮ್ಮ ಶತ್ರುವೇ? ನಾನೇನು ಹಾಗೆ ಕಾಣುತ್ತೇನೆಯೇ? ನೀವು 'ಸ್ಲೀಪಿಂಗ್ ವಿತ್ ದ ಎನಿಮಿ' ನೋಡಿದ್ದೀರಾ? ನಾನು ನೋಡಿದಾಗ ಲಾರಾಗೆ ಹೇಳಿದ್ದೆ, ಎಲ್ಲಾ ಸರಿ, ಆದರೆ who gets ಜಿ*****ಜ ಅಂತ! ಹ್ಹಾ!

ನಮಗೆಲ್ಲರಿಗೂ ಪರಿಚಯವಿರುವ ಮತ್ತು ನಾವೆಲ್ಲರೂ ಇಷ್ಟ ಪಡಲು ಆರಂಭಿಸಿರುವ ತಮ್ಮ

ಕೊಂಕು ನಗೆ ಮತ್ತು ಗೆಲುವಿನ ನೋಟ ಬೀರುತ್ತಾ ಸುತ್ತಲು ನೋಡುವರು.

ನನ್ನನ್ನು ಕ್ಷಮಿಸಿ. ಲಾರಾ ಇಲ್ಲಿಲ್ಲ. ಮದರ್ ಟ್ರೇಝಾ ಅವರ ಅನಾಥಾಲಯದಲ್ಲಿ ಫೋಟೋ ತೆಗೆಸಿಕೊಳ್ಳಲು ಹೋಗಿದ್ದಾಳೆ. ನನಗೆ ನಿಜವಾಗಿಯೂ ನಿಮ್ಮ ಪ್ರಧಾನಿಯನ್ನು ಭೇಟಿಯಾಗಿ ಸಂತೋಷವಾಗಿದೆ-ಆ ಮುಂಡಾಸು ಮತ್ತು ತಮಾಷೆಯ ಸಣ್ಣ ದ ನೀವು ತಯಾರಿ ಸಿರು ಒಂದೆರಡು 'ನ್ಯೂಕೂಲರ್' ಬಾಂಬ್‌ಗಳನ ನೋಡಿಕೊಳ್ಳು ಅವರೊಂದಿಗೆ ಮಾತುಕತೆಯಲ್ಲಿ ನಿಮ್ಮ ಪ್ರಧಾನಿ ಒಳ್ಳೆಯ ಮನುಷ್ಯ- ಅ ಆಕ್ಸ್‌ಫರ್ಡ್‌ನಲ್ಲಿ ಓದಿ ದ್ದಾರೆ

ವೇ? ಆದರೂ ತಮಾಷೆಯಾದ ಮುಂಡಾಸು ಧರಿಸುತ್ತಾರೆ. ನನ್ನ ಸುತ್ತಲೂ ಬರಿ ಮಾಷೆಯ ಉಡುಗೆ ಗಳೇ ಕಾಣಿಸುತ್ತಿವೆ. ಕೆಲವರು ಗಡ್ಡಬಿಟ್ಟ ಮುಜ್ಲಿಮರ ಹಾಗೆ ಖುತ್ತಾರೆ. ಈ ಒಣಪ್ರದೇಶದ ಜನರ ಮೈಯಿಂದ ಒಂದು ರೀತಿಯ ತಮಾಷೆಯ ಸನೆ ಬರುತ್ತದೆ. ಅದನ್ನು ಹೋಗಲಾಡಿಸಲು 'ಡಿಯೋ' ಕೂಡ ಉಪಯೋಗಿಸು ವಿಲ್ಲ. ನನ್ನ ಅಚ್ಚುಮೆಚ್ಚಿನ 'ಡಿಯೋ' ಹೆಸರು 'ಫ್ರೀಡಂ' ಎಂದು. ಅದು ಹಿತವಾದ ಬೆ ಪರಿಮಳ ಬೀರುತ್ತದೆ. ನನಗನಿಸಿದಂತೆ ತಮಾಷೆ ಉಡುಗೆಯ ಜನ 'ನ್ಯೂಕೂಲರ್' ಸ್ತ್ರಗಳನ್ನು ಇಟ್ಟುಕೊಳ್ಳಬಾರದು. ಆದ್ದರಿಂದ ನಿಮ್ಮ 'ಅಲ್ಮೇರಾ'ದಲ್ಲಿರುವ ಬಾಂಬ್ ನ್ನು ನನ್ನೊಂದಿಗೆ ಜೋಪಾನವಾಗಿ ಇಡಿ.

ನಾವು ಅಮೆರಿಕಾದಲ್ಲಿ ನಮ್ಮ ಬಾಂಬ್‌ಗಳನ್ನು ಅಲ್ಮೇರಾದಲ್ಲಿಡುವುದಿಲ್ಲ. ಅಸ್ಥಿ ಜರಗಳನ್ನಷ್ಟೇ ಇಡುವುದು. ನಮಗೆ ಇಷ್ಟವಾದ ಅಸ್ಥಿಗಳಿಗೆ ಅಡ್ಡ ಹೆಸರುಗಳಿವೆ. ಅವು ಹೆಸರು ಶಾಂತಿ, ಪ್ರಜಾಪ್ರಭುತ್ವ ಮತ್ತು ಮುಕ್ತ ಮಾರುಕಟ್ಟೆ ಎಂದು. ಅವುಗಳ ನಿಜ ದ ಹೆಸರು ಕ್ರೂಸ್ ಮಿಸೈಲ್, ಡೈಸಿಕಟ್ಟರ್, ಬಂಕರ್ ಬಸ್ಟರ್. ನಮಗೆ ಜೇಡಿ ಬಾಂಬ್ ಬಡ ಇಷ್ಟ. ನಾವು ಅವಳಿಗೆ 'ಕ್ಲೇರ್' ಎನ್ನುತ್ತೇವೆ. ಅವಳು ನಿಜವಾಗಿಯೂ ೋಹಕವಾಗಿದ್ದಾಳೆ. ಮಕ್ಕಳು ಅವಳ ಜತೆ ಆಟವಾಡಲು ಹೋಗುವರು. ವಳು ಅವರ ಮುಖಗಳ ಮೇಲೆ ಸ್ಫೋಟಗೊಂಡು ಬರ್ಬರವಾಗಿ ಲ್ಲುವಳು. ಆಗ ಮಕ್ಕಳು ಮಾಡುವ ಚೀತ್ಕಾರ ಇದೆಯಲ್ಲ, ಅದು ನಿಜ ದ 'ಬೊಬ್ಬೆ.' ಆದರೆ ಹೀಗೆ ಹೇಳಿದೆ ನೆಂದು ನನ್ನಮ್ಮನಿಗೆ ಯಾರೂ ಳಬೇಡಿ. ಅವಳು ನನ್ನ ನಾಲಿಗೆಯನ್ನು ಸೋಪಿನಿಂದ ಉಜ್ಜಿ ತೊಳೆದು ಡುತ್ತಾಳೆ ಅಷ್ಟೆ

ಇಂದು ನಾನು ಇಲ್ಲಿಗೆ ಬಂದಿರುವುದು ಯಾಕೆಂದರೆ ಯಾ ತುಂಬಾ ಬದಲಾಗಿದೆ. ಬೇಗ ಬದ ಲಾಗುತ್ತಲಿದೆ. ನು ಈ ಕ್ಷಿಪ್ರ ಬೆಳವಣಿಗೆ, ಹಿಂಸೆ, ಪರಿಸರ ವಿಕೋ ಪದಲ್ಲಿ ಗಿಯಾಗಬೇಕು. ಅದು ನನಗೆ ಇಷ್ಟ; ಕ್ಯೂಟೋದಲ್ಲಿ ಮೂರ್ಖರು ಕೂಗುವ ರೀತಿಯಲ್ಲಿ. ನನ್ನ ಬಿಕೆ ಸರಿ ಇದ್ದರೆ ರತದಲ್ಲಿ ಒಂದೇ ಒಂದು ಡಿಯಲು ಯೋಗ್ಯವಾದ ರಿರುವ ನದಿಯಿಲ್ಲ. ಆದರೆ ಡಿಯಲು ಕೋಕ್ ಇದೆಯಲ್ಲ. ದು ತಣ್ಣಗೆ ರುಚಿಯಾಗಿರುತ್ತದೆ. ತೆಗೆ ದುಡ್ಡು ಕೊಟ್ಟರೆ ನನ್ನಾದರೂ ಕೊಳ್ಳ ಬಹು ದಾದ ಬಂದರವಾದ ಬೃಹತ್ ಮಾಲ್‌ಗಳು ಮಗೆ ಸಿಗುತ್ತಿವೆ. ಶ್ರೀಮಂತ ಇನ್ನಿಯನ್ನರ ೀವನಮಟ್ಟ ಸುಧಾರಿಸುತ್ತಿರುವುದನ್ನು ತಿಳಿದು ನಗೆ ರೋಮಾಂಚನವಾಗುತ್ತಿದೆ. ಇನ್ನಿಯನ್ ಇಒಗಳ ಸಂಬಳ ಪಾಶ್ಚಿಮಾತ್ಯರ ಮಟ್ಟಕ್ಕೆ ರುತ್ತಿರುವುದೂ ಅದ್ಭುತವಾದ ವಿಷಯ. ನಾವು ಅಮೆರಿಕದಲ್ಲಿ ಇಒಗಳಿಗೆ ಸಬ್ಸಿಡಿ ನೀಡುತ್ತೇವೆ. ಅವರನ್ನು ಪ್ರೀತಿಯಿಂದ ದ್ದುಗಟ್ಟಿಸಿಬಿಡುತ್ತೇವೆ. ಜತೆಗೆ ನಮ್ಮ ಕಾರ್ಪೋರೇಟ್ ರೈತರ ೇಲೂ ನಮಗೆ ಪ್ರೇಮ. ಅವ ರಿಗೆ ನಾವು ಬಿಲಿಯನ್‌ಗಟ್ಟಲೆ ಾಲರ್‌ಗಳ ಸಬ್ಸಿಡಿ ಕೊಡುತ್ತೇವೆ. ಯಾಕೆಂದರೆ ಇವರು ಬಹಳ ಒಳ್ಳೆಯ ನ. ಅವರು ನಿಮ್ಮ ರೈತರಂತೆ ತೀರ ದೈನ್ಯವಾಗಿ, ಬಡವಾಗಿ ಸಾಯುವಂತೆ ಇರುವುದಿಲ್ಲ. ಮ್ಮ ರೈತರು ಸಬ್ಸಿಡಿಗೂ ಅರ್ಹರಲ್ಲ. ಯಾಕೆಂದರೆ ಅವರು ಒಳ್ಳೆಯವರಲ್ಲ. ನೀವು ಅವರಿಗೆ *ಪ್ರೆಜಾಕ್ (Prozac- Anti depressant)* ಕೊಡ ಬೇಕು. ಅದರಿಂದ ಅಮೆರಿಕೆಯ ಡ್ರಗ್ ಸಂಸ್ಥೆಗಳಿಗೆ ಇನ್ನು ಸ್ವಲ್ಪ ಆದಾಯವಾದರೂ ಬರುತ್ತದೆ.

ಕಳೆದ ವಾರ ನಾನು ಏಷ್ಯಾ ಸೊಸೈಟಿಯಲ್ಲಿ ಹೇಳಿ ದಂತೆ, ಶ್ರೀಮಂತ ಇನ್ನಿ ಯನ್ನರು ಜಿಇ, ವರ್ಲ್‌ಪೂಲ್ ಮತ್ತು ವೆಸ್ಟಿಂಗ್‌ಹೌಸ್‌ನಂತಹ ಅಮೆರಿಕಯ ಕಂಪನಿಗಳ ಏರ್‌ಕಂಡಿಷನರ್‌ಗಳು, ಅಡುಗೆಮನೆ ಉಪಕರಣಗಳು ಮತ್ತು ವಾಷಿಂಗ್‌ಮಷಿನ್‌ಗಳನ್ನು ಕೊಂಡುಕೊಳ್ಳುತ್ತಿರು ವುದು ನನಗೆ ಸಂತಸ ತಂದಿದೆ. ಯುವ ಇಂಡಿಯನ್ನರು ಡೊಮಿನೋಸ್ ಪಿಜ್ಜಾಗಳು ಮತ್ತು ಹ್ಯಾಂಬರ್ಗರ್‌ಗಳ ರುಚಿ ಹತ್ತಿಸಿಕೊಳ್ಳುತ್ತಿದ್ದಾರೆ. ಇದು ನಿಜಕ್ಕೂ ಸಂತಸದ ವಿಷಯ. ಯಾಕೆಂದರೆ ಇಡೀ ವಿಶ್ವದಲ್ಲಿ ನಾವು ಅಮೆರಿಕನ್ನರು ಮಾತ್ರ ಅಸಹ್ಯಕರ ಆಹಾರ ತಿಂದು ಬೊಜ್ಜು ಬೆಳೆಸಿಕೊಂಡು ರೋಸಿಹೋಗಿದ್ದೆವು. ಆದರೆ ಎಲ್ಲ ಕೆಟ್ಟ ವಸ್ತುಗಳಲ್ಲೂ ಒಂದಷ್ಟು *good apcę* ಇರುತ್ತದೆ. *good apcę* (ಸಹಾಯಕನೊಬ್ಬ ಬಾಗಿ ಪಿಸುಗುಡುತ್ತಾನೆ. " *good* aspects Mr. President") ಅದನ್ನೇ ರೀ ನಾನು ಹೇಳಿದ್ದು. ನಮ್ಮ ಭಯಂಕರ ಆಹಾರ ಪದ್ಧತಿಯ ಉತ್ತಮ 'ಆಸ್ಪೆಕ್ಟ್' ಏನೆಂದರೆ, ಇದು ಮುಜ್ಲಿಮರ (Muzzlims)–ಕ್ಷಮಿಸಿ ಭಯೋತ್ಪಾದನೆಯ ವಿರುದ್ಧ ನಮ್ಮ ಹೋರಾಟವನ್ನು ಬಲಪಡಿಸುತ್ತದೆ. ನನಗೆ ಒಳ್ಳೆಯ ಮುಜ್ಲಿಮರೆಂದರೆ ಪಂಚಪ್ರಾಣ. ಭಯೋತ್ಪಾದಕರಲ್ಲ. ಕಾಲ್‌ಸೆಂಟರ್‌ಗಳಲ್ಲಿ ಕೆಲಸ ಮಾಡುವ ಮುಜ್ಲಿಮರು. ಅವರು ನಿಜಕ್ಕೂ ಒಳ್ಳೆಯ ಜನ. ಭಯೋತ್ಪಾದಕರನ್ನು ಮಟ್ಟ ಹಾಕಲು ನಮ್ಮ ಬೇಹುಗಾರಿಕಾ ದಳಗಳು ನಿಮ್ಮೆಲ್ಲರ ಮೇಲೆ ಸದಾ ಹದ್ದಿನ ಕಣ್ಣು ಇಟ್ಟಿವೆ. ನಿಮ್ಮ ಬಗ್ಗೆ ನಮಗೆಷ್ಟು ಗೊತ್ತು ಅಂತ ನಿಮಗೇ ಗೊತ್ತಿಲ್ಲ. ನಿಮ್ಮೆಲ್ಲರ ಮೇಲೆ ನಿಗಾ ಇಡಲು ನಿಮ್ಮ ಕಂಪ್ಯೂಟರ್‌ಗಳ ಒಳಗೆ ಸರ್ವೇಕ್ಷಣಾ ಕ್ಯಾಮೆರಾಗಳು, ವೈರ್‌ಲೆಸ್ ಉಪಕರಣಗಳು ಮತ್ತು ಸಾಫ್ಟ್‌ವೇರ್ ಗಳನ್ನು ಅಳವಡಿಸಿದ್ದೇವೆ. ನೀವು ಎಲ್ಲಿ ಹೋಗುತ್ತೀರಿ, ಏನನ್ನು ಕೊಂಡುಕೊಳ್ಳುತ್ತೀರಿ, ಯಾರ ಜತೆ ಮಲಗುತ್ತೀರಿ, ಎಲ್ಲಾ ನಮಗೆ ಗೊತ್ತು. Big brother is watching you! ಹ್ಹೇ! ಹ್ಹೇ!

ಭಯೋತ್ಪಾದಕರೆಂದರೆ ನನಗೆ ಎಲ್ಲಿಲ್ಲದ ದ್ವೇಷ. ಯಾಕೆಂದರೆ ಅವರೂ ಸಹ ತಮಗೆ ಕೊಲ್ಲುವ ಹಕ್ಕು ಇದೆ ಎಂದು ತಿಳಿದುಕೊಂಡಿದ್ದಾರೆ. ಆದರೆ ನಾನು ಚಿಕ್ಕವನಾಗಿ ದ್ದಾಗ ನನ್ನ ಅಮ್ಮ ಮತ್ತು 'ನಾನಿ', ಜನರನ್ನು ಕೊಲ್ಲುವ, ದೇಶಗಳನ್ನು ಬಾಂಬುಗಳಿಂದ ಸಿಡಿಸುವ, ರಾಸಾಯನಿಕ ಮತ್ತು ನ್ಯೂಕೂಲರ್ ಶಸ್ತ್ರಾಸ್ತ್ರಗಳನ್ನು ಬಳ ಸುವ ಹಕ್ಕು ಇರುವ ಏಕೈಕ ವ್ಯಕ್ತಿ ಅಮೆರಿಕಾದ ಅಧ್ಯಕ್ಷ ಎಂದು ಹೇಳುತ್ತಿದ್ದರು. ನಿಮಗೆ ಗೊತ್ತಲ್ಲ ಅದು ಯಾರು ಅಂತ!

ಇದ್ದಕ್ಕಿದ್ದಂತೆ ಎಗರಾಡುತ್ತಾ, ಹೂಳಿಡುತ್ತಾ ಎಲ್ಲ ಪ್ರಾಣಿಗಳನ್ನು ಗಾಬರಿಗೊಳಿಸಲು ಆರಂಭಿಸುತ್ತಾರೆ. ಇಡೀ ಮೃಗಾ ಲಯ ಎಚ್ಚರಿಕೆಯ ಘಂಟೆಯ ಸದ್ದಿನೊಡನೆ ಗದ್ದಲಮಯ ವಾಗುತ್ತದೆ.

ನಾನು ಇಲ್ಲಿ ಭಾಷಣ ಮಾಡುತ್ತಿರುವುದಕ್ಕೆ ಖುಷಿ ಯಾಗುತ್ತಿದೆ. ಯಾಕೆಂದರೆ ನನಗೆ ಪ್ರಾಣಿಗಳೆಂದರೆ ತುಂಬಾ ಪ್ರೀತಿ. ನನಗೆ ಪ್ರಾಣಿಗಳ ಬೇಟೆ ಎಂದರೆ ಬಲು ಪ್ರೀತಿ. ಒಮ್ಮೆ ಸಣ್ಣವನಾಗಿದ್ದಾಗ ಜೇನು ಹುಳವೊಂದು ಕಚ್ಚಿ ನಾನು ಕಣ್ಣೀರಿಟ್ಟಿದ್ದೆ. ಬಲವಂತವಾಗಿ ನಿಶ್ಶಸ್ತ್ರೀಕರಣ ಗೊಳಿಸಿದ, ಹಸಿದ ದೇಶಗಳ ಮೇಲೆ ಯುದ್ಧ ಮಾಡುವುದು ಕೂಡ ನನಗೆ ಇಷ್ಟ. ನಾವು ಐ–ರಾಕ್ ಬಗ್ಗೆ ಎಷ್ಟು ಚಾಣಾಕ್ಷರಾಗಿದ್ದೆವು ನಿಮಗೆ ಗೊತ್ತಲ್ಲ. ನನಗೆ ಬಾಂಬುಗಳೆಂದರೆ ಬಹಳ ಪ್ರೀತಿ. ಯಾಕೆಂದರೆ ಬಾಂಬ್ ಹಾಕಿದರೆ ಯಾರನ್ನು ಕೊಂದಿರಿ ಎನ್ನುವುದನ್ನೂ ನೀವು ತಿಳಿಯಬೇಕಿಲ್ಲ. ಯಾಕೆಂದರೆ ಅವರು ನಿಮಗೆ ಕಾಣಿಸುವುದೇ ಇಲ್ಲ! ನನ್ನಂತಹ ಹೇಡಿಗಳಿಗೆ ಇದು ಹೇಳಿಮಾಡಿಸಿದಂತಿದೆ. ಆದರೆ ನಾನು ಹೆಣ್ಣಿಗ. ಗಂಡಸರು ಶೌರ್ಯ ಪ್ರದರ್ಶಿಸಬೇಕೆಂದು ನಾವು ಯಾಕೆ ನಿರೀಕ್ಷಿಸುತ್ತೀವೋ ಗೊತ್ತಿಲ್ಲ. ಆದರೆ ನೀವು ಚಿಂತಿಸಬೇಡಿ. ನಿಮ್ಮ ಮೇಲೆ ಬಾಂಬ್ ಹಾಕುವುದಿಲ್ಲ ದಿಗ್ಬಂಧನ ಹೇರಿ ಹಸಿವಿನಿಂದ ನರಳಿಸುವುದೂ ಇಲ್ಲ– ಹೇಗಿದ್ದರೂ ನೀವು ಇಂಡಿಯನ್ನರು ಹಸಿವಿನಿಂದ ಕಂಗಾಲಾಗಿದ್ದೀರ, ಹ್ಹಾ! ಹ್ಹಾ!

ನಾವು ಅಮೆರಿಕಾದಲ್ಲಿ ನಮ್ಮ ಬಾಂಬ್‌ಗಳನ್ನು ಅಲ್ಮೆರಾದಲ್ಲಿಡುವುದಿಲ್ಲ. ಅಸ್ಥಿಪಂಜರಗಳನ್ನಷ್ಟೇ ಇಡುವುದು. ನಮಗೆ ಇಷ್ಟವಾದ ಅಸ್ಥಿಗಳಿಗೆ ಅಡ್ಡ ಹೆಸರುಗಳಿವೆ. ಅವುಗಳ ಹೆಸರು ಶಾಂತಿ, ಪ್ರಜಾಪ್ರಭುತ್ವ ಮತ್ತು ಮುಕ್ತ ಮಾರುಕಟ್ಟೆ ಎಂದು. ಅವುಗಳ ನಿಜವಾದ ಹೆಸರು ಕ್ರೂಸ್ ಮಿಸೈಲ್, ಡೈಸಿಕಟ್ಟರ್, ಬಂಕರ್ ಬಸ್ಟರ್.

ಸುತ್ತಲೂ ವಿಜಯೋತ್ಸಾಹದಲ್ಲಿ ನೋಡುತ್ತಾರೆ. ತಪ್ಪು ಎಸಗಿದ್ದು ಗೊತ್ತಾಗಿ ಪೆಚ್ಚುಮೋರೆ ಹಾಕುತ್ತಾರೆ.

ಊಪ್ಸ್... ಇದನ್ನೇ ನನ್ನ ಅಜ್ಜ ಬೂ..ಬೂ.. ಎನ್ನುವುದು. ಕ್ಷಮಿಸಿ. ನಾನು ಇಲ್ಲಿ ಬಂದಿರುವ ಕಾರಣವೇನೆಂದರೆ, ನನಗೆ ಶ್ರೀಮಂತ ಇಂಡಿಯನ್ನರೆಂದರೆ ಇಷ್ಟ. ನಾನು ಶ್ರೀಮಂತ ಇಂಡಿಯನ್ನರನ್ನು ಇಷ್ಟಪಡುವ ಕಾರಣ ಇಷ್ಟೆ ಅವರು ಬುದ್ಧಿವಂತರು ಹಾಗೂ ನಿಷ್ಠಾವಂತರು. ಈ ಸಂಯೋಗ ತೀರ ವಿರಳ. ಅಮೆರಿಕೆಯಲ್ಲಿ ನಾವು ಇಂತ ಹವರನ್ನು ಮಾದರಿ ವಲಸಿಗರೆಂದು ಪರಿಗಣಿಸುತ್ತೇವೆ. ಬುದ್ಧಿವಂತ, ನಿಯತ್ತಿನ ಇಂಡಿಯನ್ನರೆಂದರೆ ನನಗೆ ಇಷ್ಟ. ಯಾಕೆಂದರೆ ಅಮೆರಿಕನ್ನರ ಸಮಸ್ಯೆಗಳನ್ನು ಬಗೆಹರಿಸಲು ಹೆಚ್ಚುವರಿ ಬುದ್ಧಿಶಕ್ತಿಯನ್ನು ಒದಗಿಸುವುದರ ಜತೆಗೆ ತಮ್ಮ ಗ್ರಾಹಕರ ಬೇಕು ಬೇಡಗಳ ಬಗ್ಗೆ ನಿರ್ಣಾಯಕ ಮಾಹಿತಿ ಬಲ್ಲ ಎಕ್ಸಿಕ್ಯುಟಿವ್‌ಗಳನ್ನು ಪೂರೈಸುತ್ತಾರೆ. ಅಮೆರಿಕೆಯ ಉತ್ಪನ್ನಗಳಿಗೆ ಇಂಡಿಯಾ ಪ್ರಮುಖ ಮಾರುಕಟ್ಟೆ, ನಾವು ಶೋಷಣೆಗೆ ಒಳಪಡಿಸಲು ಇಲ್ಲಿ ಒಂದು ಬಿಲಿಯನ್‌ನಷ್ಟು ಜನರಿದ್ದಾರೆ. ಇದೆಲ್ಲಕ್ಕೂ ಪ್ರಮುಖ ವಿಷಯವೆಂದರೆ, ಭಾರ ತದ ಸಂಪನ್ಮೂಲಗಳನ್ನು-ಕಲ್ಲಿದ್ದಲು, ಬಾಕ್ಸೈಟ್, ಖನಿಜಗಳು, ನೀರು ಮತ್ತು ವಿದ್ಯುಚ್ಛಕ್ತಿ ಕೂಡ-ತೆಗೆದುಕೊಂಡು ಇವುಗಳಿಂದ ತಯಾರಾದ ಉತ್ಪನ್ನಗಳನ್ನು ಹೆಚ್ಚಿನ ಲಾಭಕ್ಕೆ ಪುನಃ ಮಾರಾಟ ಮಾಡಲು ಭಾರತ ಸರ್ಕಾರ ಅವಕಾಶ ಕಲ್ಪಿಸಿದೆ. That's really fun.



ದುರದೃಷ್ಟವಶಾತ್, ಒಂದು ಬಿಲಿಯನ್‌ನಲ್ಲಿ ಬಹುತೇಕ ಜನ ದರಿದ್ರರು. ಇವರ ಹತ್ತಿರ ಕೊಂಡುಕೊಳ್ಳಲೂ ಹಣ ಇರುವುದಿಲ್ಲ. ಅದಕ್ಕೇ ನನಗೆ ಬಡವರೆಂದರೆ ದ್ವೇಷ. ಅವರು ಹೇಗಾದರೂ ಕಣ್ಮರೆಯಾಗಲೆಂದು ನಾನು ಆಶಿಸುತ್ತೇನೆ. ಸಾವಿರಾರು ಲಕ್ಷ ಭಾರತೀಯ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕೇಳಿ ನನಗೆ ಅತೀವ ಆನಂದ ವಾಗಿತ್ತು. ಅಮೆರಿಕದಲ್ಲಿ ನಾವು ಇದನ್ನು "ಬೇಜವಬ್ದಾರಿಯುತ ಆತ್ಮಘಾತುಕ ನಡವಳಿಕೆ" ಎನ್ನುತ್ತೇವೆ. ಈ ಪ್ರಕ್ರಿಯೆಯನ್ನು ಫಾಸ್ಟ್‌ಟ್ರ್ಯಾಕ್ ದಾರಿಗೆ ಕರೆತಂದು ಬಿಟ್ಟರೆ ಶೀಘ್ರವಾಗಿ ಎಲ್ಲರನ್ನೂ ನಿರ್ನಾಮ ಮಾಡಿಬಿಡಬಹುದು. ಆದರೆ ಬಡಜನರು ಉತ್ತಮ ಮನೆಗೆಲಸದವರಾಗಿ ಮತ್ತು ಕೂಲಿಗಳಾಗಿ ಪ್ರಯೋಜನಕ್ಕೆ ಬರುವುದರಿಂದ ಅವರನ್ನು ಹಾಗೆ ಉಳಿಸಿಕೊಳ್ಳಬೇಕಾಗುತ್ತದೆ.

ಭಾರತದ ಎಲ್ಲ ಬೀಜಗಳನ್ನು, ಸಸಿಗಳನ್ನು, ಜೀವ ವೈವಿಧ್ಯತೆಯನ್ನು, ಅವಶ್ಯಕ ಸೌಕರ್ಯಗಳನ್ನು ಮತ್ತು ವಿಚಾರಗಳನ್ನೂ ಅಮೆರಿಕೆಯ ಕಾರ್ಪೋರೇಷನ್‌ಗಳು ಶೀಘ್ರವಾಗಿ ತಮ್ಮದಾಗಿಸಿಕೊಳ್ಳುತ್ತವೆ ಎಂಬ ಆಶಾವಾದ ನನಗಿದೆ. ನಾನೀಗಾಗಲೇ ಹೇಳಿದಂತೆ, ಭಾರತೀಯರು ಬುದ್ಧಿವಂತರು; ಕೆಲವೊಮ್ಮೆಯಾದರೂ ಉತ್ತಮ ವಿಚಾರ ಗಳನ್ನು ಹೊಂದಿರುತ್ತಾರೆ. ಅವರ ವಿಚಾರಗಳ ಒಡೆತನವನ್ನು ಅವರೇ ಹೊಂದಿರುವುದು ಸರಿಯಲ್ಲ. ರೈತರು ಬೀಜಗಳ ಒಡೆತನ ಸಾಧಿಸಲೂ ಬಿಡುವಂತಿಲ್ಲ. ಎಲ್ಲರೂ ಎಲ್ಲದರ ಬಗ್ಗೆ ನಮ್ಮನ್ನೇ ಕೇಳುವಂತಾಗಬೇಕು. ಎಲ್ಲರೂ ನನ್ನ ಅನುಮತಿ ಕೇಳುವಂತಾದರೆ ನನಗಿಷ್ಟ. ಡಿಕ್ ಹೇಳುವಂತೆ 'ನಿಯಂತ್ರಣ' ಇಲ್ಲಿ ಅತಿ ಮುಖ್ಯ ಪದ. ಬಿಲ್ ಗೇಟ್ಸ್ ಒಡೆತನದ ಕಂಪನಿ ನಾವು ಹೆಮ್ಮೆ ಪಡುವಂತಹ ಅಮೆರಿಕೆಯ ಕಂಪನಿಗಳಲ್ಲೊಂದು. ಆತ ಭಾರತಕ್ಕೆ ಆಗಾಗ್ಗೆ ಭೇಟಿ ನೀಡುತ್ತಾನೆ. ಆತ ಅದ್ಭುತವಾದ ಮತ್ತು ಉದಾರವಾದ ವ್ಯಕ್ತಿ. ಆತ ಭಾರತ ಸರ್ಕಾರಕ್ಕೆ ಎಚ್‌ಐವಿ ಏಡ್ಸ್ ರೋಗ ನಿಯಂತ್ರಣಕ್ಕೆ ಬಿಲಿಯನ್‌ಗಟ್ಟಲೆ ಡಾಲರ್‌ಗಳನ್ನು ನೀಡುತ್ತಾನೆ. ನನಗೆ ಎಚ್‌ಐವಿ ಏಡ್ಸ್ ರೋಗ ಇರುವ ಜನರೆಂದರೆ ದ್ವೇಷ. ಯಾಕೆಂದರೆ ಬಹುತೇಕ ಇವರೆಲ್ಲರೂ ಕರಿಯರು ಮತ್ತು ಸಲಿಂಗಿಗಳು. ಯಾರೂ ಕೊಳ್ಳಲಾಗದ ಏಡ್ಸ್ ಔಷಧಿ ತಯಾರಿಸುವ ಕಂಪನಿಗಳೆಂದರೆ ನನಗೆ ಇಷ್ಟ. ಈ ರೀತಿಯ ವಿಕೃತ ಹಾಸ್ಯಪ್ರಜ್ಞೆ ಸಹಾ ನನಗೆ ಇಷ್ಟ. ಆದರೆ ನಾನು ಬಿಲ್ ಬಗ್ಗೆ ಮಾತ ನಾಡುತ್ತಿದ್ದೆ. ಬಿಲ್ ಗೇಟ್ಸ್ ದಾನಕ್ಕೆ ತಲೆಬಾಗಿ ಭಾರತ ಸರ್ಕಾರ ನೂರಾರು ಮಿಲಿಯನ್ ಡಾಲರ್‌ಗಳಷ್ಟು ಕಂಪ್ಯೂ ಟರ್ ತಂತ್ರಜ್ಞಾನವನ್ನು ಕೊಂಡುಕೊಳ್ಳುತ್ತದೆ. ಇದ ರಿಂದ ಆತ ಎಷ್ಟು ಶ್ರೀಮಂತನಾಗಿದ್ದಾನೆಂದರೆ, ಎಲ್ಲಿ ಆತ ಸ್ಫೋಟಗೊಳ್ಳುತ್ತಾನೋ ಎಂಬ ಭಯ ಶುರುವಾಗಿದೆ.

ನಾನೂ ಕೂಡ ಶ್ರೀಮಂತನೇ. ಅದರಂತೆ ನನ್ನ ಗೆಳೆಯರು, ಗೆಳೆಯರ ಗೆಳೆಯರು ಮತ್ತು ಗೆಳೆಯರ ಗೆಳೆ ಯರ ಗೆಳೆಯರೂ ಶ್ರೀಮಂತರೇ. ವಿಶೇಷವಾಗಿ ಡಿಕ್‌ಚೆನೆ. ನಮ್ಮ ಕೆಟ್ಟ ವ್ಯವಹಾರಗಳನ್ನು ನಾವು ಒಟ್ಟಿಗೆ ಮಾಡುತ್ತೇವೆ. ತೈಲ, ಶಸ್ತ್ರಾಸ್ತ್ರ- ಎಲ್ಲಾ. ಎನ್ರಾನ್‌ದೊಂದು ನಾಚಿಕೆಗೇಡಿನ ವಿಷಯ. ಆದರೆ ಅದು ಕಾರ್ಯನಿರ್ವಹಿಸುವವರೆಗೆ ಚೆನ್ನಾಗೇ ಇತ್ತು. ಡಿಕ್ ಮೇಲೆ ನನಗೆ ಅತೀವ ಪ್ರೀತಿ. ಯಾಕೆಂದರೆ ಪತ್ರಿಕಾಗೋಷ್ಠಿಯಲ್ಲಿ ಏನು ಹೇಳಬೇಕೆಂದು ಡಿಕ್ ಹೇಳಿಕೊಡುತ್ತಾನೆ. ಆತ ಈಗ ಇಲ್ಲದಿರುವುದರಿಂದ ನನಗೆ ಕಷ್ಟವಾಗಿದೆ. ಆದರೆ ಅವನ ಜತೆ ಬೇಟೆಗೆ ಮಾತ್ರ ಹೋಗುವುದಿಲ್ಲ. ಆತ ತನ್ನ ಬೇನಾಮಿ ಬಂದೂಕಿನಿಂದ ಸುಟ್ಟು ನನ್ನನ್ನು ಕೊಂದುಬಿಡುವ ಸಾಧ್ಯತೆ ಇದೆ. ನಾನು ಸತ್ತ ಮೇಲೆ ಏನು ಮಾಡಬೇಕೋ ಗೊತ್ತಿಲ್ಲ.

ಐ-ರಾನ್ ಮೇಲೆ ಬಾಂಬ್ ಹಾಕಲು ಎದುರು ನೋಡುತ್ತಿದ್ದೇನೆ. ಕೆಲವು ಹೊಸ ಶಸ್ತ್ರಾಸ್ತ್ರಗಳನ್ನು ಪ್ರಯೋ ಗಿಸಬೇಕಿದೆ. ಒಳ್ಳೆಯ ಮಜ ಇರುತ್ತದೆ. ನಮ್ಮನ್ನು ಬೆಂಬಲಿ ಸಲು ಭಾರತ ಕೆಲವು ಸೈನಿಕರನ್ನು ಕಳುಹಿಸುವುದೆಂಬ ಆಶಾವಾದ ನನಗಿದೆ. ನೀವು ಬಹಳಷ್ಟು ಜನರಿದ್ದೀರಿ. ಕೆಲವರನ್ನು ಕಳೆದುಕೊಂಡರೆ ನಿಮಗೇನು ನಷ್ಟವಾಗು ವುದಿಲ್ಲ. ಹೇಗಿದ್ದರೂ ಕಾನೂನು ಬಾಹಿರವಾಗಿ ಗುಂಪುಗ ಟ್ಟಲೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೀರಾ. ಬದಲಿಗೆ ಐ-ರಾನ್ ಅಥವಾ ಐ-ರಾಕ್‌ಗಳಲ್ಲಿ ಕಾನೂನು ಸಮ್ಮತವಾಗಿ ಸಾಯಬಹುದಲ್ಲವೇ? ಮರಣೋತ್ತರವಾಗಿ ಗ್ರೀನ್‌ಕಾರ್ಡ್ ಗಳ ವ್ಯವಸ್ಥೆ ಬೇಕಾದರೆ ನಾವು ಮಾಡುತ್ತೇವೆ. ಜತೆಗೆ ಲ್ಯಾಮಿನೇಟ್ ಕೂಡ ಮಾಡಿಸಿಕೊಡುತ್ತೇವೆ.

ಒಂದು ಬಿಲಿಯನ್ ಜನಸಂಖ್ಯೆಯಲ್ಲಿ ಬಹುತೇಕ ಜನ ದರಿದ್ರರು. ಇವರ ಹತ್ತಿರ ಕೊಂಡುಕೊಳ್ಳಲೂ ಹಣ ಇರುವುದಿಲ್ಲ. ಅದಕ್ಕೇ ನನಗೆ ಬಡವರೆಂದರೆ ದ್ವೇಷ. ಅವರು ಹೇಗಾದರೂ ಕಣ್ಮರೆಯಾಗಲೆಂದು ನಾನು ಆಶಿಸುತ್ತೇನೆ. ಸಾವಿರಾರು ಲಕ್ಷ ಭಾರತೀಯ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕೇಳಿ ನನಗೆ ಅತೀವ ಆನಂದವಾಗಿತ್ತು. ಅಮೆರಿಕದಲ್ಲಿ ನಾವು ಇದನ್ನು "ಬೇಜವಬ್ದಾರಿಯುತ ಆತ್ಮಘಾತುಕ ನಡವಳಿಕೆ" ಎನ್ನುತ್ತೇವೆ. ಈ ಪ್ರಕ್ರಿಯೆಯನ್ನು ಫಾಸ್ಟ್‌ಟ್ರ್ಯಾಕ್ ದಾರಿಗೆ ಕರೆತಂದು ಬಿಟ್ಟರೆ ಶೀಘ್ರವಾಗಿ ಎಲ್ಲರನ್ನೂ ನಿರ್ನಾಮ ಮಾಡಿಬಿಡಬಹುದು. ಆದರೆ ಬಡಜನರು ಉತ್ತಮ ಮನೆಗೆಲಸದವರಾಗಿ ಮತ್ತು ಕೂಲಿಗಳಾಗಿ ಪ್ರಯೋಜನಕ್ಕೆ ಬರುವುದರಿಂದ ಅವರನ್ನು ಹಾಗೆ ಉಳಿಸಿಕೊಳ್ಳಬೇಕಾಗುತ್ತದೆ.

ಆದರೆ ಇದಕ್ಕಾಗಿ ಅವರ ಅಕೌಂಟ್‌ಗಳಲ್ಲಿ ಶುಲ್ಕ ಕಡಿತಗೊಳಿಸಲಾ ಗುತ್ತದೆ. ಇದರ ಬಗ್ಗೆ ಯೋಚನೆ ಮಾಡಿ.

ನಿಮ್ಮ ಸಮಯಕ್ಕೆ ವಂದನೆಗಳು; ಬೈ ನೌ

ಜೇ ಹಿಂದ್.

ಎಚ್ಚರಿಕೆ: ಕಾಪಿ ರೈಟ್, ಬೌದ್ಧಿಕ ಆಸ್ತಿ ಹಕ್ಕು, ಬೌದ್ಧಿಕ ಕಳ್ಳತನದ ಈ ಯುಗದಲ್ಲಿ ನನ್ನ ಈ ಪುಟ್ಟ ನಾಟಕಕ್ಕೆ ಪ್ರೇರಣೆ ಯಾರೆಂದು ಹೇಳಲೇಬೇಕು. ಅದು ಮತ್ಯಾರೂ ಅಲ್ಲ; ಪ್ರಸಿದ್ಧ ಕವಿ, ಶಾಂತಿಧೂತ, ಹೂ-ಹುಡುಗ, ಉಚಿತ-ಯೋಚನೆಕಾರ ಮತ್ತು ಸಮಾಜ ಕಾರ್ಯಕರ್ತ ಜಾರ್ಜ್ ಡಬ್ಲ್ಯೂ ಬುಷ್ ಅವರ ಕಾರ್ಯ ಮತ್ತು ವೈಖರಿ. ನಾಟಕದ ಮುಖ್ಯಭಾಗಗಳೆಲ್ಲ ಅವರು ಏಷ್ಯಾ ಸೊಸೈಟಿಯಲ್ಲಿ ಮಾಡಿದ ಭಾಷಣವನ್ನು ಆಧಾರವಾಗಿಟ್ಟುಕೊಂಡು ಸಿದ್ಧಪಡಿಸಲಾಗಿದೆ. (ಟಿಕೆಟ್ ಮಾರಾಟದಿಂದ ಬಂದ ಹಣವನ್ನು ನೇರವಾಗಿ ಜಾರ್ಜ್ ಬುಷ್‌ರವರಿಗೇ ಕಳುಹಿಸಬೇಕಾಗಿ ವಿನಂತಿ.)

(ಸೌಜನ್ಯ: ತೆಹಲ್ಕ)

...ಬಿಪಾಕು

...ತರು ಅನೇಕ ಚಿತ್ರ
...ಚಿತ್ರ ಮೂಢನಂಬಿಕೆ
...ಗೆ ಬಲಿಯಾಗಿದ್ದರು.
...ಣವಿಲ್ಲದ್ದರಿಂದ
...ವರಿಗೆ ಇವುಗಳೆಲ್ಲ
...ವಾರ್ಯವಾಗಿತ್ತು.
...ಣ ಪ್ರಸಾರದ
...ತೆಗೆ ಮೂಢನಂಬಿಕೆ
...ಗೆ ಬೆಂಕಿ ಇಕ್ಕುವುದೂ
...ಹತ್ವದ್ದಾಗಿತ್ತು. ಈ
...ರ್ಯವನ್ನು ಹೇಗೆ
...ಧಿಸಬೇಕೆನ್ನುತ್ತಿರುವಾಗಲೇ
...ವರಾಯನಿಗೆ
...ಕರೆಪ್ಪಾ ಮೂಡಲಗಿ
...ಟ್ಟಿಯಾದ. ಶಂಕರೆಪ್ಪಾ
...ೂಡಲಗಿ ದೇವದಾಸಿ
...ಗನಾಗಿದ್ದ. ಈ ಹಿಂದೆ
...ತ ತನ್ನ ಪೂರ್ತಿ
...ಸರನ್ನು ಶಂಕರೆಪ್ಪಾ
...ಯಿ ದ್ರೌಪದಿ
...ಂಬಾರ್ ಎಂದು
...ಚ್ಚುತ್ತಿದ್ದ. ದೇವರಾಯ
...ದ ಆತ ತನ್ನ
...ಡ್ಡಹೆಸರನ್ನು ಬದಲಾ
...ಯಿಸಿಕೊಂಡು ಶಂಕ
...ಪ್ಪಾ ಮೂಡಲಗಿ ಆಗಿದ್ದ.

ನಾಟಕದ ಮೂಲಕ ಬೆಳಕು

ದೇವರಾಯ ೭

ಡಾ|| ಸರಜೂ ಕಾಟ್ಕರ್



ದಲಿತರ ಉದ್ಧಾರಕ್ಕಾಗಿ ವಿದ್ಯೆ, ಹೋರಾಟ ಮತ್ತು ಸಂಘಟನೆ ಈ ಮೂರು ಮಂತ್ರಗಳನ್ನು ಬಾಬಾಸಾಹೇಬರು ನೀಡಿದ್ದರು. ಅವರ ಗುರುಗಳಾಗಿದ್ದ ಜ್ಯೋತಿಬಾ ಫುಲೆಯವರು ದಲಿತರ ಅವನತಿಗೆ ಶಿಕ್ಷಣದ ಅಭಾವವೇ ಕಾರಣವೆಂದು ಹೇಳಿದ್ದರು. 'ಶಿಕ್ಷಣವಿಲ್ಲದ್ದರಿಂದ ಮನುಷ್ಯರಾಗಿದ್ದ ದಲಿತರು ಪಶುಗಳಾದರು' ಎಂದು ಫುಲೆಯವರು ಹೇಳಿ ದಲಿತರೆಲ್ಲರೂ ಅಗತ್ಯವಾಗಿ ಶಿಕ್ಷಣ ಕಲಿಯಬೇಕೆಂದು ಆಗ್ರಹಿಸಿದ್ದರು. ಬಾಬಾಸಾಹೇಬರಂತೂ ಅನಕ್ಷರತೆಯ ವಿರುದ್ಧ ಯುದ್ಧವನ್ನೇ ಹೂಡಿದರು. ಬಾಬಾಸಾಹೇಬರ ಈ ಕನಸನ್ನು ತನ್ನ ಪರಿಸರದಲ್ಲಿ ಸಾಕಾರಗೊಳಿಸಬೇಕೆಂದು ದೇವರಾಯ ನಿರ್ಧರಿಸಿದ. ಅದಕ್ಕಾಗಿ ಆತ ಈಗ ಊರು ಊರು ಅಲೆಯಲಾರಂಭಿಸಿದ.

ದಲಿತರು ಅನೇಕ ಚಿತ್ರವಿಚಿತ್ರ ಮೂಢನಂಬಿಕೆಗಳಿಗೆ ಬಲಿಯಾಗಿದ್ದರು. ಶಿಕ್ಷಣವಿಲ್ಲದ್ದರಿಂದ ಅವರಿಗೆ ಇವುಗಳೆಲ್ಲ ಅನಿವಾರ್ಯವಾಗಿತ್ತು. ಶಿಕ್ಷಣ ಪ್ರಸಾರದ ಜೊತೆಗೆ ಮೂಢನಂಬಿಕೆಗಳಿಗೆ ಬೆಂಕಿ ಇಕ್ಕುವುದೂ ಮಹತ್ವದ್ದಾಗಿತ್ತು. ಈ ಕಾರ್ಯವನ್ನು ಹೇಗೆ ಸಾಧಿಸಬೇಕೆನ್ನುತ್ತಿರುವಾಗಲೇ ದೇವರಾಯನಿಗೆ ಶಂಕರೆಪ್ಪಾ ಮೂಡಲಗಿ ಭೆಟ್ಟಿಯಾದ.

ಶಂಕರೆಪ್ಪಾ ಮೂಡಲಗಿ ದೇವದಾಸಿ ಮಗನಾಗಿದ್ದ. ಈ ಹಿಂದೆ ಆತ ತನ್ನ ಪೂರ್ತಿ ಹೆಸರನ್ನು ಶಂಕರೆಪ್ಪಾ ತಾಯಿ ದ್ರೌಪದಿ ಚಾಂಬಾರ್ ಎಂದು ಹಚ್ಚುತ್ತಿದ್ದ. ದೇವರಾಯನಿಂದ ಆತ ತನ್ನ ಅಡ್ಡ ಹೆಸರನ್ನು ಬದಲಾಯಿಸಿಕೊಂಡು ಶಂಕರೆಪ್ಪಾ ಮೂಡಲಗಿ ಆಗಿದ್ದ. ಆತ ಬಯಲಾಟ, ದೊಡ್ಡಾಟ, ಸಣ್ಣಾಟಗಳಲ್ಲಿ ಪಾರ್ಟು ಮಾಡುತ್ತಿದ್ದ. ಆತನಿಗೆ ನಾಟಕ ಕಲೆ ಒಲಿದಿತ್ತು.

'ನಾಟಕ ಮಾಧ್ಯಮದ ಮೂಲಕ ಜನರನ್ನು ಬಲು ಬೇಗ ಮುಟ್ಟಬಹುದು. ಹತ್ತು ಪುಸ್ತಕ ಓದಿ ಹೇಳುವ ಜ್ಞಾನಕ್ಕಿಂತ ಒಂದು ನಾಟಕದ ಮೂಲಕ ಹೇಳುವ ಸಂದೇಶ ಜನರಿಗೆ ಬಲು ಬೇಗ ತಲುಪುತ್ತದೆ' ಎಂದ ಶಂಕರೆಪ್ಪಾ.

'ಅಂದ್ರ ನಾನೂ ನಾಟಕದ ಒಂದು ಮ್ಯಾಳಾ ಸುರು ಮಾಡಬೇಕಂತ ನೀನು ಹೇಳ್ತಿಯೇನು? ಪ್ರಶ್ನಿಸಿದ ದೇವರಾಯ.

'ಅದರಲ್ಲಿ ತಪ್ಪೇನಿದೆ? ನಿನ್ನ ಉದ್ದೇಶ ಪೂರ್ತಿಯಾಗ ಬೇಕಾದರೆ ಇದು ಅನಿವಾರ್ಯ' ಶಂಕರೆಪ್ಪಾ ಹೇಳಿದ.

ಶಂಕರೆಪ್ಪನ ಮಾತುಗಳು ದೇವರಾಯನಿಗೆ 'ಹೌದೌದು' ಅನ್ನಿಸಿದವು. ತನ್ನ ವಿಚಾರಗಳ ಪ್ರಚಾರಕ್ಕೆ ನಾಟಕ ಮಾಧ್ಯಮವೇ ಸೂಕ್ತವೆಂದು ದೇವರಾಯನಿಗೆ ಅನ್ನಿಸಿತು. ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ನೀಡಬೇಕೆಂದು ಬಾಬಾಸಾಹೇಬರಿಗೆ ಪತ್ರ ಬರೆದ. ಆದರೆ ಬಾಬಾಸಾಹೇಬರು ಅನೇಕಾನೇಕ ರಾಜಕೀಯ ಚಟುವಟಿಕೆಗಳಲ್ಲಿ ವ್ಯಸ್ತರಾಗಿದ್ದರಿಂದ ಅವರಿಂದ ಯಾವ ಉತ್ತರವೂ ಬರಲಿಲ್ಲ.

ದೇವರಾಯನ ಗೆಳೆಯರಿಗೆ ನಾಟಕದ ಈ ಕಲ್ಪನೆ ಹಿಡಿಸಿತು. 'ಇದೂ ಒಂದು ಕೈ ನೋಡಿಯೇ ಬಿಡೋಣ' ಎಂದು ಅವರೆಲ್ಲ ಹೇಳಹತ್ತಿದರು. ಇದರ ಪರಿಣಾಮವಾಗಿ ೧೯೧೮ ರಲ್ಲಿ 'ಕರ್ನಾಟಕ ಬಹಿಷ್ಕೃತ ಬೋಧಿನಿ' ಎಂಬ ತಂಡ ಹುಟ್ಟಿಕೊಂಡಿತು. ಅದು ತನ್ನ ಮೊದಲ ಕೃತಿಯಾಗಿ 'ಕರ್ನಾಟಕ ಬಹಿಷ್ಕೃತ ಬೋಧಿನಿ ಅರ್ಥಾತ್ ಯಲ್ಲಮ್ಮ' ಎಂಬ ನಾಟಕವನ್ನು ರಂಗಕ್ಕೆ ತಂದಿತು.

ಈ ನಾಟಕವನ್ನು ದೇವರಾಯನೇ ಬರೆದು ನಿರ್ದೇಶಿಸಿದ. ಒಂದಿಷ್ಟು ದಲಿತ ಹುಡುಗರನ್ನು ನಟರನ್ನಾಗಿ ಪರಿವರ್ತಿಸಿದ. ಅಲ್ಲಿ ಇಲ್ಲಿ ನಾಟಕದಲ್ಲಿ ಪಾರ್ಟು ಮಾಡುತ್ತಿದ್ದ ದಲಿತ 'ನಟ'ರನ್ನು ಹಿಡಿದುಕೊಂಡು ಬಂದು ಅವರಿಂದ ಪಾರ್ಟು ಮಾಡಿಸಿದ. ನಾಟಕದಲ್ಲಿ ಬರುವ ಹಾಡುಗಳನ್ನು ತಾನೇ ಬರೆದ. ಚಿಕ್ಕೋಡಿ ತಾಲೂಕಿನ ಮಹಾರ್ ಮತ್ತು ಮಾಂಗ್‌ವಾಡಿಗಳಲ್ಲಿ ಈ ನಾಟಕವನ್ನು ಆಡಲಾಯಿತು. ನಾಟಕದ ವಸ್ತು ದೇವದಾಸಿ ಪದ್ಧತಿಯ ವಿರೋಧವಾಗಿತ್ತು.

ನಾಟಕದ ಆರಂಭದಲ್ಲಿ ಸ್ವತಃ ದೇವರಾಯ ಸ್ಟೇಜಿಗೆ ಬಂದು ದೇವದಾಸಿ ಪದ್ಧತಿ ವಿರುದ್ಧ ಭಾಷಣ ಮಾಡುತ್ತಿದ್ದ. ಈ ಪದ್ಧತಿಯಿಂದ ದಲಿತ ಅಕ್ಕ-ತಂಗಿಯರು ಕೆಂಪು ಪ್ರದೇಶದಲ್ಲಿ ಹೇಗೆ ತಮ್ಮ ಮಾನ, ಶೀಲವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆಂದು ಮನಸ್ಸಿಗೆ ನಾಟುವಂತೆ ಹೇಳುತ್ತಿದ್ದ. 'ನಾವೆಲ್ಲ ತಾಯಿ ಯಲ್ಲಮ್ಮನ ಮಕ್ಕಳು. ಯಾವ ತಾಯಿ ತನ್ನ ಮಗಳು ಸೂಳೆಯಾಗಬೇಕೆಂದು ಬಯಸುತ್ತಾಳೆ? ಯಲ್ಲಮ್ಮ ಎಂದೂ ನೀವು ದೇವದಾಸಿಯರಾಗಬೇಕೆಂದು ಹೇಳಿಲ್ಲ; ಅವಳು ಬಯಸದ್ದನ್ನು ನಾವೇಕೆ ಆಚರಿಸಬೇಕು ಎಂದು ಪ್ರಶ್ನಿಸುತ್ತಿದ್ದ.

ನಂತರ ನಾಟಕ ಆರಂಭವಾಗುತ್ತಿತ್ತು. ಆರಂಭದಲ್ಲಿಯೇ ಗರ್ಭಿಣಿಯಾದ ಹೆಂಗಸೊಬ್ಬಳು ತನಗೆ ಹೆಣ್ಣು ಮಗುವಾದರೆ ಅದನ್ನು ತಾನು ಸವದತ್ತಿ ಯಲ್ಲಮ್ಮನಿಗೆ ದೇವದಾಸಿಯಾಗಿ ಬಿಡುತ್ತೇನೆಂದು ಹರಕೆ ಹೊರುತ್ತಾಳೆ. ಇದನ್ನು ಆಕೆಯ ಗಂಡ ವಿರೋಧಿಸುತ್ತಾನೆ. ದೇವದಾಸಿ ಪದ್ಧತಿ ಅದೆಷ್ಟು ಹೊಲಸು ಮತ್ತು ಅಮಾನುಷವಾದುದೆಂದು ಆತ ವಿವರಿಸುತ್ತಾನೆ. ಹಾಡುಗಳ ಮೂಲಕ ಮತ್ತು ಸಂಭಾಷಣೆಯ ಮೂಲಕ ಈ ಪದ್ಧತಿಯನ್ನು ದಲಿತರೆಲ್ಲರೂ ಕೈ ಬಿಡಬೇಕೆಂದೂ ಆತ ಹೇಳುತ್ತಾನೆ.

'ನಾವೆಲ್ಲ ತಾಯಿ ಯಲ್ಲಮ್ಮನ ಮಕ್ಕಳು. ಯಾವ ತಾಯಿಯಾದ್ರೂ
ತನ್ನ ಮಕ್ಕಳ ಹೇಲಿನ್ಯಾಗ, ರೊಚ್ಚಿನ್ಯಾಗ ಸಿಗಬೇಕಂತ
ಬಯಸ್ತಾಳೇನು? ಕಡೀಕಡೀಕ್ಕ ದೇವದಾಸಿ ಆದವಳು
ಬೀದಿ ನಾಯಾಗಿ ಸಾಯ್ತಾಳ. ಅಕಿ ಮೈಯಾಗ ಹುಳು ಬೀಳ್ತಾವ
ಇದನ್ನ ಯಾವ ತಾಯಿ ಬಯಸ್ತಾಳ? ದೇವದಾಸಿಯಾರಾದ್ರ
ಅದು ತಾಯಿ ಯಲ್ಲವ್ವಗ ಮಾಡೂ ದ್ರೋಹ. ಅದರ ಮಾತ
ಬಿಡ'

-ಎನ್ನುತ್ತಾನೆ ಗಂಡ.

ಆದರೆ ಹೆಂಡತಿಗೆ ಯಲ್ಲವ್ವಳ ಭಯ. 'ಹಿಂಗ ಮಾಡಲಿಕ್ರ ಯಲ್ಲವ್ವ ನಮಗೆ ಶಾಪಾ ಹಾಕ್ತಾಳ; ಕಣ್ಣ ಕಳೀತಾಳ; ಜೀವಂತ ಸುಡತಾಳ; ನಮ್ಮನ್ನ ಬಡವಿ ಮಾಡ್ತಾಳ' ಎನ್ನತ್ತಾಳೆ.

ಅದಕ್ಕ ನಕ್ಕ ಗಂಡ 'ಈಗ ಇರೂಕ್ಕಿಂತಲೂ ಹೆಚ್ಚು ಬಡವಿ ಮಾಡ್ತಾಳಾ?' ಎಂದು ಚುಚ್ಚುತ್ತಾನೆ.

'ನೀ ಹಿಂಗ ಮಾಡಿದ್ರ ನಾ ಸುಮ್ಮನೆ ಇರಾಕಿಲ್ಲ; ಮಕ್ಕಳ ಭಾಗ್ಯ ನೋಡಲಾರ್ದ ತಾಯಿ ತಾಯಿ ಅಲ್ಲ; ನಾ ನನ್ನ ಮಗಳ್ನ ದೇವದಾಸಿ ಹರಕಿಗೆ ಒಪ್ಪಿಸಲಾರೆ' ಎಂದು ಅನ್ನುತ್ತಾನೆ.

'ನೀ ಹಿಂಗ ಮಾತಾಡ್ತಿ ಅಂದ್ರ ಆ ಇಂಗಳಿ ದೇವ್ಯಾ ಭೆಟ್ಟಿ ಆಗಿ ದ್ದನೇನು? ಅಂವಾ ಇಂಥದ್ದನ್ನೆಲ್ಲ ಪ್ರಚಾರ ಮಾಡ್ತಾನಂತ' ಎಂದು ಹೆಂಡತಿ ಕೇಳುತ್ತಾಳೆ.

ನಾಟಕದ ಸಂಭಾಷಣೆಯಲ್ಲಿ ತನ್ನ ಹೆಸರೂ ಬರುವಂತೆ ದೇವರಾಯ ಸ್ಕ್ರಿಪ್ಟ್ ಬರೆದಿದ್ದ. ಈ ಸಂಭಾಷಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತಿದ್ದವು. ಆಯಾ ಪ್ರದೇಶದ ವಿಶೇಷಗಳನ್ನು

ತನ್ನ ದೃಶ್ಯಗಳಲ್ಲಿ ಅಳವಡಿಸಿಕೊಂಡು ಅವು ಹೆಚ್ಚು ಜೀವಂತವಾಗಿಸಲು ಯತ್ನಿಸುತ್ತಿದ್ದ.

ಮುಂದಿನ ದೃಶ್ಯದಲ್ಲಿ ಆಕೆಗೆ ಹೆಣ್ಣೇ ಹುಟ್ಟುವುದು. ಅದನ್ನು ದೇವದಾಸಿ ಬಿಡುವ ಕಾರ್ಯಕ್ರಮ ನಡೆದಾಗ ಅಲ್ಲಿ ಪೊಲೀಸರ ಆಗಮನವಾಗಿ ಅವರು, ಅವರುಗಳನ್ನೆಲ್ಲ ಬಂಧಿಸುವರು. ದೇವದಾಸಿ ಪದ್ಧತಿ ಕಾನೂನಿಗೆ ವಿರೋಧವೆಂದು ಪೊಲೀಸರು ಕಾಯ್ದೆಗಳನ್ನು ವಿವರಿಸಿ ನೆರೆದ ಜನರಿಗೆ ಹೇಳುವರು. ಗಂಡನೇ ದೂರು ನೀಡಿದ್ದರಿಂದ ಅವನನ್ನು ಪೊಲೀಸರು ಹೊಗಳಿ ಸ್ಟೇಜ್ ಮೇಲೆಯೇ ಆತನಿಗೆ ಹೂಮಾಲೆ ಹಾಕಿ ಸತ್ಕರಿಸುವರು. ಪ್ರತಿಯೊಂದು ದಲಿತ ಗಂಡಸು ಮತ್ತು ಹೆಂಗಸು ಈ ರೀತಿ ಅನಿಷ್ಟ ಪದ್ಧತಿ ವಿರುದ್ಧ ಹೋರಾಡಬೇಕೆಂದು, ಅಂಥವರನ್ನು ಸರ್ಕಾರ ಸತ್ಕರಿಸುವುದೆಂದೂ ಹೇಳುವುರು.

ಡ್ರಾಮಾ ಕಂಪನಿಯ ಮುಖ್ಯ ಸ್ಥಳವನ್ನಾಗಿ ಚಿಕ್ಕೋಡಿ ತಾಲೂಕಿನ ಬೆಡಕೀಹಾಳ ಗ್ರಾಮವನ್ನು ಆಯ್ಕೆ ಮಾಡಲಾಯಿತು. ಅದಕ್ಕೆ ಕಾರಣವೂ ಇತ್ತು. ಇದರಲ್ಲಿ 'ನಟಿಸುವ' 'ನಟ'ರೆಲ್ಲರೂ ಬೆಡಕೀಹಾಳ ಗ್ರಾಮದ ಅಕ್ಕಪಕ್ಕದವರಾಗಿದ್ದರು. ಸಮೀಪದ ಸ್ಥಳವಾದ್ದರಿಂದ ಅವರು ಬಂದು ಹೋಗುವದು ಸುಲಭ ಸಾಧ್ಯವಾಗುತ್ತಿತ್ತು.

ಯಶವಂತ ವರಾಳೆ, ರತ್ನಪ್ಪ ಸೂರ್ಯವಂಶಿ, ಭೀಮಪ್ಪ ಯಡೂರ, ತಮ್ಮಣ್ಣ ಮಾಜರಿ, ಗಂಗಾರಾಂ ಸೂರ್ಯಾವಂಶಿ, ಸುಬ್ರಾವ ಕಾಂಬಳೆ ಅವರುಗಳು ದೇವರಾಯನ ನಾಟಕಗಳಲ್ಲಿ ಕೆಲಸ ಮಾಡಿದರು. ನಾಟಕಗಳಲ್ಲಿ ಗಂಡಸರೇ ಹೆಂಗಸರ ಪಾತ್ರ ಮಾಡುತ್ತಿದ್ದರು. ಮಹಾರ್ ಮತ್ತು ಮಾಂಗವಾಡಿಯ ಯುವಕರು ದೇವರಾಯನಿಗೆ ಸಹಾಯ ಸಹಕಾರಗಳನ್ನು ನೀಡುತ್ತಿದ್ದುದು ಅವನಿಗೆ ಸಮಾಧಾನ ತಂದಿತ್ತು.

'ರೈತನ ಮಗಳು' ಎಂದು ಇನ್ನೊಂದು ನಾಟಕವನ್ನು ದೇವರಾಯ ಬರೆದ. ಕುಲಕರ್ಣಿ, ಜಮೀನುದಾರರು ಮತ್ತು ಇನಾಂದಾರರಿಂದ ರೈತರ ಮೇಲೆ ಆಗುತ್ತಿದ್ದ ಅನ್ಯಾಯ ಅತ್ಯಾಚಾರಗಳನ್ನು ದೇವರಾಯ ತನ್ನ ಕಣ್ಣುಗಳಿಂದ ನೋಡಿದ್ದ. ತನ್ನ ನಾಟಕದಲ್ಲಿ ರೈತರ ಬವಣೆಗಳನ್ನು ಸರ್ಕಾರಕ್ಕೆ ಮನದಟ್ಟು ಮಾಡಲು ಹೆಣಗಿದ ದೇವರಾಯ.

ಶಮನೇವಾಡಿಯ ರೈತನಿಗೆ ಗೌರಾಬಾಯಿಯೆಂಬ ಚೆಲುವೆ ಮಗಳಿದ್ದಾಳೆ. ಅವಳ ಮೇಲೆ ಊರಿನ ಖೋತನ ಕಣ್ಣು. ಹೇಗಾದರೂ ಮಾಡಿ ಗೌರಾಬಾಯಿಯನ್ನು ತನ್ನ ಹಾಸಿಗೆಗೆ ಜಗ್ಗಬೇಕೆಂದು ಖೋತ ಯೋಚಿಸುತ್ತಿದ್ದಾನೆ. 'ನನ್ನ ಇಚ್ಛಾ ತಿಳ್ಕೋ; ನೀನು ಮಾಡಿದ ಎಲ್ಲಾ ಸಾಲ ಮಾಫ್ ಮಾಡ್ತೇನಿ' ಎಂದು ಆತ ರೈತನಿಗೆ ಹೇಳುತ್ತಾನೆ. ರೈತನಿಗೆ ಉಭಯ ಸಂಕಟ. ಇತ್ತ ಸಾಲವನ್ನು ತೀರಿಸುವುದಾಗುತ್ತಿಲ್ಲ; ಅತ್ತ ಮಗಳನ್ನು ಖೋತನೆಡೆಗೆ ಕಳಿಸುವಂತಿಲ್ಲ. ಇದೇ ಸಂದರ್ಭದಲ್ಲಿ ಊರಿಗೆ ಖಂಡೋಬಾ ಎಂಬ ದಲಿತ ಯುವಕ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿ ಬರುತ್ತಾನೆ. ಈತ ಆದರ್ಶ ಸಮಾಜದ ಕನಸನ್ನು ಕಂಡವ. 'ಜೀವಿಗಳೆಲ್ಲರೂ ಒಂದು' ಎಂದು ಭಾವಿಸಿದವ. ಉಳ್ಳವರು ಬಡವರನ್ನು ಶೋಷಿಸುವುದನ್ನು ಕಂಡ ಖಂಡೋಬಾ ಕಂಗಾಲಾಗಿದ್ದಾನೆ; ಸಿಟ್ಟಿಗೆದ್ದಿದ್ದಾನೆ. ಖೋತರಂತಹ ದುಷ್ಟ ಜನರ ವಿರುದ್ಧ ಹೋರಾಡುವ ಪಣ ತೊಟ್ಟಿದ್ದಾನೆ ಖಂಡೋಬಾ.

ಖಂಡೋಬಾನಿಗೆ ರೈತನ ಪರಿಸ್ಥಿತಿ ತಿಳಿದಾಗ ಆತ ಖೋತನ ವಿರುದ್ಧ ಪೊಲೀಸ ಕಂಪ್ಲೆಂಟ್ ದಾಖಲಿಸಲು ಹೇಳುತ್ತಾನೆ. ಅದಕ್ಕೆ ರೈತ ಒಪ್ಪುವುದಿಲ್ಲ. ಖಂಡೋಬಾ, ಗೌರಾಬಾಯಿಯಿಂದಲೇ ಕಲೆಕ್ಟರ್‌ಗೆ ದೂರು ಸಲ್ಲಿಸುತ್ತಾನೆ. ಕಲೆಕ್ಟರ್‌ರು ಪ್ರಕರಣದ ವಿಚಾರಣೆಗಾಗಿ ಮಾಮಲೆದಾರರನ್ನು ಕಳಿಸುತ್ತಾರೆ. ಆದರೆ ಖೋತನ ಎಂಜಲಿಗೆ ಬಲಿಯಾದ ಮಾಮಲೇದಾರ ಖೋತನ ಪರವಾಗಿರುವ ವರದಿಯನ್ನು ಸರ್ಕಾರಕ್ಕೆ ಕಳಿಸುತ್ತಾನೆ.

ಸರ್ಕಾರ, ವಿಚಾರಣೆ ಈ ಶಬ್ದಗಳಿಂದ ರೋಸಿಗೊಂಡ ಖೋತ ಇದಕ್ಕೆಲ್ಲ ಮೂಲ ಶಿಕ್ಷಕನಾಗಿರುವ ಖಂಡೋಬಾನೆ ಕಾರಣನೆಂದು ಭಾವಿಸುತ್ತಾನೆ. ಖಂಡೋಬಾನ ವಿರುದ್ಧ ಸೇಡು ತೀರಿಸಿಕೊಳ್ಳಲು ಆತ ನಿರ್ಧರಿಸುತ್ತಾನೆ. ಖಂಡೋಬಾ ಮತ್ತು ಗೌರಾಬಾಯಿಯರ ನಡುವೆ ಅನೈತಿಕ ಸಂಬಂಧವಿದೆಯೆಂದು ಆತ ಹಳ್ಳಿಯಲ್ಲಿ ಅಪಪ್ರಚಾರ ಆರಂಭಿಸುತ್ತಾನೆ. ಹಳ್ಳಿಯ ಪಂಚರನ್ನು ಹಿಡಿದು ಈ ಕುಟುಂಬಗಳಿಗೆ ಬಹಿಷ್ಕಾರ ಹಾಕಲು ಒತ್ತಾಯಿಸುತ್ತಾನೆ.

ಈ ಎಲ್ಲ ಪರಿಸ್ಥಿತಿಯಿಂದ ಕಂಗಾಲಾದ ಖಂಡೋಬಾ ಮತ್ತು ಗೌರಾಬಾಯಿ ಬಾಬಾಸಾಹೇಬ ಅಂಬೇಡ್ಕರ್‌ರನ್ನು ಭೇಟಿಯಾಗಿ ಈ ಪ್ರಕರಣದಲ್ಲಿ ತಮಗೆ ಸಹಾಯ ಮಾಡಬೇಕೆಂದು ಕೇಳಲು ಮುಂಬೈಗೆ ಹೋಗುತ್ತಾರೆ. ಇವರ ಕಥೆ ಕೇಳಿದ ಬಾಬಾಸಾಹೇಬ ಅಂಬೇಡ್ಕರ್‌ರು ಅವರಿಗೆ ಸಹಾಯ ಮಾಡುವ ವಚನ ನೀಡುತ್ತಾರೆ.

ಖಂಡೋಬಾ ಮತ್ತು ಗೌರಾಬಾಯಿ ಮುಂಬೈಗೆ ಹೋಗುತ್ತಿದ್ದಂತೆಯೇ, ಖೋತ ಅವರಿಬ್ಬರೂ ಓಡಿ ಹೋಗಿದ್ದಾರೆಂದು ಊರಿನಲ್ಲಿ ಸುದ್ದಿ ಹಬ್ಬಿಸುತ್ತಾನೆ.

ಬಾಬಾಸಾಹೇಬ ಅಂಬೇಡ್ಕರ್‌ರ ಆಸಕ್ತಿ ಹಾಗೂ ಮಧ್ಯಸ್ಥಿಕೆಯಿಂದ ಬೆಳಗಾವಿಯ ಪೊಲೀಸರು ಶಮನೇವಾಡಿಗೆ ಬಂದು ದಲಿತರನ್ನು ಭೇಟಿಯಾಗುತ್ತಾರೆ. ಖಂಡೋಬಾ ಮತ್ತು ಗೌರಾಬಾಯಿಯ ಹೇಳಿಕೆಗಳನ್ನೂ ಪಡೆದುಕೊಳ್ಳುತ್ತಾರೆ. ಸತ್ಯ ಏನೆಂಬುದು ಅವರಿಗೆ ಅರ್ಥವಾಗುತ್ತದೆ. ಖೋತನನ್ನು ಬಂಧಿಸಿ ಆತ ಜನರಿಂದ ಅನ್ಯಾಯವಾಗಿ ಪಡೆದ ಜಮೀನನ್ನು ಪುನಃ ಜನರಿಗೆ ವಾಪಸ್ಸು ನೀಡುತ್ತಾರೆ. ಗೌರಾಬಾಯಿಯ ಪ್ರಯತ್ನದ ಫಲವಾಗಿ ತಮ್ಮಿಂದ ಬಿಟ್ಟು ಹೋದ ಜಮೀನು ಪುನಃ ತಮಗೆ ವಾಪಸ್ಸು ಬಂದಿತೆಂದು ದಲಿತರು ಗೌರಾಬಾಯಿಗೆ ಧನ್ಯವಾದ ಹೇಳುತ್ತಾರೆ. 'ಈ ಧನ್ಯವಾದಗಳನ್ನು ಖಂಡೋಬಾನಿಗೆ ಹೇಳ್ರಿ, ಅವರು ಬಾಬಾಸಾಹೇಬ ಅಂಬೇಡ್ಕರ್‌ರನ್ನು ಭೆಟ್ಟಿಯಾಗದಿದ್ದಿದ್ದರೆ ಇದೆಲ್ಲ ಆಗುತ್ತಿರಲಿಲ್ಲ' ಎಂದು ಗೌರಾಬಾಯಿ ಹೇಳುತ್ತಾಳೆ.

ಖಂಡೋಬಾನನ್ನು ಹುಡುಕುತ್ತ ಜನರು ಶಾ ಬಂದಾಗ ಆತ ವಿದ್ಯಾರ್ಥಿಗಳಿಗೆ ಬುದ್ಧನ ಬಗ್ಗೆ ಪ ಮಾಡುತ್ತಿರುತ್ತಾನೆ. ದಲಿತರು ಬಂದು ಅವನಿಗೆ ಧನ್ಯವ ಹೇಳುವರು. ಕೆಲವರು ಆತನ ಕಾಲು ಮುಟ್ಟಿ ನಮಸ್ಕ ವರು. ಜನರ ಈ ಮುಗ್ಧತೆಯನ್ನು ಕಂಡು ಖಂಡೋಬ ಕಣ್ಣಿನಿಂದ ನೀರು ಹರಿಯುವದು; ಅವನನ್ನು ನೋ ಗೌರಾಬಾಯಿಯ ಕಣ್ಣೂ ಒದ್ದೆಯಾಗುತ್ತದೆ.

ಇಲ್ಲಿಗೆ ನಾಟಕ ಮುಗಿಯುತ್ತದೆ.

ಈ ನಾಟಕದಲ್ಲಿ ದೇವರಾಯ ಬಾಬಾಸಾಹೆ ಅಂಬೇಡ್ಕರ್‌ರನ್ನು ಒಂದು ಪಾತ್ರವನ್ನಾಗಿ ಸ್ಟೇಜ್ ಮೆ ತಂದ. ದಲಿತರ ಎಲ್ಲ ಕಷ್ಟಗಳ ಉತ್ತರ ಬಾಬಾಸಾಹೆ ಅಂಬೇಡ್ಕರ್‌ರಲ್ಲಿದೆಂದು ಆತ ಭಾವಿಸಿದ್ದ. ಆ ಪಾ ಸೂಟು ಬೂಟು ಹಾಕಿಸುತ್ತಿದ್ದ. ಕೆಲವಡೆ ನಿಜವ ಬಾಬಾಸಾಹೇಬರೇ ಅಲ್ಲಿ ಬಂದಿದ್ದಾರೆಂದು ಭಾವಿಸುವ ಆ ಪಾತ್ರದ ಮೇಕಪ್ಪು ಮತ್ತು ಗೆಟಪ್ಪು ಮಾಡಿಸುತ್ತಿದ್ದ.

ಈ ನಾಟಕ ಸಮಾಜದಲ್ಲಿ ಕ್ರಾಂತಿಯನ್ನೇ ಉಂ ಮಾಡಿತು. ತಮ್ಮ ಜಮೀನುಗಳೆಲ್ಲ ಉಳ್ಳವರ ಪಾಲಾಗಿ ವುದನ್ನು ದಲಿತರು ಅರ್ಥೈಸಿಕೊಂಡಿದ್ದರು. ಅದು ವಾಪಸ್ಸು ಪಡೆಯಬೇಕಾದರೆ ಸಂಘಟಿತವಾದೊಂ ಪ್ರಯತ್ನ ಬೇಕೆಂದೂ ಅವರು ಈಗ ಅರಿತರು. ನಾಟ ಸಂಭಾಷಣೆಗಳು ತುಂಬ ಪ್ರಭಾವಶಾಲಿಯಾಗಿದ್ದವು.

ಈ ನಾಟಕವನ್ನು ಹತ್ತಾರು ಕಡೆಗಳಲ್ಲಿ ಪ್ರದ ಸಲಾಯಿತು. ಈ ನಾಟಕದ ವಿಷಯ ಕೇಳಿದ ಖೋತ ಜಮೀನುದಾರರು ತಮ್ಮ ಜನರಿಂದ ನಾಟಕ ಹಾ ಮಾಡಲು ಯತ್ನಿಸಿದರು. ಆದರೆ ದೇವರಾಯ ಯಾ ದಕ್ಕೂ ಜಗ್ಗಲಿಲ್ಲ. ಒಂದೆರಡು ಕಡೆಗಳಲ್ಲಿ ಪೊಲೀ ಸಹಾಯ ಪಡೆದು ನಾಟಕ ಮಾಡಿದ. ಈ ಪ್ರಕರಣದಿ ಅವನಿಗೆ ಸಾಕಷ್ಟು ಖ್ಯಾತಿಯೂ ಬಂತು.

ನಾಟಕಗಳ ಯಶಸ್ಸಿನಿಂದ ದೇವರಾಯ 'ಸೂಳೆ ಮಗಳು' ಎಂದು ಇನ್ನೊಂದು ನಾಟಕ ಬರೆದ. ಇದ ದಲಿತ ಜಾತಿಗೆ ಸೇರಿದ ದೇವದಾಸಿ ಮುತ್ತವ್ವ ಊ ಗೌಡ ಅಣ್ಣಾರಾವ ಪಾಟೀಲನ ಸೂಳೆಯಾಗುತ್ತಾಳೆ. ನಿಂದ ಅವಳಿಗೆ ಮಗಳು ರತ್ನವ್ವ ಹುಟ್ಟುತ್ತಾಳೆ. ಮುತ್ತ ಯೌವನ ಜಾರುತ್ತಿದ್ದಂತೆಯೇ ಅಣ್ಣಾರಾವ ಪಾಟ ಅವಳಲ್ಲಿಯ ಆಸಕ್ತಿಯನ್ನು ಕಡಿಮೆ ಮಾಡುತ್ತಾನೆ. ಹೊ ಹೊರೆದುಕೊಳ್ಳಲು ಮುತ್ತವ್ವ ರಸ್ತೆಗೆ ಬಂದು ಬೀಳುತ್ತಾ

ಶಂಕರನೆಂಬ ಶಾಲಾ ಮಾಸ್ತರ್ ಊರಿಗೆ ಬಂದಿನೆ. ರತ್ನವ್ವಳನ್ನು ಶಾಲೆಗೆ ಕಳಿಸಲು ಆತ ಮುತ್ತವ್ವಳನವೊಲಿಸುತ್ತಾನೆ. ಅವನ ಮಾತಿಗೆ ಮನ್ನಣೆಕೊಟ್ಟು ುತ್ತವ್ವ, ರತ್ನವ್ವಳನ್ನು ಶಾಲೆಗೆ ಕಳಿಸಲಾರಂಭಿಸುತ್ತಾಳೆ. ು ಊರಿನವರಿಗೆ ರೊಚ್ಚಿಗೆಬ್ಬಿಸುತ್ತದೆ. ಎಷ್ಟೇ ಕಷ್ಟದರೂ ಮಗಳನ್ನು ಶಾಲೆಗೆ ಕಳಿಸಲೇಬೇಕೆಂದು ಶಂಕರ ಳುತ್ತಾನೆ. ಇದರಿಂದ ಮತ್ತೆ ಸಿಟ್ಟಿಗೆದ್ದ ಊರಿನ ಜನರು ಕರನಿಗೆ ಮುತ್ತವ್ವಳ ಜೊತೆ ಅನೈತಿಕ ಸಂಬಂಧವಿದೆ ಂದು ಪುಕಾರು ಹುಟ್ಟಿಸುತ್ತಾರೆ.

ಮುತ್ತವ್ವ ಭಿಕ್ಷೆಗೆ ಹೋದಾಗ ಜನರು ಅವಳನ್ನು ಮಾನಿಸುತ್ತಾರೆ. ಒಂದು ಸಲ ರಸ್ತೆಯಲ್ಲಿ ಅಣ್ಣಾರಾವ ಟೀಲ ಭೆಟ್ಟಿಯಾಗಿ 'ಮಗಳನ್ನು ಶಾಲೇಗೇಕೆ ಕಳಿಸುತ್ತಿದೆ?' ಎಂದು ಕೇಳುತ್ತಾನೆ. 'ಸೂಳಿಯ ಮಗಳು ಕಲಿತು ಡುವುದಾದರೂ ಏನು? ಸೂಳಿಯ ಮಗಳೂ ಒಂದಿಂದು ದಿನ ಸೂಳಿ ಆಗಲೇಬೇಕಲ್ಲ? ಎಂದು ಜಬರಿಸುನೆ. ಅವನ ದರ್ಪಕ್ಕೆ ಹೆದರಿದ ಮುತ್ತವ್ವ 'ಆಕಿಗs ಈಗ ಕೂ ವಯಸ್ಸು, ಆಡಾಡ್ತಾ ಸಾಲಿಗ ಹೋಗ್ತಳ. ಮುಂದ ದಿವ್ಸದ ನಂತರ ಸಾಲಿ ಬಿಡಸ್ತೇನಿ' ಅಂತ ಹೇಳುತ್ತಾಳೆ. ದನ್ನು ಕೇಳಿ ಅಣ್ಣಾರಾವ ಹೊರಟು ಹೋಗುತ್ತಾನೆ.

ಈಗ ರತ್ನವ್ವ ಮುಲ್ಕಿ ಪಾಸಾಗಿದ್ದಾಳೆ. ಶಂಕರ ಳನ್ನು ಧಾರವಾಡಿಗೆ ಕರೆದುಕೊಂಡು ಹೋಗಿ ಶಿಕ್ಷಕರ ಬೇತಿ ಕಾಲೇಜಿಗೆ ಸೇರಿಸುತ್ತಾನೆ. ಶಿಕ್ಷಕರ ತರಬೇತಿನ್ನು ರತ್ನವ್ವ ಯಶಸ್ವಿಯಾಗಿ ಮುಗಿಸಿ, ತನ್ನೂರಿಗೆ ಶಿಕ್ಷಯಾಗಿ ಬರುತ್ತಾಳೆ.

ರತ್ನವ್ವ ಶಾಲಾ ಶಿಕ್ಷಕಿಯಾಗಿ ತಮ್ಮೂರಿಗೆ ಬಂದಿನ್ನು ಕಂಡ ಅಣ್ಣಾರಾವನ ಸಿಟ್ಟು ಆಕಾಶ ಮುಟ್ಟುತ್ತದೆ. ದೇವದಾಸಿ ಮಗಳು ಕಲಿಸುವ ಶಾಲೆಗೆ ತಮ್ಮ ಮಕ್ಕನ್ನು ಕಳಿಸಬಾರದೆಂದು ಆತ ಜನರಿಗೆ ಆಜ್ಞಾಪಿಸುತ್ತಾನೆ. ದೇ ರೀತಿಯ ಹಲವಾರು ಕಷ್ಟಗಳನ್ನು ಅಣ್ಣಾರಾವ ಟೀಲ ರತ್ನವ್ವಳಿಗೆ ನೀಡುತ್ತಾನೆ. ಇದರಿಂದ ರೋಸಿ ಹೋದ ಮುತ್ತವ್ವ 'ನನ್ನ ಮಗಳನ್ನು ಬಿಟ್ಟು ಬಿಡ್ರಿ, ಆಕಿಗ ಸ್ ಕೊಡಬ್ಯಾಡ್ರಿ' ಎಂದು ಅಂಗಲಾಚುತ್ತಾಳೆ. ಅದಕ್ಕೆ ಣ್ಣಾರಾವ 'ನಿನ್ನ ಮಗಳನ್ನ ಯಾರ ಮದ್ವಿ ಮಾಡಕೋರ? ಇಂದಿಲ್ಲ ನಾಳೆ ಆಕಿ ದೇವದಾಸಿ ಆಗಾಕs ಬೇಕ. ನs ಅಕೀನ್ನ ಇಟ್ಟಗೋತೇನ. ಆಕಿ ಹೆಸರಿಗ ಜಮೀನ ದ್ದ ಕೊಡ್ತೇನಿ' ಎಂದು ಹೇಳುತ್ತಾನೆ. ಇದರಿಂದ ರೊಚ್ಚಿದ್ದ ಮುತ್ತವ್ವ 'ರತ್ನವ್ವ ಬ್ಯಾರೆ ಯಾರೂ ಅಲ್ಲರಿ; ಅಕಿ ಮ್ಮ ಮಗಳು; ನಿಮ್ಮಿಂದ ಹುಟ್ಟಿದವಳು. ಮಗಳ ಜೊತೆ ಲಗ್ನೇನಂತ ಹೇಳ್ತಿರಲ್ಲ... ನೀವೇನೂ ಮನಷ್ಯಾರೋ ಥವಾ ದನಾನೋ?' ಎಂದು ಕೇಳುತ್ತಾಳೆ.

ಅವಳ ಆಕ್ರಂದನಕ್ಕೆ ಅಣ್ಣಾರಾವ ಯಾವ ಕಿಮ್ಮತ್ತು ಡುವುದಿಲ್ಲ. ಆತ ಪಂಚಾಯತಿ ಕೂಡಿಸಿ ತಾಯಿ ಗಳು ಇಬ್ಬರನ್ನು ಪಂಚಾಯಿತಿಗೆ ಜಗ್ಗುತ್ತಾನೆ. ಈ ಬ್ಬರೂ ಹಳ್ಳಿಯ ನೀತಿ-ನಿಯಮಗಳನ್ನು ಗಾಳಿಗೆ ತೂರಿರೆ. ದೇವದಾಸಿಯಾಗಬೇಕದವಳು ಶಾಲಾ ಶಿಕ್ಷಕಿಯಾದ್ದಾಳೆ. ಇದರಿಂದ ಧರ್ಮಕ್ಕೆ ಚ್ಯುತಿ ಬಂದಿದೆಯೆಂದು ಣ್ಣಾರಾವ ಹೇಳುತ್ತಾನೆ. ಪಂಚಾಯತಿ ತಾಯಿ ಮಗಳ ಲೆ ಸಾಮಾಜಿಕ ಬಹಿಷ್ಕಾರ ಹಾಕುತ್ತದೆ. ಅವರ ಕಷ್ಟ ಲದಲ್ಲಿಯೂ ಶಂಕರ ಅವರಿಬ್ಬರಿಗೂ ಸಹಾಯ ಸಹಕಾಳನ್ನು ನೀಡುತ್ತಾನೆ.

ರತ್ನವ್ವಳನ್ನು ಮದುವೆಯಾಗಲು ಯಾರು ಮುಂದೆ ರುವುದಿಲ್ಲ. ಅವಳು ಸೂಳೆಯ ಮಗಳೆಂಬ ಒಂದೇ ಒಂದು ಕಾರಣದಿಂದ ಅವಳ ಲಗ್ನ ಆಗುತ್ತಿರುವುದಿಲ್ಲ. ಈ ಘಟ್ಟದಲ್ಲೂ ಶಂಕರನೇ ಮುಂದೆ ಬಂದು ರತ್ನವ್ವಳ ಮದುವೆಯನ್ನು ತನ್ನ ಮಗನ ಜೊತೆಗೆ ನೆರವೇರಿಸುತ್ತಾನೆ. ಇಲ್ಲಿಗೆ ಎಲ್ಲವೂ 'ಸತ್ಯಂ ಶುಭಂ' ಆಗುತ್ತದೆ.

'ಎದ್ದು ಕಣ್ಣು ತೆರೆದಾಗ ಒಂದೆರಡು ಕ್ಷಣ ಅವರ ಕಣ್ಣು ಮುಂದೆ ಕತ್ತಲೆ ಕಾಣುತ್ತದೆ. ಅದು ಕತ್ತಲೆಯೆಂದು ಕೂಡ್ರಬಾರದು. ಅದರ ಹಿಂದೆಯೇ ಬೆಳಕು ಇರುತ್ತದೆ' ಎಂದು ಡೈರಿ ಬರೆದ ದೇವರಾಯ.

ಈ ನಾಟಕದಲ್ಲಿ ಒಂದಿಷ್ಟು ಹೊಸ ನಟರು ಕೆಲಸ ಮಾಡಿದರು. ಯಮನಪ್ಪ ಜಮಖಂಡಿ, ಶಿವಪ್ಪ ಪಡಸಲಗಿ, ಶಿವಪ್ಪ ದೊಡ್ಡಮನಿ, ಸಿದ್ಧರಾಮ ಕಾಂಬಳೆ, ಅಪ್ಪು ಪೂಜಾರಿ ಮುಂತಾದವರು ಈ ನಾಟಕದಲ್ಲಿ ನಟಿಸಿದರು. ರತ್ನವ್ವ ಎಂಬ ನಟಿಯನ್ನು ಕರೆಸಬೇಕೆಂದು ದೇವರಾಯ ಬಹಳ ಪ್ರಯತ್ನ ಪಟ್ಟ. ಬರ್ತೇನೆಂದು ಹೇಳಿ ಆಕೆ ಕೊನೆಯ ಕ್ಷಣದಲ್ಲಿ ಕೈಕೊಟ್ಟಳು.

ನಾಟಕಗಳಿಂದ ನಿರೀಕ್ಷಿತ ಪರಿಣಾಮವೇ ಉಂಟಾಗಿತ್ತು. ದಲಿತರಲ್ಲಿ ವೈಚಾರಿಕ ಸಂಘರ್ಷ ಮೂಡುವಂತೆ ದೇವರಾಯ ಯತ್ನಿಸಿದ್ದ. ದೇವದಾಸಿ ಪದ್ಧತಿಯ ನಿಜ ರಹಸ್ಯವನ್ನು ಆತ ಜನರೆದುರು ಬೆತ್ತಲಾಗಿಸಿದ್ದ. ಈ ಪದ್ಧತಿಯನ್ನು ಜೀವಂತವಾಗಿಡಲು ಮೇಲ್ವರ್ಗದವರು ಹೇಗೆ ಕಾರಣೀಕರ್ತರಾಗಿದ್ದಾರೆಂದೂ, ಅದರಿಂದ ದಲಿತರು ಹೇಗೆ ಬಲಿಪಶುಗಳಾಗುತ್ತಿದ್ದಾರೆಂದು ಆತ ಜಗತ್ತಿಗೆ ಸಾರಿದ. ಇದರಿಂದ ಮೇಲ್ವರ್ಗದವರ ಕೋಪವನ್ನು ಆತ ಎದುರಿಸಬೇಕಾಯಿತು.



ದೇವರಾಯ ಇಂಗಳೆಯವರ ಡೈರಿಯ ಒಂದು ಪುಟ.

ಡಿಸೆಂಬರ್ ೨೫, ೧೯೨೪ ರಂದು ಬೆಳಗಾವಿಯಲ್ಲಿ ತಾವು ಡಾ॥ ಅಂಬೇಡ್ಕರ್‌ವರಿಗೆ ಆರ್ಶೀವಾದ ಮಾಡಿದೆವೆಂದು ಇಂಗಳೆ ಬರೆದಿದ್ದಾರೆ.

'ನೀರಿಗೆ ಬಿದ್ದಿದ್ದೇನೆ; ಇದರಲ್ಲಿ ಥಂಡಿಯೇನು, ಬೆಂಕಿಯೇನು?' ಎಂದ ಅವ ಅಪ್ಪಯ್ಯಪ್ಪನಿಗೆ.

ಅಪ್ಪಯ್ಯಪ್ಪ ಇತ್ತೀಚೆಗೆ ದೇವರಾಯನ ಗೆಳೆಯಾನಾಗಿದ್ದ. ಮೇಲ್ವರ್ಗದ ಅಪ್ಪಯ್ಯಪ್ಪ ದಲಿತ ದೇವದಾಸಿ ಕೌಸಲ್ಯಾಳಲ್ಲಿ ಅನುರಕ್ತನಾಗಿ ಅವಳ ಹಿಂದೆ ಹಿಂದೆ ದಲಿತ ಕೇರಿ ಪ್ರವೇಶಿಸಿದ್ದ. ಕೌಸಲ್ಯಾಳನ್ನು ಆತ ಎಷ್ಟು ಪ್ರೀತಿಸುತ್ತಿದ್ದನೆಂದರೆ ಅವಳನ್ನು ದ್ಯಾಮವ್ವಳ ಗುಡಿಗೆ ಕರೆದುಕೊಂಡು ಹೋಗಿ ಅವಳ ಕೊರಳಿಗೆ ತಾಳಿ ಕಟ್ಟಿದ್ದ. 'ಇಂದಿನಿಂದ ನೀನು ನನ್ನ ಹೆಂಡತಿ; ನಾವಿಬ್ಬರೂ ಕೂಡಿ ಸಂಸಾರ ಮಾಡೋಣ'ವೆಂದಿದ್ದ. ಇನ್ನೆಂದೂ ತನಗೆ ತಾಳಿಭಾಗ್ಯ ಇಲ್ಲವೆಂದು ನಂಬಿದ್ದ ಕೌಸಲ್ಯಾಳು, ಸಂತೋಷದಿಂದ ಅವನನ್ನು ತನ್ನ ಗಂಡನೆಂದು ಸ್ವೀಕರಿಸಿದ್ದಳು. 'ತಾಯೆ ಯಲ್ಲವ್ವಾ ನಿನ್ನ ಮಗಳನ್ನು ಹರಸು ತಾಯಿ, ನನ್ನ ತಾಳಿ ಉಳಿಯುವಂತೆ ಕೊನೆಯವರೆಗೂ ಆಶೀರ್ವದಿಸು' ಎಂದು ಯಲ್ಲವ್ವಳನ್ನು ಬೇಡಿಕೊಂಡಳು ಕೌಸಲ್ಯಾ. ಮೇಲ್ವರ್ಗದ ಅಪ್ಪಯ್ಯಪ್ಪ ಕೇವಲ ಪ್ರೀತಿಗಾಗಿ ತನ್ನ ಜನರನ್ನು ತೊರೆದು ದಲಿತಕೇರಿಗೆ ಬಂದಿದ್ದನ್ನು ದೇವರಾಯ ಪ್ರಶಂಸಿಸಿದ್ದ.

'ಇದು ಇನ್ನೆಷ್ಟು ವರ್ಷ ದೇವರಾಯ? ಈ ಜನ ಹೀಗೆ ದೇವದಾಸಿಯರಾಗುವುದು ಮತ್ತು ನಮ್ಮಂಥವರು ಅವರನ್ನು ಶೋಷಿಸುವುದು?' ಎಂದ ಅಪ್ಪಯ್ಯಪ್ಪ.

'ಇದು ಸಾವಿರ ಸಾವಿರ ವರ್ಷಗಳ ಶಾಪ ಅಪ್ಪಯ್ಯಪ್ಪ; ಇವತ್ತೇ, ಈಗಲೇ ವಾಸಿಯಾಗುವುದಿಲ್ಲ. ಅದಕ್ಕೆ ಕಾಲ ಬೇಕು; ಅಲ್ಲಿಯವರೆಗೆ ನಾವು ಕಾಯಬೇಕಾಗುತ್ತದೆ.' ದೇವರಾಯ ಸಮಾಧಾನ ಹೇಳಿದ.

'ಅಲ್ಲಯವರೆಗೆ ನಾವು ಇರ್ತೆವೆಯೇ?' ಅಪ್ಪಯ್ಯಪ್ಪ ಪ್ರಶ್ನಿಸಿದ'

ಅವನ ಪ್ರಶ್ನೆಯಿಂದ ದೇವರಾಯನಿಗೆ ನಗು ಬಂತು. ತಾನು ಹಣ್ಣು ತಿನ್ನಬಹುದೆಂಬ ಲೆಕ್ಕ ಹಾಕಿ ಯಾರಾದರೂ ಗಿಡ ಹಚ್ಚುತ್ತಾರೆಯೇ? ಎಂದ ಮನಸಿನಲ್ಲಿ.

'ಈ ಪದ್ಧತಿಯನ್ನು ನಿಲ್ಲಿಸುವುದು ಕೇವಲ ದಲಿತರಿಂದ ಸಾಧ್ಯವಿಲ್ಲ. ಮೇಲ್ವರ್ಗದವರೂ ಈ ಪದ್ಧತಿ ವಿರುದ್ಧ ಧ್ವನಿಯೆತ್ತಬೇಕು. ಇದು ಅಸಾಧ್ಯದ ಮಾತಲ್ಲ. ಇಂದಿಲ್ಲ ನಾಳೆ ಈ ಭಾಗದಿಂದಲೇ ಬಸವಪ್ರಭು ಪಾಟೀಲ ರಂತಹವರು ಹುಟ್ಟಿ ಬಂದು ಅರ್ಧ ನಿಂತ ನನ್ನ ಕೆಲಸವನ್ನು ಮುಂದುವರೆಸುತ್ತಾರೆ. ನಾನು ಕಂಡ ಕನಸನ್ನು ಅವರು ಪೂರ್ತಿ ಮಾಡುತ್ತಾರೆ. ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರ ಜೊತೆಗೆ ದೇವದಾಸಿಯರ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಯನ್ನು ಮಾಡುತ್ತಾರೆ. ದೇವದಾಸಿಯರ ವಿಮೋಚನೆಗಾಗಿಯೇ ಬಸವಪ್ರಭು ಪಾಟೀಲರು ಮತ್ತೆ ಮತ್ತೆ ಹುಟ್ಟಿ ಬರುತ್ತಾರೆ.' ಭಾವುಕನಾಗಿ ದೇವರಾಯ ಮಾತಾಡುತ್ತಿದ್ದ.

ಅವನ ಮಾತುಗಳು ಅಪ್ಪಯ್ಯಪ್ಪನಿಗೆ ಅರ್ಥವಾಗಲಿಲ್ಲ. 'ಬಸವಪ್ರಭು ಪಾಟೀಲರು ಯಾರು?' ಎಂದು ಕೇಳಿದ ಆತ.

'ಅದೆಲ್ಲ ನಿನಗೆ ಅರ್ಥವಾಗುವುದಿಲ್ಲ. ಈ ದೇವದಾಸಿಯರ ವಿಮೋಚನೆಗಾಗಿ ವ್ಯಕ್ತಿಯೊಬ್ಬ ತನ್ನ ಸರ್ವಸ್ವವನ್ನು ಪಣಕ್ಕೆ ಹಚ್ಚುತ್ತಿರುವದು ನನ್ನ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಇಂತಹ ಐದು ವ್ಯಕ್ತಿಗಳು ಹುಟ್ಟಿದರೂ ಸಾಕು, ದೇವದಾಸಿಯರೆಲ್ಲ ಸುಮಂಗಲಿಯರಾಗಿ ತಮ್ಮ ತಮ್ಮ ಗಂಡಂದಿರ ಜೊತೆ ಸುಖವಾಗಿ ಇರ್ತಾರೆ' ಎಂದ ದೇವರಾಯ.

'ಇದನ್ನು ಸಮಾಜ ಒಪ್ಪುತ್ತದೆಯೇ?' ಕೇಳಿದ ಅಪ್ಪಯ್ಯಪ್ಪ.

'ಸಮಾಜವೆಂದರೇನು? ನಾನು ನೀನು ಕೂಡಿದರೆ ಅದೇ ಸಮಾಜ. ನಾವು ಈಗ ಕಾಣುತ್ತಿರುವುದು ಒಂದು ಕನಸು. ನಮ್ಮ ಕನಸನ್ನು ನನಸು ಮಾಡುವವರು ಬಸವ ಪ್ರಭು ಪಾಟೀಲರಂತಹವರು. ಅವರಿಗೆ ಇಳಕಲ್ಲಿನ ಮಹಾಂತ ಸ್ವಾಮಿಗಳು, ಗದಗ-ಡಂಬಳ ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಗಳು, ಪೇಜಾವರದ ಮಹಾಸ್ವಾಮಿಗಳು, ವಿಜಾಪೂರದ ಸಿದ್ಧೇಶ್ವರ ಸ್ವಾಮಿಗಳು ಮುಂತಾದವರು ಬೆಂಬಲವಾಗಿ ನಿಲ್ಲುತ್ತಾರೆ. ಇವರೆಲ್ಲರ ಆಸಕ್ತಿಯಿಂದ ನಮ್ಮ ಕನಸು ನನಸಾಗುತ್ತದೆ' ಎಂದ ದೇವರಾಯ.

'ದಲಿತರ ಉದ್ಧಾರಕ್ಕಾಗಿ ಬಹಳ ಹಿಂದೆಯೇ ಬಸವಣ್ಣ ಕನಸು ಕಟ್ಟಿದ್ದ. ದಲಿತರನ್ನೆಲ್ಲ ಶರಣರನ್ನಾಗಿ ಮಾಡಿದ ಪುಣ್ಯ ಪುರುಷ ಆತ. ಜಾತಿಯ ಗೋಡೆಯನ್ನು ಒದ್ದು ಶರಣ ಸಮಾಜವನ್ನು ಆತ ಕಟ್ಟಿದ. ಅವನ ತತ್ವಗಳನ್ನು ಅನುಚಾನವಾಗಿ ಪಾಲಿಸುವ ಸುತ್ತೂರು ಮಹಾಸ್ವಾಮಿಗಳು ದೇವದಾಸಿಯರ ಮಕ್ಕಳ ಉಚ್ಚ ಅಭ್ಯಾಸಕ್ಕಾಗಿ ಅನುಕೂಲ ಮಾಡಿಕೊಡುತ್ತಾರೆ. ಇವೆಲ್ಲವುಗಳು ಸಾಧ್ಯವಾದಾಗ, ದೇವದಾಸಿ ಪದ್ಧತಿ ನಿರ್ನಾಮವಾಗಿ ಹೋಗುತ್ತದೆ' ಎಂದ ದೇವರಾಯ.

ತನ್ನ ನಾಟಕದ ತಂಡದ ಜೊತೆ ದೇವರಾಯ ಅನೇಕ ಊರುಗಳಿಗೆ ಹೋದ. ನೇರ್ಲಿಯಲ್ಲಿ ೭ ಜನ ದೇವದಾಸಿಯರು ತಾವು ಮದುವೆಯಾಗ ಬಯಸಿರುವುದಾಗಿ ದೇವರಾಯನಲ್ಲಿ ಹೇಳಿದರು. ಅವರಲ್ಲಿ ಆಗೀಗ 'ಗಿರಾಕಿ'ಗಳಾಗಿ ಬರುತ್ತಿದ್ದವರೇ ಅವರನ್ನು ಮದುವೆಯಾಗ ಬಯಸಿದ್ದರು.

ಅವರ ಈ ಮಾನಸಿಕ ಬದಲಾವಣೆಯಿಂದ ದೇವರಾಯನಿಗೆ ತುಂಬ ಸಂತೋಷವಾಯಿತು. ನಾಟಕ ನಡೆದಾಗಲೇ ಈ ಏಳೂ ಜನ ದೇವದಾಸಿಯರ ಲಗ್ನವನ್ನು ಆತ ಸ್ಟೇಜ್ ಮೇಲೆಯೇ ನೆರವೇರಿಸಿದ. ನೇರ್ಲಿ ಗ್ರಾಮದ ಗೌಡರಾದ ಸಿದಗೌಡ್ರು ಅಂದಿನ ನಾಟಕದ ಮುಖ್ಯ ಅತಿಥಿಗಳಾಗಿದ್ದರು. ಅವರ ಸಮ್ಮುಖದಲ್ಲಿಯೇ ಈ ಮದುವೆ ನಡೆಯಿತು.

ದೇವರಾಯ ಅನೇಕ ಹಾಡುಗಳನ್ನು ಬರೆದ. ಈ ಭಾಗ ಕನ್ನಡ-ಮರಾಠಿ ಭಾಷೆಯವಾಗಿರುವುದರಿಂದ ಎರಡೂ ಭಾಷೆಗಳಲ್ಲಿ ವಿಫುಲವಾಗಿ ಆತ ಹಾಡುಗಳನ್ನು ರಚಿಸಿದ. ಅವನ ಧ್ವನಿಯೂ ಚೆನ್ನಾಗಿದ್ದುದರಿಂದ ಅವನ ಹಾಡುಗಳು ಕಿವಿಗೆ ಇಂಪು ನೀಡುತ್ತಿದ್ದವು.

ತನ್ನ ಕವಿತೆ ಮತ್ತು ಹಾಡುಗಳಲ್ಲಿ ಆತ ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ವಿರೋಧಿಸುತ್ತಿದ್ದ. ಅಂಬೇಡ್ಕರ್ ಮತ್ತು ಬಸವಣ್ಣರನ್ನು ಮಾತ್ರ ಆತ ಆದರಿಸುತ್ತಿದ್ದ. ಈ ಇಬ್ಬರೂ ಮಹಾತ್ಮರು ದಲಿತರ ಉದ್ಧಾರಕ್ಕಾಗಿ ಹುಟ್ಟಿ ಬಂದಿದ್ದಾರೆಂದು ಹೇಳುತ್ತಿದ್ದ.

'ನಾವುಗಳು ಗುಡಿ ಮುಟ್ಟಬಾರದೆಂದು ಹೇಳ್ತಾರೆ. ಮುಟ್ಟಿದರೆ ಅದು ಮೈಲಿಗೆ ಆಗುತ್ತದಂತೆ. ನಾವು ದೇವರ ಹತ್ತಿರ ಹೋಗಬಾರದೆಂದು ಶಾಸ್ತ್ರಗಳು ಹೇಳ್ತವೆ. ಅದಕ್ಕೆಂದೇ ಬಸವಣ್ಣ, ದೇವರೇ ನಮ್ಮ ಕಡೆಗೆ ಬರುವಂತೆ ಲಿಂಗ ಕಟ್ಟಿದ' ಎಂದು ಆತ ಸಭೆಗಳಲ್ಲಿ ಹೇಳುತ್ತಿದ್ದ.

ಆತನ ಕವಿತೆಗಳನ್ನು ಜನರೂ ಗುಣಗುಣಿಸಹತ್ತಿದರು. ಎಲ್ಲರ ನಾಲಿಗೆಯ ಮೇಲೆ ಆತನ ಕವಿತೆಯ ಸಾಲುಗಳು ನಲಿದಾಡಹತ್ತಿದವು.

ಮಹಾತ್ಮಾ ಫುಲೆ ಮತ್ತು ಅಂಬೇಡ್ಕರ್ ತತ್ವಗಳನ್ನು ಆತ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದ. 'ಈ ಇಬ್ಬರು, ದಲಿತರ ಜೀವನದ ಎರಡು ಕಣ್ಣುಗಳು. ಪ್ರಕಾಶ ಕಾಣಿಸಬೇಕಾದರೆ ಕಣ್ಣುಗಳನ್ನು ತೆರೆದಿಡಬೇಕಾಗುತ್ತದೆ. ಕಣ್ಣು ಮುಚ್ಚಿದರೆ ಕತ್ತಲೆ ಕಾಣಿಸುತ್ತದೆ. ನನ್ನ ಬಾಂಧವರೆ ಕಣ್ಣು ತೆರೆಯಿರಿ' ಎಂದು ೨೪-೮-೧೯೩೪ ರ ತನ್ನ ದಿನಚರಿಯಲ್ಲಿ ದೇವರಾಯ ಬರೆದ. ಆತನ ಗೆಳೆಯರೂ ಅವನಿಗೆ ಸಾಥ್ ನೀಡಿದರು. ದಲಿತರಲ್ಲಿ ಶಿಕ್ಷಣದ ಮಹತ್ವವನ್ನು ಬಿಂಬಿಸಲು ಅವರೂ ಅವನ ಜೊತೆಗೆ ಎಲ್ಲಾ ಕಡೆಗೆ ಅಡ್ಡಾಡಿದರು. ಆದರೆ ಇವರೆಂದೂ ಅಧಿಕಾರಕ್ಕಾಗಿ ಹಪಾಹಪಿ ಮಾಡಲಿಲ್ಲ. ಖರ್ಚಿಯ ಮೇಲೆ ಕೂಡ್ರುವ ಪ್ರಶ್ನೆ ಬಂದಾಗ ಅವರು ಬೇರೆಯವರನ್ನು ಕೂಡ್ರಿಸಿದರು. ಇದು ದೇವರಾಯನ ತತ್ವವೂ ಆಗಿತ್ತು. ಈ ಜನ ನಿಸ್ಪೃಹರಾಗಿ, ನಿಸ್ವಾರ್ಥತನದಿಂದ ವರ್ತಿಸಿದ್ದರಿಂದಲೇ ಚಿಕ್ಕೋಡಿ ಭಾಗದಲ್ಲಿ ಅನೇಕ ಜನ ದಲಿತ ನಾಯಕರು ಹುಟ್ಟಲು ಸಾಧ್ಯವಾಯಿತು.

'ಬರೀ ಹಾಡಿದರೆ ಸಾಲದು; ಅದರಂತೆ ಜೀವನದಲ್ಲಿ ಸಾಧ್ಯ ಮಾಡಿ ತೋರಿಸಬೇಕು' ಎನ್ನುತ್ತಿದ್ದ ದೇವರಾಯ.

ದೇವರಾಯನಿಗೆ ಇಂಗ್ಲಿಷೂ ಚೆನ್ನಾಗಿಯೇ ಬರುತ್ತಿತ್ತು. ಪ್ರತಿ ದಿನ ಆತ ಡೈರಿ ಬರಿಯುತ್ತಿದ್ದ. ಇಂಗ್ಲಿಷ್, ಕನ್ನಡ ಮತ್ತು ಮರಾಠಿ ಈ ಮೂರೂ ಭಾಷೆಗಳನ್ನು ಆತ ಡೈರಿಯಲ್ಲಿ ಉಪಯೋಗಿಸುತ್ತಿದ್ದ.

ರಾಜಕೀಯದ ಪ್ರಜ್ಞೆಯೂ ಅವನಲ್ಲಿ ಸಾಕಷ್ಟಿತ್ತು. ಮಹಾತ್ಮಾ ಫುಲೆ ಮತ್ತು ಅಂಬೇಡ್ಕರ್ ತತ್ವಗಳನ್ನು ಆತ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದ.

'ಈ ಇಬ್ಬರು, ದಲಿತರ ಜೀವನದ ಎರಡು ಕಣ್ಣುಗಳು. ಪ್ರಕಾಶ ಕಾಣಿಸಬೇಕಾದರೆ ಕಣ್ಣುಗಳನ್ನು ತೆರೆದಿಡಬೇಕಾಗುತ್ತದೆ. ಕಣ್ಣು ಮುಚ್ಚಿದರೆ ಕತ್ತಲೆ ಕಾಣಿಸುತ್ತದೆ. ನನ್ನ ಬಾಂಧವರೆ ಕಣ್ಣು ತೆರೆಯಿರಿ' ಎಂದು ೨೪-೮-೧೯೩೪ ರ ತನ್ನ ದಿನಚರಿಯಲ್ಲಿ ದೇವರಾಯ ಬರೆದ.

ಆತನ ಗೆಳೆಯರೂ ಅವನಿಗೆ ಸಾಥ್ ನೀಡಿದರು. ದಲಿತರಲ್ಲಿ ಶಿಕ್ಷಣದ ಮಹತ್ವವನ್ನು ಬಿಂಬಿಸಲು ಅವರೂ ಅವನ ಜೊತೆಗೆ ಎಲ್ಲಾ ಕಡೆಗೆ ಅಡ್ಡಾಡಿದರು. ಆದರೆ ಇವರೆಂದೂ ಅಧಿಕಾರಕ್ಕಾಗಿ ಹಪಾಹಪಿ ಮಾಡಲಿಲ್ಲ. ಖರ್ಚಿಯ ಮೇಲೆ ಕೂಡ್ರುವ ಪ್ರಶ್ನೆ ಬಂದಾಗ ಅವರು ಬೇರೆಯವರನ್ನು ಕೂಡ್ರಿಸಿದರು. ಇದು ದೇವರಾಯನ ತತ್ವವೂ ಆಗಿತ್ತು. ಈ ಜನ ನಿಸ್ಪೃಹರಾಗಿ, ನಿಸ್ವಾರ್ಥತನದಿಂದ ವರ್ತಿಸಿದ್ದರಿಂದಲೇ ಚಿಕ್ಕೋಡಿ ಭಾಗದಲ್ಲಿ ಅನೇಕ ಜನ ದಲಿತ ನಾಯಕರು ಹುಟ್ಟಲು ಸಾಧ್ಯವಾಯಿತು.

ಹಾಸ್ಟೆಲ್ಲಿನಲ್ಲಿ ದಲಿತ ಹುಡುಗರು ಅಭ್ಯಾಸ ಮಾಡುತ್ತಾರೋ ಇಲ್ಲವೋ ಅನ್ನುವುದನ್ನು ದೇವರಾಯ ಕಾಲಕಾಲಕ್ಕೆ 'ಚೆಕ್' ಮಾಡುತ್ತಿದ್ದ. ಆತ ದಿಢೀರಾಗಿ ಹಾ... ಹೋಗುತ್ತಿದ್ದ. ಒಂದು ಸಲ ಆತ ಮುಂಜಾನೆ ೭ ಗ... ಹಾಸ್ಟೆಲ್ಲಿಗೆ ಹೋದಾಗ ವಿದ್ಯಾರ್ಥಿಗಳು, ಹಾಸ್ಟೆಲ್ ... ಚಾರಕ ಎಲ್ಲರೂ ನಿದ್ರಿಸುತ್ತಿರುವುದನ್ನು ಕಂಡ. ಇದ... ಕೆಂಡಾಮಂಡಲನಾಗಿ ಆತ ವಿದ್ಯಾರ್ಥಿಗಳೆಲ್ಲ ೫ ಗ... ಎದ್ದು ಅಭ್ಯಾಸ ಮಾಡಲೇಬೇಕೆಂದು ರೂಲ್ಸು ಮಾಡಿ...

'ನೀವು ಮುಂಜಾನೆ ಏಳದಿದ್ದರೆ, ಎದ್ದು ಅ... ಮಾಡದಿದ್ದರೆ ಈ ರೀತಿ ಹಾಸ್ಟೆಲ್ ತೆರೆದಿರುವುದು ... ವಾಗುತ್ತದೆ. ನಿಮ್ಮ ಪ್ರತಿ ರೊಟ್ಟಿಯ ತುಂಡೂ ಸಾವ... ಕರಿಂದ ಬಂದಿದೆ ಎನ್ನುವುದು ನೀವು ಮರೆ... ಹಾಗಿಲ್ಲ'ವೆಂದು ಆತ ವಿದ್ಯಾರ್ಥಿಗಳಿಗೆ ಹೇಳಿದ. ಹಾ... ಮೇಲ್ವಿಚಾರಕರು ಮಕ್ಕಳ ಪ್ರಗತಿಗಾಗಿ ಸ್ವಾರ್ಥರಹಿ... ಕೆಲಸ ಮಾಡಬೇಕಾಗುತ್ತದೆಂದೂ ಆತ ತನ್ನ ಡೈರಿ... ಬರೆದ.

ದೇವರಾಯನ ವೈಚಾರಿಕ ಪ್ರತಿಭೆ ಅಂಬೇಡ್ಕರ... ರಿಗೂ ಅಚ್ಚರಿಯನ್ನುಂಟು ಮಾಡಿದವು. ಅಂಬೇಡ... ವೈಚಾರಿಕ ಮತ್ತು ಕ್ರಾಂತಿಕಾರಿ ವಿಚಾರಗಳಿಗೆ ಆತ ... ಮಾಲನ್ನು ಪೂರೈಸಿದ್ದಾನೆ. ತನ್ನ ಡೈರಿಯ ಒಂದು ... ದಲ್ಲಿ ಆತ 'ಇಂದು ನಾನು ಅಂಬೇಡ್ಕರ್‌ರಿಗೆ ಆಶೀವಾ... ಮಾಡಿದೆ' ಎಂದೂ ಬರೆದಿದ್ದಾನೆ.

ದೇವದಾಸಿ ಪದ್ಧತಿ ನಿರ್ಮೂಲನೆ ಕಾಯ್ದೆ ... ಯಾಗುವುದಕ್ಕಿಂತ ಅನೇಕ ವರ್ಷಗಳ ಮೊದಲೇ ಆ... ಪದ್ಧತಿಯ ವಿರುದ್ಧ ಯುದ್ಧ ಹೂಡಿದ. ಈ ಪದ್ಧತಿಯ... ಮಾನಸಿಕವಾಗಿ, ಪೊಲೀಸರ ಸಹಾಯದಿಂದ, ಕಾ... ಯಿಂದ ಪ್ರತಿಬಂಧಿಸಬಹುದೆಂದು ಜಗತ್ತಿಗೆ ಸಾ... ಇದರಿಂದ ಉತ್ತೇಜಿತವಾದ ಸರ್ಕಾರ ದೇವದಾಸಿ ಆ... ಪದ್ಧತಿಯನ್ನು ಪ್ರತಿಬಂಧಿಸುವ ಕಾಯ್ದೆಯನ್ನು ಜಾ... ತಂದಿತು.

'God is Light not darkness
God is love not hatredness
God is truth not untruth
God never discriminate
Among Creatures'

ಎಂದು ಆತ ೧೯೩೩ ರಲ್ಲಿ ಗವರ್ನರ್ ಜನ... ರಿಗೆ ಪತ್ರ ಬರೆದು ದೇವಸ್ಥಾನದಲ್ಲಿ ಎಲ್ಲರಿಗೂ ಪ್ರ... ನೀಡಬೇಕೆಂದು ಒತ್ತಾಯಿಸಿದ. 'ನೀನು ಇಷ್ಟೆಲ್ಲ ಮಾ... ಒಂದು ವೇಳೆ ಇನ್ನೂ ನಮಗೆ ಗುಡಿಯೊಳಗೆ ಪ್ರ... ನೀಡದಿದ್ದರೆ?' ಎಂದು ಕೇಳಿದ ಗವನಾಳ ಕಲ್ಲಪ್ಪನಿಗೆ.

'ದೇವರು ನಮ್ಮನ್ನು ಸ್ವೀಕರಿಸದಿದ್ದರೆ ನಾವೇ ... ನನ್ನು ನಿರಾಕರಿಸಿ ಬಿಡೋಣ. ಗುಡಿಗೆ ನಾವು ಹೋ... ಆತ ನಮ್ಮ ಅಂಗೈ ಮತ್ತು ಎದೆಯ ಮೇಲೆ ಸದಾ... ಇರುವಂತೆ ಬಸವ ಧರ್ಮವನ್ನು ಅನುಸರಿಸೋಣ' ... ದೇವರಾಯ.

ತನ್ನ ಸಮಾಜ ಶೈಕ್ಷಣಿಕವಾಗಿ, ರಾಜಕೀಯ... ವೈಚಾರಿಕವಾಗಿ 'ಜಾಣ'ವಾಗುತ್ತಿರುವುದು ಅ... ಸಂತೋಷ ನೀಡುತ್ತಿತ್ತು. 'ಅನೇಕ ಸಾವಿರ ವರ್ಷಗ... ದೀರ್ಘವಾಗಿ ನಿದ್ದೆ ಹೋದ ಜನರು ಇವರು. ಒಮ್ಮೆ... ಮ್ಮೆಲೇ 'ಏಳಿ' ಅಂದ್ರೆ ಹೇಗೆ ಏಳ್ತಾರೆ?' ಎನ್ನುತ್ತಿದ್ದ ಅ...

'ಹೀಗೆ ಎದ್ದು ಕಣ್ಣು ತೆರೆದಾಗ ಒಂದೆರಡು ... ಅವರ ಕಣ್ಣು ಮುಂದೆ ಕತ್ತಲೆ ಕಾಣುತ್ತದೆ. ಅದು ... ಯೆಂದು ಕೂಡ್ರಬಾರದು. ಅದರ ಹಿಂದೆಯೇ ಬೆ... ಇರುತ್ತದೆ' ಎಂದು ಡೈರಿ ಬರೆದ ದೇವರಾಯ.

(ಮುಗಿ...

ಸೂರ್ಯಾಸ್ತ

ದೇವರಾಯನ ಆರೋಗ್ಯ ದಿನದಿಂದ ದಿನಕ್ಕೆ ...ಹತ್ತಿತ್ತು. ಆತನ ಗೆಳೆಯರಲ್ಲಿ ಅನೇಕರು ಸತ್ತು ಹೋಗಿ ...ರು. ಆತನ ಗರಡಿಯಲ್ಲಿ ಬೆಳೆದ ದಲಿತ ಹುಡುಗರು ಅಧಿಕಾರಿಗಳಾಗಿ, ರಾಜಕಾರಣಿಗಳಾಗಿ, ಸಮಾಜದಲ್ಲಿ ...ಷ್ಠಿತ ಸ್ಥಾನಗಳನ್ನು ಪಡೆದುಕೊಂಡಿದ್ದರು. ಹಿಂದಿನ ದಿನ ...ದ್ವೇಷದ ತೀವ್ರತೆ ಕಡಿಮೆಯಾಗಿತ್ತು. ಈಗ ದಲಿತರೂ ...ಸುವುದನ್ನು ಕಲಿತಿದ್ದರು. ಕಾಯ್ದೆಗಳು ಅವರಿಗೆ ...ರಕವಾಗಿದ್ದವು.

'ನಾನಾಗಲಿ, ಬಾಬಾಸಾಹೇಬರಾಗಲಿ ಕಂಡ ಕನಸಾ... ಇದು, ಇನ್ನೂ ಪೂರ್ತಿ ಸಾಧ್ಯ ಆಗದಿದ್ದರೂ ...ಷ್ಟು ಬದಲಾವಣೆಗಳು ಬಂದಿವೆ' ಎಂದು ದೇವ...ಯ ಖುಷಿ ಪಡುತ್ತಿದ್ದ.

ಚಿಕ್ಕೋಡಿ ಭಾಗದಲ್ಲಿ ರಾಜಕೀಯವಾಗಿ ಬಹಳಷ್ಟು ...ತಿಯಾಗಿತ್ತು. ಚಿಕ್ಕೋಡಿ ಲೋಕಸಭಾ ಮತ್ತು ವಿಧಾನ ...ಾ ಕ್ಷೇತ್ರವನ್ನು ದಲಿತರಿಗಾಗಿ ಮೀಸಲಿರಿಸಲಾಗಿತ್ತು. ...ತ ಮಾತ್ರ ಈ ಮತಕ್ಷೇತ್ರವನ್ನು ಲೋಕಸಭೆ ಅಥವಾ ...ಾನಸಭೆಯಲ್ಲಿ ಪ್ರತಿನಿಧಿಸುವ ಅಧಿಕಾರ ಪಡೆದಿದ್ದ. ...ತರು ಗುಡಿಗಳಿಗೆ ಹೋಗಿ ಬರಬಹುದಾಗಿತ್ತು. ಸಾರ್ವ...ಕ ಬಾವಿಗಳಿಂದ ನೀರನ್ನು ಸೇದಬಹುದಾಗಿತ್ತು.

...೯೭೦ರಲ್ಲಿ ದೇವರಾಯ ತನ್ನ ಮನೆಯವರನ್ನೆಲ್ಲ ...ದ. 'ನಿಮ್ಮ ನಿಮ್ಮ ಕರ್ತವ್ಯಗಳನ್ನು ನ್ಯಾಯದ ಹಾದಿಯ...ಮೇ ಮಾಡಿ; ಎಂದೆಂದೂ ಹೊಲಸು ಕೆಲಸ ಮಾಡಲು ...ೀಗಬೇಡಿ' ಎಂದು ಹೇಳಿದ. ನಂತರ ತನ್ನ ಹೆಂಡತಿ ...ಜಾಬಾಯಿಯನ್ನು ಹತ್ತಿರ ಕರೆದ. ಅವಳ ಜೊತೆ ...ೋ ಮಾತಾಡಲು ಯತ್ನಿಸಿದ; ಆದರೆ ಜಡವಾಗಹ...ು. ಕಣ್ಣುಗಳು ಮುಚ್ಚತೊಡಗಿದವು. ಮುಂದೆ ಒಂದೆ...ಹು ಕ್ಷಣದಲ್ಲಿಯೇ ಆತನ ಪ್ರಾಣ ಪಕ್ಷಿ ಆತನ ದೇಹ...ದ ಬೇರ್ಪಟ್ಟಿತು.

ದೇವರಾಯ ಇಂಗಳೆ ದಂಪತಿಗಳು

ಊರಲ್ಲಿ ಸುದ್ದಿ ಹಬ್ಬುತ್ತಿದ್ದಂತೆಯೇ ಜನ ಗುಂಪು ಗುಂಪಾಗಿ ಮನೆಗೆ ಬಂದು ದರ್ಶನ ಪಡೆಯ ಲಾರಂಬಿಸಿದರು. ಮಧ್ಯಾಹ್ನ ಆತನ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು. ಸ್ಮಶಾನದಲ್ಲಿ ದೇವರಾಯನ ಆತ್ಮೀಯ ಗೆಳೆಯರಲ್ಲಿ ಕೆಲವರು ಆತನ ಬಗ್ಗೆ ಮಾತಾಡಿದರು. ದಲಿತರಿಗಾಗಿ ಇಡೀ ಆಯುಷ್ಯವನ್ನು ಸವೆಸಿದ ದೇವರಾಯ ಗಾಳಿಯಲ್ಲಿ ಗಾಳಿಯಾದ; ಬೆಳಕಿನಲ್ಲಿ ಬೆಳಕಾದ; ಮಳೆಯಲ್ಲಿ ಮಳೆಯಾದ;

ಅಂದೇ ಮಧ್ಯಾಹ್ನ ಆಕಾಶದಲ್ಲಿ ಕಾರ್ಮುಗಿಲುಗಳು ದಟ್ಟೈಸತೊಡಗಿದವು. ಶುಭ್ರವಾಗಿದ್ದ ಆಕಾಶದಲ್ಲಿ ಹೀಗೆ ಒಮ್ಮಿಂದೊಮ್ಮೆಲೆ ಮೋಡಗಳು ಕೂಡಿದ್ದು ವಿಸ್ಮಯಕಾರಿಯಾಗಿತ್ತು. ಮುಂದೆ ತುಸು ಹೊತ್ತಿನಲ್ಲಿ ಜಡಿಮಳೆ ಸುರಿಯಲಾರಂಭಿಸಿತು. ಸೂರ್ಯ ಮೋಡಗಳಾಚೆ ಸೇರಿದ. 'ಕ್ರಾಂತಿಕಾರಿಯೊಬ್ಬನ ಸಾವಿಗೆ ಆಗಸ ಕಣ್ಣೀರು ಸುರಿಸುತ್ತಿದೆ' ಎಂದು ಅಪ್ಪಯ್ಯಪ್ಪ ತನ್ನ ಹೆಂಡತಿಗೆ ಹೇಳುತ್ತ ಆಕಾಶದೆಡೆ ಕೈ ಮುಗಿದ. □

ಇಂಗಳೆ ಮಾರ್ಗ



ನಿಸ್ವಾರ್ಥ ರೀತಿಯಿಂದ ಸಮಾಜಕ್ಕೆ ಸೇವೆ ಸಲ್ಲಿ ಸುವ ಜನರನ್ನು ಸಮಾಜ ಸಾಮಾನ್ಯವಾಗಿ ಮರೆತುಬಿಡು ತ್ತದೆ. ದೇವರಾಯ ಇಂಗಳೆ ಪ್ರಕರಣದಲ್ಲೂ ಹಾಗೆ ಆಯಿತು, ತನ್ನ ಇಡೀ ಆಯುಷ್ಯವನ್ನು ದಲಿತ ಸಮಾಜದ ಏಳ್ಗೆಗಾಗಿ ಖರ್ಚು ಮಾಡಿದ ಈ ತ್ಯಾಗವೀರನನ್ನು ದಲಿತ [illegible] ಮರೆತುಬಿಟ್ಟಿತು.

ಆತನ [illegible] ಗರಡಿಯಲ್ಲಿ ಬೆಳೆದ ಅನೇಕ ದಲಿತ ಯುವಕರು [illegible]ಗಳಾಗಿ ರೂಪು ಗೊಂಡು ಅಧಿಕಾರದ ಚುಕ್ಕಾಣಿಯನ್ನು [illegible] ಗಳು, ದುರ್ದೈವವೆಂದರೆ ಒಬ್ಬರೂ ದೇವರಾಯನ ಬಗ್ಗೆ, ಆತನ [illegible]ಂಬದ ವ್ಯಕ್ತಿಗಳ ಬಗ್ಗೆ ಎಂದೂ ವಿಚಾರ ಮಾಡಲು ಹೋಗಲಿಲ್ಲ.

ದೇವರಾಯ ಸತ್ತು ೩೦ ವರ್ಷಗಳ ನಂತರ ೨೦೦೨ ರಲ್ಲಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿ ಅನಿಲ ಪೋತದಾರೆ ಮತ್ತು ಆಯುಕ್ತರಾಗಿ ಪಿ.ಎ. ಮೇಘಣ್ಣವರ್ ಬಂದರು. ಹೊಸ ಬಡಾವಣೆಗ ಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಬಂದಾಗ ಸ್ಕೀಮ್ ನಂ. ೫೧ ರ ಡಬಲ್ ರಸ್ತೆಗೆ 'ಶ್ರೀ ದೇವರಾಯ ಇಂಗಳೆ ಮಾರ್ಗ'ಯೆಂದು ನಾಮಕರಣ ಮಾಡಬೇಕೆಂದು ನಿರ್ಧರಿ ಸಿದರು. ಈಗ ಬೆಳಗಾವಿಯಲ್ಲಿ 'ದೇವರಾಯ ಇಂಗಳೆ' ರಸ್ತೆ ಇದೆ.

ಕೃತಘ್ನ ಸಮಾಜದ ತಪ್ಪನ್ನು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಈ ರೀತಿಯಾದರೂ ಸರಿಪಡಿಸಿ ದಲಿತ ಚೇತನಕ್ಕೆ ತನ್ನ ಗೌರವವನ್ನು ಅರ್ಪಿಸಿತು.



ಇತ್ತೀಚಿನ ದಿನಗಳಲ್ಲಿ ಬಲಪಂಥೀಯರ ಸಾಂಸ್ಕೃತಿಕ ದಾಳಿ ದಿನೇ ದಿನೇ ಹೆಚ್ಚಾಗುತ್ತಿರುವುದು ಪ್ರಜ್ಞಾವಂತರನ್ನು, ಪ್ರಜಾತಂತ್ರವಾದಿಗಳನ್ನು ಚಿಂತೆಗೀಡುಮಾಡಿದೆ. ಅಲ್ ಖೈದಾ, ಲಷ್ಕರ್ ಎ ತೊಯಿಬಾಗಳ ಭಯೋತ್ಪಾದನಾ ಚಟುವಟಿಕೆಗಳ ನಡುವೆಯೇ, ಇನ್ನೂ ಅಪಾಯಕಾರಿಯಾದ ಸಾಂಸ್ಕೃತಿಕ ಅಸಹನೆ ಎಲ್ಲೆಡೆ ಪಸರಿಸುತ್ತಿರುವುದು, ಒಂದು ರೀತಿಯಲ್ಲಿ ಜನಸಾಮಾನ್ಯರ, ಕಲಾವಿದರ, ಸಾಹಿತಿಗಳ ಹಾಗೂ ಕಲಾಕಾರರ ಅಭಿವ್ಯಕ್ತಿ ಸ್ವಾತಂತ್ರವನ್ನು ಕಸಿದುಕೊಳ್ಳುತ್ತಿದೆ ಎಂದರೆ ತಪ್ಪಾಗಲಾರದು. ಒಂದೆಡೆ ಮುಸ್ಲಿಂ ಮೂಲಭೂತವಾದಿಗಳು, ಡೆನ್ಮಾರ್ಕ್‌ನ ಪತ್ರಿಕೆಯೊಂದರಲ್ಲಿ ಪ್ರವಾದಿ ಮೊಹಮ್ಮದ್‌ರನ್ನು ಭಯೋತ್ಪಾದಕರಂತೆ ಚಿತ್ರಿಸುವ ವ್ಯಂಗ್ಯ ಚಿತ್ರ ಪ್ರಕಟವಾಗಿರುವುದರ ವಿರುದ್ಧ, ಹೋರಾಟ, ಪ್ರತಿಭಟನೆ ನಡುಸುತ್ತಿದ್ದರೆ, ಇನ್ನೊಂದೆಡೆ ಭಾರತದಲ್ಲಿ ಖ್ಯಾತ ಕಲಾವಿದ ಎಂ.ಎಫ್. ಹುಸೇನ್‌ರವರು ಭಾರತಾಂಬೆಯನ್ನು ನಗ್ನವಾಗಿ ಚಿತ್ರಿಸುವುದನ್ನು ವಿರೋಧಿಸಿ, ಹಿಂದೂ ಮೂಲಭೂತವಾದಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಇನ್ನು ಪ್ರೇಮಿಗಳ ದಿನಾಚರಣೆ ಬಂತೆಂದರೆ, ಪ್ರೇಮಿಗಳಿಗಿಂತಲೂ ಹೆಚ್ಚು ಹುಚ್ಚು ಹುಚ್ಚಾಗಿ ಆಡುವ ಶಿವಸೈನಿಕರು, ವ್ಯಾಲೆಟೈನ್ ದಿನದಂದು ಯುವಕ ಯುವತಿಯರ ಮೇಲೆ ದಾಳಿ ನಡೆಸುವುದರ ಮೂಲಕ, ತಮ್ಮ ಭವ್ಯ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವುದರಲ್ಲಿ ತೊಡಗಿರುತ್ತಾರೆ. ಈ ಎಲ್ಲಾ ಪ್ರಕರಣಗಳಲ್ಲೂ ಕಂಡುಬರುವ ಸಮಾನ ಅಂಶವೆಂದರೆ, ಅಭಿವ್ಯಕ್ತಿ ಸ್ವಾತಂತ್ರದ ಹರಣ, ಫ್ಯಾಸಿಸ್ಟ್ ಮನೋಭಾವ.

ವರ್ತಮಾನ

ಡೆನ್ಮಾರ್ಕ್‌ನ ಪತ್ರಿಕೆಯ ವ್ಯಂಗ್ಯ ಚಿತ್ರವನ್ನು ವಿರೋಧಿಸಿ ವಿಶ್ವದಾದ್ಯಂತ ಮುಸ್ಲಿಂ ಬಾಂಧವರು ಉಗ್ರ ಪ್ರತಿಭಟನೆ ನಡೆಸುತ್ತಿದ್ದಾರೆ. ಇನ್ನೊಂದೆಡೆ, ಇಸ್ಲಾಂ ಧರ್ಮವೇ ಸಂಕುಚಿತ ಮನೋಭಾವವುಳ್ಳದ್ದು, ಮುಸಲ್ಮಾನರು ಅಭಿವ್ಯಕ್ತಿ ಸ್ವಾತಂತ್ರವನ್ನು ಗೌರವಿಸುವುದಿಲ್ಲ, ಎಂದೆಲ್ಲಾ ಹೀಗಳೆಯುವ, ಹಿಂದೂ ಮೂಲಭೂತವಾದಿಗಳು, ಭಾರತ ಮಾತೆಯನ್ನು ನಗ್ನವಾಗಿ ಚಿತ್ರಿಸಿರುವ ಆಪಾದನೆಯನ್ನು, ಕಲಾವಿದ ಎಂ.ಎಫ್. ಹುಸೇನ್‌ರವರ ಮೇಲೆ ಹೊರಿಸಿ ದಾಳಿ ನಡೆಸಿದೆ. ಹುಸೇನ್‌ರವರ ತಲೆಗೂ ಬೆಲೆ ಕಟ್ಟಲಾಗಿದೆ. ಈ ಎರಡೂ ಘಟನೆಗಳ ನಡುವೆ, ಪ್ರೇಮಿಗಳ ದಿನಾಚರಣೆಯಂದು ಸಂಘ ಪರಿವಾರದವರು, ಪ್ರೇಮಿಗಳ ವಿರುದ್ಧ ದಾಳಿ ಮಾಡಿದ್ದಾರೆ.

ನಾಡಿ ಬಂಗಾರಪೇಟೆ

ಕಾರ್ಟೂನ್-ವ್ಯಾಲೆಂಟೈನ
ಮತ್ತು ಅಭಿವ್ಯಕ್ತಿ ಸ್ವಾತಂತ್ರ

ಡೆನ್ಮಾರ್ಕ್‌ನ ಪತ್ರಿಕೆಯ ವ್ಯಂಗ್ಯ ಚಿತ್ರವನ್ನು ವಿರೋಧಿಸಿ ವಿಶ್ವದಾದ್ಯಂತ ಮುಸ್ಲಿಂ ಬಾಂಧವರು ಉಗ್ರ ಪ್ರತಿಭಟನೆ ನಡೆಸುತ್ತಿದ್ದಾರೆ. ಹಲವು ದೇಶಗಳಲ್ಲಿ ಈ ಪ್ರತಿಭಟನೆಗಳು ಹಿಂಸೆಯಲ್ಲಿ ಪರ್ಯಾವಸಾನಗೊಂಡಿರುವುದೂ ವರದಿಯಾಗಿದೆ. ಭಾರತದಲ್ಲೂ ಸಹ ಅನೇಕ ಮುಸ್ಲಿಂ ಸಂಘಟನೆಗಳು, ಬಹುತೇಕ ಶಾಂತಿಯುತವಾಗಿಯೇ ಪ್ರತಿಭಟನೆ ನಡೆಸಿವೆ. ಡೆನ್ಮಾರ್ಕ್‌ನ ಆಂಗ್ಲ ಪತ್ರಿಕೆಯ ಸಂಪಾದಕರಾಗಲೀ, ವ್ಯಂಗ್ಯ ಚಿತ್ರ ರಚಿಸಿದ ಕಲಾವಿದನಾಗಲೀ, ಮುಸ್ಲಿಂ ಸಮುದಾಯದ ಬೇಡಿಕೆಯಂತೆ ಕ್ಷಮೆ ಯಾಚಿಸದಿರುವುದು ಪರಿಸ್ಥಿತಿಯನ್ನು ಉಲ್ಬಣಿಸುವಂತೆ ಮಾಡಿದೆ. ಇನ್ನೊಂದೆಡೆ, ಇಸ್ಲಾಂ

ಒಬ್ಬ ಕಲಾವಿದ ತಾನು ರಚಿಸುವ ಕಲಾಕೃತಿಯ ಬಗ್ಗೆ ಪೂರ್ವಾಲೋಚನೆಯನ್ನಾಗಲೀ, ಪೂರ್ವಭಾವೀ ಮನೋಭಾವವನ್ನಾಗಲೀ ಹೊಂದಿರುವುದಿಲ್ಲ. ಡೆನ್ಮಾರ್ಕ್‌ನ ಪತ್ರಿಕೆಯಲ್ಲಿ ಪ್ರವಾದಿಯನ್ನು ಭಯೋತ್ಪಾದಕರಂತೆ ಕಲಾವಿದ ತನ್ನ ಮನದಲ್ಲಿ ಅವಿರ್ಭವಿಸುವ ಚಿಂತನೆಗಳನ್ನು, ತನ್ನ ಕಲಾಕೃತಿಯಲ್ಲಿ ಮೂಡಿಸುತ್ತಾನೆ. ಪ್ರಸ್ತುತ ಜಾಗತಿಕ ವಿದ್ಯಮಾನಗಳನ್ನು ಅವಲೋಕಿಸಿದರೆ, ವಿಶ್ವದಾದ್ಯಂತ ಕ್ಷಿಪ್ರ ಗತಿ ಯಲ್ಲಿ ಬೆಳೆಯುತ್ತಿರುವ ಭಯೋತ್ಪಾದನೆ ಇಂದು ಬಹುತೇಕ ಎಲ್ಲಾ ದೇಶಗಳನ್ನು ಚಿಂತೆಗೀಡು ಮಾಡಿದೆ.

ಧರ್ಮವೇ ಸಂಕುಚಿತ ಮನೋಭಾವವುಳ್ಳದ್ದು, ಮುಸಲ್ಮಾಮಾನರು ಅಭಿ
ಸ್ವಾತಂತ್ರವನ್ನು ಗೌರವಿಸುವುದಿಲ್ಲ, ಎಂದೆಲ್ಲಾ ಹೀಗಳೆಯುವ, ಹಿಂ
ಮೂಲಭೂತವಾದಿಗಳು, ಭಾರತ ಮಾತೆಯನ್ನು ನಗ್ನವಾಗಿ ಚಿತ್ರಿಸಿ
ಆಪಾದನೆಯನ್ನು, ಖ್ಯಾತ ಕಲಾವಿದ ಎಂ.ಎಫ್. ಹುಸೇನ್‌ರವರ ಮೆ
ದಾಳಿ ನಡೆಸಿದೆ. ಹುಸೇನ್‌ರವರ ವಿರುದ್ಧ ಈ ಮುಂಚೆಯೂ ಸಹ,
ಸ್ವತಿಯ ನಗ್ನ ಚಿತ್ರ ರಚಿಸಿದ್ದರೆಂದು ಇದೇ ಸಂಘ ಪರಿವಾರದವರು
ನಡೆಸಿದ್ದರು. ಈ ಬಾರಿ ಪರಿವಾರದವರ ದಾಳಿ ತೀಕ್ಷ್ಣವಾಗಿದ್ದು ಹುಸೇ
ರವರ ತಲೆಗೂ ಒಂದು ಬೆಲೆ ಕಟ್ಟಲಾಗಿದೆ. ಗುಜರಾತ್‌ನ ಭಾ.ಜ.ಪ
ಕರೊಬ್ಬರು ಹುಸೇನ್‌ರವರು ತಲೆಯನ್ನು ತಂದೊಪ್ಪಿಸಿದವರಿಗೆ ೫೦
ರೂಗಳ ಬಹುಮಾನ ಘೋಷಿಸಿದ್ದರೆ, ಹುಸೇನ್‌ರವರನ್ನು ಗಡೀಪ
ಮಾಡಬೇಕೆಂದು ಸಂಘ ಪರಿವಾರ ಒತ್ತಾಯಿಸುತ್ತಿದೆ. ಈ ಎರಡೂ
ನೆಗಳ ನಡುವೆ, ಪ್ರೇಮಿಗಳ ದಿನಾಚರಣೆಯಂದು ಶಿವ ಸೈನಿಕರು, ಸ
ಪರಿವಾರದವರು, ಪ್ರೇಮಿಗಳ ದಿನಾಚರಣೆಯಂದು ಆಚರಿಸುತ್ತಿದ್ದ ಯು
ಯುವತಿಯರ ವಿರುದ್ಧ ಹಾಗೂ ಆ ಸಂದರ್ಭಕ್ಕೆ ಅವಶ್ಯವಾದ ವಸ್ತುಗ
ಮಾರಾಟ ಮಾಡುತ್ತಿದ್ದ ವ್ಯಾಪಾರಸ್ತರ ವಿರುದ್ಧ ದಾಳಿ ನಡೆಸಿರುವು
ನೇಪಥ್ಯಕ್ಕೆ ಸರಿದಿರುವುದು, ಅಚ್ಚರಿಯೇನಲ್ಲ. ಆದಾಗ್ಯೂ ಈ ಮೂ
ಪ್ರಕರಣಗಳು, ಮೂಲಭೂತವಾದಿಗಳ ಸ್ವಾಮ್ಯತೆಯನ್ನು ಸಾದರಪಡಿಸು
ಸ್ಪಷ್ಟವಾಗಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ಒಬ್ಬ ಕಲಾ
ತಾನು ರಚಿಸುವ ಕಲಾಕೃತಿಯ ಬಗ್ಗೆ ಪೂರ್ವಾಲೋಚನೆಯನ್ನಾಗ
ಪೂರ್ವಭಾವೀ ಮನೋಭಾವವನ್ನಾಗಲೀ ಹೊಂದಿರುವುದಿಲ್ಲ. ಡೆನ್ಮಾರ್
ಪತ್ರಿಕೆಯಲ್ಲಿ ಪ್ರವಾದಿಯನ್ನು ಭಯೋತ್ಪಾದಕರಂತೆ ಚಿತ್ರಿಸಿರುವ ಕಲಾ

ಮನದಲ್ಲಿ ಅವಿರ್ಭವಿಸುವ ಚಿಂತನೆಗಳನ್ನು, ತನ್ನ ಕಲಾ ...ಯಲ್ಲಿ ಮೂಡಿಸುತ್ತಾನೆ. ಪ್ರಸ್ತುತ ಜಾಗತಿಕ ವಿದ್ಯಮಾನಗಳನ್ನು ...ಲೋಕಿಸಿದರೆ, ವಿಶ್ವದಾದ್ಯಂತ ಕ್ಷಿಪ್ರ ಗತಿಯಲ್ಲಿ ಬೆಳೆಯುತ್ತಿ... ಭಯೋತ್ಪಾದನೆ ಇಂದು ಬಹುತೇಕ ಎಲ್ಲಾ ದೇಶಗಳನ್ನು ...ತಗೀಡುಮಾಡಿದೆ. ಸೆಪ್ಟೆಂಬರ್ ೧೧ ರ ಘಟನೆಯ ನಂತರ ಸಾಮ್ರಾಜ್ಯಶಾಹಿಗಳು ಇರಾಕ್ ಮತ್ತು ಆಫ್ಘಾನಿಸ್ತಾನದ ...ಲೆ ನಡೆಸಿದ ಅಮಾನುಷ ದಾಳಿ, ಈಗ ಇದೇ ದುಷ್ಟ ...ಟ ಸಿರಿಯಾ ಮತ್ತು ಇರಾನ್‌ನ ಮೇಲೆ ದಾಳಿ ನಡೆಸಲು ...ಜು ಹಾಕುತ್ತಿರುವುದು, ಮತ್ತು ಪ್ಯಾಲೆಸ್ತೈನ್‌ನಲ್ಲಿ ಇಸ್ರೇಲ್ ...ಸುತ್ತಿರುವ ಫ್ಯಾಸಿಸ್ಟ್ ದಾಳಿಗಳು, ಭಯೋತ್ಪಾದನೆಗೆ ಇನ್ನೂ ...ಷ್ಟು ಕುಮ್ಮಕ್ಕು ನೀಡುತ್ತಿವೆ. ಸಾಮ್ರಾಜ್ಯಶಾಹಿ ವಿರೋಧಿ ...ೋರಾಟವನ್ನು ಶಸ್ತ್ರಗಳ ಮೂಲಕವೇ, ಭಯೋತ್ಪಾದನೆಯ ...ಲಕವೇ ನಡೆಸಬೇಕೆಂಬ ನಿಯಮವೇನೂ ಇಲ್ಲ. ಆದರೂ ...್ ಖೈದಾ, ಲಷ್ಕರ್ ಎ ತೊಯಿಬಾ ಮುಂತಾದ ಮುಸ್ಲಿಂ ...ಘಟನೆಗಳು, ಜಿಹಾದ್, ಅರ್ಥಾತ್ ಧರ್ಮ ಯುದ್ಧದ ...ರಿನಲ್ಲಿ ಜಗತ್ತಿನೆಲ್ಲೆಡೆ ಭಯೋತ್ಪಾದನೆ, ಹಿಂಸಾಚಾರವನ್ನು ...ರಿಸುತ್ತಿವೆ. ಭಯೋತ್ಪಾದಕತೆಯ ಕದಂಬ ಬಾಹುಗಳು ...ಗರಿಕ ಸಮಾಜವನ್ನು ತಪ್ಪು ದಾರಿಗೆಳೆಯುತ್ತಿರುವುದಂತೂ ...ಪ್ಪಿಲೇಬೇಕಾದ ಕಟುಸತ್ಯ.

ಇಸ್ಲಾಂ ಧರ್ಮದ ಹೆಸರಿನಲ್ಲಿ, ಪವಿತ್ರ ಖುರಾನ್‌ನಲ್ಲಿ ...ಲ್ಲೇಖವಾಗಿರುವ ಜಿಹಾದ್‌ಗೆ ವಿರುದ್ಧ ವಾಗಿ, ಮುಸ್ಲಿಂ ...ೂಲಭೂತವಾದಿಗಳು, ಅಮಾಯಕ ಜನತೆ ಯನ್ನು ...ಗೈಯ್ಯುವುದನ್ನೇ ಧರ್ಮ ಯುದ್ಧವೆಂದು ಪರಿಗಣಿಸಿ ದಂತಿದೆ. ...ದರಿಂದ ಮುಸ್ಲಿಂ ಸಮುದಾಯಕ್ಕೇ ಹೆಚ್ಚು ಅಪಾಯ ವೆಂಬ ...ಶವನ್ನು ಈ ಭಯೋತ್ಪಾದಕ ಸಂಘಟನೆಗಳು ಗ್ರಹಿಸಿದಂತಿಲ್ಲ. ...ಪ್ಟೆಂಬರ್ ೧೧ರ ದಾಳಿಯಿಂದ ಆಫ್ಘಾನಿಸ್ತಾನದ ಜನತೆ ...ಮ್ರಾಜ್ಯಶಾಹಿಗಳ ಕೆಂಗಣ್ಣಿಗೆ ಗುರಿಯಾದರೆ, ಸದ್ದಾಂ ...ಸೇನ್‌ನ ಭಂಡ ಸಾಹಸಗಳಿಂದ ಇರಾಕಿನ ಜನತೆ ಅಪಾರ ...ವು ನೋವುಗಳನ್ನು ಅನುಭವಿಸಬೇಕಾಯಿತು. ಸಾಮ್ರಾಜ್ಯ...ಹಿಗಳ ವಿರುದ್ಧ ಹೋರಾಡುವುದೇ ಪರಮೋದ್ದೇಶವಾದರೆ, ...ಂದು ಜಾಗತಿಕ ಮಟ್ಟದಲ್ಲಿ ಜನ ಬೆಂಬಲಕ್ಕಿಂತಲೂ ಹೆಚ್ಚಾಗಿ ...ಯಕತ್ವದ ಕೊರತೆ ಇದೆ. ಈ ಸತ್ಕಾರ್ಯವನ್ನು ಪ್ರಜಾತಾಂತ್ರಿಕ ...ತಿಯಲ್ಲಿ ಸದ್ದಾಂ ಹುಸೇನ್ ಅಥವಾ ಬಿನ್ ಲಾಡೆನ್ ಮಾಡಬ...ದಿತ್ತು. ಆದರೆ ಇಸ್ಲಾಂನ ಹೆಸರಿನಲ್ಲಿ ಧರ್ಮ ಯುದ್ಧ ನಡೆ...ವ ಪಣ ತೊಟ್ಟಿರುವ ಭಯೋತ್ಪಾದಕ ಮೂಲಭೂತವಾದಿಗಳ ... ಕೃತ್ಯಗಳನ್ನು ಖುರಾನ್ ಸಮರ್ಥಿಸುವುದೇ? ಈ ಒಂದು ...ಭಿಪ್ರಾಯವನ್ನೇ ಒಬ್ಬ ಕಲಾವಿದ ಒಂದು ವ್ಯಂಗ್ಯ ಚಿತ್ರದ ...ೂಲಕ ಹೇಳಬಯಸಿದ್ದಾನೆಂದು ಹೇಳಬಹುದು. ತನ್ನ ವ್ಯಂಗ್ಯ ...ತ್ರದ ಮೂಲಕ ಆ ಕಲಾವಿದ ಇಸ್ಲಾಂಗೆ ದ್ರೋಹ ಬಗೆದಿದ್ದಾ...ದಾದರೆ, ಮುಸ್ಲಿಂ ಮೂಲಭೂತವಾದಿಗಳು, ಭಯೋತ್ಪಾದ...ರೂ, ತಾಲಿಬಾನ್‌ಗಳೂ, ಭಯೋತ್ಪಾದಕರೂ, ತಾಲಿಬಾನ್ಗಳೂ ಸಹ, ಇಸ್ಲಾಂಗೆ, ಪ್ರವಾದಿಗೆ ದ್ರೋಹ ಬಗೆದಂತಲ್ಲವೇ? ಡೆನ್ಮಾರ್ಕ್‌ನ ಪತ್ರಿಕೆಯ ವಿರುದ್ಧ ವಿಶ್ವದಾದ್ಯಂತ ಹೋರಾಟ ನಡೆಸುವ ಮುಸ್ಲಿಂ ನಾಯಕರುಗಳು, ಇಡೀ ಸಮಾಜದ, ಯುವ ಜನತೆಯನ್ನು ಜಿಹಾದ್‌ನ ಹೆಸರಿನಲ್ಲಿ ಹಾಳುಗೆಡಹುತ್ತಿರುವ ಭಯೋತ್ಪಾದಕರ ವಿರುದ್ಧ ಜನಾಂದೋಲನ ನಡೆಸಬಹುದಲ್ಲವೇ. ತೃತೀಯ ವಿಶ್ವದ ದೇಶಗಳಲ್ಲಿ ಮುಸ್ಲಿಂ ಸಮುದಾಯಗಳು ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ ಹಾಗೂ ಜನಾಂಗೀಯ ಸಮಸ್ಯೆಗಳು ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ದಾಳಿಯಿಂದ ಎದುರಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳ ವಿರುದ್ಧ ಹೋರಾಟ ನಡೆಸಬಹುದಲ್ಲವೇ. ಆ ವ್ಯಂಗ್ಯ ಚಿತ್ರಕಾರನೂ ಇದನ್ನೇ ಹೇಳಬಯಸಿದ್ದಾನೆಂದರೆ ತಪ್ಪಾಗಲಾರದು.



ಎಫ್.ಎಂ ಹುಸೇನ್

> **ಭಾರತಾಂಬೆಯನ್ನು ನಗ್ನವಾಗಿ ಚಿತ್ರಿಸಿರುವ ಆಪಾದನೆಯನ್ನು ಹೊರಿಸಿ, ಎಂ.ಎಫ್. ಹುಸೇನ್‌ರವರ ಮೇಲೆ ದಾಳಿ ನಡೆಸುತ್ತಿರುವುದು ದುರದೃಷ್ಟಕರ. ವಿವೇಕಾನಂದರೂ ಸಹ ಭಾರತೀಯ ಜಾತಿ ವ್ಯವಸ್ಥೆಯ ಬಗ್ಗೆ ಟೀಕೆ ಮಾಡುತ್ತಾ, ನಿಮ್ಮ ಪಾಶವೀಕೃತ್ಯಗಳಿಂದ, ಅಮಾನವೀಯ ಜಾತಿ ಪದ್ಧತಿಯಿಂದ ಭಾರತಾಂಬೆಯನ್ನು ನಗ್ನಳಾಗಿಸಿದ್ದೀರಿ, ಎಂದು ಮೇಲ್ಜಾತಿಯವರನ್ನು ಹೀಯಾಳಿಸುತ್ತಾರೆ. ಭಾರತೀಯತೆ, ಹಿಂದೂ ಸಂಸ್ಕೃತಿ, ಹಿಂದೂ ಧರ್ಮ, ಭಾರತೀಯ ಪರಂಪರೆಗಳ ರಕ್ಷಣೆಯ ಹೆಸರಿನಲ್ಲಿ ಹಿಂದೂ ಮೂಲಭೂತ ವಾದಿಗಳು, ವಿವೇಕಾನಂದರ ಈ ಮಾತುಗಳನ್ನು ಸಾಕಾರಗೊಳಿಸಿಲ್ಲವೇ?**

ಬಿನ್ ಲಾಡೆನ್ ಅಥವಾ ಸದ್ದಾಂ ಹುಸೇನ್‌ರವರನ್ನು ಖಂಡಿಸುವುದೇ, ಸಾಮ್ರಾಜ್ಯಶಾಹಿ ಅಮೆರಿಕಾವನ್ನು ಸಮರ್ಥಿಸಿದಂತಲ್ಲ ಎಂಬ ಅಂಶವನ್ನು ಜನತೆ ಮನಗಾಣಬೇಕಾಗಿದೆ. ಒಂದು ವ್ಯಂಗ್ಯ ಚಿತ್ರದ ಮೂಲಕ ವಿಶ್ವದಾದ್ಯಂತ ಮುಸ್ಲಿಂ ಜನತೆಯನ್ನು, ಅವರ ಭಾವನೆಗಳನ್ನು ಕೆರಳಿಸುವ ಪಿತೂರಿಯಿಂದ ಡೆನ್ಮಾರ್ಕ್‌ನ ಪತ್ರಿಕೆಯು ಆ ವ್ಯಂಗ್ಯ ಚಿತ್ರವನ್ನು ಪ್ರಕಟಿಸಿದ್ದಲ್ಲಿ, ಅದನ್ನು ಪ್ರತಿಭಟಿಸುವುದು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಕರ್ತವ್ಯ. ಆದರೆ ಮೊದಲೇ ಹೇಳಿದಂತೆ ಯಾವುದೇ ಕಲಾವಿದನೂ ಪೂರ್ವಭಾವಿ ಮನೋಭಾವದಿಂದ ತನ್ನ ಕೃತಿಗಳನ್ನು ರಚಿಸುವುದಿಲ್ಲ. ಹಾಗಾಗಿ ಪ್ರಸ್ತುತ ವಿಶ್ವದಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳು ಸಾಮ್ರಾಜ್ಯಶಾಹೀ ವಿರೋಧಿ ಎನ್ನುವುದಕ್ಕಿಂತಲೂ, ಮೂಲಭೂತವಾದದೆಡೆಗೆ ಕ್ರಮಿಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಭವಿಷ್ಯದ ದೃಷ್ಟಿಯಿಂದ ಈ ಪ್ರಕ್ರಿಯೆ ಅಪಾಯಕಾರಿಯಾಗುವ ಸಾಧ್ಯತೆಗಳಿವೆ.

ಇದೇ ಜಾಡನ್ನು ಹಿಡಿದಿರುವ ಹಿಂದೂ ಮೂಲಭೂತವಾದಿಗಳು, ಭಾರತಾಂಬೆಯನ್ನು ನಗ್ನವಾಗಿ ಚಿತ್ರಿಸಿರುವ ಆಪಾದನೆಯನ್ನು ಹೊರಿಸಿ, ಎಂ.ಎಫ್. ಹುಸೇನ್‌ರವರ ಮೇಲೆ ದಾಳಿ ನಡೆಸುತ್ತಿರುವುದು ದುರದೃಷ್ಟಕರ. ವಿವೇಕಾನಂದರೂ ಸಹ ಭಾರತೀಯ ಜಾತಿ ವ್ಯವಸ್ಥೆಯ ಬಗ್ಗೆ ಟೀಕೆ ಮಾಡುತ್ತಾ, ನಿಮ್ಮ ಪಾಶವೀ ಕೃತ್ಯಗಳಿಂದ, ಅಮಾನವೀಯ ಜಾತಿ ಪದ್ಧತಿಯಿಂದ ಭಾರತಾಂಬೆಯನ್ನು ನಗ್ನಳಾಗಿಸಿದ್ದೀರಿ, ಎಂದು ಭಾರತೀಯ ಸಮಾಜದ ಮೇಲ್ಜಾತಿಯವರನ್ನು ಹೀಯಾಳಿಸುತ್ತಾರೆ. ಭಾರತೀಯತೆ, ಹಿಂದೂ ಸಂಸ್ಕೃತಿ, ಹಿಂದೂ ಧರ್ಮ, ಭಾರತೀಯ ಪರಂಪರೆಗಳ ರಕ್ಷಣೆಯ ಹೆಸರಿನಲ್ಲಿ ಹಿಂದೂ ಮೂಲಭೂತವಾದಿಗಳು, ವಿವೇಕಾನಂದರ ಈ ಮಾತುಗಳನ್ನು ಸಾಕಾರಗೊಳಿಸಿಲ್ಲವೇ? ಅದೇ ಅಭಿಪ್ರಾಯವನ್ನು ಹುಸೇನ್‌ರವರು ತಮ್ಮ ಕಲಾಕೃತಿಯ ಮೂಲಕ ಹೇಳಬಯಸಿರುವುದಲ್ಲವೇ? ಅಭಿವ್ಯಕ್ತಿ ಸ್ವಾತಂತ್ರವನ್ನು ಪ್ರಕಟಪಡಿಸಲು, ಕೆಲವು ವಿದ್ಯಮಾನಗಳ ಬಗ್ಗೆ ತಮ್ಮ ಅಭಿಪ್ರಾಯ ನಿಲುವುಗಳನ್ನು ತಿಳಿಸಲು ಕಲಾವಿದರು ತಮ್ಮದೇ ಆದ ತಂತ್ರವನ್ನು ಬಳಸುತ್ತಾರೆ. ಅದನ್ನು ವಿಮರ್ಶಾ ದೃಷ್ಟಿಯಿಂದ, ಪ್ರಜಾತಾಂತ್ರಿಕ ದೃಷ್ಟಿಯಿಂದ ವಿಶ್ಲೇಷಿಸಬೇಕೇ ಹೊರತು, ಧರ್ಮ ನಿಂದನೆ ಅಥವಾ ಪ್ರಚೋದನೀಯ ದೃಷ್ಟಿಯಿಂದಲ್ಲ. ಹಾಗಾದಾಗ ಮಾತ್ರ ನಾಗರಿಕ ಸಮಾಜ ಉಳಿಯಲು ಸಾಧ್ಯ. ಹುಸೇನ್ ಅಥವಾ ಡೆನ್ಮಾರ್ಕ್‌ನ ವ್ಯಂಗ್ಯ ಚಿತ್ರಕಾರನ ಶಿರಚ್ಛೇದನ ಮಾಡಿದರೆ, ಕಲೆಗೆ ಅವಮಾನ ಮಾಡಿದಂತಾಗುತ್ತದೆಯಲ್ಲದೆ ಸೃಜನಶೀಲತೆಯ ಹನನವಾಗುತ್ತದೆಯೇ ಹೊರತು ಯಾವುದೇ ಧರ್ಮ, ಪರಂಪರೆಯ ರಕ್ಷಣೆಯಾಗುವುದಿಲ್ಲ. □



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✦ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು– ೫೬೦ ೦೦೧, ☎ : ೨೨೨೦೩೪೮೦
✦ಗಾಂಧಿನಗರ, ಬೆಂಗಳೂರು–೫೬೦ ೦೦೯, ☎ : ೨೨೨೫೦೩೮೨, ✦ಸ್ಟೇಷನ್ ರಸ್ತೆ, ಗುಲ್ಬರ್ಗ–೨ ☎ : ೪೨೪೪೩೦೨
✦ಕೆ.ಎಸ್.ರಾವ್.ರಸ್ತೆ, ಮಂಗಳೂರು–೧, ☎ : ೨೪೪೧೧೦೧೬, ✦ರಾಮಸ್ವಾಮಿ ವೃತ್ತ ಮೈಸೂರು–೨೪, ☎ : ೨೪೨೪೯೦೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು – ೫೬೦೦೨೦
☞ಕೆ.ಎಸ್.ಆರ್.ಟಿ.ಸಿ. ಬುಕ್ ಸ್ಟಾಲ್, ಪ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ದಲಿತ್ ಡೈರಿ

೧೯೫೧ರಲ್ಲಿ ಭಾರತೀಯ ತಲಾದಾಯಕ್ಕೆ ಸೇವಾ ವಲಯವು ಶೇ.೨೪.೨ ರಷ್ಟನ್ನು ನೀಡಿದರೆ, ಕೈಗಾರಿಕೆಯಿಂದ ಬರುತ್ತಿದ್ದ ಪಾಲು ಕೇವಲ ಶೆ.೧೪.೫ರಷ್ಟಿತ್ತು. ಆದರೆ ವ್ಯವಸಾಯದಿಂದ ಶೇ. ೬೧.೩ರಷ್ಟು ತಲಾದಾಯ ಒದಗಿ ಬರುತ್ತಿತ್ತು. ೧೯೮೪ರಲ್ಲಿ ಸೇವಾ ವಲಯ ಶೇ. ೩೯ರಷ್ಟು ನೀಡುವ ಮೂಲಕ ಕೃಷಿ ಕ್ಷೇತ್ರ ನೀಡುತ್ತಿದ್ದದ್ದಕ್ಕೆ ಸಮಾನವಾಗಿ ನಿಂತಿತ್ತು. ಅಂದರೆ ೨೦೦೫ರ ಹೊತ್ತಿಗೆ ಸೇವಾ ವಲಯವು ಭಾರತದ ತಲಾ ದಾಯಕ್ಕೆ ಶೇ. ೫೦ರಷ್ಟು ಕೊಡುಗೆಯನ್ನು ನೀಡುವ ಮೂಲಕ ಅದರ ಆರ್ಥಿಕತೆಯನ್ನು ಮುನ್ನಡೆಸುತ್ತದೆ. ಇದರ ಆಧಾರದ ಮೇಲೆ ೧೯೯೧ರಲ್ಲಿ ಆಚರಣೆಗೆ ಬಂದ ಹೊಸ ಆರ್ಥಿಕ ನೀತಿಯು ೧೯೫೧ರಲ್ಲಿ ನೋಡಿದ ಪಾರಂಪರಿಕ ನೀತಿಯ ತದ್ವಿರುದ್ಧ ಹೋದವೆಂದು ನಾವು ಭಾವಿಸಬಹುದೇ?

ಅನು: ಡೊಮಿನಿಕ್ ಡಿ

ಭಾರತೀಯ ಆರ್ಥಿಕತೆ ಜಪಾನ್ ಅಥವಾ ಅಮೆರಿಕಾದೊಡನೆ ಬೆಳೆಯುತ್ತಿದೆಯೇ? ಜಪಾನಿನ ತಲಾದಾಯಕ್ಕೆ ಅದರ ಸೇವಾ ವಲಯವು ೭೩.೫% ರಷ್ಟು ಕೊಡುಗೆಯನ್ನು ನೀಡುತ್ತಿದೆ. ವ್ಯವಸಾಯ ಮತ್ತು ತಯಾರಿಕಾ/ಕೈಗಾರಿಕಾ ವಲಯವು ಕ್ರಮವಾಗಿ ಶೇಕಡ ೧.೩ ಮತ್ತು ೨೫.೩ರಷ್ಟು ಕೊಡುಗೆಯನ್ನು ಒದಗಿಸುತ್ತಿದೆ. ಅಮೆರಿಕಾದ ಆರ್ಥಿಕ ಕ್ಷೇತ್ರವೂ ಸಹ ತನ್ನ ಸೇವಾ ವಲಯದಿಂಧ ಶೇಕಡ ೭೮.೩ರಷ್ಟು ಕೊಡುಗೆಯನ್ನು ಪಡೆದು ಬೆಳೆಯುತ್ತಿದೆ. ಇದಕ್ಕೆ ವ್ಯವಸಾಯ ಮತ್ತು ತಯಾರಿಕಾ/ಕೈಗಾರಿಕಾ ವಲಯವು ಕ್ರಮವಾಗಿ ಶೇಕಡ ೧ ಮತ್ತು ೨೦.೭ ರಷ್ಟರ ಕೊಡುಗೆಯನ್ನು ನೀಡುತ್ತಿದೆ. ಹೀಗೆಯೇ ಭಾರತದಲ್ಲೂ ಸೇವಾ ವಲಯವು ಅದರ ಆರ್ಥಿಕತೆಗೆ ಶೇಕಡ ೫೧.೪ರಷ್ಟನ್ನು ಒದಗಿಸುತ್ತಿದೆ. ಇದರಲ್ಲಿ ವ್ಯವಸಾಯ ಮತ್ತು ತಯಾರಿಕಾ/ಕೈಗಾರಿಕಾ ವಲಯವು ಕ್ರಮವಾಗಿ ಶೇಕಡ ೨೦.೬ ಮತ್ತು ೨೮.೧ರಷ್ಟನ್ನು ಒದಗಿಸುತ್ತಿದೆ.

ಕೈಗಾರಿಕೆಯಲ್ಲಿ ಜಪಾನ್ ಮತ್ತು ಅಮೆರಿಕಾ ಮುಂಚೂಣಿಯಲ್ಲಿರುವ ದೇಶಗಳಾಗಿವೆ. ಆದರೆ ಕೈಗಾರಿಕೋತ್ತರ ಸಂದರ್ಭದಲ್ಲಿ ಸೇವಾ ವಲಯವು ಮುನ್ನಡೆಯ ವಲಯವಾಗಿದೆ. ಹೀಗಿದ್ದರೂ ಭಾರತವು ಕೈಗಾರಿಕೆಯಲ್ಲಿ ಮುಂದುವರೆಯದೇ ಕೈಗಾರಿಕೋತ್ತರ ಹಂತಕ್ಕೆ ಪ್ರವೇಶಿಸುವ ಸೂಚನೆಯನ್ನು ನೀಡುತ್ತಿದೆ!

ಮತ್ತೊಂದೆಡೆ ಚೀನಾ ದೇಶವು ಶೀಘ್ರವಾಗಿ ಕೈಗಾರಿಕೆಯಲ್ಲಿ ಬೆಳೆಯುತ್ತಿದೆ. ಆದ್ದರಿಂದಲೇ ಅದರ ಆರ್ಥಿಕತೆಗೆ ಕೈಗಾರಿಕೋದ್ಯಮವು ಶೇಕಡ ೫೩.೧ರಷ್ಟು ತಲಾದಾಯವನ್ನು ಒದಗಿಸುತ್ತಿದೆ. ಉಳಿದಂತೆ ಈ ತಲಾದಾಯಕ್ಕೆ ಸೇವಾ ವಲಯ ಮತ್ತು ವ್ಯವಸಾಯದ ಕೊಡುಗೆಯು ಕ್ರಮವಾಗಿ ಶೇ. ೩೨.೫ ಮತ್ತು ೧೪.೪ರಷ್ಟು ಆಗಿದೆ. ಹೀಗೆ ಚೀನಾ ದೇಶವು ಇತರ ದೇಶಗಳಂತೆ ಕ್ರಮಬದ್ಧ ಅಭಿವೃದ್ಧಿಯ ದಾರಿಯನ್ನು ಅನುಸರಿಸುತ್ತಿದೆ.

ಆದರೆ ಭಾರತವು ಅಂಥ ಪ್ರಕ್ರಿಯೆಯನ್ನು ವಿರೋಧಿಸುತ್ತಲೇ ಸಾಗುತ್ತಿದೆ. ೧೯೫೧ರಲ್ಲಿ ಭಾರತೀಯ ತಲಾದಾಯಕ್ಕೆ ಸೇವಾ ವಲಯವು ಶೇ.೨೪.೨ ರಷ್ಟನ್ನು ನೀಡಿದರೆ, ಕೈಗಾರಿಕೆಯಿಂದ ಬರುತ್ತಿದ್ದ ಪಾಲು ಕೇವಲ ಶೆ.೧೪.೫ರಷ್ಟಿತ್ತು. ಆದರೆ ವ್ಯವಸಾಯದಿಂದ ಶೇ. ೬೧.೩ರಷ್ಟು ತಲಾದಾಯ ಒದಗಿ ಬರುತ್ತಿತ್ತು. ೧೯೮೪ರಲ್ಲಿ ಸೇವಾ ವಲಯ ಶೇ. ೩೯ರಷ್ಟು ನೀಡುವ ಮೂಲಕ ಕೃಷಿ ಕ್ಷೇತ್ರ ನೀಡುತ್ತಿದುದ್ದಕ್ಕೆ ಸಮಾನವಾಗಿ ನಿಂತಿತ್ತು. ಅಂದರೆ ೨೦೦೫ರ ಹೊತ್ತಿಗೆ ಸೇವಾ ವಲಯವು ಭಾರತದ ತಲಾದಾಯಕ್ಕೆ ಶೇ. ೫೦ರಷ್ಟು ಕೊಡುಗೆಯನ್ನು ನೀಡುವ ಮೂಲಕ ಅದರ ಆರ್ಥಿಕತೆಯನ್ನು ಮುನ್ನಡೆಸುತ್ತದೆ.

ಇದರ ಆಧಾರದ ಮೇಲೆ ೧೯೯೧ರಲ್ಲಿ ಆಚರಣೆಗೆ ಬಂದ



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಹೊಸ ಆರ್ಥಿಕ ನೀತಿಯು ೧೯೫೧
ನೋಡಿದ ಪಾರಂಪರಿಕ ನೀತಿಯ
ರುದ್ಧ ಹೋದವೆಂದು ನಾವು ಭಾ
ಬಹುದೇ? ಭಾರತೀಯ ಪಾರಂಪ
ಆರ್ಥಿಕತೆಯು ದ್ವಿಜರಿಂದ ನಿಯಂ
ಕ್ಕೊಳಗಾಗಿತ್ತು. ಆದ್ದರಿಂದ ಅ
ಜಾತಿಯಾಧಾರಿತವಾಗಿತ್ತು. ಅಲ್ಲದೆ
ಮಾರುಕಟ್ಟೆಯ ವ್ಯಾಪ್ತಿಯನ್ನು ಸಹಿ
ಗಿತ್ತು. ಅಂದರೆ ಭಾರತೀಯ ಪಾರಂ
ಆರ್ಥಿಕತೆಯಲ್ಲಿ ಕೈಗಾರಿಕೋದ್ಯ
ಸಿದ್ಧವಸ್ತುವನ್ನಷ್ಟೆ ತಯಾರಿಸಿತ್ತಲ್ಲದೆ,
ಅಗತ್ಯವಾದ ಗ್ರಾಹಕರನ್ನಲ್ಲ. ಇದರಿಂ
ಬೃಹತ್ ರೀತಿಯ ಕೈಗಾರಿಕೋ
ಮವನ್ನು ಅದು ಸಾಧಿಸಲಾ
ಹೋಯಿತು. ಆದರೂ ಎಲ್ಲಾ ರೀತಿ
ಕ್ಲಾಸಿಕಲ್ ಆರ್ಥಿಕ ಸಿದ್ಧಾಂತಗಳನ್ನು
ಗೊತ್ತಿ ಸೇವಾ ವಲಯವು ಬೆಳೆಯತೊ
ಗಿತು. ಏಕೆ?

ಪಾರಂಪರಿಕವಾಗಿ, ಭಾರತೀ
ಪ್ರಭುತ್ವವು ಗ್ರಾಹಕನನ್ನು ತಯಾರಿಸುವ ಹೊರೆಯನ್ನು ಹೊತ್ತಿತ್ತು. ಭಾರತೀ
ಕೈಗಾರಿಕೋದ್ಯಮದಲ್ಲಿ ೨೦ ಮಿಲಿಯನ್‌ರಷ್ಟಿರುವ ಸರ್ಕಾರಿ ಉದ್ಯೋಗಿ
ಅದರ ಗ್ರಾಹಕ ತಳಹದಿಯಾಗಿದ್ದರು. ಇವರ ಕೊಂಡುಕೊ
ಶಕ್ತಿಯಿಂದಾಗಿ ವ್ಯಾಪಾರಿ ಮತ್ತು ತಯಾರಿಕ ವರ್ಗವೊಂದು ಸೃಷ್ಟಿಯಾ
ಈ ವರ್ಗವೇ ಅಂತಿಮವಾಗಿ ಭಾರತೀಯ ಗ್ರಾಹಕ ವರ್ಗವಾಗಿ ಪ್ರಾಮು
ಯನ್ನು ಪಡೆದುಕೊಂಡು ಸೇವಾ ವಲಯದ ಅಗತ್ಯವನ್ನು ಬಯಸಿ
ಈ ಕಾರಣದಿಂದಾಗಿಯೇ ಭಾರತೀಯ ಸೇವಾ ವಲಯವು ಕೈಗಾ
ಪ್ರಗತಿಯನ್ನು ಕಾಣದೆ ಬೃಹತ್ ಕ್ಷೇತ್ರವಾಗಿ ಉದಯಿಸತೊಡಗಿತು.

೧೯೯೧ರಲ್ಲಿ ಆರ್ಥಿಕ ಸುಧಾರಣೆಗಳು ಬರಲಾರಂಭಿಸಿದ
ಸುಧಾರಣಾವಾದಿಗಳಿಗೆ ಹೊಸ ಗ್ರಾಹಕ ಗುಂಪು ಬೆಳೆದು ಮಾರುಕಟ್ಟೆಯ
ವಶಪಡಿಸಿಕೊಳ್ಳುವುದು ಬೇಕಾಗಿರಲಿಲ್ಲ. ಏಕೆಂದರೆ ಅವರಿಗೆ ಸಾಂಪ್ರದಾ
ವಾಣಿಜ್ಯ ಗುಂಪು ಹಾಗೆಯೇ ಉಳಿದುಕೊಳ್ಳಬೇಕಾಗಿತ್ತು. ಅಂದರೆ
ಸುಧಾರಣೆಗಳು ಮಾರುಕಟ್ಟೆಯನ್ನು ವಿಸ್ತರಿಸುವ ಬದಲು ಸಾಮಾ
ನಿಯಂತ್ರಣವನ್ನಷ್ಟೇ ಬಯಸಿ, ವಿಮೋಚನಾ ಸಾಧ್ಯತೆಗಳನ್ನು ಗಾ
ತೂರಲಾಗಿತ್ತು.

ಹೀಗಿರುವಾಗ, ಸುಧಾಣಾವಾದಿಗಳು ಒಂದು ಪ್ರಮುಖ ದ್ವಂದ್ವ
ಸಿಕ್ಕಿಕೊಂಡಿದ್ದರು–ಸುಧಾರಣೆಗಳು ಕೊನೇ ಪಕ್ಷ ಫಲಿತಾಂಶವನ್ನಾದ
ಹೊಮ್ಮಿಸಬೇಕಾಗಿತ್ತು. ಹೀಗಿರುವಲ್ಲಿ ಐದನೇ ವೇತನ ಆಯೋ
ಕೃತಕವಾಗಿ ಆರ್ಥಿಕತೆಯನ್ನು ಪ್ರಚೋದಿಸುವ ತಂತ್ರವಾಗಿಯಷ್ಟೆ ಬಳ
ಯಿತೇ? ಏಕೆಂದರೆ ರೂ.೫೩೦ಬಿಲಿಯನ್ ಹಣವನ್ನು ಪ್ರಭುತ್ವವು ನೀ
ಮೂಲಕ ಮಾರುಕಟ್ಟೆ
ಕೃತಕವಾಗಿ ಆರ್ಥಿಕ ಬೆಳವ
ಯನ್ನು ಸೂಚಿಸಿತ್ತು. ಹೀ
ವಲ್ಲಿ ವೈ೭ಕೆ ಭಾರತದ
ಕ್ಷೇತ್ರಕ್ಕೆ ವರದಾನವಾಯಿ
ಬೇಕು. ಜಗತ್ತಿನಾದ್ಯಂತ ಕಂ
ರ್‌ಗಳ ಉತ್ತಮೀಕರಿಸುವಿಕೆ
ಸುಮಾರು ೩೦೦ ಬಿಲಿ

ಋಗ್ವೇದ ಮೂಲದ ಆಯವ್ಯಯ

ಲರ್ ವಹಿವಾಟನ್ನು ತರುತ್ತಿತ್ತು. ಐಟಿ ಕ್ಷೇತ್ರದಲ್ಲಿನ ಅಗ್ಗದ ದುದೊಡನೆ ಭಾರತೀಯ ಕಂಪನಿಗಳು ಪ್ರಯೋಜನ ತೆದುಕೊಂಡವೇ?

ಕೈಗಾರಿಕಾ ವಲಯವು ಚೀನಾದಲ್ಲಿ ತ್ವರಿತವಾಗಿ ಳೆಯುತ್ತಿರುವುದರಿಂದ ಅದರ ತಲಾದಾಯವು ೧,೮೩೩ ಲಿಯನ್ ಡಾಲರ್ ಆಗಿದ್ದರೆ, ಭಾರತದಲ್ಲಿ ಅದು ಕೇವಲ ೬ ಬಿಲಿಯನ್ ಡಾಲರ್ ಆಗಿದೆಯಷ್ಟೆ ಹೀಗಾಗಿ, ಭಾರತದ ಆರ್ಥಿಕ ಸುಧಾರಣೆಗಳು ಅಲ್ಲಿನ ಕೈಗಾರಿಕೋದ್ಯಮಗಳು ತವಾಗಿ ಬೆಳೆಯುವುದನ್ನು ತಡೆಯುವಲ್ಲಿ ಯಶಸ್ವಿಯಾದವು.

೧೯೯೧ರ ನಂತರದಲ್ಲಿ ಭಾರತದಲ್ಲಿ ಮಂಡನೆಯಾದ ಲ್ಲಾ ಬಜೆಟ್‌ಗಳೂ ಇಲ್ಲಿನ ಕೈಗಾರಿಕೋದ್ಯಮವನ್ನು ತಡೆದ ದೇ ಹೇಳಬೇಕಾಗುತ್ತದೆ. ಅದು ಬೆಳೆಯುತ್ತಿರುವ ವೇಗವನ್ನು ನೆಗೆ ತೆಗೆದುಕೊಳ್ಳುವುದಾದರೆ ಚಿದಂಬರ್ ಋಗ್ವೇದದ ನಿನಲ್ಲಿ ಸಿಕ್ಕಿಕೊಂಡು, ಕೈಗಾರಿಕೆಯ ಬದಲು ಸೇವಾವಲ ವನ್ನಷ್ಟೆ-ಪೋಷಿಸುತ್ತಿದ್ದಾನೆ. ರೂ.೫೬,೪೯೧ಕೋಟಿ ರೂ ಜೆಟ್‌ನಲ್ಲಿ ದಲಿತರಿಗೆ ಚಿದಂಬರ್ ಮೀಸಲಿಟ್ಟಿರುವ ಬಜೆಟ್ ವಲ ರೂ.೨, ೯೦೨ ಕೋಟಿಯಷ್ಟೆ.

ಆತನ ಈ ಋಗ್ವೇದ ಮಾರುಕಟ್ಟೆಯ ಗ್ರಹೀತವು ದಲಿತರ ರುದ್ಧ ಹೋರಾಟ ಮಾಡುತ್ತಿರುವಂತೆ ಕಾಣುತ್ತಿದೆ. ಅಂದರೆ ಗ್ವೇದ ಕಾಲದಲ್ಲಿ ದಾಸ ಮತ್ತು ದಾಸ್ಯುಗಳನ್ನು ದಮನಿಸಿದಂತೆ ಣುತ್ತಿದೆ. ಆದ್ದರಿಂದಲೇ ಆತ ವೇದ ಕಾಲದ ಪರಂಪರೆಯಾದ ಮಲೀಲಾವನ್ನು ರಕ್ಷಿಸುವುದಕ್ಕಾಗಿ ರೂ.೫ಕೋಟಿಯನ್ನು ೀಸಲಿಟ್ಟಿದ್ದಾನೆ. ಅಂದರೆ ಸುಧಾರಣಾವಾದಿಗಳು ಸಂಪ್ರದಾ ವಾದಿಗಳಾಗಿ ಪರಿವರ್ತನೆಗೊಳ್ಳುತ್ತಿರುವುದು ಹಾಸ್ಯಾಸ್ಪದವೇ ಗಿದೆ.

ಭಾರತವು ಅಮೆರಿಕಾವನ್ನು ನಂಬುತ್ತದೆಯೇ? ದೆಹ ಯ ಪ್ರಕಟನೆಯೊಂದು ಮಾಡಿರುವ ರಾಷ್ಟ್ರವ್ಯಾಪಿ ಸಮೀಕ್ಷೆಯ ೂಲಕ ತಿಳಿದು ಬಂದಿರುವ ಸಂಗತಿಯೆಂದರೆ ಶೇ.೬೧ರಷ್ಟು ರ "ಇಲ್ಲ" ಎಂದು ಉತ್ತರಿಸಿದ್ದಾರೆ. ಇಲ್ಲಿರುವ ಪ್ರಶ್ನೆಯೆಂದರೆ ಮೆರಿಕಾವೂ ಎಂದಾದರೂ ಭಾರತಕ್ಕೆ ದ್ರೋಹ ಬಗೆದಿದೆಯೇ ಥವಾ ತಾನು ಕೊಟ್ಟ ಮಾತಿನಿಂದ ತಪ್ಪಿದೆಯೇ? ಇಲ್ಲ ದಾದರೆ ಬಹುಸಂಖ್ಯಾತ ಭಾರತೀಯರೇಕೆ ಅಮೆರಿಕಾವು ಬಿಕಾರ್ಹವಲ್ಲವೆಂದು ಯೋಚಿಸುತ್ತಿರುವುದು.

ವಸ್ತುಸ್ಥಿತಿ ಹೇಗಿದೆಯೆಂದರೆ, ಅಮೆರಿಕಾವು ಭಾರತದೊ ನೆ ಬಹು ಪ್ರಯೋಜನಕಾರಿಯಾಗಿಯೇ ನಡೆದುಕೊಂಡಿದೆ. ರತ ವಿಭಜನೆಯಾದಾಗ ಗೋಧಿಯ ಖಣಜವೆಂದೇ ಹೆಸ ದ ಪಶ್ಚಿಮ ಭಾಗದ ಪಂಜಾಬ್ ಪಾಕಿಸ್ತಾನಕ್ಕೆ ಹೋಯಿತು. ಗ ಆಹಾರದ ಬಿಕ್ಕಟ್ಟು ಭಾರತಕ್ಕೆದುರಾಯಿತು. ಮುಂಗಾರು ಳೆ ಬಾರದೆ ಪರಿಸ್ಥಿತಿ ಮತ್ತಷ್ಟು ಹದೆಗೆಟ್ಟಿತು.

೧೯೫೫ರ ವೇಳೆಗೆ ಭಾರತವು ತೀವ್ರವಾದ ಆಹಾರ ರತೆಯನ್ನು ಎದುರಿಸುವಂತಾಯಿತು. ಬಂಗಾಳದ ಕ್ಷಾಮ ನ್ನೂ ನೆನಪಿನಿಂದ ಮಾಸಿರಲಿಲ್ಲ. ಈ ಕ್ಷಾಮದಲ್ಲಿ ಮೂರು ಲಿಯನ್ ಜನ ಸಾವನ್ನಪ್ಪಿದ್ದರು. ಆ ಸಂದರ್ಭದಲ್ಲಿ ಜನ ಾಣಿ-ಪಕ್ಷಿಗಳು ತಿನ್ನುವ ಎಲೆ, ಆಲದ ಮರದ ಹಣ್ಣು, ಬಂತಾದುವನ್ನು ತಿಂದು ಬದುಕಲು ಪ್ರಯತ್ನಿಸಿದ್ದರು.

ಭಾರತವು ತನ್ನೆಲ್ಲಾ ಉಪಾಯಗಳನ್ನು ಬಳಸಿಯಾಗಿತ್ತು. ನಾದಲ್ಲಿ ಹಸಿವು ತೀವ್ರವಾಗಿತ್ತು. ರಷ್ಯಾದಲ್ಲೂ ಸಾಕಷ್ಟು ನ್ನಪಿರಲಿಲ್ಲ. ಯುದ್ಧಸಿಕ್ತವಾಗಿದ್ದ ಯೂರೋಪಿನಲ್ಲೂ ಾವುದೇ ಸಹಾಯವನ್ನು ಬಯಸುವಂತಿರಲಿಲ್ಲ. ಜಾಗತಿಕ ಕಟ್ಟೆಯಲ್ಲಿ ಆಹಾರವಿದ್ದಾಗ್ಯೂ, ಭಾರತದಲ್ಲಿ ವಿದೇಶಿ ಪಿರದೆ ಕಂಗಾಲಾಗಿತ್ತು.

ನಂಬಿಕೆಗೆ ಅನರ್ಹರಾದ ಭಾರತೀಯರು

ಹೀಗಿರುವಲ್ಲಿ ೧೯೫೫ರ ಸಂದರ್ಭದಲ್ಲಿ ಭಾರತಕ್ಕೆ ಇದ್ದದ್ದು ಎರಡು ಆಯ್ಕೆಗಳು ಮಾತ್ರ ಒಂದು ಮಿಲಿಯಗಟ್ಟಲೆ ಜನರನ್ನು ಸಾಯಲು ಬಿಡುವುದು ಅಥವಾ ದೇವತೆಯೊಬ್ಬಳು ಪುಕ್ಕಟೆಯಾಗಿ ಆಹಾರವನ್ನು ನೀಡುತ್ತಾಳೆಂದು ಕಾಯುವುದು. ಈ ಕ್ಷಣದಲ್ಲೇ ಅಮೆರಿಕಾವು ತನ್ನ ನೆರವನ್ನು ನೀಡಿ ಭಾರತವನ್ನು ರಕ್ಷಿಸಿದ್ದು. ೧೯೫೬ರಲ್ಲಿ ಭಾರತವು ಪಿ.ಎಲ್‌೪೮೦ ಗೋಧಿಯನ್ನು ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿತು.

ಅದರ ಪ್ರಕಾರ ಅಮೆರಿಕಾವು ಪ್ರತಿ ವರ್ಷ ೩.೧ಮಿಲಿಯನ್ ಟನ್ ಗೋಧಿಯನ್ನು ಮೂರು ವರ್ಷಗಳ ಕಾಲ ಸರಬರಾಜು ಮಾಡಬೇಕಿತ್ತು. ಆ ಸಂದರ್ಭದಲ್ಲಿ ಭಾರತದ ಕೈಯಲ್ಲಿ ರವಾನೆಗೆ ಅಗತ್ಯವಾದ ವಿದೇಶಿ ಬಂಡವಾಳವೂ ಸಹ ಇರಲಿಲ್ಲ. ಆಗ ಅಮೆರಿಕಾವು ಭಾರತೀಯ ರುಪಾಯಿಯನ್ನೇ ಉದಾರವಾಗಿ ಒಪ್ಪಿಕೊಂಡಿತು.

೧೯೬೬ರ ಹೊತ್ತಿಗೆ ಪಿ.ಎಲ್.೪೮೦ ಗೋಧಿಯ ಆಮದು ವಾರ್ಷಿಕವಾಗಿ ೧೦.೩೬ ಮಿಲಿಯನ್ ಟನ್‌ಗಳಾಗಿತ್ತು.

೧೯೭೧ರ ಹೊತ್ತಿಗೆ ಭಾರತದ ೧/೫ರಷ್ಟು ರೂಪಾಯಿ ದೆಹಲಿಯಲ್ಲಿ ಅಮೆರಿಕಾದ ಖಾತೆಯಲ್ಲಿ ಜಮಾವಣೆಗೊಂಡಾಗ, ಅಮೆರಿಕಾಗೆ ದ್ವಂದ್ವವೊಂದು ಎದುರಾಯಿತು. ಅಮೆರಿಕಾಗೆ ಆ ಬೃಹತ್ ಹಣವನ್ನು ಏನು ಮಾಡುವುದೆಂದು ತೋಚಿರಲಿಲ್ಲ.

ಡಾನಿಯೇಲ್ ಪ್ಯಾಟ್ರಿಕ್ ಮೊನಿಹಾನ್ ಎಂಬ ಆಗಿನ ಅಮೆರಿಕಾದ ಭಾರತೀಯ ರಾಯಭಾರಿಯು ತನ್ನ ದೇಶಕ್ಕೆ ಆ ಸಾಲವನ್ನು ಮನ್ನಾ ಮಾಡುವಂತೆ ವಿನಂತಿಸಿಕೊಂಡ. ಏಕೆಂದರೆ ಆಗ ಭಾರತವು ಆ ದೊಡ್ಡ ಮೊತ್ತದ ಹಣವನ್ನು ವಿದೇಶಿ ಬಂಡವಾಳದಲ್ಲಿ ನೀಡಲು ಅಸಾಧ್ಯವಾಗಿತ್ತು. ಅಲ್ಲದೆ ಅಮೆರಿಕಾಗೂ ಭಾರತೀಯ ರೂಪಾಯಿಯಿಂದ ಯಾವುದೇ ಪ್ರಯೋಜನವಿರಲಿಲ್ಲ.

ಸರ್ಕಾರದ ಒಪ್ಪಿಗೆ ಪಡೆದ ರಾಯಭಾರಿ, ೧.೨ ಬಿಲಿಯನ್ ಡಾಲರ್ ಮೊತ್ತದ (ರೂ.೫೦ ಬಿಲಿಯನ್) ಚೆಕ್ಕನ್ನು ಭಾರತೀಯ ಸರ್ಕಾರಕ್ಕೆ ನೀಡುವ ಮೂಲಕ ಆ ದೊಡ್ಡ ಮೊತ್ತದ ಸಾಲವನ್ನು ಮನ್ನಾ ಮಾಡಿದ. ಈ ಚೆಕ್ ಆ ಸಂದರ್ಭದಲ್ಲಿ ಯಾವುದೇ ದೇಶಕ್ಕೆ ನೀಡಿದ ಅತೀ ದೊಡ್ಡ ಮೊತ್ತದ ನೆರವಾಗಿತ್ತು.

ಹೀಗಿರುವಲ್ಲಿ ಈ ಪಿ.ಎಲ್ ೪೮೦ ಗೋಧಿಯು ಭಾರತೀಯ ಆಹಾರ ಸಮಸ್ಯೆಯನ್ನು ಪರಿಹರಿಸುತ್ತದೆಯೆಂದು ಅಮೆರಿಕಾ ನಂಬಲಿಲ್ಲ. ಭಾರತವೂ ಅದನ್ನು ಗ್ರಹಿಸಿತ್ತು. ಭಾರತವು ಸ್ವಾವಲಂಭಿಯಾಗಬೇಕಾದರೆ ಕೃಷಿಯಲ್ಲಿ ಕ್ರಾಂತಿಯಾಗಲೇಬೇಕಿತ್ತು. ಆದರೆ ಅದಕ್ಕಾಗಿ ಸಹಾಯ ಮಾಡುವವರು ಯಾರು?

ಮತ್ತೊಮ್ಮೆ ಅಮೆರಿಕಾವೇ ಮುಂದೆ ಬಂದು ಭಾರತದ ಬದಲಾವಣೆಗೆ ನಿಂತಿತು. ರಾಕ್‌ಫೆಲ್ಲರ್ ಫೌಂಡೇಷನ್‌ನಿಂದ ಪ್ರಾಯೋಜಿತನಾಗಿ ಅಮೆರಿಕಾದ ಕೃಷಿ ತಜ್ಞ ನಾರ್ಮನ್ ಇಬರ್ಲಾಗ್ ಭಾರತಕ್ಕೆ ಬಂದು ಹಸಿರು ಕ್ರಾಂತಿಯ ಪಿತಾಮಹನೆನಿಸಿದ. ಈತ ಮೆಕ್ಸಿಕೋದಲ್ಲಿ ನಡೆಸಿದ ಪ್ರಯೋಗವನ್ನು ಭಾರತದಲ್ಲೂ ಅನುಸರಿಸಲು ಪ್ರವೃತ್ತನಾದ. ಈತ ಅತಿ ಹೆಚ್ಚು ಇಳುವರಿಯನ್ನು ನೀಡುವ ಶರಬತಿ ಸೋನಾರ ತಳಿಯನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾದ. ಹೀಗೆ ಆತ ಭಾರತದಲ್ಲಿ ಹಸಿರು ಕ್ರಾಂತಿಗೆ ಚಾಲನೆಯನ್ನು ನೀಡಿದ.

ಅಲ್ಲದೆ, ೫೦ ಮತ್ತು ೬೦ರ ದಶಕದಲ್ಲಿ ಸುಮಾರು ೩ ಸಾವಿರ ಅಮೆರಿಕಾದ ಕೃಷಿತಜ್ಞರು ಭಾರತದಲ್ಲಿ ಕಾರ್ಯ ನಿರ್ವಹಿಸಿದ್ದರು. ಅದೇ ಸಮಯದಲ್ಲಿ ಸುಮಾರು ೬ ಸಾವಿರ ಮಂದಿ ಭಾರತೀಯ ವಿಜ್ಞಾನಿಗಳು ಅಮೆರಿಕಾದವರಿಂದ ತರಬೇತಿ ಪಡೆದರು.

ಹೀಗೆ ಅಮೆರಿಕಾದ ಕೃಷಿ-ವಿಜ್ಞಾನಿಗಳು ಭಾರತದಲ್ಲಿನ ಪಂಜಾಬ್, ಹರಿಯಾಣ, ಉತ್ತರಪ್ರದೇಶ, ರಾಜಸ್ಥಾನ, ಮಧ್ಯ ಪ್ರದೇಶ್, ಒರಿಸ್ಸಾ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಕೃಷಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ನೆರವಾದರು. ಅಲ್ಲದೆ, ಭಾರತ ಬೆಂಬಲಿತ ಒಂದು ವೆಬ್ ಸೈಟ್ ಹೇಳುವ ಪ್ರಕಾರ, "ಅಮೆರಿಕಾದ ೩೦೦ಕ್ಕಿಂತಲೂ ಹೆಚ್ಚು

ಮಂದಿ ಪ್ರಾಧ್ಯಾಪಕರು ಸುಮಾರು ೭೦೦ ಪ್ರಬೋಧನಾ ವರ್ಷಗಳ ಸೇವೆಯನ್ನು ಭಾರತದವರಿಗೆ ನೀಡಿದ್ದರು.

ಪ್ರಸ್ತುತ ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಉ.ಪ್ರಗಳೆಲ್ಲವೂ ಹಸಿರು ಕ್ರಾಂತಿಯ ತಾಯ್ನಾಡಾಯಿತು. ಅಂದರೆ ಅತ್ಯಂತ ಫಲವತ್ತಾದ ಭೂಮಿಯು ನೀರು ಮತ್ತು ವಿದ್ಯುತ್ ಇಲ್ಲದೆಯೇ ಇತ್ತು ಎಂಬುನ್ನು ಗಮನಿಸಬೇಕಾಗುತ್ತದೆ.

ಇಂತಹ ಭೂಮಿಯನ್ನು ಹಸಿರುಗೊಳಿಸಬೇಕಾದರೆ, ಭಾಕ್ರ ಆಣೆಕಟ್ಟನ್ನು ಸಟ್ಲೇಜ್ ಮೇಲೆ ನಿರ್ಮಿಸಬೇಕಾಗಿತ್ತು. ಆದರೆ ನಿರ್ಮಿಸುವವರು ಯಾರು? ನೆಹರೂರವರ ವೈಯಕ್ತಿಕ ಆಹ್ವಾನದ ಮೇರೆಗೆ ಅಮೆರಿಕಾವು ಹಾರ್ವೆ ಸ್ಲಾಕುಮ್ ಆ ಭಾಕ್ರ ಆಣೆಕಟ್ಟನ್ನು ಕಟ್ಟಲು ಕಳುಹಿಸಲಾಯಿತು.

೬೦ರ ದಶಕದ ಆದಿಯಲ್ಲಿ ಮುಗಿಸಿದ ಈ ಭಾಕ್ರ ಆಣೆಕಟ್ಟೆಯು ಕುತುಬ್‌ಮೀನಾರ್‌ನ ಮೂರು ಪಟ್ಟು ದೊಡ್ಡದಾಗಿದ್ದು ೨೦ನೇ ಶತಮಾನದ ಬಹು ದೊಡ್ಡ ಇಂಜನಿಯರಿಂಗ್ ಅಚ್ಚರಿಯಾಗಿದೆ.

ಹೀಗೆ ಅಮೆರಿಕಾವು, ಕ್ಷಾಮಭೀರಿತ ಭಾರತವನ್ನು ಕೇವಲ ಅರ್ಧ ಶತಮಾನದಲ್ಲೇ ಆಹಾರ ರಫ್ತು ಮಾಡುವ

ನಾಡನ್ನಾಗಿ ಸಿತು. ಮಿಲಿಯಲಿಯನ್‌ಗಟ್ಟಲೆ ಸಾಯುತ್ತಿದ್ದ ಭಾರತೀಯರನ್ನು ಉಳಿಸಿ, ನಿರಂತರವಾಗಿ ಆಹಾರ ಆಮದು ಮಾಡಿಕೊಳ್ಳುತ್ತಿದ್ದ ಭಾರತದ ಗೌರವವನ್ನು ಉಳಿಸಿ, ಸ್ವಾವಲಂಭಿಯಾಗಿಸಿತು ಅಮೆ ರಿಕಾ. ಇಂದು ಸುಮಾರು ಒಂದುವರೆ ಮಿಲಿಯನ್ ಭಾರತೀ ಯರು ಅಮೆರಿಕಾದಲ್ಲಿ ನೆಲೆಸಿ ಖುಷಿಪಡುತ್ತಿದ್ದಾರೆ. ಹಾಗೆಯೇ ಅಮೆರಿಕಾದ ಹೊರಗುತ್ತಿಗೆಯಿಂದ ಮತ್ತೊಂದು ಮಿಲಿಯನ್ ಜನ ಉದ್ಯೋಗ ಪಡೆಯುತ್ತಿದ್ದಾರೆ.

ಹೀಗಿದ್ದರೂ, ಶೇ.೬೧ರಷ್ಟು ಭಾರತೀಯರು ಅಮೆರಿಕಾವನ್ನು ನಂಬಲಾರರು. ಅಂದರೆ ಎಷ್ಟು ಬೇಗ ಈ ಭಾರತೀಯರು ನಂಬಿಕೆಗೆ ಅನರ್ಹರಾಗಿಬಿಟ್ಟಿದ್ದಾರೆ!



ಚೀನಾದಿಂದ ಪಾಠ ಕಲಿಯಬೇಕಿದೆ

ಅಧಿಕಾರಕ್ಕಾಗಿ ಮಾವೋನು ಕೈಗೊಂಡ ಮಾರ್ಚ್ (ನಡಿಗೆ)ನಿಂದ ಚೀನಾದಲ್ಲಿ ಬಹು ದೊಡ್ಡ ಕ್ರಾಂತಿಯಾಯಿತು. ಅಮೆರಿಕಾದ ಪ್ರಕಾರ ನಿದ್ದೆಯಲ್ಲಿದ್ದ ಸಿಂಹವು ಡ್ರಾಗನ್ ಆಗಿ ಪರಿವರ್ತನೆಗೊಂಡು, ಬಂಡವಾಳಶಾಹಿ ಜಗತ್ತನ್ನು ನುಂಗಲು ಕಾದಿದೆ. ಅಮೆರಿಕಾ ತನಗೆ ಗೊತ್ತಿರುವಂತೆ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿತು. ವಿಶ್ವಸಂಸ್ಥೆಯ ಸ್ಥಾಪಕರಲ್ಲಿ ಒಂದಾಗಿದ್ದ ಚೀನಾವನ್ನು ಅಮೆರಿಕಾ ಪ್ರತ್ಯೇಕಿಸತೊಡಗಿತು. ಸಣ್ಣ ತೈವಾನ್‌ನನ್ನು ಆಳ್ವಿಕೆಗೆ ಒಳಪಡಿಸಿದ ಚಿಯಾಂಗ್ ಕೈ-ಶೀಕ್‌ನನ್ನು ಅಮೆರಿಕಾವು ಗುರುತಿಸಿದಾಕ್ಷಣವೇ ಚೀನಾದ ಪ್ರತ್ಯೇಕ ಆರಂಭವಾಯಿತು.

ಅಮೆರಿಕಾಗೆ ೧೯೭೧ರ ತನಕ ಕಮ್ಯುನಿಸ್ಟ್ ಚೀನಾ ರಾಷ್ಟ್ರವನ್ನು ಒಂದು ಸಾರ್ವಭೌಮ ರಾಷ್ಟ್ರವಾಗಿ ಗುರುತಿಸಿರಲಿಲ್ಲ. ಕೊರಿಯನ್ ಯುದ್ಧದಲ್ಲಿ ಅಮೆರಿಕಾ ಮತ್ತು ಚೀನಾದ ಸೈನಿಕರು ಪರಸ್ಪರ ಹೋರಾಟ ನಡೆಸಿದ್ದರು (೧೯೫೦-೧೯೫೩). ಚೀನಾದ ಮೇಲೆ ಅಮೆರಿಕಾವು ವ್ಯಾಪಾರದ ದಿಗ್ಬಂಧನ ವಿಧಿಸಿತ್ತು. ಸೋವಿಯತ್ ರಷ್ಯಾದಿಂದ ಒಡೆದುಕೊಂಡ ಮೇಲೆ ಚೀನಾವು ಇಡೀ ಜಗತ್ತಿನಿಂದಲೇ ಪ್ರತ್ಯೇಕಗೊಂಡಿತು.

ಅಂದರೆ ೧೯೪೯ರಿಂದ ೧೯೭೧ರ ತನಕ ಅಮೆರಿಕಾ ಮತ್ತು ಚೀನಾ ದೇಶಗಳು ಪರಸ್ಪರ ಯುದ್ಧದಲ್ಲಿ ತೊಡಗಿದಂತೆ ಕಾಣುತ್ತಿತ್ತು. ಸೆಪ್ಟೆಂಬರ್ ೧೫, ೧೯೬೪ರಲ್ಲಿ ಅಮೆರಿಕಾದ ಪ್ರೆಸಿಡೆಂಟ್ ಜಾನ್‌ಸನ್, ಸರ್ಕಾರದ ಕಾರ್ಯದರ್ಶಿ ರಸ್ಕ್, ರಕ್ಷಣಾ ಕಾರ್ಯದರ್ಶಿ ಮ್ಯಾಕ್‌ನಾಮರಾ, ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರನಾದ ಮ್ಯಾಕ್‌ಜಾರ್ಜ್ ಬುಂದಿ -ಇವರೆಲ್ಲಾ ಒಂದುಗೂಡಿ ಚೀನಾದ ಅಣುಸ್ಥಾವರಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸಲು ನಿರ್ಧಾರ ತೆಗೆದುಕೊಳ್ಳಲು ಬಯಸಿದ್ದರು. ಒಂದು ತಿಂಗಳ ನಂತರ ಅಂದರೆ ಅಕ್ಟೋಬರ್ ೧೬, ೧೯೬೪ರಂದು ಚೀನಾವು ತನ್ನ ಅಣುಬಾಂಬ್‌ನ್ನು ಯಶಸ್ವಿಯಾಗಿ ಸ್ಫೋಟಿಸಿತು.

ಮಾರ್ಚ್೧೫, ೧೯೬೫ರಲ್ಲಿ ವಿಯಟ್ನಾಮ್ ಯುದ್ಧ ಕೇವಲ ಅಮೆರಿಕಾ ಮತ್ತು ಚೀನಾ ದೇಶಗಳ ನಡುವೆ ನಡೆದಿರುವ ಶೀತಲ ಸಮರವೆಂದು ರಿಚರ್ಡ್ ನಿಕ್ಸನ್ ಘೋಷಿಸಿದ. ಮಾರ್ಚ್ ೨೫, ೧೯೬೫ರಂದು ಲೇಖನವೊಂದು ಬೀಜಿಂಗ್‌ನ ಪೀಪಲ್ಸ್ ಡೈಲಿ ಹೀಗೆಂದಿತ್ತು, "ವಿಯಟ್ನಾಮಿನ ಜನ ಎಲ್ಲೆಲ್ಲಿ ನಮ್ಮವರನ್ನು ಬಯಸುತ್ತದೋ ಅಲ್ಲೆಲ್ಲಾ ನಮ್ಮ ಸೈನಿಕರನ್ನು ಕಳುಹಿಸಿ, ಅಮೆರಿಕಾದ ಆಕ್ರಮಣವನ್ನು ಕೊನೆಗೊಳಿಸಲು ವಿಯಟ್ನಾಮಿನೊಂದಿಗೆ ಹೋರಾಡತಕ್ಕದ್ದು".

ಹೀಗೆ ಚರಿತ್ರೆಯು ಚೀನಾ-ಅಮೆರಿಕಾ ಸಂಬಂಧಗಳನ್ನು ನಿಯಂತ್ರಿಸುತ್ತಿದ್ದಲ್ಲಿ ಇಂದು ಅವೆರಡೂ ದೇಶಗಳು ಸಹ ಪರಸ್ಪರ ಸೆಣಸಾಡುತ್ತಿರಬೇಕಿತ್ತು. ಅಲ್ಲದೆ, ಅದರ ಮೇಲಿದ್ದ ವಾಣಿಜ್ಯ ದಿಗ್ಬಂಧನಗಳನ್ನು ಜೂನ್ ೧೦, ೧೯೭೧ರಂದು ವೈಟ್‌ಹೌಸ್ ಹಿಂತೆಗೆದು ಕೊಳ್ಳದಿದ್ದಲ್ಲಿ, ಚೀನಾವು ಜಗತ್ತಿನಲ್ಲಿ ಅತ್ಯಂತ ಹಿಂದುಳಿದ ಆರ್ಥಿಕ ದೇಶವಾಗಿ ಉಳಿಯುತ್ತಿತ್ತು. ಆದರೆ, ಅವೆರಡರ ರಾಷ್ಟ್ರೀಯ ಹಿತಾಸಕ್ತಿಗಳು ಅಂತಿಮವಾಗಿ ವಿಜಯಶಾಲಿಯಾದವು. ಈಗ ಅಮೆರಿಕಾವು ಚೀನಾದ ಅತೀ ದೊಡ್ಡ ಎರಡನೇ ರಫ್ತುಮಾಡುವ ರಾಷ್ಟ್ರವಾಗಿ ಉಳಿದಿದೆ. ಅಮೆರಿಕಾಗೆ ಚೀನಾ ದೇಶವು ಬಹು ದೊಡ್ಡ ವಾಣಿಜ್ಯ ಪಾಲುದಾರನಾಗಿದೆ.

ಇಂದು ಚೀನಾದ ವಿದೇಶ ವ್ಯಾಪಾರ ೧೧೫೦ ಬಿಲಿಯನ್ ಡಾಲರ್ ಇದ್ದರೆ ಭಾರತದ ವಿದೇಶ ವ್ಯಾಪಾರ ಕೇವಲ ೧೪೯ ಬಿಲಿಯನ್ ಡಾಲರ್ ಇದೆ. ಅಮೆರಿಕಾದಲ್ಲಿ ಚೀನಾದ ವ್ಯಾಪಾರ ೨೩೧ ಬಿಲಿಯನ್ ಡಾಲರ್ ಆಗಿದ್ದರೆ ಭಾರತದ ವಾಣಿಜ್ಯ ೨೨ ಬಿಲಿಯನ್ ಡಾಲರ್ ಆಗಿದೆಯಷ್ಟೆ. ಇದು ಸಾಧ್ಯವಾದದ್ದು ಹೇಗೆ?

ಜಾಗತೀಕರಣದ ಒಳ ಮರ್ಮವನ್ನು ಅರಿತ ಚೀನಾ, ಕೆಲವು ತಂತ್ರಗಳನ್ನು ರೂಪಿಸಿಕೊಂಡು ಜಾಗತೀಕರಣದ ಕೇಂದ್ರವಾದ ಅಮೆರಿಕಾದೊಡನೆ ರಾಜಿ ಮಾಡಿಕೊಂಡು, ಹತ್ತಿರಸಾಗಿ, "ಜಗತ್ತಿನ ಉತ್ಪಾದನಾ ಕೇಂದ್ರ"ವಾಗುವತ್ತ ಸಾಗಿದೆ. ಈ ಉತ್ಪಾದನಾ ವಲಯವು ಕಾರ್ಮಿಕ ಸ್ನೇಹಿಯಾಗಿರುವುದರಿಂದ ತನ್ನ ಅಗ್ಗದ ಶ್ರಮಶಕ್ತಿ ಮತ್ತು ಕಚ್ಚಾ ಪದಾರ್ಥಗಳೊಂ[...] ಚೀನಾ ರಫ್ತುಮಾಡುವ ದೇಶವಾಗಿ ಹೊರಹೊಮ್ಮುತ್ತಿದೆ. [...]ರುವಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಚೀನಾದ ವಾಣಿಜ್ಯ ರಾ[...] ಭಾರಿ ಯಾರಾಗಿದ್ದಾರೆ?

> **ಭಾರತದಲ್ಲಿ ಸುಧಾರಣೆಗಳು ಆತ್ಮಹತ್ಯಾ ಹಾದಿಯನ್ನು ಹಿಡಿದಿವೆ. ಈ ಸುಧಾರಣಾವಾದಿಗಳಿಗೆ ಸೇವಾ ವಲಯವು ಅನುಕೂಲಸ್ಥರ ಪರವಾಗುತ್ತಾ ಭಾರತೀಯ ಆರ್ಥಿಕತೆಯನ್ನು ಮುನ್ನಡೆಸಬೇಕಾಗಿದೆ. ಈ ಅಲಿಖಿತ ಆತ್ಮಹತ್ಯಾ ಘೋಷಣೆಯು ಈಗ ತೆರೆದ ಪುಸ್ತಕವಾಗಿದೆ. ಚೀನಾದೊಡನೆ ಹೋಲಿಸಿದಲ್ಲಿ ಭಾರತದ ೧೪೯ ಬಿಲಿಯನ್ ರಫ್ತು ಮತ್ತು ತಲಾದಾಯ ಕೇವಲ ೭೩೬ ಆಗಿರುವಾಗ, ಭಾರತ ಅಂಬೆಗಾಲಿಕ್ಕಿದಂತೆ ಆಗಿದೆ. ಚೀನಾದ ಮೊದಲ ೧೦೦ ಕಂಪನಿಗಳು ಸರ್ಕಾರದ ಕೈಯಲ್ಲಿದ್ದರೆ, ಭಾರತೀಯ ಸುಧಾರಣಾವಾದಿಗಳು ಸಾರ್ವಜನಿಕ ಕಂಪನಿಗಳನ್ನು ಮಾರಾಟ ಮಾಡಲು ಯೋಚಿಸುತ್ತಿದ್ದಾರೆ.**

ಜಗತ್ತಿನ ಮೂರು ಬೃಹತ್ ರಿಟೈಲರ್ ಕಂಪನಿಗ[...] ಅಮೆರಿಕಾದ ವಾಲ್‌ಮಾರ್ಟ್, ಫ್ರಾನ್ಸ್‌ನ ಕಾರೆಫರ್ ವ[...] ಇಂಗ್ಲೆಂಡ್‌ನ ಟೆಸ್ಕೋಗಳು ತಮ್ಮ ಕಾರ್ಯಾಚರಣೆಯನ್ನು [...] ದೇಶದಲ್ಲಿ ತೆರೆಯಲು ಚೀನಾ ದೇಶವು ಸ್ವಾಗತಿಸಿತು. [...] ಪ್ರಚಂಡ ಜಾಣತನವಾಗಿತ್ತು. ಈ ಜೂಜು ಚೀನಾಕ್ಕೆ ಲಾಭ[...] ಮಾರ್ಪಟ್ಟಿತು. ಹೀಗೆ ಜಗತ್ತಿನ ಅತಿ ದೊಡ್ಡ ರಿಟೈಲರ್‌ಗ[...] ಈ ಮೂರು ಕಂಪನಿಗಳು ಜಗತ್ತಿನಾದ್ಯಂತ ಚೀನಾದ ಬ್ರಾ[...] ರಾಯಭಾರಿಗಳಾಗಿ ಮಾರ್ಪಾಟಾದವು.

೨೦೦೪ರಲ್ಲಿ ಈ ವಾಲ್‌ಮಾರ್ಟ್ ಚೀನಾದೊ[...] ಒಂದು ಬಿಲಿಯನ್‌ನಷ್ಟು ವಹಿವಾಟನ್ನು ನಡೆಸಿತ್ತು. ಅ[...] ವಾಲ್‌ಮಾರ್ಟ್ ಚೀನಾದಲ್ಲಿನ ತನ್ನ ಸ್ಟೋರ್‌ಗಳಿಂದ ೧೮[...]ಯನ್ ಡಾಲರ್ ಮೌಲ್ಯದ ಪದಾರ್ಥಗಳ ಹೊರಗುತ್ತಿಗೆಯ[...] ಚೀನಾದ ಹೊರಗೆ ನೀಡಿತ್ತು. ಜುಲೈ ೨೫, ೨೦೦೫ [...] ಫಾರ್ಚುನ್ ಎನ್ನುವ ಮಾಸಿಕದ ಪ್ರಕಾರ, "ವಾಲ್-ಮಾ[...] ಇಂದು ದೇಶವಾದರೆ ಅದು ಚೀನಾದ ೬ನೇ ದೊಡ್ಡ [...] ಮಾಡುವ ಮಾರುಕಟ್ಟೆಯಾಗಿದೆ."

ವಾರ್ಷಿಕವಾಗಿ ಚೀನಾ ದೇಶವು ೬೦೦ ಬಿಲಿಯ[...] ಪದಾರ್ಥಗಳನ್ನು ರಫ್ತು ಮಾಡುತ್ತದೆ. ಇದು ಭಾರತದ [...] ತಲಾದಾಯಕ್ಕೆ ೧೩೭ ಬಿಲಿಯನ್‌ನಷ್ಟೆ ಕಮ್ಮಿಯಿದೆ. ಅ[...] ಚೀನಾ ದೇಶವು ತನ್ನ ರಫ್ತಿನಿಂದ ಗಳಿಸಿರುವ ಆದಾಯದ[...] ಮತ್ತೊಂದು ಭಾರತವನ್ನು ಸೃಷ್ಟಿಮಾಡಬಹುದಾಗಿದೆ. ಚೀ[...] ತಲಾದಾಯ ೧೮೩೩ ಬಿಲಿಯನ್ ಆಗಿದ್ದು, ಈಗ [...] ಜಾಗತಿಕ ಆರ್ಥಿಕ ಶಕ್ತಿಯಾಗಿ ಪರಿವರ್ತನೆಯಾಗಿದೆ.

ಭಾರತದಲ್ಲಿ ಸುಧಾರಣೆಗಳು ಆತ್ಮಹತ್ಯಾ ಹಾದಿಯ[...] ಹಿಡಿಯಿತು. ಈ ಸುಧಾರಣಾವಾದಿಗಳಿಗೆ ಸೇವಾ ವಲಯ[...] ಅನುಕೂಲಸ್ಥರ ಪರವಾಗುತ್ತಾ ಭಾರತೀಯ ಆರ್ಥಿಕತೆಯ[...] ಮುನ್ನಡೆಸಬೇಕಾಗಿದೆ. ಈ ಅಲಿಖಿತ ಆತ್ಮಹತ್ಯಾ ಘೋಷಣೆ[...] ಈಗ ತೆರೆದ ಪುಸ್ತಕವಾಗಿದೆ. ಚೀನಾದೊಡನೆ ಹೋಲಿಸಿ[...] ಭಾರತದ ೧೪೯ ಬಿಲಿಯನ್ ರಫ್ತು ಮತ್ತು ತಲಾದಾ[...] ಕೇವಲ ೭೩೬ ಆಗಿರುವಾಗ, ಭಾರತ ಅಂಬೆಗಾಲಿಕ್ಕಿದ[...] ಆಗಿದೆ. ಚೀನಾದ ಮೊದಲ ೧೦೦ ಕಂಪನಿಗಳು ಸರ್ಕಾ[...] ಕೈಯಲ್ಲಿದ್ದರೆ, ಭಾರತೀಯ ಸುಧಾರಣಾವಾದಿಗಳು ಸಾರ್ವಜ[...] ಕಂಪನಿಗಳನ್ನು ಮಾರಾಟ ಮಾಡಲು ಯೋಚಿಸುತ್ತಿದ[...] ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಚೀನಾ ದೇ[...] ಮತ್ತಷ್ಟು ಸಂಪತ್ತನ್ನು ಸೃಷ್ಟಿಸುವತ್ತ ನಿರ್ಧಾರ ಮಾಡಿ[...] ಭಾರತ ಸಂಪತ್ತನ್ನು ಖಾಸಗೀಯವರಿಗೆ ಹಸ್ತಾಂತರ ಮಾ[...] ನಿರ್ಧರಿಸಿದೆ. ಭಾರತೀಯ ಬಹುಸಂಖ್ಯಾತರು, ಜಾಗತಿಕ [...]ದಲ್ಲಿ ಮೂರರಷ್ಟಿದ್ದು, ಅಮೆರಿಕಾದ ವಿರುದ್ಧ ಜಿಹಾದಿಗ[...] ಮಾರ್ಪಡುವುದರಲ್ಲಿ ಸಂದೇಹವೇ ಇಲ್ಲ. ಮುಗ್ಧತೆಯಿ[...] ಕೂಡಿರುವ ಭಾರತೀಯ ಆರ್ಥಿಕತೆ ಮತ್ತು ವಾಣಿಜ್ಯ ಮುಸು[...] ಧರಿಸಿರುವ ಭಾರತೀಯ ಸುಧಾರಣಾವಾದಿಗಳು ಭಾರತ[...] ಮೆಕ್ಸಿಕೋವನ್ನಾಗಿ ಬದಲಾಯಿಸುತ್ತಿದ್ದಾರೆ. ಹೀಗಿರು[...] ಚೀನಾದ ಆರ್ಥಿಕತೆಗೆ ಭಾರತವು ಸೇವಕನಂತಾಗುತ್ತದೆ[...] ಹಾಗಾದರೆ ಚೀನಾ ದೇಶದಿಂದ ಇಂದೆರಡು ಪಾಠಗಳ[...] ಕಲಿಯಬಾರದು?

ಕಾವ್ಯ

ಮಣ್ಣ ತಾಯಿಯ ನೆನಕೆ; ಅವಳ ಒಡಲಿಂದ ಹುಟ್ಟಿದಾ ಆದಾಮಾ

○ಅಪೂರ್ವ ಡಿ'ಸಿಲ್ವ



೧

ಮಣ್ಣ ತಾಯಿ ಧ್ಯಾನಿಸುತ್ತಾ ಸೃಷ್ಟಿಕರ್ತನು
ತನ್ನನ್ನು ಧರೆಗೆ ಚೆಲ್ಲಿದುದಾ ನೆನೆದಳು
ತನ್ನ ಬಾಲ್ಯವ ಕಣ್ತುಂಬಿದುದೇನು
ಅದುವೆ ಸೃಷ್ಟಿಕ್ರಿಯೆ
ಕಗ್ಗತ್ತಲು ದೃಷ್ಟಿ ಹಾಯಿಸಿದಷ್ಟು
ಬೇಡಿದಳಾಕೆ, ನಿನ್ನ ಪ್ರಭೆ ನನ್ನನ್ನು ಬೆಳಗಿಸಲಿ
ಜಲರಾಶಿಯ ಮೇಲೆ ಜೀವದ ಉಸಿರು ಚಲಿಸುತ್ತಲಿತ್ತು
ಅದು ನುಡಿದ ನುಡಿಯು "ಬೆಳಕಾಗಲಿ" ಎಂದು
ದಿಗ್ಗನೆ ಉರಿದ ಜ್ಯೋತಿ ಆರಿಸಿತು ಕತ್ತಲನು, ನಮ್ಮೊಳಗಿನ ಕತ್ತಲನು
ಮಣ್ಣ ತಾಯಿ ಮೈಯ ತುಂಬಾ ಚಿತ್ತಾರದ ಸೊಬಗು
ಹೂವು, ಹಣ್ಣು, ಗಿಡಮರಬಗಳ್ಳಿಗಳು, ಮಕ್ಕಳಾಟವಾಡಲು ಮುಡಿಗೇರಿ ಬಂದ ನಕ್ಷತ್ರಗಳು
ಈ ಸೃಷ್ಟಿಕರ್ತನ ಸೊಬಗೇ ಸೊಬಗು
ನೋಡುತ್ತಾ, ತಣಿಯುತ್ತಾ, ಕುಣಿಯುತ್ತಾ, ಹಾಡುತ್ತಾ ಹರಯಕ್ಕೆ ಬಂದಳೀಕೆ.

೨

ಈ ತುಂಬು ಮೈಯ ಚೆಲುವಿ ಪ್ರಾರ್ಥಿಸುವಳು, ನೆನೆಯುವಳು
ನೆನೆದಷ್ಟು ಕಣ್ತುಂಬಿ ಬರುತ್ತಲಿದ್ದ ಮನದಿನಿಯ
ಆ ಚೆಲುವ ಸೃಷ್ಟಿಕರ್ತ ಆ ಸರ್ವೇಶ್ವರನೇ ಎನ ಗಂಡ
ಬರಿದ ಒಡಲಿಗೆ ಜೀವ ಕಾಣಿಸು
ನಿನ್ನ ರೂಪದವನ ಹಡೆದೇನು
ಈ ಇಳೆ, ಪಕ್ಷಿಜಲಚರಗಳು, ನೀರ ಸಾಗರಗಳಲಿ
ನನ್ನೀ ಮನಗನು ದೊರೆತನ ಮಾಡಲಿ
ನಿನ್ನ ಹಗಲಿರುಳು ನೆನೆಯಾಲಿ
ಈ ಮಣ್ಣ ತಾಯಿಯನ್ನು ಆತ ಮರೆಯದಿರಲಿ

೩

ಸೃಷ್ಟಿಕರ್ತನ ಉಸಿರು ಮಣ್ಣು ಕಣಕಣದಲ್ಲೂ ಹರಿದಾಡಿತು
ನಿರ್ಜೀವದ ಒಡಲೊಳಗೆ ಭ್ರೂಣ ಜೀವ ತಳೆಯುತ್ತಿತ್ತು
"ಸೃಷ್ಟಿಸಿದರು ನರರನ್ನು ತಮ್ಮ ಹೋಲಿಕೆಯಲ್ಲಿ
ಸೃಷ್ಟಿಸಿದರವರನ್ನು ದೇವಾನುರೂಪದಲ್ಲಿ"
ಸೃಷ್ಟಿಸಿದರು ಮಣ್ಣಗರ್ಭದೊಳಗೆ ತನ್ನೋಲಿಕೆಯ ಮನುಷ್ಯನನ್ನು
ಊದಿದರು ಜೀವಶ್ವಾಸವನು ಮನುಷ್ಯನು ಜೀವಾತ್ಮನಾದನು, ಆಗ
ಕತ್ತಲು ಸರಿಯುತ್ತಲಿತ್ತು ಬೆಳಕು ಹುಟ್ಟುತ್ತಲಿತ್ತು.

೪

ಮಣ್ಣಿನಿಂದ ಆದ ಜೀವಾತ್ಮನೇ ಆದಾಮಾ
ಈ ಜಗದ ಮೊದಲ ತಂದೆಯೀತ
ಆದಾಮಾ ಹುಟ್ಟಿದ ಆಗಳಿಗೆಯೂ ಮಣ್ಣತಾಯಿಯೂ, ಸೃಷ್ಟಿಕರ್ತನೂ
ನಲಿದಾಡಿದರು
ಪದಕಟ್ಟಿ ಹಾಡಿದರು, ತನ್ನೀ ಮಗನಿಗೆ ಕೊರತೆಯಾಗದಿರಲು
ಆತ ಬೇಕೆನ್ನುವ ಸಮಸ್ತವನು ಈ ಜಗದ ಮೇಲೆ ಸೃಷ್ಟಿಸಿದರು
ಕಂದಾ ಈ ತಾಯ ನುಡಿಗಳ ಕೇಳು
ಆ ಚಂದಿರನ ನೋಡು ಕತ್ತಲಲೂ ಅದು ನಿನ್ನೊಳಗಿನ ಬೆಳಕಾಗಿದೆ;
ಆರಿಸದಿರು.
ಒಳಿತು ಕೆಡಕುಗಳ ಅರಿಯಲು ಹೋಗದಿರು
ನೀನು ಕಾಣುವುದೆಲ್ಲವೂ, ನುಡಿಯುವುದೆಲ್ಲವೂ, ಅನುಭಾವಾದಲ್ಲಿ
ಪಡೆವುದೆಲ್ಲವೂ ಸತ್ಯ
ಬೆಳಗುವ ಚಂದಿರ ನಿನ್ನೊಳಗಿನ ಸತ್ಯ
ಕತ್ತಲು ಆರಿಸಲು ಕಾಯುತಲಿದೆ
ಅದು ಒಳಿತು ಕೆಡಕುಗಳ ತಿಳಿಸಲು ಕಾಯುತಲಿದೆ
ಮರುಳಾಗದಿರು ಆಸೆ ಆಮಿಷಗಳಿಗೆ
ನಿನ್ನೀ ಹುಟ್ಟು ಎಲ್ಲಾ ತಾಯಂದಿರ ಒಡಲ
ಜ್ಯೋತಿಯಾಗಲಿ ಜಗದ ಜ್ಯೋತಿಯಾಗಲಿ

ವೇದಾಂತ ಬರೀ ಕನ್ನಡಿಯ ಗಂ

ಬುದ್ಧಾಯಣ

೮

ದೇವರು ಒಳ್ಳೆಯವನು ಎನ್ನುತ್ತೀರಿ. ಆತನಿಗೆ ನೈತಿಕ ಗುಣವನ್ನು ಆರೋಪಿಸುತ್ತೀರಿ. ಇದರ ಅಗತ್ಯವೇನು? ಅರ್ಥವೇನು? ದೇವರು ಒಳ್ಳೆಯವನೇ ಆಗಿದ್ದರೆ, ಜನಗಳೇಕೆ ಕಳ್ಳರಾದರು? ಸುಳ್ಳರಾದರು? ಕೊಲೆಗಡುಕರಾದರು? ವ್ಯಭಿಚಾರಿಗಳಾದರು? ಹೀಗಾಗಲು ಮೂಲ ದೇವರೆ ಇರಬೇಕು, ಈ ಎಲ್ಲ ಕೆಡುಕುಗಳ ಮೂಲ ದೋಷ ದೇವರ ಅಸ್ಥಿತ್ವದಲ್ಲಿಯೇ ಇರಬೇಕು ಅಲ್ಲವೆ ಹಾಗಾದರೆ ಅವನು ದೇವರು ಮತ್ತು ಒಳ್ಳೆಯ ಗುಣವಂತನಾಗಲು ಹೇಗೆ ಸಾಧ್ಯ?

○ಸಿ.ಎಚ್.ರಾಜಶೇಖರ್

ವಸೆಥ ಮತ್ತು ಭಾರದ್ವಾಜರು ವೈದಿಕ ಋಷಿಮುನಿಗಳು. ಪ್ರಖಂಡ ಪಂಡಿತರು. ಮೂರು ವೇದಗಳಲ್ಲಿಯೂ ಪರಿಣಿತರು, ಅಂತೆಯೇ ಮಹಾನ್ ವಾಗ್ಮಿಗಳು. ಬುದ್ಧನು ವೈದಿಕ ಧರ್ಮದ ವಿರೋಧಿ ಎಂದು ಆತನಿಂದ ತಮ್ಮ ಧರ್ಮಕ್ಕೆ ಸಂಚುಕಾರ ಬಂದಿದೆ ಎಂದು ಎಲ್ಲರಂತೆ ಪ್ರಾರಂಭದಲ್ಲಿ ನಂಬಿದ್ದವರು. ಆದರೆ ಒಮ್ಮೆ ಬುದ್ಧನನ್ನು ಸಂಧಿಸಿ ತಮ್ಮ ವಾದವನ್ನೂ, ಸಂಶಯವನ್ನು ಮಂಡಿಸಿ ಅವನಿಂದ ಉತ್ತರ ಪಡೆದ ಬಳಿಕ ಅವರಲ್ಲಿದ್ದ ಪೂರ್ವಗ್ರಹ ನಿವಾರಣೆಯಾಯಿತು. ಬುದ್ಧನ ವಾದದಲ್ಲಿ ಸತ್ಯ ಇರುವುದನ್ನು ಮನಗಂಡರು ಅಸಮಾಧಾನಕ್ಕೆ ಬದಲಾಗಿ ಸ್ನೇಹಭಾವ ಮೂಡಿತು. ಬುದ್ಧನ ಬೆರಗುಗೊಳಿಸುವ ವಿಚಾರ ಮಂಥನದಿಂದ ಆ ಇಬ್ಬರೂ ಆಕರ್ಷಿತರಾದರು.

ತಮ್ಮಲ್ಲಿ ಇನ್ನೂ ಉಳಿದಿದ್ದ ಹಲವು ಹತ್ತು ಸಂಶಯಗಳಿಗೆ ಸರಿ ಉತ್ತರ ಪಡೆಯುವ ಸಲುವಾಗಿ ಆ ಇಬ್ಬರೂ ಮತ್ತೊಮ್ಮೆ ಬುದ್ಧನನ್ನು ಸಂಧಿಸಿ ಗೌರವ ಸೂಚಿಸಿದರು. ಅವನ ಎದುರು ಕುಳಿತ ವಸೆಥ ಮತ್ತು ಭಾರದ್ವಾಜ ಬುದ್ಧನೊಂದಿಗೆ ಉಭಯ ಕುಶಲೋಪರಿಯನ್ನು ವಿಚಾರಿಸಿದರು. ನಂತರ ತಾವುಗಳು ಬಂದ ಉದ್ದೇಶ ಮತ್ತು ತಮ್ಮಲ್ಲಿ ಇನ್ನೂ ಉಳಿದಿದ್ದ ಸಂಶಯಗಳನ್ನು ತಿಳಿಸುತ್ತಾ ಭಾರದ್ವಾಜ ಬುದ್ಧನನ್ನು ಹೀಗೆ ಪ್ರಶ್ನಿಸಿದಃ

"ಗೌತಮರೇ, ಈಗ ಪ್ರಚಲಿತವಿರುವ ವೈದಿಕರ ವೇದಾಂತ ಎಂಬ ಸಿದ್ಧಾಂತದ ಬಗ್ಗೆ ತಮ್ಮ ಅಭಿಪ್ರಾಯವೇನು?"

"ಪ್ರಿಯಾ ಭಾರದ್ವಾಜರೇ, ಈ ವೇದಾಂತ ಸಿದ್ಧಾಂತವು ಏನನ್ನು ಪ್ರತಿಪಾದಿಸುತ್ತದೆ?"

"ಗೌತಮರೆ, ಅದು 'ಬ್ರಹ್ಮ ಸತ್ಯವನ್ನು' ಪ್ರತಿಪಾದಿಸುತ್ತದೆ"

"ಪ್ರಿಯಾ ಭಾರದ್ವಾಜರೇ, 'ಬ್ರಹ್ಮ ಸತ್ಯ' ಎಂದರೆ ಏನು?"

"ಗೌತಮರೇ, ವಿಶ್ವ ಸೃಷ್ಟಿಯ ಹಿನ್ನೆಲೆಯಲ್ಲಿ ಸರ್ವವ್ಯಾಪಿಯಾದ ಒಂದು ಸಾಮಾನ್ಯ ಜೀವನ ತತ್ವ, ಅದನ್ನೆ ಬ್ರಹ್ಮ ಅಥವಾ ಬ್ರಹ್ಮನ್ ಎಂದು ಕರೆಯುತ್ತಾರೆ. ಈ ಸೂತ್ರದ ಪ್ರಕಾರ ಬ್ರಹ್ಮನೆ ಸತ್ಯ. ಆತನೇ ಜೀವಾತ್ಮ, ಮನುಷ್ಯನ ಮುಕ್ತಿಯ ಮಾರ್ಗ ಅಡಗಿರುವುದೇ ಆತ್ಮವನ್ನು ಬ್ರಹ್ಮನಲ್ಲಿ ಒಂದಾಗಿಸುವುದರಲ್ಲಿ. ಇದನ್ನೇ ವೇದಾಂತ ಸೂತ್ರ ಎನ್ನುವುದು"

"ಪ್ರಿಯಾ ಭಾರದ್ವಾಜರೇ, ಇದು ಏನನ್ನು ಸೃಷ್ಟಿಸುತ್ತದೆ? ಇದು ಏನನ್ನು ಸಾಕ್ಷತ್ಕರಿಸುತ್ತದೆ? ಸತ್ಯವೆಂದು ಅಂಗೀಕರಿಸಲು ಇರುವ ಸಾಕ್ಷ್ಯಾಧಾರಗಳೇನು? ಸಾಷ್ಯಕ್ಕೆ ಎರಡು ವಿಧಾನಗಳಿಗೆ ಅವುಗಳೆಂದರೆಃ ಗ್ರಹಿಕೆ ಮತ್ತು ತೀರ್ಮಾನ? ಈ ಕಕ್ಷೆಗೆ ಆತ್ಮವಾಗಲಿ ಅಥವಾ ಬ್ರಹ್ಮನಾಗಲಿ ಒಳಗೊಳ್ಳುವನೆ? ಅಥವಾ ಯಾರಾದರೂ ಬ್ರಹ್ಮನನ್ನು ಗ್ರಹಿಸಿದ್ದೀರಾ? ಬ್ರಹ್ಮನ್ನು ನೋಡಿದ್ದೀರಾ? ಬ್ರಹ್ಮನೊಂದಿಗೆ ಮಾತನಾಡಿದ್ದೀರಾ? ಇಲ್ಲವೆ ಬ್ರಹ್ಮನನ್ನು ಅಘ್ರಾಣಿಸಿದ್ದಿರಾ?"

"ಗೌತಮರೇ, ಇದಕ್ಕೆ "ಇಲ್ಲ" ಎನ್ನುವುದೇ ಸರಿ ಉ

"ಪ್ರಿಯಾ ಭಾರದ್ವಾಜರೇ, ಬ್ರಹ್ಮನನ್ನು ಯಾವ ತೀರ್ಮಾನಿಸಲಾಗಿದೆ?"

"ಗೌತಮರೇ, ಬ್ರಹ್ಮನನ್ನು ಅಗೋಚರವೆಂದು ತೀರ್ಮಾನಿ

"ಪ್ರಿಯಾ ಭಾರದ್ವಾಜರೇ, ಬ್ರಹ್ಮನ ಇರುವಿಕೆಯನ್ನು ಮಾಡಲು ಇರುವ ಈ ವಿಧಾನ ಕೂಡ ಅಸಮರ್ಪಕವಲ್ಲ ಚರ್ಚೆಗಾಗಿ ಬ್ರಹ್ಮನು ಅಗೋಚರವೆಂದೇ ಇಟ್ಟು ಕೊಳ್ಳೋ ಈ ಅಗೋಚರ ವಸ್ತು ಬೇರೊಂದು ರೂಪದಲ್ಲಿ ಕಾಣಿಸಿಕೊಳ್ಳಬೇಕಲ್ಲವೇ? ಹೀಗೆ ಕಾಣಿಸಿಕೊಳ್ಳದಿದ್ದರೆ ಅದರ ಇರು ನೈಜತೆ ಇರಲು ಹೇಗೆ ಸಾಧ್ಯ? ಈ ಅಗೋಚರ ಬ್ರಹ್ಮ ಏನನ್ನು ಸೃ ಹೋಗಲಿ ಯಾವುದಾದರೂ ಗೋಚರ ಪರಿಣಾಮವ ಸೃಷ್ಟಿಸಿದ್ದಾನೆಯೇ? ಹಾಗಿರುವಾಗ ಬ್ರಹ್ಮ ಒಂದು ಕಲ್ಪನೆ ಹೀಗಿರುವಾಗ ಬ್ರಹ್ಮನು ಎಂಥ ಪ್ರತಿಫಲವನ್ನು ನೀಡಬಲ್ಲ?"

"ಗೌತಮರೇ, ನಿಮ್ಮ ವಾದದಲ್ಲಿ ಸತ್ಯವಿದೆ"

"ಪ್ರಿಯ ಭಾರದ್ವಾಜಃ ಮೂರು ವೇದಗಳಲ್ಲಿ ಪಾರಂಗತ ಒಬ್ಬನಾದರೂ ಬ್ರಹ್ಮನನ್ನು ನೋಡಿದ್ದಾರೆಯೆ? ಹೋಗಲಿ ಬ್ರ ಉಪದೇಶ ನೀಡುವ ಯಾರಾದರು ನಿಮ್ಮ ಗುರುಗಳು ನೋಡಿದ ಅಥವಾ ಬ್ರಹ್ಮನನ್ನು ಮುಖಾಮುಖಿಯಾಗಿ ನೋಡಿರುವ ಒಬ್ ಏಳನೇ ತಲೆಮಾರಿನವರೆಗಿನ ಬ್ರಹ್ಮಣರು ಇದ್ದಾರೆಯೇ? ಪ್ರಾಚೀನ ಋಷಿಮುನಿಗಳಾದರೂ ನಾವು ಬ್ರಹ್ಮನನ್ನು ನೋ ಬ್ರಹ್ಮ ಇಂತಲ್ಲಿ ಇದ್ದಾನೆ, ಹೀಗೆ ಇದ್ದಾನೆ, ಅವನ ಗಮ್ಯಸ್ಥಾನ ಎಂಬ ಸತ್ಯ ಸಂಗತಿಯನ್ನು ಹೇಳಿದ್ದಾರೆಯೇ?"

"ಗೌತಮರೇ, ಈ ಬಗ್ಗೆ ಯಾವುದೇ ಸತ್ಯಸಂಗತಿ ಇ

"ಪ್ರಿಯಾ ಭಾರದ್ವಾಜರೇ, ಸತ್ಯ ಹೀಗಿರುವಾಗ ಹೇಳುವಿರಿ? ಆತ್ಮ ಮತ್ತು ಬ್ರಹ್ಮನಾಗಲಿ, ಬ್ರಹ್ಮನೊಂ ಒಂದಾಗುವುದಾಗಲಿ, ಮುಕ್ತಿಯಾಗಲಿ ಅಸತ್ಯದಿಂದ ಕೂಡ ಅಲ್ಲವೆ? ಈ ಅಸತ್ಯಗಳನ್ನೇ ವೇದಾಂತವೆಂದು ಸಾರುವುದನ್ನು ಗಂಟಲ್ಲದೆ ಮತ್ತೇನು? ಆದ್ದರಿಂದ ಬ್ರಹ್ಮ ಸತ್ಯವಲ್ಲ ಸಾಬೀತಾಗುವುದಿಲ್ಲವೆ? ಈ ರೀತಿಯ ಬ್ರಹ್ಮನ ಮೇಲೆ ಆಧಾ ಧರ್ಮ, ನಿಜಧರ್ಮವಾಗಲೂ ಸಾಧ್ಯವೆ? ಇದರಿಂದ ಮನುಷ್ಯನ ಮತ್ತು ವಿಚಾರಶಕ್ತಿಗೆ ಕುಂದಲ್ಲವೆ?" ಎಂದ ಬುದ್ಧ. ಆಗ ಭಾರ

"ಹೌದು ಗೌತಮರೇ, ತಮ್ಮ ವಿಚಾರಸರಣಿಯಲ್ಲಿ ಸ ತಮ್ಮ ಗ್ರಹಿಕೆಯಲ್ಲಿ ವಾಸ್ತವವಿದೆ...!! ತಮ್ಮ ತೀರ್ಮಾನದಲ್ಲಿ ಇದೆ....!!!" ಎಂದು ವಂದಿಸಿದ.



ಧರ್ಮ-ಗ್ರಂಥಗಳಲ್ಲ; ನಿನ್ನಂತರಂಗದ ವಿವೇಚನೆಯೇ ಅಂತಿಮ

ಮ್ಮೆ ಬುದ್ಧನು ತನ್ನ ಅನುಯಾಯಿಗಳ ದೊಡ್ಡ ಂದಿಗೆ ಕೋಸಲದ ಮೂಲಕ ಹಾದು ಹೋಗು ಧ್ಯದಲ್ಲಿ ಕೇಶಪುತ್ತ ಪಟ್ಟಣವೆಂಬ ನಗರ ಸಿಕ್ಕಿತು. ತದೊಂದಿಗೆ ಅಲ್ಲಿ ಕೆಲಕಾಲ ತಂಗಲು ನಿರ್ಧರಿ ನಗರದಲ್ಲಿ ಕಾಲಮರೆಂಬ ಜಿಜ್ಞಾಸುವು ವಾಸಿಸು ದ್ಧ ತಮ್ಮ ಪಟ್ಟಣದಲ್ಲಿ ತಂಗಿದ್ದಾನೆ ಎಂಬ ತಿಳಿದು, ಬುದ್ಧನನ್ನು ಭೇಟಿಯಾಗಲು ನಿರ್ಧರಿ ದ್ಧನನ್ನು ಸಂಧಿಸಿ ಆತನಿಗೆ ಗೌರವ ಸೂಚಿಸಿ ತನ್ನ ಮತ್ತು ಉದೇಶವನ್ನು ತಿಳಿಸಿದ. ಬುದ್ಧನಿಗೆ ಸಮೀಪ ಕುಳಿತ ಕಾಲಮರೇ ಹೀಗೆ :

ಪ್ರಭು ಗೌತಮರೇ, ಕೇಶಪುತ್ತಕ್ಕೆ ಎಲ್ಲ ಧರ್ಮದ ು, ವಿರಕ್ತರು, ತೀರ್ಥಂಕರರು ಮತ್ತು ಭಿಕ್ಷುಗಳು ನಗಳಿಗೆ ತಮ್ಮ ತಮ್ಮ ಧರ್ಮ, ನಂಬಿಕೆ, ತಿಳಿಸು ಾಗೆಯೇ ಇತರ ಧರ್ಮವನ್ನು ಹಂಗಿಸುತ್ತಾರೆ, ಸುತ್ತಾರೆ, ಅಲ್ಪವೆನ್ನುತ್ತಾರೆ, ಶ್ರೇಷ್ಠವಲ್ಲ ಎನ್ನುತ್ತಾರೆ. ಮಯದಲ್ಲಿ ತಮ್ಮ ನಂಬಿಕೆಯನ್ನು ವೈಭವಿಕರಿಸು ದಿಕ ಧರ್ಮ ಪ್ರಚಾರಕರು ಬಂದಾಗ; ವೇದಗಳು ಷ್ಠೇ ಅಲ್ಲ, ಪ್ರಾಮಣ್ಯ ಮತ್ತು ಅಂತಿಮವೆನ್ನುತ್ತಾರೆ. ಕ್ಷುಗಳು ಬಂದಾಗ; ವೇದಗಳು ನೀರಿಲ್ಲದ ಮರು ದಾರಿ ಇಲ್ಲದ ಕಗ್ಗಾಡು! ಕೇವಲ ನಂಬಿಕೆಯ ಂತಿವೆ ಹಾಗಾಗಿ ಅವು ವಿನಾಶಕಾರಿ! ಅಷ್ಟೇ ಅಲ್ಲ ಧರ್ಮಗ್ರಂಥವು ಪರಿಪೂರ್ಣವಲ್ಲ ಎನ್ನುತ್ತಾರೆ! ಪ್ರಭು, ನಾವು ಅನಿಶ್ಚಯದಲ್ಲಿ ಮತ್ತು ದಲ್ಲಿ ಮುಳುಗಿದ್ದೇವೆ. ಈ ಪೂಜ್ಯರಲ್ಲಿ ಯಾರು ಸುತ್ತಾರೆ? ಯಾರು ಸುಳ್ಳು ಹೇಳುತ್ತಾರೆ? ತಾವೇ ಬೇಕು!"

ಕಾಲಮರೇ, ನಿಮ್ಮ ಅನುಮಾನ ಮತ್ತು ದ ಹಿಂದೆ ಒಳ್ಳೆಯ ಕಾರಣವಿದೆ. ಸರಿಯಾದ ದಲ್ಲಿಯೇ ನಿಮಗೆ ಅನಿಶ್ಚಯತೆ ಉಂಟಾಗಿದೆ. "ಅವರು" ಅಥವಾ "ಇವರು" ಹೇಳಿರುವುದನ್ನು, ುದನ್ನು ನಂಬಬೇಡ. ಕೇವಲ ವಿಷಯದ ರವನ್ನೆ ನಂಬಬೇಡಿ. ಕೇವಲ ಧರ್ಮಗ್ರಂಥದಲ್ಲಿ ಎಂದ ಮಾತ್ರಕ್ಕೆ ನಂಬಬೇಡಿ, ಕೇವಲ ವಿಚಾರದ ಂತೆ ನಡೆಯಬೇಡ. ತರ್ಕಶಾಸ್ತ್ರದ ಸೂಕ್ಷ್ಮ ನಡೆಯಬೇಡಿ, ಕೇವಲ ತೋರಿಕೆಗಾಗಿ, ಅನು ಗಿ, ಯಾರದೋ ಸಾಚಾತನಕ್ಕಾಗಿ, ಗುರು, ಪೂಜ್ಯರು ಎಂಬ ಹಂಗಿಗಾಗಿ, ಭಯಕ್ಕಾಗಿ ಪೂಜ್ಯತೆಗಾಗಿ ನಂಬಬೇಡಿ!"

ಪ್ರಭು ಗೌತಮರೇ, ಹಾಗಾದರೆ ನಾವೇನು ಮಾಡ ಏನನ್ನು ನಂಬಬೇಕು? ಹೇಗೆ ನಂಬಬೇಕು? ವಿಧದಲ್ಲಿ ಪರೀಕ್ಷಿಸಬೇಕು?"

ಓ ಕಾಲಮರೇ, ಎಲ್ಲಕ್ಕೂ ಮೊದಲು ಪ್ರಶ್ನಿಸುವ, ವ ಮನೋಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಕೇಳಿದ, ನೋಡಿದ ವಿಷಯಗಳೂ ಅಹಿತಕಾರಿಯೆ? ನನ್ನನ್ನು ಒಳಗೊಂಡು ಇತರರಿಗೂ ಹಿತಕಾರಿಯೇ? ನಿಂದಾರ್ಹವೇ? ಸ್ವೀಕಾರ್ಹವೇ? ವಿವೇಕಿಗಳು ಈ ಬಗ್ಗೆ ಆಕ್ಷೇಪಿಸಿದ್ದಾರೆಯೇ? ಮಾನ್ಯ ಮಾಡಿದ್ದಾರೆಯೇ? ಈ ವಿಷಯಗಳನ್ನು ಒಪ್ಪಿಕೊಂಡರೆ, ಆಚರಣೆಗೆ ತಂದರೆ, ಕೆಟ್ಟ ಬದುಕಿಗೆ ಕಾರಣವಾಗುತ್ತದೆಯೇ? ದುಃಖಕ್ಕೆ ಕಾರಣವಾಗುತ್ತದೆಯೇ? ಅಥವಾ ಇದರಿಂದ ಉತ್ತಮ ಬದುಕು ರೂಪಿತವಾಗುತ್ತದೆಯೇ? ಎಂಬ ಬಗ್ಗೆ ಯೋಚಿಸಬೇಕು. ನೀವು ಅದಕ್ಕೂ ಮುಂದೆ ಹೋಗಬೇಕು. ಅವರು ಬೋದಿಸಿದ ಸಿದ್ಧಾಂತ ದುರಾಸೆ, ದ್ವೇಷ, ಭ್ರಮೆ ಮತ್ತು ಹಿಂಸೆಯನ್ನು ವೃದ್ಧಿಸುತ್ತದೆಯೇ? ಎಂದು ನಿಮ್ಮನ್ನೇ ನೀವು ನಾನಾ ವಿಧದಲ್ಲಿ ಪ್ರಶ್ನಿಸಿಕೊಳ್ಳಿ, ಇಷ್ಟೆ ಸಾಲದು, ಮತ್ತೂ ಮುಂದೆ ಹೋಗಿ; ಇಂಥ ಸಿದ್ಧಾಂತ ಮನುಷ್ಯನನ್ನು ಯಾವ ಯಾವ ರಾಗ-ಭಾವಗಳಲ್ಲಿ ವಶವರ್ತಿಯನ್ನಾಗಿ ಮಾಡಿಕೊಳ್ಳಬಹುದು? ಜೀವರಾಶಿಗಳನ್ನು ಕೊಲಲ್ಲು ಅಥವಾ ಸಲಹಲು ಪ್ರಚೋದಿಸುತ್ತದೆಯೇ? ನನಗೆ ನ್ಯಾಯಯುವಾಗಿ ದೊರೆಯಬೇಕಾದದ್ದನ್ನು ಕೊಡಲು ಅನುವಾಗುತ್ತದೋ? ಅಥವಾ ತಡೆಯುತ್ತದೋ? ಪರಸ್ತ್ರೀಯರ ಸಂಗ ಮಾಡಲು, ಸುಳ್ಳು ಹೇಳಲು ಕೆಟ್ಟ ಕೃತ್ಯ ಮಾಡಲು ಪ್ರಚೋದಿಸುತ್ತದೆಯೇ? ಕೊನೆಯಾದಾಗಿ ನೀವು ಇದನ್ನೂ ಕೇಳಿಕೊಳ್ಳಬೇಕು; ಈ ಎಲ್ಲವೂ ಮನುಷ್ಯನ ಕೆಟ್ಟ ಬಾಳು ಮತ್ತು ದುಃಖಕ್ಕೆ ದಾರಿಯಾಗುತ್ತದೆಯೇ? ಎಂದು ಪ್ರಶ್ನಿಸಿಕೊಳ್ಳಬೇಕು, ಈಗ ಕಾಲಮರೇ ನೀವು ಏನು ಹೇಳುತ್ತೀರಿ?"

"ಪ್ರಭು ಗೌತಮರೇ, ತಮ್ಮ ವಾದದಲ್ಲಿ ವಿಚಾರವಿದೆ, ಸತ್ಯವಿದೆ, ಯಾವುದೇ ಬಗೆಯ ದೋಷವಾಗಲಿ, ಲೋಪವಾಗಲಿ, ಸ್ವಾರ್ಥವಾಗಲಿ ಅಡಗಿಲ್ಲ"

"ಓ ಕಾಲಮರೇ, ಹಾಗಾದರೆ ಈ ವಿಷಯಗಳು ಹಿತಕರವೇ? ಅಥವಾ ಅಹಿತಕರವೇ?

"ಓ ಕಾಲಮರೇ, ಈ ವಿಷಯಗಳು ನಿಂದಾರ್ಹವೇ? ಅಥವಾ ಸ್ವೀಕಾರ್ಹವೇ?

"ಪ್ರಭು ಗೌತಮರೇ, ಸ್ವೀಕಾರ್ಹ".

"ಓ ಕಾಲಮರೇ, ಕೇವಲ ಊಹೆಯ ಮೇಲೆ ನಿಂತ ಬಹುಜನರ ಬದುಕಿಗೆ ಅಪಾಯಕಾರಿಯಾದ ಪ್ರವೃತ್ತಿಯನ್ನ ವಿವೇಕಿಗಳು ಒಪ್ಪುತ್ತಾರೋ ಅಥವಾ ಆಕ್ಷೇಪಿಸುತ್ತಾರೋ?"

"ಪ್ರಭು ಗೌತಮರೇ, ವಿವೇಕಿಗಳು ಆಕ್ಷೇಪಿಸುತ್ತಾರೆ"

"ಓ ಕಾಲಮರೇ ವಿವೇಕಿಗಳೂ ಆಕ್ಷೇಪಿಸುವ ಸಂಗತಿಗಳನ್ನು ಕಣ್ಣು ಮುಚ್ಚಿ ನಂಬುವುದರಿಂದ ಅದನ್ನೇ ಸತ್ಯವೆಂದು ಭ್ರಮಿಸುವುದರಿಂದ ಅಥವಾ ಆಚರಣೆಗೆ ತರುವುದರಿಂದ ದುಃಖಕ್ಕೆ ಕಾರಣವಾಗುವುದಿಲ್ಲವೆ?"

"ಪ್ರಭು ಗೌತಮರೇ, ಖಂಡಿತ ಕಾರಣವಾಗುತ್ತದೆ?.

"ಓ ಕಾಲಮರೇ, ಇದೇ ನಾನು ಭೋದಿಸಿರುವುದು ಇದರ ಸಾರಾಂಶವೆಂದರೆ ಕೇವಲ ನೀವು ಕೇಳಿರುವುದನ್ನೇ ಹಸ್ತಾಂತರಗೊಂಡಿರುವುದನ್ನೇ ನಂಬಬೇಡಿ. ವಿಚಾರದ ಸೂಕ್ಷ್ಮತೆಗಳಂತೆ, ತರ್ಕದ ಸೂಕ್ಷ್ಮತೆಗಳಂತೆ ನಡೆಯಬೇಡಿ. ಕೇವಲ ತೋರಿಕೆ ಅನುಕೂಲಕರ ಮತ್ತು ಪರರ ಅಭಿಪ್ರಾಯಗಳಂತೆ ನಡೆಯಬೇಡಿ. ಯಾರೋ ಸನ್ಯಾಸಿ ಅಥವಾ ಪೂಜ್ಯ ಅಥವಾ ಭಿಕ್ಷು ಹೇಳಿದ ಎಂದು ನಂಬಬೇಡಿ. ನೀವು ನೋಡಿದ, ಕೇಳಿದ, ಓದಿದ ವಿಷಯವನ್ನು ಪ್ರಶ್ನಿಸಿ, ಪರೀಕ್ಷಿಸಿ, ಮರು ಪರೀಕ್ಷೆಗೆ ಒಳಪಡಿಸಿ, ಇದು ತನಗೂ, ಇತರರಿಗೂ, ಸಕಿಲ ಜೀವರಾಶಿಗಳಿಗೂ ಒಳಿತನ್ನು ಮಾಡುತ್ತದೆ. ಇಂದಾಗಲಿ, ಮುಂದಾಗಲಿ ವಿಷಾದ ವ್ಯಕ್ತವಾಗುವುದಿಲ್ಲ ಎಂದು ನಿಮ್ಮ ಅಂತರಂಗಕ್ಕೆ ದೃಢಪಟ್ಟರೆ ಒಪ್ಪಿಕೊಳ್ಳಿ, ಇಲ್ಲವೆ ತಿರಸ್ಕರಿಸಿ" ಎಂದ, ಆಗ ಕಾಲಮರು ಬುದ್ಧನ್ನು ಉದ್ದೇಶಸಿ.

"ಪ್ರಭು ಗೌತಮರೇ ನಿಮ್ಮ ದೃಷ್ಟಿಯಲ್ಲಿ ದೋಷವಿಲ್ಲ! ನಿಮ್ಮ ನಡೆ ನುಡಿಯಲ್ಲಿ ಸ್ವಾರ್ಥವಿಲ್ಲ! ನಿಮ್ಮನ್ನು ಅನುಸರಿಸಿದರೆ ಅಪಾಯವಿಲ್ಲ!!!" ಎಂದು ವಂದಿಸಿದ. □

'SAMVADA' Kannada Monthly, MAY 2006 RNI-KAR KAN/2002/9246 CPMG/KA/BGW-706/2006-
Office of Posting: RAJAJINAGAR HO, Date of Posting: 27-28 of Every Month

ಏಡ್ಸ್ ಬಗ್ಗೆ ನಿಮಗೂ ಜವಾಬ್ದಾರಿ ಇದೆ!

ನಿಮಗಿದು ತಿಳಿದಿರಲಿ

* ಹೆಚ್‌ಐವಿ/ಏಡ್ಸ್ ಒಂದು ಸೋಂಕು ವೈರಾಣು.
* ಅದು ಪ್ರಧಾನವಾಗಿ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಉಂಟಾಗುವ ಸೋಂಕು.
* ಹೆಚ್‌ಐವಿ ಯಾವ ವಯಸ್ಸಿನವರಿಗಾದರೂ ಬರಬಹುದು
* ಮುಂಜಾಗ್ರತಾ ಕ್ರಮದಿಂದ ಮೃತ್ಯುವಿನಿಂದ ಪಾರಾಗಲು ಸಾಧ್ಯ.
* ಹೆಚ್ಚಿನ ಮಾಹಿತಿ ಅಥವಾ ಹೆಚ್‌ಐವಿ ಪರೀಕ್ಷೆಗಾಗಿ ಹತ್ತಿರದ ತಾಲ್ಲೂಕು ಅಥವಾ ಜಿಲ್ಲಾ ಆಸ್ಪತ್ರೆಯಲ್ಲಿರುವ ಸ್ವಯಂಪ್ರೇರಿತ ಆಪ್ತ ಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರಕ್ಕೆ (ವಿಸಿಟಿಸಿ) ಭೇಟಿ ನೀಡಿರಿ. ಏಕೆಂದರೆ ಇದು ನಿಮ್ಮ ಜೀವನದ ಪ್ರಶ್ನೆ.
* ಆರೋಗ್ಯವಂತ ಸಮಾಜ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿ. "ಕರ್ನಾಟಕ ಏಡ್ಸ್‌ಮುಕ್ತ ರಾಜ್ಯ" ಎಂಬ ಹೆಮ್ಮೆ ನಮ್ಮದಾಗಲಿ

ಕರ್ನಾಟಕ ವಾರ್ತೆ
Karnataka Information